ರಂಜನೆ ಬೋಧನೆ ಪ್ರಚೋದನೆ

# ಗೌರಿ ಲಂಕೇಶ್

ಫೆಬ್ರವರಿ 6, 2008 ರೂ. 12/-



# ತೇಜಮ್ಮ ಈಗ 'ಇ'ರೋಯಿನ್

## ನಿಮ್ಮ ಶಾಸಕರು ಕಡಿದಿದ್ದೇನು?

ಜಗಳೂರು

ಶಹಾಪುರ

ಚಿಕ್ಕಮಗಳೂರು

ದೇವದುರ್ಗ

ಮರೀಗೌಡನಿಗೆ ಬಳ್ಳಾರಿ ಗೂಸ!



ರಾಣೇಬೆನ್ನೂರು ರಾತ್ರಿರಾಣಿ ಬಸಂತಿಯ ಕಲ್ಲಾಟ




ಹುಬ್ಬಳ್ಳಿ ಚೆಡ್ಡಿಗಳ ಕನ್ನಡ ಹಾರಾಟ ಬಸವರಾಜ ದೇವರ ಹೋರಾಟ!





## BSP ಎಡ-ಬಲ ಜಿದ್ದಾಜಿದ್ದಿ



ಪರ್ಯಾಯ ವಿವಾದ: ಗೂಂಡಾಗಳು ಮತ್ತು ಬ್ಲಾಕ್‌ಮೇಲ್


# ಗೂಳಿಗಳು, ಕರಡಿಗಳು ಮತ್ತು ಕರಾಳ ಸೋಮವಾರಗಳು


## ಚಾರ್ವಾಕ

ಶಿವಸುಂದರ್

ಭಾರತದ ಶೇರು ಮಾರುಕಟ್ಟೆಯಲ್ಲಿ ಮತ್ತೊಮ್ಮೆ ಕರಡಿ ಹಾವಳಿ ಶುರುವಾಗಿದೆ. ಈ ಕರಡಿಯುಪ್ಪುಗೆಗೆ ಸಿಲುಕಿ ಕಳೆದ ಒಂದು ವಾರದಲ್ಲಿ 55 ಲಕ್ಷ ಕೋಟಿ ರೂಪಾಯಿಯಷ್ಟು ಶೇರುದಾರರ ಹಣ ಕೊಚ್ಚಿಹೋಗಿದೆ. ಜನವರಿ 22 ಮತ್ತು 23ರ ಆ ಕರಾಳ ಸೋಮವಾರ ಮತ್ತು ಮಂಗಳವಾರದಿಂದಾಗಿ ಭಾರತದ ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿ ದಿಢೀರ್ ಶ್ರೀಮಂತರಾಗಲು ಬಯಸುತ್ತಿದ್ದ ಲಕ್ಷಾಂತರ ಮಧ್ಯಮ ವರ್ಗದ ಜನತೆ ಕಂಗೆಟ್ಟು ಕೂತಿದೆ.

ಕಳೆದ ವರ್ಷಾಂತ್ಯದವರೆಗೆ ಭಾರತದ ಶೇರು ಮಾರುಕಟ್ಟೆಯಲ್ಲಿ ಏಕಪ್ರಕಾರವಾಗಿ ಏರಿಕೆಯುಂಟಾಗಿತ್ತು. ಕಳೆದ ಅಕ್ಟೋಬರ್ ತಿಂಗಳ ಕೇವಲ ಆರು ದಿನಗಳಲ್ಲಿ ಶೇರು ಮಾರುಕಟ್ಟೆಯಲ್ಲಿ ಗೂಳಿಯೋಟ ಯಾವ ರಭಸದಲ್ಲಿತ್ತೆಂದರೆ ಸೆನ್ಸೆಕ್ಸ್ ಸೂಚ್ಯಂಕ 1,000ದಿಂದ 3,000ದಷ್ಟು ಏರಿಕೆ ಕಂಡು 20,000ಕ್ಕೆ ಮುಟ್ಟಿತ್ತು. ಅಂದರೆ ಭಾರತದ ಶೇರು





ಮಾರುಕಟ್ಟೆಯಲ್ಲಿ ವಿದೇಶಿ ಹೂಡಿಕೆದಾರರು ಏನಿಲ್ಲವೆಂದರೂ ಸಾವಿರ ಬಿಲಿಯನ್‌ಗಳಿಗಿಂತಲೂ ಹೆಚ್ಚಿನ ಹಣವನ್ನು ಹೂಡಲು ಪ್ರಾರಂಭಿಸಿದ್ದರು.

ಅದರ ಭಾಗವಾಗಿಯೇ ಮೊನ್ನೆ ರಿಲಯನ್ಸ್ ಪವರ್ ಕಂಪನಿಯ 400 ರೂಪಾಯಿಗಳ 28 ಕೋಟಿ ಶೇರುಗಳನ್ನು ಬಿಡುಗಡೆ ಮಾಡಿದ ಮೊದಲ ದಿನದ ಮೊದಲ ಗಂಟೆಯಲ್ಲೇ ಸಂಪೂರ್ಣವಾಗಿ ಮಾರಾಟವಾಗಿತ್ತು. ಅಷ್ಟು ಮಾತ್ರವಲ್ಲ ಕಳ್ಳ ಮಾರುಕಟ್ಟೆಯಲ್ಲಿ ಈ ಶೇರು 900 ರೂಪಾಯಿಗಳಿಗೆ ಮಾರಾಟವಾಗುವ ಸಂಭವವಿರುವುದರಿಂದ ರಿಲಯನ್ಸ್ ಕಂಪನಿ 2.5 ಲಕ್ಷ ಕೋಟಿ ರೂಪಾಯಿಯಿಂದ 7 ಲಕ್ಷ ಕೋಟಿ ರೂಪಾಯಿಗಳಷ್ಟು ಹಣವನ್ನು ಸಂಗ್ರಹಿಸಿತ್ತು. ಇದನ್ನು ವಿದೇಶಿ ಹಣ ಹೂಡಿಕೆದಾರರು ಭಾರತದಲ್ಲಿಟ್ಟಿರುವ ವಿಶ್ವಾಸಕ್ಕೆ ಪ್ರತೀಕವೆಂದೂ ಹಣಕಾಸು ಮಂತ್ರಿ ಚಿದಂಬರಂ ಕೊಂಡಾಡಿದ್ದರು.

ರಿಲಯನ್ಸ್ ಪವರ್‌ನ ಶೇರುಗಳನ್ನು ಮುಗಿಬಿದ್ದು ಕೊಂಡ ಮರುದಿನಗಳಲ್ಲೇ ಶೇರು ಮಾರುಕಟ್ಟೆಯಲ್ಲಿ ಈ ಭೀಕರ ರಕ್ತಪಾತ ಸಂಭವಿಸಿದೆ. ಭಾರತದ ಶೇರು ಮಾರುಕಟ್ಟೆಯ ತೇಜಿಗತಿಯ ವೃದ್ಧಿಗೆ ಕಾರಣವಾದ ವಿದೇಶೀ ಗೂಳಿಗಳೇ ಕರಡಿಗಳಾಗಿ ಆರ್ಥಿಕತೆಯನ್ನು ಕಂಗೆಡಿಸಿದ್ದಾರೆ. ಭಾರತದ ಶೇರು ಮಾರುಕಟ್ಟೆಯಲ್ಲಿ ಕಾರಣವಿಲ್ಲದೆ ವಿಶ್ವಾಸವಿಟ್ಟು ಹೂಡಿದ ಹೂಡಿಕೆದಾರರೇ ಯಾವುದೇ ವಿಶೇಷ ಕಾರಣವಿಲ್ಲದೆ ಹೂಡಿಕೆಯನ್ನು ಹಿಂತೆಗೆದುಕೊಂಡು ಭಾರತದ ಆರ್ಥಿಕತೆಯ ಒಂದು ವಿಭಾಗವನ್ನು ಅತ್ಯಂತ ದುರ್ಬಲಗೊಳಿಸಿದ್ದಾರೆ.

ವಿದೇಶಿ ಹೂಡಿಕೆದಾರರು ಭಾರತದ ಶೇರು ಮಾರುಕಟ್ಟೆಯಲ್ಲಿ ವಿಶ್ವಾಸ ತೋರಲು ಕಾರಣವೇನು? ಇದ್ದಕ್ಕಿದ್ದಂತೆ ವಿಶ್ವಾಸ ಕಳೆದುಕೊಳ್ಳಲು ಕಾರಣವೇನು? ಈ ರೀತಿ ಏಕಾಏಕಿ ಹೂಡಿಕೆಯನ್ನು ಹಿಂತೆಗೆದುಕೊಳ್ಳುವುದರಿಂದ ಭಾರತದ ಆರ್ಥಿಕತೆಯ ಮೇಲೆ ಮತ್ತು ಶ್ರೀಸಾಮಾನ್ಯನ ಬದುಕಿನ ಮೇಲೆ ಆಗುವ ಪರಿಣಾಮಗಳೇನು? ಭಾರತದ ಶೇರು ಮಾರುಕಟ್ಟೆಯ ವ್ಯವಹಾರಕ್ಕೆ ಶತಮಾನದಷ್ಟು ಇತಿಹಾಸವಿದ್ದರೂ ಕಳೆದ ಒಂದು ದಶಕದಿಂದೀಚೆಗೆ ಹಿಂದೆಂದೂ ಕಾಣದಂತ ಉಬ್ಬರವಿಳಿತಗಳಿಗೆ ಗುರಿಯಾಗುತ್ತಿರುವ ಕಾರಣವೇನು? ಇವೇ ಇನ್ನಿತ್ಯಾದಿ ಪ್ರಶ್ನೆಗಳನ್ನು ಜನವರಿ 22ರ ಕರಾಳ ಸೋಮವಾರ ಹುಟ್ಟುಹಾಕಿದೆ.

ಜಾಗತೀಕರಣದ ಭಾಗವಾಗಿ ಭಾರತದ ಶೇರು ಮಾರುಕಟ್ಟೆಯ ಜಾಗತೀಕರಣವೂ ಆಗಿದೆ. ಅದರ ಭಾಗವಾಗಿ ಭಾರತದ ಶೇರು ಮಾರುಕಟ್ಟೆಯಲ್ಲಿ ಕೆಲವೇ ಕೆಲವು ನಿರ್ದಿಷ್ಟ ಉದ್ಯಮಗಳನ್ನು ಹೊರತುಪಡಿಸಿದರೆ ಮಿಕ್ಕ ಎಲ್ಲಾ ಉದ್ಯಮಗಳ ಶೇರುಗಳಲ್ಲೂ ವಿದೇಶೀ ಹೂಡಿಕೆಗೆ ಮುಕ್ತ ಅವಕಾಶವನ್ನು ಒದಗಿಸಲಾಗಿದೆ. ಭಾರತದ ಶೇರು ಮಾರುಕಟ್ಟೆಯಲ್ಲಿ ವಿದೇಶಿ ಹೂಡಿಕೆಯನ್ನು ಹೇಗೆ ಉತ್ತೇಜಿಸಬಹುದೆಂದು ಸಲಹೆ ನೀಡಲೆಂದೇ ತಾರಾಪೂರ್ ಸಮಿತಿಯನ್ನು ನೇಮಿಸಲಾಗಿತ್ತು. ಅದು 1997ರಲ್ಲೇ ಸಂಪೂರ್ಣವಾಗಿ ಯಾವುದೇ ನಿಯಂತ್ರಣ ರಹಿತ ವಿದೇಶಿ ಹೂಡಿಕೆಯನ್ನು ಶಿಫಾರಸ್ಸು ಮಾಡಿತ್ತು. ಆದರೆ ತಾರಾಪುರ್ ನೀಡಿದ ವರದಿಯಲ್ಲಿ ಇದ್ದಂಥ ಕ್ರಮಗಳನ್ನೇ ಈ ಹಿಂದೆ ಆಗ್ನೇಯ ಏಷಿಯಾದ ದೇಶಗಳು ಅನುಸರಿಸಿದ್ದರಿಂದ 1997ರಲ್ಲಿ ಅವುಗಳ ಶೇರು ಮಾರುಕಟ್ಟೆಯಲ್ಲಿ ಅಪಾರ ಕುಸಿತ ಉಂಟಾಗಿ ಆ ದೇಶಗಳ ಆರ್ಥಿಕತೆಗಳೆ ಏರುಪೇರಾಗಿಬಿಟ್ಟವು.

ಇದರಿಂದ ತಾರಾಪೂರ್ ಸಮಿತಿಯ ವರದಿಯನ್ನು ಜಾರಿಗೆ ತರಲು ಯಾವ ಸರ್ಕಾರಗಳೂ ಮುಂದಾಗಲಿಲ್ಲ. ಆದರೆ 2004ರಲ್ಲಿ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಾರಾಪೂರ್ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತರಲಾಗಿದೆ. ಇದರಿಂದಾಗಿ ಭಾರತದ ಶೇರು ಮಾರುಕಟ್ಟೆಯಲ್ಲಿ ವಿದೇಶಿ ಹೂಡಿಕೆದಾರರ ಮೇಲಿದ್ದ ಮಿತಿಯನ್ನು ತೆಗೆದು ಹಾಕಲಾಗಿದೆ ಮತ್ತು ವಿದೇಶಿ ಹೂಡಿಕೆದಾರರು ಯಾವ ಕ್ಷಣದಲ್ಲಿ ಬೇಕಾದರೂ ತಮ್ಮ ಹೂಡಿಕೆಯನ್ನು ಇಡಿಯಾಗಿ ಹಿಂತೆಗೆದುಕೊಳ್ಳಬಹುದಾದ ಅವಕಾಶವನ್ನು ಕಲ್ಪಿಸಲಾಗಿದೆ. ಇಷ್ಟು ಮಾತ್ರವಲ್ಲದೆ ಆ ವಿದೇಶಿ ಹೂಡಿಕೆದಾರರ ವಿಶ್ವಾಸಾರ್ಹತೆಯನ್ನು ನಿಗದಿಪಡಿಸುವ ಮಾನದಂಡವನ್ನೂ ಸರಳೀಕರಿಸಲಾಗಿದೆ. ಹೀಗಾಗಿಯೇ ಸುಲಿಗೆಕೋರ, ದಗಾಕೋರ ಕಂಪನಿಗಳೂ ಸಹ ಭಾರತದ ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿ ಲಾಭ ಸೂರೆ ಮಾಡಬಹುದಾಗಿದೆ.

ಅದರಲ್ಲೂ ಹಲವಾರು ದೇಶಗಳು ನಿರಾಕರಿಸಿರುವ ಪಾರ್ಟಿಸಿಪೇಟರಿ ನೋಟ್ಸ್ (ಪಿಎನ್) ಪದ್ಧತಿಗೂ ಭಾರತದಲ್ಲಿ ಅವಕಾಶ ಸಿಕ್ಕ ಮೇಲೆ ಭಾರತದ ಶೇರು ಮಾರುಕಟ್ಟೆ ಬೇಲಿಯೇ ಇಲ್ಲದ ಹೊಲದಂತಾಗಿ ಹೋಗಿದೆ. ಹೀಗಾಗಿಯೇ ಕಳೆದ ವರ್ಷ ವಿದೇಶಿ ಹೂಡಿಕೆದಾರರೂ 17 ಬಿಲಿಯನ್ ಡಾಲರ್‌ಗಳಷ್ಟು ಹಣವನ್ನು ಹೂಡಿದ್ದರು. ಇದು ಒಟ್ಟಾರೆ ಭಾರತದ ಶೇರು ಮಾರುಕಟ್ಟೆಯಲ್ಲಿ ಹೂಡಿಕೆಯಾದ ಹಣದಲ್ಲಿ ಶೇ.60 ರಷ್ಟು ಎಂದರೆ ಭಾರತದ ಶೇರು ಮಾರುಕಟ್ಟೆಯಲ್ಲಿ ವಿದೇಶಿ ಹೂಡಿಕೆಯ ಹಿಡಿತ ಸ್ಪಷ್ಟವಾಗುತ್ತದೆ. ಹೀಗಾಗಿ ಭಾರತದ ಶೇರು ಮಾರುಕಟ್ಟೆಯ ಏರಿಳಿತಗಳಿಗೆ ಸ್ಥಳೀಯ ಕಾರಣಗಳಿಗಿಂತ ಜಾಗತಿಕ ಕಾರಣಗಳೇ ಪ್ರಮುಖವಾಗಿವೆ.

ವಾಸ್ತವವಾಗಿ ಅಷ್ಟು ದೊಡ್ಡ ಪ್ರಮಾಣದಲ್ಲಿ ವಿದೇಶಿ ಹೂಡಿಕೆ ಭಾರತಕ್ಕೆ ಬರಲು ಕಾರಣವಾದದ್ದು ಜಾಗತಿಕ ಕಾರಣಗಳೇ. ಭಾರತದಲ್ಲಿ ದೊಡ್ಡ ಮಟ್ಟದಲ್ಲಿ ಹಣ ಹೂಡಿದ್ದ ಕಂಪನಿಗಳು ಅಮೆರಿಕದ ಶೇರು ಮಾರುಕಟ್ಟೆಯಲ್ಲೂ ದೊಡ್ಡದಾಗಿ ಹೂಡಿದ್ದ ಗೋಲ್ಡ್‌ಮ್ಯಾನ್ ಶ್ಯಾಪಸ್, ಮೋರ್ಗನ್ ಸ್ಟಾನ್ಲಿ, ಸಿಟಿ ಬ್ಯಾಂಕ್, ಎಂ ಅಂಡ್ ಟಿ ಬ್ಯಾಂಕ್, ಮೆರಿಲ್ ಲಿಂಚ್‌ನಂತ ದೊಡ್ಡ ಹಣಕಾಸು ಸಂಸ್ಥೆಗಳೇ. ಆದರೆ ಕಳೆದ ವರ್ಷದ ಆಗಸ್ಟ್‌ನಿಂದ ಸಿಟಿ ಬ್ಯಾಂಕ್ ಮತ್ತು ಎಂ.ಟಿ. ಬ್ಯಾಂಕ್‌ನಂತಹ ದೊಡ್ಡ ಬ್ಯಾಂಕುಗಳ ಆರೋಗ್ಯ ಕೆಡುತ್ತಾ ಬಂದಿತು.

ಏಕೆಂದರೆ ಈ ಬ್ಯಾಂಕುಗಳ ಲಾಭದ ಪ್ರಧಾನ ಮೂಲ ಅವು ಅಮೆರಿಕದ ಶ್ರೀಸಾಮಾನ್ಯನಿಗೆ ಕೊಡುತ್ತಿದ್ದ ಸಾಲ ಮತ್ತು ಅದಕ್ಕೆ ಆ ಸಾಲಗಾರ ಗ್ರಾಹಕ ತೆರುತ್ತಿದ್ದ ಬಡ್ಡಿಯೇ ಆಗಿತ್ತು. ಅದರಲ್ಲೂ ಅಮೆರಿಕದಲ್ಲಿ ಜನಸಾಮಾನ್ಯರ ಬದುಕಿನ ಎಲ್ಲಾ ಅಗತ್ಯಗಳಿಗೂ ಬ್ಯಾಂಕುಗಳು ಸಾಲವನ್ನು ನೀಡುತ್ತವೆ. ಇದನ್ನು ಸಬ್ ಪ್ರೈಂ ಲೆಂಡಿಂಗ್ ಎನ್ನುತ್ತಾರೆ. ಸಾಲ ವಾಪಸಾತಿಯನ್ನು ಖಾತರಿಗೊಳಿಸಿಕೊಳ್ಳಲು ಅವರ ಸ್ಥಿರಾಸ್ತಿಗಳನ್ನು ಒತ್ತೆ ಇರಿಸಿಕೊಳ್ಳುತ್ತಾರೆ. ಇದನ್ನು ಮಾರ್ಟ್‌ಗೇಜ್ ಲೆಂಡಿಂಗ್ ಎಂದು ಕರೆಯುತ್ತಾರೆ. ಕಳೆದ ದಶಕದಲ್ಲಿ ಇದು ಬಹಳ ಲಾಭದಾಯಕ ಉದ್ಯಮವಾಗಿತ್ತು. ಆದರೆ ಕಳೆದ ಹತ್ತು ವರ್ಷಗಳಿಂದ ಅಮೆರಿಕದಲ್ಲೂ ಸರ್ಕಾರ ತರುತ್ತಿರುವ ಜನ ವಿರೋಧಿ ನೀತಿಗಳಿಂದ, ಏರುತ್ತಿರುವ ನಿರುದ್ಯೋಗ, ಹಣದುಬ್ಬರ, ಬೆಲೆ ಏರಿಕೆ, ಏರುತ್ತಿರುವ ವೆಚ್ಚ ಮತ್ತು ಕಡಿಮೆಯಾಗುತ್ತಿರುವ ಆದಾಯಗಳ ಕಾರಣದಿಂದ ಅಮೆರಿಕದ ಶ್ರೀಸಾಮಾನ್ಯರು ತಾವು ಮಾಡಿದ ಸಾಲವನ್ನು ಹಿಂತಿರುಗಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಹೀಗಾಗಿ ಒತ್ತೆ ಸಾಲವನ್ನು ತೀರಿಸಲಾಗದ ಪರಿಸ್ಥಿತಿಗೆ ಬಂದು ತಲುಪಿದ್ದಾರೆ. ಒಂದು ಅಧ್ಯಯನದ ಪ್ರಕಾರ 30 ಲಕ್ಷ ಸಬ್ ಪ್ರೈಂ ಗ್ರಾಹಕರಿರುವ ವಹಿವಾಟು ಒಂದರಲ್ಲಿ ಶೇ.18.81ರಷ್ಟು ಗ್ರಾಹಕರು ಸಾಲ ತೀರಿಸಲಾಗದೆ ಕೈಯೆತ್ತಿದ್ದಾರೆ. ಹೀಗಾಗಿ ಶೇರು ಮಾರುಕಟ್ಟೆಯಲ್ಲಿ ಹಣ ಹೂಡುತ್ತಿದ್ದ ಹಲವಾರು ಬ್ಯಾಂಕುಗಳು ಇತರ ಲಾಭದಾಯಕ ಕ್ಷೇತ್ರದಲ್ಲಿ ಹಣ ಹೂಡಲು ಹೊಸ ಜಾಗಗಳನ್ನು ಹುಡುಕುತ್ತಿದ್ದರು.

ಆಗ ಅವು ಭಾರತದಲ್ಲಿ ಯಾವುದೇ ಎಗ್ಗಿಲ್ಲದೆ ಹಣ ಹೂಡಿ ಲಾಭ ಸೂರೆ ಹೊಡೆಯುವ ಅವಕಾಶವಿರುವುದನ್ನು ಮನಗಂಡರು. ಆಗಲೇ ಅಮೆರಿಕದಿಂದ ಕೋಟ್ಯಂತರ ಹಣ ಭಾರತದ ಶೇರು ಮಾರುಕಟ್ಟೆಗೆ ಹರಿದುಬರಲು ಪ್ರಾರಂಭಿಸಿತು.

ಆದರೆ ಕಳೆದ ಒಂದು ವಾರದಲ್ಲಿ ಅಮೆರಿಕದಲ್ಲಿ ಸಬ್ ಪ್ರೈಂ ಸಾಲ ನೀಡಿಕೆಯ ಬಿಕ್ಕಟ್ಟು ಮತ್ತು ಒತ್ತೆ ಸಾಲದ ವಾಪಸಾತಿಯ ಬಿಕ್ಕಟ್ಟು ಇನ್ನಿಲ್ಲದಂತೆ ಹೆಚ್ಚತೊಡಗಿತು. ಒಂದು ವಾರದಲ್ಲಿ ಅಮೆರಿಕದ ಪ್ರಮುಖ ಹೂಡಿಕೆದಾರರಾದ ಸಿಟಿ ಬ್ಯಾಂಕಿಂದ 24 ಬಿಲಿಯನ್ ಡಾಲರ್‌ಗಳ ಒತ್ತೆ ಸಾಲವನ್ನು ಪಡೆದಿದ್ದ ಅಮೆರಿಕದ ಸಾಮಾನ್ಯ ಗ್ರಾಹಕರು ಹಿಂತಿರುಗಿಸಲಾಗದ ಪರಿಸ್ಥಿತಿ ತಲುಪಿ ಅದು ಅಷ್ಟು ಹಣವನ್ನು ರದ್ದುಗೊಳಿಸಬೇಕಾದ ಪರಿಸ್ಥಿತಿ ಬಂದಿತು. ಅದೇರೀತಿ ಒಂದು ವಾರದಲ್ಲಿ ಮೆರ್ರಿಲ್ ಲಿಂಚ್ ಸಂಸ್ಥೆ 14 ಬಿಲಿಯನ್ ಡಾಲರ್‌ಗಳಷ್ಟು ಹಣವನ್ನು ಕಳೆದುಕೊಳ್ಳಬೇಕಾಯಿತು. ಹೆಚ್ಚುಕಡಿಮೆ ಅಮೆರಿಕದ ಬಹುಪಾಲು ಬ್ಯಾಂಕುಗಳ ಮಾರ್ಟ್‌ಗೇಜ್ ಸಾಲದಲ್ಲಿ ಶೇ.70 ಭಾಗದಷ್ಟು ಸಾಲದ ಪರಿಸ್ಥಿತಿ ಇದೇ ಹಂತಕ್ಕೆ ಮುಟ್ಟಿತು.

ಇದರರ್ಥ ಅಮೆರಿಕದ ಜನತೆಯ ಕೊಳ್ಳುವ ಶಕ್ತಿ ಮತ್ತು ಆದಾಯ ಕಡಿಮೆಯಾಗುತ್ತಿದೆ ಎಂದಾಯಿತು. ಅಂದರೆ ಅವರು ಹೊಸ ಸರಕು ಮತ್ತು ಸೇವೆಗಳನ್ನು ಕೊಳ್ಳುವುದಿರಲಿ, ಆದಾಯವನ್ನು ಅನಿವಾರ್ಯ ವೆಚ್ಚಕ್ಕೆ ಸರಿದೂಗಿಸಲೂ ಕಷ್ಟವಾಗುತ್ತಿತ್ತು. ಹೀಗಾಗಿ ಅಮೆರಿಕದ ಆರ್ಥಿಕತೆ ಹಿಂದ್ಸರಿತದೆಡೆಗೆ ಸರಿಯುತ್ತಿದೆ ಎಂಬ ವಿಶ್ಲೇಷಣೆ ಪ್ರಪಂಚದೆಲ್ಲೆಡೆ ಪ್ರಚಾರವಾಯಿತು.

ಮೂರನೇ ಪ್ರಪಂಚದ ಬಹುಪಾಲು ರಾಷ್ಟ್ರಗಳು ಅಮೆರಿಕದ ಮಾರುಕಟ್ಟೆಗೆ ಕಳಿಸುವ ರಫ್ತಿನ ಮೇಲೇ ಆಧಾರಪಟ್ಟಿವೆ. ಹೀಗಾಗಿ ಅಮೆರಿಕದಲ್ಲೇ ಆರ್ಥಿಕ ಹಿಂದ್ಸರಿತ ಉಂಟಾದರೆ, ಮೂರನೇ ಪ್ರಪಂಚದ ಸರಕುಗಳಿಗೆ ಅಮೆರಿಕದ ಮಾರುಕಟ್ಟೆಯಲ್ಲಿ ಬೇಡಿಕೆ ಇಳಿದುಬಿಟ್ಟರೆ ಆ ಆರ್ಥಿಕತೆಗಳು ಬಿಕ್ಕಟ್ಟಿಗೆ ಸಿಲುಕುತ್ತವೆ. ಇದರಿಂದ ತಾವು ಹೂಡಿದ ಕಂಪನಿಗಳ ಆರ್ಥಿಕ ಆರೋಗ್ಯ ಕೆಡುತ್ತದೆ. ಹೀಗಾಗಿ ಅವುಗಳ ಶೇರುಗಳಲ್ಲಿ ಹಣ ಹೂಡುವುದರಿಂದ ನಷ್ಟವೇ ಹೊರತು ಲಾಭವಿಲ್ಲ ಎಂಬುದೇ ಈ ಬಿಕ್ಕಟ್ಟಿನಲ್ಲಿ ಈ ಹೂಡಿಕೆದಾರರು ಮಾಡಿದ ಲೆಕ್ಕಾಚಾರ. ಹೀಗಾಗಿ ಗ್ಯಾರಂಟಿಯಿಲ್ಲದ ಬಡ ದೇಶಗಳಲ್ಲಿ ಹಣ ಹೂಡಿದರೆ ನಷ್ಟವೆಂದು ಅಲ್ಲಿನ ತಮ್ಮ ಶೇರುಗಳನ್ನು ವಿದೇಶಿ ಹೂಡಿಕೆದಾರರು ಸಿಕ್ಕಷ್ಟು ದರಕ್ಕೆ ಮಾರಲು ಪ್ರಾರಂಭಿಸಿದರು. ಇದರಿಂದಾಗಿಯೇ ಎಲ್ಲಾ ಶೇರುಗಳ ಬೆಲೆ ಹಿಂದೆಂದೂ ಇಲ್ಲದಷ್ಟು ಮಟ್ಟಿಗೆ ಯಾವುದೇ ತರ್ಕವಿಲ್ಲದೆ ಇಳಿಯಲು ಪ್ರಾರಂಭಿಸಿತು.

ಇದು ಕೇವಲ ಭಾರತದಲ್ಲಿ ಮಾತ್ರ ಸಂಭವಿಸಿದ ಸಂಗತಿಯೇನಲ್ಲ. ಜಾಗತೀಕರಣದ ಭಾಗವಾಗಿ ಎಲ್ಲಾ ದೇಶಗಳು ತಮ್ಮ ದೇಶದ ಹಣಕಾಸು ಮಾರುಕಟ್ಟೆಯನ್ನು ವಿದೇಶಿ ಹೂಡಿದಾರರಿಗೆ ತೆರೆದಿಟ್ಟಿರುವುದರಿಂದ ಹೆಚ್ಚುಕಡಿಮೆ ಜಗತ್ತಿನ ಎಲ್ಲಾ ದೇಶಗಳಲ್ಲೂ

(18ನೇ ಪುಟಕ್ಕೆ)

## No Comments

"ಮಾಜಿ ಪ್ರಧಾನಿ ದೇವೇಗೌಡರು ಕರ್ನಾ... ಇತರೆ ರಾಜ್ಯದಲ್ಲಿ ಹುಟ್ಟಿದ್ದರೆ ಪ್ರಧಾನಿ... ಶಾಸಕರಾಗುವುದೂ ಕಷ್ಟವಾಗುತ್ತಿತ್ತು."

-ಸಿದ್ದರಾ...

"ನೂರು ವರ್ಷವಾದರೂ ಸಹಕಾರಿ ಕ್ಷೇತ್ರ ನಿರೀ... ಯಶಸ್ಸು ಕಂಡಿಲ್ಲ"

-ಬ್ಯಾಲಹಳ್ಳಿ ಗೋವಿಂದೇಗೌಡ, ಸಹಕಾರಿ ಮುಖಂಡ




"ಭಾರತದ ಏಕದಿನ ತಂಡವನ್ನು ಘೋಷಿಸಿದ ಸಮಯ ಸರಿಯಾಗಿಲ್ಲ"

-ಅನಿಲ್ ಕುಂಬ್ಳೆ

"ತಸ್ಲಿಮಾ ನಸ್ರೀನ್‌ಗೆ ಫ್ರಾನ್ಸ್ ಸರ್ಕಾರ ಸಿಮೋನ್ ದೆ ಬುವಾ ಪ್ರಶಸ್ತಿ ಕೊಡುವುದಕ್ಕೆ ಭಾರತದ ಸಮ್ಮತಿಯಿಲ್ಲ."

-ಭಾರತ ಸರ್ಕಾರದ ಅಧಿಕೃತ ಪತ್ರ



"ಮೊದಲರ್ಧ ಸುತ್ತಿಗೆ-ಉಳಿದರ್ಧ ಅತ್ತಿಗೆ"

- 'ಹೊಂಗನಸು' ಚಿತ್ರದ ಬಗ್ಗೆ ದೇವಶೆಟ್ಟಿ ಮಹೇಶ್ ವಿಮರ್ಶೆ

### ನಂಬಿದ್ರೆನಂಬಿ ಬಿಟ್ರೆಬಿಡಿ



"ಹೊಂಗನಸು ಚಿತ್ರವನ್ನು ವೀಕ್ಷಿಸಿರುವ ಎಲ್ಲಾ ಪ್ರೇಕ್ಷಕರು ಈವರೆಗೆ ಅತ್ಯುತ್ತಮ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತಿದ್ದಾರೆ."

-ರತ್ನಜ, 'ಹೊಂಗನಸು' ಚಿತ್ರ ನಿರ್ದೇಶಕ

"ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾ... ಯೋಜನೆ ಒಂದು ಐತಿಹಾಸಿಕ ಯೋಜನೆ. ... ಸಣ್ಣಪುಟ್ಟ ಕಾರಣ ಒಡ್ಡಿ ನಿಲ್ಲಿಸುವುದು ಸರಿಯಲ್ಲ..."

-ನ್ಯಾ. ಆನಂದ ಭೈ...

"ಯಾವುದೇ ಸಾಹಿತ್ಯವನ್ನು ಗ್ರಂಥಸ್ಥ ಭಾಷೆಯಲ್ಲಿ ರ... ಅದು ಎಲ್ಲಾ ವರ್ಗದ ಓದುಗರನ್ನು ತಲುಪುತ್ತ..."

-ಜಿ.ವೆಂಕಟಸು...

"ಎಸ್.ಎಂ.ಕೃಷ್ಣರವರು ರಾಜ್ಯ ರಾಜಕೀಯಕ್ಕೆ ಮರ... ವುದು ಮುಖ್ಯಮಂತ್ರಿಯಾಗಲು ಅಲ್ಲ, ಕಾಂ... ಗೆಲ್ಲಿಸಲು."

-ಎಸ್.ಎಂ.ಕೃಷ್ಣರ ಆಪ್ತ ...

"2006-07ರ ಸಾಲಿನಲ್ಲಿ ಪ್ರಾಥಮಿಕ ಪಾಠಶಾ... ಮುಸ್ಲಿಮ್ ವಿದ್ಯಾರ್ಥಿಗಳ ನೊಂದಣಿ ಪ್ರಮಾಣ ಶೇ... ಮತ್ತು ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ..."


### ಕರ್ನಾಟಕದ ಕರ್ಮ!

"ನಾನು ಕರ್ನಾಟಕದಲ್ಲಿ ಹುಟ್ಟಬಾರದಿತ್ತು."

-ದೇ...

### ಮಿಕದ ಹಿಂದಿನ ಬಕವನ್ನು ಕಾಣಲಾಗ...


"ನ್ಯಾನೋ ಕಾರು, ದೇಶ ಕಟ್ಟುವ ಕೆಲಸವನ್ನು ಸದ್ದಿಲ್ಲ... ಸ್ವಾರ್ಥ ವಿಲ್ಲದೆಯೇ ಆದರೆ ನಿರಂತರ ಅನ್ವೇಷಣೆಯ ಕುತೂಹಲದೊಂದಿಗೆ, ಸಮಷ್ಟಿ ಕಲ್ಯಾಣದ ಕಾಳಜಿಯೊಂದಿಗೆ ಹೇಗೆ ಸಾರ್ಥಕವಾಗಿ ಮಾಡಬಹುದೆಂಬ ಟಾಟಾ ಪರಿವಾರದ ಆರೋಗ್ಯಕರ ಬಿಸಿನೆಸ್ ಸಂಹಿತೆಯ ಸಂಕೇತವಾಗುಳಿಯಲಿದೆ."



-ರವೀಂದ್...

### ಬಲಾತ್ಕಾರವನ್ನು ಹಿಮ್ಮೆಟ್ಟಿಸಲು ಸಾಧ್ಯವಾಗ... ಅದನ್ನು ಎಂಜಾಯ್ ಮಾಡಿಬಿಡಿ!

"ನ್ಯಾನೋ ಕಾರು ಯಾವ ಕಾರಣಕ್ಕೂ ಈಗಾಗಲೇ ಮಾರುಕಟ್ಟೆಯಲ್ಲಿರುವ ಇತರ ಕಾರುಗಳಿಗಿಂತ ಹೆಚ್ಚಿನ ಗ್ರೀನ್‌ಹೌಸ್ ಅನಿಲವನ್ನು ಹೊರಚೆಲ್ಲದಂತೆ ನೋಡಿಕೊಳ್ಳುವುದರಲ್ಲಿ ಪರಿಸರದ ಹಿತಾಸಕ್ತಿ ಇದೆಯೇ ವಿನಃ ಈ ಕಾರನ್ನು ವಿರೋಧಿಸುವುದರಲ್ಲಿ ಅಲ್ಲ."



-ರವಿಕ...

### ಜಗವ ಸುಡುವ ಕಿಚ್ಚು ತನ್ನನ್ನು ಸು...

"ಪಶ್ಚಿಮ ಬಂಗಾಳ ಸರ್ಕಾರವು ಒಂದು ಸರ್ಕಾರವಾಗಿ ಕೆಲಸ ಮಾಡಬೇಕೇ ವಿನಃ ಒಂದು ಸರ್ಕಾರವಾಗಿ ಅಲ್ಲ."

-ಸಿ.ಪಿ.ಎಂ ನೇತೃತ್ವದ ಎಡರಂಗ ಅಂಗಪಕ್ಷವಾದ ಸಿಪಿಐ ಪಕ್ಷದ ಕಾರ್ಯದರ್ಶಿ



# ಕಂಡಹಾಗೆ

# ಪ್ರಶಸ್ತಿಗಳ ಹರಾಜ್!

ಹರಾಜ್....

ಪದ್ಮ ಪ್ರಶಸ್ತಿಗಳೂ ಹರಾಜಾಗಿವೆ....

ಇದು ತಮಾಷೆಯಲ್ಲ. ಈ ಬಾರಿಯ ಪದ್ಮಶ್ರೀ, ...ಭೂಷಣ, ಪದ್ಮ ಇತ್ಯಾದಿ ಪ್ರಶಸ್ತಿಗಳ ಪಟ್ಟಿಯನ್ನು ...ನೋಡಿದರೆ ಈ ಪ್ರಶಸ್ತಿಗಳು ಹರಾಜಾಗಿರುವುದು ಸ್ಪಷ್ಟ ...ಗುತ್ತದೆ.

ಈ ಪ್ರಶಸ್ತಿಗಳು ಅಸ್ತಿತ್ವಕ್ಕೆ ಬಂದಿದ್ದು ಸಮಾಜದ ...ಳಿತಿಗಾಗಿ ಅಪಾರ ಸೇವೆ ಸಲ್ಲಿಸಿದವರಿಗೆ, ಕೊಡುಗೆ ...ನೀಡಿದವರಿಗೆ ನೀಡಬೇಕೆಂಬ ಆಶಯದಿಂದ. (ಅಂತಹ ...ಸೇವೆಗಳನ್ನು 'ಗುರುತಿಸಿ' ಸರ್ಕಾರ ಪ್ರಶಸ್ತಿಗಳನ್ನು ಯಾಕೆ ...ನೀಡಬೇಕು ಎಂಬ ಮುಖ್ಯವಾದ ಪ್ರಶ್ನೆ ಇರುವಾಗಲೂ ...ದೆ). ಆದರೆ ಸ್ವಯಂಸೇವೆಯೇ ದೇಶ ಸೇವೆ ಎಂದು ...ಭಾವಿಸಿದವರಿಗೆ ಇವುಗಳನ್ನು ನೀಡಲಾಗಿದೆ.

ಉದಾಹರಣೆಗೆ ಲಕ್ಷ್ಮಿ ಮಿತ್ತಲ್ ಎಂಬಾತನಿಗೆ ಪದ್ಮ ...ಭೂಷಣ ಪ್ರಶಸ್ತಿ ನೀಡಲಾಗಿದೆ. ಈತ ಅದ್ಯಾವ ...ನಸೇವೆ, ಸಮಾಜ ಸೇವೆ ಮಾಡಿದ್ದಾನೆಂಬುದು ...ಗೂಢವಾಗಿದೆ. ಆದರೆ ಆತ ಜಗತ್ತಿನ ಸಾಹುಕಾರರ ...ಪಟ್ಟಿ ಸೇರಿರುವುದು, ಐಷಾರಾಮಿ ಜೀವನ ನಡೆತ್ತಿರು...ವುದು. ತನ್ನ ಪುತ್ರಿಯ ಮದುವೆಗೆ ...ಮಿಲಿಯನ್ ಗಟ್ಟಲೆ ಡಾಲರ್‌ಗಳನ್ನು ...ಚ್ಚ ಮಾಡಿರುವುದೇ ಜನಸೇವೆ ...ಎಂದು ಸರ್ಕಾರ ಭಾವಿಸಿ ಪದ್ಮ ...ಪ್ರಶಸ್ತಿ ನೀಡಿದೆ.

ಮಿತ್ತಲ್ ಮಾತ್ರವಲ್ಲ, ಆತನೊಂದಿಗೆ ಈ ಬಾರಿ ...ಇನ್‌ಫೋಸಿಸ್ ನಾರಾಯಣಮೂರ್ತಿ ಮತ್ತು ರತನ್ ...ಟಾಟಾ ಎಂಬುವವರಿಗೂ ಈ 'ಗೌರವ'ವನ್ನು ದಯ...ಪಾಲಿಸಲಾಗಿದೆ. ಸರ್ಕಾರದ ಮೂಲಕ ರೈತರ ...ಭೂಮಿಯನ್ನು ಅಗ್ಗದ ಬೆಲೆಗೆ ಪಡೆದು, ಜನಸಾಮಾನ್ಯರಿಗೆ ...ನಿರಾಕರಿಸುವ ಸವಲತ್ತುಗಳನ್ನು ಸರ್ಕಾರದಿಂದಲೇ ಪಡೆದು ...ಉದ್ಧಾರವಾಗಿರುವ ರತನ್ ಟಾಟಾ ವಿದೇಶಿ ಕಂಪನಿ...ಯನ್ನೂ ಖರೀದಿಸುತ್ತಾನೆ, ನ್ಯಾನೋ ಎಂಬ ಕಾರನ್ನೂ ...ತಯಾರಿಸುತ್ತಾನೆ, ಆ ಮೂಲಕ ಮತ್ತಷ್ಟು ಕೊಬ್ಬುತ್ತಾನೆ. ...ಇದೂ ನಮ್ಮ 'ಸಮಾಜವಾದಿ' ಸರ್ಕಾರಕ್ಕೆ ಜನರ ...ಸೇವೆಯಂತೆಯೇ ಕಾಣುತ್ತದೆ!

ನಾರಾಯಣಮೂರ್ತಿ ಇನ್ನೊಂದು ರೀತಿಯ ಜನ...ಸೇವಕ. ಭಾರತದ ಆರ್ಥಿಕತೆ ಬಲಿಷ್ಠಗೊಂಡು ರೂಪಾಯಿ ...ಸ್ಥಿರವಾದಷ್ಟೂ ತನ್ನ ಲಾಭದ ಪ್ರಮಾಣ ಕಡಿಮೆ ...ಯಾಗುತ್ತಿದೆ ಎಂದು ಕಣ್ಣೀರಿಡುವ 'ದೇಶಭಕ್ತ' ಈತ. ...ರಾಷ್ಟ್ರಗೀತೆ ಹಾಡಿದರೆ ವಿದೇಶಿಯರಿಗೆ ಕಿರುಕುಳ ಆಗುತ್ತದೆ ...ಎನ್ನುವ 'ರಾಷ್ಟ್ರಪ್ರೇಮಿ' ಈ ಮನುಷ್ಯ. ಈತನ ಈ ...ಗುಣಗಳಿಗೆ ಕೇಂದ್ರ ಸರ್ಕಾರ ಪದ್ಮವಿಭೂಷಣ ಪ್ರಶಸ್ತಿ...ಯನ್ನು ನೀಡಿದೆ. ಅದನ್ನೇ ಟೈಮ್ಸ್ ಆಫ್ ಇಂಡಿಯಾ...ದಂತಹ ಪತ್ರಿಕೆ ಕೊಂಡಾಡಿದೆ.

ಆಂಧ್ರದ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ...ನಾಯ್ಡು ತಮ್ಮನ್ನು ರಾಜ್ಯದ ಸಿಇಓ ಎಂದು ಬಣ್ಣಿಸಿ...ಕೊಂಡಿದ್ದರು. ಈಗ ಈ ಸಿಇಓ ರೋಗ ಮಠಗಳಿಗೂ ...ತಾಕಿದೆ ಎಂಬುದಕ್ಕೆ ಈ ಬಾರಿಯ ಪದ್ಮ ಪ್ರಶಸ್ತಿಗಳ ...ಪಟ್ಟಿಯಲ್ಲಿರುವ ವಿ.ಆರ್. ಗೌರಿಶಂಕರ್ ಎಂಬಾತನೇ ...ಸಾಕ್ಷಿ. ಈತ ಶೃಂಗೇರಿ ಮಠದ ಸಿಇಓ ಮತ್ತು ಆಸ್ತಿಗಳ ...ಆಡಳಿತಾಧಿಕಾರಿ.

ಈ ಗೌರಿಶಂಕರನ 'ಸಮಾಜ ಸೇವೆ' ಎಷ್ಟು ...ಅಗಾಧವಾದದ್ದೆಂದರೆ ಮಠದ ಶಾಲೆಗೆ ಬರುವ ಮಕ್ಕಳಿಗೆ ...ಮಠದಿಂದಲೇ ಮಧ್ಯಾಹ್ನದ ಊಟ ಹಾಕಿಸಿ ತಾನೇ ...ಜನಸೇವೆ ಮಾಡಿದ್ದೇನೆ ಎಂಬಂತೆ ಬಿಂಬಿಸುತ್ತಾನೆ. ಇನ್ನೂ ...ಈ ಸಿಇಓ ನೇತೃತ್ವದಲ್ಲಿ ಮಠ ಸ್ಥಾಪಿಸಿರುವ ಆಸ್ಪತ್ರೆಯಲ್ಲಿ ...ಎನ್‌ಆರ್‌ಐಗಳು ದಾನ ಮಾಡಿರುವ ಆಧುನಿಕ ...ಯಂತ್ರಗಳಿದ್ದರೂ ಅವುಗಳನ್ನು ನೋಡಿಕೊಳ್ಳುವ ...ತಜ್ಞರಿಲ್ಲ, ನೂರು ಹಾಸಿಗೆಗಳಿದ್ದರೂ ಚಿಕಿತ್ಸೆ ನೀಡುವ ...ವೈದ್ಯರಿಲ್ಲ, ಈತ ಆಡಳಿತಾಧಿಕಾರಿಯಾಗಿರುವ ಮಠದಲ್ಲಿ ...ಇವತ್ತಿಗೂ ಜಾತಿತಾರತಮ್ಯ, ಪ್ರತ್ಯೇಕ ಪಂಕ್ತಿ ಭೋಜನ ವ್ಯವಸ್ಥೆ ಇದ್ದು ಇಲ್ಲಿ ಬ್ರಾಹ್ಮಣೇತರರಿಗೆ ಟಾಯ್ಲೆಟ್ ಕ್ಲೀನ್ ಮಾಡುವ ಅಥವಾ ವಾಚ್‌ಮ್ಯಾನ್ ಕೆಲಸಗಳನ್ನು ಮಾತ್ರ ನೀಡಲಾಗುತ್ತದೆ. ಶೃಂಗೇರಿ ಆಸುಪಾಸಿನಲ್ಲಿ ಈತನ 'ಗೂಂಡಾಗಿರಿ' ವಿರುದ್ಧ ಸೊಲ್ಲೆತ್ತುವಂತಿಲ್ಲ, ಎತ್ತಿದರೆ ನಿರಂತರ ಕಿರಿಕಿರಿ ಅಥವಾ ವರ್ಗಾವಣೆ. ಆದರೆ ಬಿಜೆಪಿಗಳ ಕಾರ್ಯಕ್ರಮಗಳಿಗೆಲ್ಲ ಈತನ ಆಶೀರ್ವಾದ ಮತ್ತು ಹಣದಾನ ಇದ್ದೇ ಇರುತ್ತದೆ. ಮಠದಲ್ಲಿರುವ ಊಟದ ಛತ್ರವನ್ನು ಮೂರುವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆದಿಕೇಶವುಲು ಎಂಬ ಹೆಂಡ ದೋದ್ಯಮಿ ಕಟ್ಟಿಸಿ ಕೊಡುತ್ತಾನೆಂದರೆ ಈ ಗೌರಿಶಂಕರನ ಗುಂಪಿನಲ್ಲಿ ಎಂಥವರಿದ್ದಾರೆಂದು ಅರ್ಥವಾಗುತ್ತದೆ. ಆದರೆ ಈತನ ಇಂತಹ 'ಸೇವೆ'ಗಳಿಗೆ ಪದ್ಮ ಪ್ರಶಸ್ತಿ.

ನೆಮ್ಮದಿಯ ಸಂಗತಿ ಯಾವುದೆಂದರೆ ನ್ಯಾ. ರಾಜೆಂದರ್ ಸಚಾರ್‌ರವರು ಇಂತಹ ಪ್ರಶಸ್ತಿಯನ್ನು ಸ್ವೀಕರಿಸಲು ನಿರಾಕರಿಸಿದ್ದು. ಇತ್ತೀಚೆಗೆ ಅವರ ಹೆಸರನ್ನೂ ಪದ್ಮ ಪ್ರಶಸ್ತಿಗಳ ಪಟ್ಟಿಯಲ್ಲಿ ಸೇರಿಸಲಾಗುತ್ತಿದೆ ಎಂಬ ಸಂದೇಶವನ್ನು ಸರ್ಕಾರ ಸಚಾರ್‌ರವರಿಗೆ ರವಾನಿಸಿತ್ತು. ಸಚಾರ್‌ರವರು "ಇಂತಹ ಪ್ರಶಸ್ತಿಗಳನ್ನು ನೀಡುವುದು ಕಾನೂನುಬಾಹಿರವಲ್ಲ ಎಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ನನಗೆ ಗೊತ್ತು. ಅದು ಕಾನೂನುಬದ್ಧವೋ ಅಲ್ಲವೋ ಎಂಬ ಜಿಜ್ಞಾಸೆಗಿಂತ ಸರ್ಕಾರ ಇಂತಹ ಪ್ರಶಸ್ತಿಗಳನ್ನು ನೀಡುವ ಔಚಿತ್ಯದ ಬಗ್ಗೆ ನನಗೆ ಕಾಳಜಿ ಇದೆ. ಸಮಾಜದ ಒಳಿತಿಗಾಗಿ ಯಾರು ಎಷ್ಟು ಮಾಡಿದ್ದಾರೆ ಎಂಬುದನ್ನು ಸಮಾಜ ಅಥವಾ ಅವರು ಕಾರ್ಯ ನಿರ್ವಹಿಸುತ್ತಿರುವ ವಲಯಗಳು ನಿರ್ಧರಿಸಬೇಕೇ ಹೊರತು ಸರ್ಕಾರವಲ್ಲ. ಅಷ್ಟೇ ಅಲ್ಲ, ಸರ್ಕಾರ ಇಂತಹ ಪ್ರಶಸ್ತಿಗಳನ್ನು ನೀಡುವುದೇ ನಮ್ಮ ಸಂವಿಧಾನದ ಆಶಯಗಳಾದ ಸಮಾನತೆ ಮತ್ತು ಪ್ರಜಾತಂತ್ರ ನಿಲುವುಗಳಿಗೆ ವಿರುದ್ಧವಾದದ್ದು" ಎಂದು ಹೇಳಿ ಸಚಾರ್‌ರವರು ತಮ್ಮ ಹೆಸರನ್ನು ಪದ್ಮ ಪ್ರಶಸ್ತಿ ಪಟ್ಟಿಯಲ್ಲಿ ಸೇರಿಸಕೂಡದು ಎಂದು ಸರ್ಕಾರಕ್ಕೆ ತಿಳಿಸಿದ್ದರು.

ಅಂದಹಾಗೆ ದೇಶದ ಅಲ್ಪಸಂಖ್ಯಾತ ಮುಸಲ್ಮಾನರ ಸ್ಥಿತಿಗತಿಗಳ ಬಗ್ಗೆ ಸಚಾರ್ ನೇತೃತ್ವದ ಸಮಿತಿ ಕಳೆದ ವರ್ಷ ಸರ್ಕಾರಕ್ಕೆ ಒಂದು ಸುದೀರ್ಘ ವರದಿಯನ್ನು ಸಲ್ಲಿಸಿತ್ತು. ಆದರೆ ಆ ವರದಿಯನ್ನು ಸದ್ಯಕ್ಕೆ ಅನುಷ್ಠಾನಕ್ಕೆ ತರಬಾರದೆಂದು ನಿರ್ಧರಿಸಿರುವ ಸರ್ಕಾರ ಅದೇ ವರದಿಯ ಕರ್ತೃಗೆ ಪದ್ಮ ಪ್ರಶಸ್ತಿಯನ್ನು ನೀಡಲು ಮುಂದಾಗಿದ್ದರ ಹಿಂದಿನ ತಂತ್ರ ಸರಳವಾದದ್ದು.

ಸಚಾರ್‌ರವರ ವರದಿಯನ್ನು ಜಾರಿಗೆ ತಂದು ನಮ್ಮ ದೇಶದ ಒಂದು ದುರ್ಬಲ ಸಮುದಾಯದ ಉದ್ಧಾರಕ್ಕೆ ಯತ್ನಿಸುವುದು ಸರ್ಕಾರಕ್ಕೆ ಬೇಕಿಲ್ಲ, ಆದರೆ ಸಚಾರ್‌ರವರಿಗೆ ಪದ್ಮ ಪ್ರಶಸ್ತಿಯನ್ನು ನೀಡಿ ಅವರ ಕೊಡುಗೆಯನ್ನು ಗೌರವಿಸುವಂತಹ ತೋರಿಕೆಯ ಕಾಳಜಿ ಮಾತ್ರ ಬೇಕು.

ಈ ಕಾರಣದಿಂದಾಗಿಯೇ ಸಚಾರ್‌ರಂತಹ ನಿಜವಾದ ಜನ ಸೇವಕ ಇದನ್ನು ತಿರಸ್ಕರಿಸಿದ್ದಾರೆ ಮತ್ತು ನಾರಾಯಣಮೂರ್ತಿ, ಗೌರಿಶಂಕರ್, ಮಿತ್ತಲ್‌ನಂತಹ ಢೋಂಗಿ ಸಮಾಜ ಸೇವಕರು ಇದನ್ನು ಪಡೆದು'ಕೊಂಡು' ಸಂಭ್ರಮಿಸುತ್ತಿದ್ದಾರೆ.

ಇದು ಪ್ರಶಸ್ತಿಗಳ ಹರಾಜು ಮಾತ್ರವಲ್ಲ, ಎಲ್ಲ ನೈತಿಕತೆ, ಮೌಲ್ಯ ಸಿದ್ಧಾಂತಗಳ ಹರಾಜು ಕೂಡ...

* * * * * *

ಮಹಿಳೆ ಅಂದರೆ ಯಾರು? ಈ ಪ್ರಶ್ನೆಗೆ ಉತ್ತರಿಸಿದ ಸಿಮೋನ್ ದೇ ಬುವಾ ಎಂಬ ಪ್ರಖ್ಯಾತ ಲೇಖಕಿ ಹಾಗೂ ತತ್ವಜ್ಞಾನಿ 'ಎರಡನೇ ಲಿಂಗ' (The Second Sex) ಎಂಬ ಪುಸ್ತಕದಲ್ಲಿ ಹೀಗೆ ದಾಖಲಿಸಿದ್ದರು: "ಪುರುಷರು ಮಹಿಳೆಯರ ಸುತ್ತ ಒಂದು 'ಸುಳ್ಳು ನಿಗೂಢತೆ'ಯನ್ನು ಸೃಷ್ಟಿಸಿ ಅವರೆಲ್ಲ 'ಪ್ರತ್ಯೇಕ' ಎಂಬಂತೆ ಬಿಂಬಿಸಿದರು. ಹೀಗೆ ಬಿಂಬಿಸುವ ಮೂಲಕ ಮಹಿಳೆಯರನ್ನು ಅರ್ಥಮಾಡಿಕೊಳ್ಳುವುದಕ್ಕಾಗಲಿ, ಅವರ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕಾಗಲಿ, ಅವರ ನೆರವಿಗೆ ಬರುವುದಕ್ಕಾಗಲಿ ಪುರುಷರಿಗೆ ಸಾಧ್ಯವಾಗದಂತೆ ಒಂದು 'ನೆಪ'ವನ್ನೂ ಹುಡುಕಿಕೊಂಡರು. ಇದು ಕೇವಲ ಮಹಿಳೆಯರನ್ನು ಪ್ರತ್ಯೇಕಿಸುವ ತಂತ್ರ ಮಾತ್ರವಲ್ಲ, ಬದಲಾಗಿ ಎಲ್ಲಾ ಸಮಾಜ ಮತ್ತು ಸಂಸ್ಕೃತಿಗಳಲ್ಲೂ ಜಾತಿ, ಧರ್ಮ, ಬಣ್ಣ ಇತ್ಯಾದಿ ಆಧಾರಗಳ ಮೇಲೆ ಮೇಲುವರ್ಗದವರು ಕೆಳವರ್ಗದವರಿಗೆ 'ಪ್ರತ್ಯೇಕ'ತೆಯನ್ನು ಸೃಷ್ಟಿಸಿರುವುದನ್ನು ಕಂಡಿದ್ದೇವೆ.

ಆದರೆ ಮಹಿಳೆಯರ ಮೇಲಂತೂ ಇಂತಹ ಸಾಂಸ್ಕೃತಿಕ ಮತ್ತು ಸಾಮಾಜಿಕ 'ಪ್ರತ್ಯೇಕತೆ' ಎಂಬ ಪರಿಕಲ್ಪನೆಗಳನ್ನು ಹೇರುವ ಮೂಲಕ ಎಲ್ಲೆಡೆ ಪುರುಷ ಪ್ರಧಾನ ಸಮಾಜಗಳನ್ನು ಸ್ಥಾಪಿಸಲಾಗಿದೆಯಲ್ಲದೆ, ಮಹಿಳೆಯರಿಂದ ಎಲ್ಲಾ ರೀತಿಯ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ.

ಈಗ, ಆಧುನಿಕ ಮಹಿಳೆ ಆರ್ಥಿಕವಾಗಿ ಸ್ವಾವಲಂಬಿಯಾಗುತ್ತಾ ತನ್ನ ವಾಕ್ ಸ್ವಾತಂತ್ರ್ಯಕ್ಕೂ ಶ್ರಮಿಸುತ್ತಿದ್ದಾಳೆ. ಆದರೆ ಅದನ್ನು ಪುರುಷ ಪ್ರಧಾನ ಸಮಾಜ ಒಪ್ಪಿಕೊಳ್ಳುತ್ತಿಲ್ಲ ಮಾತ್ರವಲ್ಲ, ಅಂತಹ ಹಕ್ಕುಗಳನ್ನು ಚಲಾಯಿಸಲೆತ್ನಿಸುವ ಮಹಿಳೆಯ ಮೇಲೆ ವ್ಯವಸ್ಥೆ ಹಲವಾರು ರೀತಿಯ ದಿಗ್ಬಂಧನಗಳನ್ನು ಹೇರುತ್ತಿದೆ."



ಲಂಕೇಶ್ ಮೊಮ್ಮಕ್ಕಳಾದ ಸಮರ್‌ಜಿತ್, ಇಶಾ ಮತ್ತು ಸಮಯ್

ಇದನ್ನು ಬುವಾ ಬರೆದದ್ದು 1949ರಲ್ಲಿ. ಅವರ ಇತರ ಎಲ್ಲಾ ಬರಹಗಳೊಂದಿಗೆ 'ಎರಡನೆ ಲಿಂಗ' ಎಂಬ ಪುಸ್ತಕವಂತೂ ಜಗತ್ತಿನಾದ್ಯಂತ ಮಹಿಳಾವಾದಿಗಳಿಗೆ ಮಾರ್ಗದರ್ಶಿ ಎಂತಾಗಿದೆ. ಅದರಿಂದ ಸ್ಫೂರ್ತಿ ಪಡೆದು ಎಲ್ಲೆಡೆ ಸಾವಿರಾರು ಮಹಿಳಾ ಲೇಖಕಿಯರು ಜನ್ಮವೆತ್ತಿದ್ದಾರೆ. ಅಂತಹವರಲ್ಲಿ ತಸ್ಲಿಮಾ ನಸ್ರೀನ್ ಕೂಡ ಒಬ್ಬರು ಎಂದರೆ ತಪ್ಪಾಗಲಾರದು.

ಈ ತಸ್ಲಿಮಾ ನಸ್ರೀನ್‌ಳ ಬರಹಗಳ ಶ್ರೇಷ್ಠತೆಗಿಂತಲೂ ಆಕೆ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ದನಿ ಎತ್ತಿರುವುದು ಮುಖ್ಯ. ಆ ದನಿ ಹಲವೊಮ್ಮೆ ಕರ್ಕಶವಾಗಿದ್ದರೂ ಆಕೆ ಮುಂದಿಡುತ್ತಿರುವುದು ಬುವಾರ ಸಿದ್ಧಾಂತವನ್ನೇ. ಆದ್ದರಿಂದ ಬುವಾ ಅವರೇ ಎಚ್ಚರಿಸಿದ್ದಂತೆ ನಸ್ರೀನ್ ಈಗ ಮೂಲಭೂತವಾದಿ ಪುರುಷರ ಕೆಂಗಣ್ಣಿಗೆ ಗುರಿಯಾಗಿದ್ದಾರೆ ಮಾತ್ರವಲ್ಲ, ಭಾರತದ ವ್ಯವಸ್ಥೆ ಆಕೆಯ ಮೇಲೆ ಹಲವಾರು ದಿಗ್ಬಂಧನಗಳನ್ನು ಹೇರುತ್ತಿದೆ.

ತಸ್ಲಿಮಾ ಈಗ ಹೇಗೆ ತಲೆಮರೆಸಿಕೊಂಡು ಬಿಗಿ ಭದ್ರತೆಯಲ್ಲಿ ವಾಸಿಸುತ್ತಿದ್ದಾರೋ ಹಾಗೆಯೇ ಆಕೆ ತನ್ನ ಜೀವನವನ್ನು ಮುಂದುವರಿಸಬೇಕೇ ಹೊರತು ಆಕೆ ಆಶಿಸಿರುವಂತೆ ಮತ್ತೆ ಕೊಲ್ಕತ್ತಾಗೆ ಕಳುಹಿಸಲಾಗುವುದಿಲ್ಲ ಎಂದಿದೆ ಹಾಲಿ ಕೇಂದ್ರ ಸರ್ಕಾರ. ಅಷ್ಟೇ ಅಲ್ಲ, ಈಗ ಭಾರತದಲ್ಲಿ ಪ್ರವಾಸ ಕೈಗೊಂಡಿರುವ ಫ್ರಾನ್ಸ್‌ನ ಅಧ್ಯಕ್ಷ ನಿಕೋಲಾಸ್ ಸರ್ಕೋಜಿ ತಸ್ಲಿಮಾ ನಸ್ರೀನ್‌ಗೆ ಸಿಮೋನ್ ಬುವಾರವರ ಹೆಸರಿನಲ್ಲಿ ಫ್ರಾನ್ಸ್ ಸರ್ಕಾರ ನೀಡುವ ಪ್ರಶಸ್ತಿಯನ್ನು ಭಾರತದಲ್ಲೇ ನೀಡಲು ಇಚ್ಛಿಸಿದ್ದರು. ಆದರೆ ಅದಕ್ಕೂ ಒಪ್ಪದ ಭಾರತದ ಸರ್ಕಾರ ಬೇಕಿದ್ದರೆ ಆಕೆಯನ್ನು ಫ್ರಾನ್ಸ್‌ಗೆ ಕರೆಸಿ ಅಲ್ಲಿಯೇ ಪ್ರಶಸ್ತಿ ನೀಡಿರಿ ಎಂದು ಹೇಳಿತು. ಸೋನಿಯಾ ಗಾಂಧಿ ಎಂಬ ಮಹಿಳೆಯೇ ಅಧ್ಯಕ್ಷೆಯಾಗಿರುವ UPA ಸರ್ಕಾರ ಇಂತಹ ನಿಲುವನ್ನು ತೆಗೆದುಕೊಂಡಿರುವುದು ಅಚ್ಚರಿ ಹುಟ್ಟಿಸುತ್ತದೆ.

ಆದರೆ ತಸ್ಲಿಮಾ ನಸ್ರೀನ್ "ಆ ಪ್ರಶಸ್ತಿಯನ್ನು ಸ್ವೀಕರಿಸಲು ನಾನು ಫ್ರಾನ್ಸ್‌ಗೆ ಹೋಗುವ ಅವಶ್ಯಕತೆ ಇಲ್ಲ, ಅದಕ್ಕಿಂತಲೂ ನಾನು ಕೊಲ್ಕತ್ತಾಗೆ ಹೋಗಲು ಅನುವು ಮಾಡಿಕೊಡಿ" ಎಂದು ಉತ್ತರಿಸಿದ್ದಾರೆ.

ಅದೇನೇ ಇರಲಿ, ಸಿಮೋನ್ ಬುವಾ ಹಿಂದೆಯೇ ಹೇಳಿದ್ದಂತೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತಸ್ಲಿಮಾ ಇರಲಿ, ಯಾವ ಮಹಿಳೆಗೂ ನಿಜವಾದ ಸ್ವಾತಂತ್ರ್ಯ ಮರೀಚಿಕೆಯೇ ಆಗಿದೆ.

* * * * *

ನಿನ್ನೆ ಜನವರಿ 26 ರಕ್ಕೆ, ಅಪ್ಪನನ್ನು ಕೊನೆಬಾರಿಗೆ ಬೀಳ್ಕೊಟ್ಟು ಎಂಟು ವರ್ಷಗಳಾದವು. ಅಪ್ಪನ ನೆನಪು, ಅವರಿಲ್ಲದಿರುವ ನೋವು, ಅವರಿದ್ದಿದ್ದರೆ ಈ ರಾಜ್ಯದ ಸಾಮಾಜಿಕ, ಸಾಹಿತ್ಯಿಕ, ರಾಜಕೀಯ ಜೀವನ ಹೇಗಿರುತ್ತಿತ್ತು ಎಂಬ ಯೋಚನೆಗಳು ನನ್ನನ್ನು, ನಿಮ್ಮನ್ನು ಇನ್ನೂ ಕಾಡುತ್ತಿರುವಾಗಲೇ ಎಂಟು ವರ್ಷಗಳು ಉರುಳಿ ಹೋಗಿವೆ. ಇಷ್ಟು ಬೇಗನೆ ಅಷ್ಟೊಂದು ವರ್ಷಗಳಾಗಿವೆಯೇ ಅನ್ನಿಸುತ್ತದೆ ಹಲವೊಮ್ಮೆ. ಹಾಗೆಯೇ ಈ ಎಂಟು ವರ್ಷಗಳಲ್ಲಿ ನಮ್ಮೆಲ್ಲರ ವೈಯಕ್ತಿಕ ಮತ್ತು ಸಾಮಾಜಿಕ ಬದುಕಿನಲ್ಲಿ ಸಂಭವಿಸಿರುವುದನ್ನೆಲ್ಲ ನೋಡಿದರೆ, ಇಷ್ಟು ಕಡಿಮೆ ಅವಧಿಯಲ್ಲಿ ಅಷ್ಟೊಂದೆಲ್ಲಾ ನಡೆದಿದೆಯೇ ಅಂತಲೂ ಹಲವೊಮ್ಮೆ ಅನ್ನಿಸುತ್ತದೆ.

ಇವತ್ತು ರಾಜಕೀಯ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಪುರೋಹಿತಶಾಹಿಗಳು ಅಥವಾ ಅವರ ಸಿದ್ಧಾಂತವನ್ನು ಬೆಂಬಲಿಸುವ ಶೂದ್ರ ಸಮೂಹ ವಿಜೃಂಭಿಸುತ್ತಿರುವುದು ಆತಂಕಕಾರಿಯಾಗಿದೆ. ಮಾಧ್ಯಮಗಳಿಂದ ಹಿಡಿದು ಅಧಿಕಾರಿ ವಲಯದವರೆಗೂ ಸವರ್ಣೀಯರೇ ಕ್ಲೀಕ್‌ಗಳನ್ನು ಮಾಡಿಕೊಂಡಿರುವುದು, ಆಯಕಟ್ಟಿನ ಸ್ಥಾನಗಳನ್ನು ಅಲಂಕರಿಸಿರುವುದು ಈ ರಾಜ್ಯಕ್ಕೆ ಕಾದಿರುವ ಅಪಾಯಗಳ ಮುನ್ಸೂಚನೆಯಾಗಿದೆ.

ಆದರೆ ಒಂದೇ ಒಂದು ನೆಮ್ಮದಿಯ ವಿಷಯ ಯಾವುದೆಂದರೆ ಅಪ್ಪ ರಾಜ್ಯದ ಎಲ್ಲೆಡೆ ಬಿತ್ತಿರುವ ಎಚ್ಚರಿಕೆಯ ಬೀಜಗಳು ಈಗ ಸಮೃದ್ಧಿಯಾಗಿ ಬೆಳೆದಿದ್ದು ಅವರೆಲ್ಲ ತಮ್ಮ ಶಕ್ತ್ಯಾನುಸಾರ ಕೋಮುವಾದದ ವಿರುದ್ಧದ ಜಾಗೃತಿಯನ್ನು, ಭ್ರಷ್ಟಾಚಾರ ವಿರುದ್ಧದ ಹೋರಾಟದ ಉತ್ಸಾಹವನ್ನು, ನಮ್ಮ ಸಮಾಜದ ಬಗೆಗಿನ ನೈಜ ಕಾಳಜಿಯನ್ನು ಕಾಪಾಡಿಕೊಂಡಿದ್ದಾರೆ.

ಅವರೆಲ್ಲರೊಂದಿಗೆ ನಾವೂ ಇದ್ದೇವೆ ಎಂಬುದಕ್ಕೆ ಈ ನಿಮ್ಮ ಪತ್ರಿಕೆಯೇ ಸಾಕ್ಷಿ.

ಅಂದಹಾಗೆ, ನಿನ್ನೆ ಅಪ್ಪನನ್ನು ನೋಡಲು ಹೋಗಿದ್ದಾಗ ಅವರ ಮೂರು ಮೊಮ್ಮಕ್ಕಳಾದ ಸಮರ್‌ಜಿತ್, ಇಶಾ ಮತ್ತು ಸಮಯ್ ಜೊತೆ ಜೊತೆಯಾಗಿ ಅಪ್ಪನ ಸಮಾಧಿಯ ಪಕ್ಕ ಕೂತಿರುವ ಚಿತ್ರವನ್ನು ಇಲ್ಲಿ ನೀಡಿದ್ದೇನೆ.

ಅಪ್ಪನ ನೆನಪಿನಲ್ಲಿ....

ಮತ್ತು ನಮ್ಮೆಲ್ಲರ ಮಕ್ಕಳ ಭವಿಷ್ಯವನ್ನು ರಕ್ಷಿಸುವ ಆಶೆಯಲ್ಲಿ...

-ಗೌರಿ ಲಂಕೇಶ್

## 2008ರ ವಿಶೇಷಾಂಕ!

ಬರುವ ಮಾರ್ಚ್ ತಿಂಗಳಲ್ಲಿ ನಿಮ್ಮ ಈ ಪತ್ರಿಕೆಗೆ ಮೂರು ವರ್ಷಗಳಾಗುತ್ತವೆ. ಅದರ ಪ್ರಯುಕ್ತ ಒಂದು ವಿಶಿಷ್ಟವಾದ ವಿಶೇಷಾಂಕವನ್ನು ತರಲಿದ್ದೇವೆ. ಆ ವಿಶೇಷಾಂಕಕ್ಕೆ ನಮ್ಮ ಓದುಗ ಮಿತ್ರರಿಗೆ ಈ ಬಾರಿ ಆಯ್ಕೆ ಮಾಡಿರುವ ವಿಷಯ

**ಇಂಗ್ಲಿಷ್ ನನ್ನನ್ನು ಹೆದರಿಸಿದ ಬಗೆ!**

ನಿಮ್ಮಲ್ಲಿ ಬಹಳಷ್ಟು ಜನ ಇಂಗ್ಲಿಷ್ ಎಂಬ ಭಾಷೆಯಿಂದಾಗಿ ತಮಾಷೆಯ, ಗಂಭೀರವಾದ ಪ್ರಸಂಗಗಳನ್ನು ಖಂಡಿತವಾಗಿಯೂ ಎದುರಿಸಿರುತ್ತೀರಿ. ಆ ಪ್ರಸಂಗವನ್ನು ಕುರಿತು ನಿಮ್ಮ ಅನುಭವವನ್ನು ತಿಳಿಸಿರಿ. ಚೆನ್ನಾಗಿದ್ದವನ್ನು ಆಯ್ಕೆ ಮಾಡಿ ವಿಶೇಷಾಂಕದಲ್ಲಿ ಪ್ರಕಟಿಸುತ್ತೇವೆ. ನಿಮ್ಮ ಬರಹ 200 ಪದಗಳಿಗೆ ಸೀಮಿತವಾಗಿರಲಿ ಮತ್ತು ಜನವರಿ 31ರೊಳಗೆ ನಮ್ಮನ್ನು ತಲುಪಲಿ.

# ಪರ್ಯಾಯ ವಿವಾದ: ಗೂಂಡಾಗಳು ಮತ್ತು ಬ್ಲಾಕ್‌ಮೇಲ

ಉಡುಪಿ ಶ್ರೀಕೃಷ್ಣ ದೇವಾಲಯದಲ್ಲಿ ಅಷ್ಟಮಠಗಳಲ್ಲಿ ಒಂದಾದ ಕೃಷ್ಣಾಪುರ ಮಠದ ವಿದ್ಯಾಸಾಗರ ಸ್ವಾಮಿಯ ಪರ್ಯಾಯ (ಪೂಜಾಧಿಕಾರ) ಜ. 17ರ ಮಧ್ಯರಾತ್ರಿಗೆ ಮುಗಿದಿದೆ. ಅಷ್ಟಮಠಗಳ ಪೈಕಿ ಒಂದಾದ ಪುತ್ತಿಗೆ ಮಠದ ಸುಗುಣೇಂದ್ರ ಸ್ವಾಮಿಯ ಪೂಜಾಧಿಕಾರ (ಪರ್ಯಾಯ) ಆರಂಭಗೊಂಡಿದೆ. ಪುತ್ತಿಗೆ ಮಠದ ಸ್ವಾಮಿ ಕಳೆದ ಹತ್ತು ವರ್ಷಗಳ ಕಾಲ ಹೆಚ್ಚಾಗಿ ಇದ್ದುದು ಅಮೆರಿಕಾದಲ್ಲಿಯೇ. ಸಮುದ್ರ ದಾಟಿ ವಿದೇಶಕ್ಕೆ ಹೋದವರು ಕೃಷ್ಣಪೂಜೆ ಮಾಡುವುದು ನಿಷಿದ್ಧ ಎಂಬ ಶಾಸ್ತ್ರ-ಸಂಪ್ರದಾಯಗಳನ್ನು ಇಲ್ಲಿ ಪಾಲಿಸುತ್ತಿರುವುದರಿಂದ ಈ ಬಾರಿಯ ಪೂಜಾಧಿಕಾರ ಹಸ್ತಾಂತರ ಕಾರ್ಯಕ್ರಮ (ಪರ್ಯಾಯ ಮಹೋತ್ಸವ) ವಾದ-ವಿವಾದ, ಆರೋಪ-ಪ್ರತ್ಯಾರೋಪ, ಜಗಳ-ಒಳಜಗಳಗಳಿಂದಾಗಿ ರಾಜ್ಯದಾದ್ಯಂತ ದೊಡ್ಡಮಟ್ಟದ ಚರ್ಚೆಗೆ ಕಾರಣವಾಯಿತು. ನಾಗರಿಕರ ಕುತೂಹಲದ ವಸ್ತುವಾಯಿತು. ಬಿಟ್ಟಿ ಮನೋರಂಜನೆಯೂ ಆಯಿತು.


ಸುಗುಣೇಂದ್ರ ಸ್ವಾಮಿ ಪೀಠವೇರಿದಾಗ ವೀರೇಂದ್ರ ಹೆಗ್ಗಡೆ

## ಪೇಜಾವರ ಫೇಲು

ದೊಡ್ಡಣ್ಣ ಪೇಜಾವರ ಮಠದ ವಿಶ್ವೇಶತೀರ್ಥಸ್ವಾಮಿ ಈ ಪರ್ಯಾಯದ ಮೂಲಕ ಬಹಳಷ್ಟು 'ಸಣ್ಣವ'ರಾಗಿ ಹೋದರು. ಪುತ್ತಿಗೆ ಸ್ವಾಮಿಯ ಪರ್ಯಾಯಕ್ಕೆ ಕೋರಿ ಕೃಷ್ಣಾಪುರ ಮಠದ ಆಸ್ಥಾನ ವಿದ್ವಾಂಸ ನಾಗರಾಜರಾವ್ ಹಾಗೂ ಹರೀಶ್ ಭಟ್ ಎಂಬುವರು ಕೋರ್ಟ್‌ಕಟ್ಟೆ ಹತ್ತಿದಾಗ ವ್ಯಾಜ್ಯ ಹಿಂತೆಗೆದುಕೊಳ್ಳಲು ಮನವೊಲಿಸುವುದಾಗಿ ಪೇಜಾವರ ಘೋಷಿಸಿ ಪ್ರಚಾರ ಗಿಟ್ಟಿಸಿಕೊಂಡರು. ಪೇಜಾವರರ ಮಾತಿಗೆ ವ್ಯಾಜ್ಯ ಹೂಡಿದ ಜನ (ಉಡುಪಿಯವರೇ) ಚಿಕ್ಕಾಸಿನ ಬೆಲೆಯೂ ಕೊಡಲಿಲ್ಲ. ಹೀಗೆ ಪೇಜಾವರರ ಮುಖಭಂಗವೂ ಆಗಿ ಹೋಯಿತು. ಕೋರ್ಟ್ ಕೃಷ್ಣ ಭಕ್ತರ ವ್ಯಾಜ್ಯವನ್ನು ವಜಾಗೊಳಿಸಿತು. ಇದು ಕೃಷ್ಣಾಪುರ ಮಠದ ಹಾಗೂ ಇತರ ಆರು ಮಠಾಧೀಶರ ಗರ್ವಭಂಗಕ್ಕೂ ಕಾರಣವಾಯಿತು.

ವಿದ್ವಾಂಸರ ಸಭೆಯಲ್ಲಿ ಘೋಷಿಸಿದಂತೆ ಪೇಜಾವರ ಜ. 15ರ ಮಧ್ಯಾಹ್ನದಿಂದ ಪೇಜಾವರ ಮಠದೊಳಗೆ ಉಪವಾಸ ಪ್ರಾರಂಭಿಸಿದರು. ಪ್ರಚಾರಪ್ರಿಯ ಪೇಜಾವರ ತನ್ನ ಉಪವಾಸದಿಂದಾಗಿ ಏನೋ ಆಗಿಬಿಡಬಹುದೆಂದು ನಿರೀಕ್ಷಿಸಿದ್ದರು. ಆದರೆ ಏನೂ ಆಗದೇ ಹೋಯಿತು. ಪೇಜಾವರರನ್ನು ಕಂಡು ಮಾತಾಡುವವರೇ ಇರಲಿಲ್ಲ, ಯಾರಿಂದಲೂ ಫೋನೂ ಬರಲಿಲ್ಲ. ಬಿಜೆಪಿಯ ನಗರ ಸಭಾ ಸದಸ್ಯರೂ ಸಹ ಪೇಜಾವರರನ್ನು ಭೇಟಿಯಾಗಲಿಲ್ಲ. ಉಪವಾಸ ಹಿಂತೆಗೆದುಕೊಳ್ಳಿ ಎಂದು ಹೇಳುವವರೂ ಇರಲಿಲ್ಲವೆಂದರೆ ಪೇಜಾವರ ಎಲ್ಲಿಗೆ ಬಂದು ಮುಟ್ಟಿರಬಹುದೆಂಬುದನ್ನು ಒಂದು ಬಾರಿ ಊಹಿಸಿ ನೋಡಿ. 18ರ ಮಧ್ಯಾಹ್ನ ಉಪವಾಸ ಮುಕ್ತಾಯಗೊಳಿಸಬೇಕಾದ ಪೇಜಾವರರು 17ರ ಮಧ್ಯಾಹ್ನವೇ ಒಂದು ದಿನ ಮೊದಲೇ ಉಪವಾಸಕ್ಕೆ ಮಂಗಳ ಹಾಡಿ ನಿಟ್ಟುಸಿರು ಬಿಟ್ಟರು. ಪಾಪ! ಪೇಜಾವರ!!

## ಮುಂಬೈ ಜಗತ್ತು ಎಂಟ್ರಿ

ವಿದ್ವಾಂಸರ ಸಭೆ, ಕೋರ್ಟ್ ತೀರ್ಪು, ಉಪವಾಸಗಳ ಬಳಿಕ ಪುತ್ತಿಗೆ ಮಠದ ಸುಗುಣೇಂದ್ರರ ಪರವಾಗಿ ಮುಂಬೈ ಜಗತ್ತು ಉಡುಪಿ ರಥಬೀದಿಗೆ ಕಾಲಿಟ್ಟಿತು. ಹತ್ತಕ್ಕೂ ಅಧಿಕ ಮಂದಿಯಿದ್ದ ಪಂಟರುಗಳ ತಂಡ ಪುತ್ತಿಗೆ ಮಠದ ಒಳಗೂ-ಹೊರಗೂ ಠಳಾಯಿಸುತ್ತಾ ಸುಗುಣೇಂದ್ರರ ರಕ್ಷಣೆಗೆ ನಿಂತುಬಿಟ್ಟರು. ಶಹಬ್ಬಾಸ್, ಪುತ್ತಿಗೆ! ಸರ್ವಸಂಗ ಪರಿತ್ಯಾಗಿಗಳಿಗೂ ಬೇಕು ಪಂಟರುಗಳ ರಕ್ಷಣೆ ಎನ್ನುವುದನ್ನು ಸಾಬೀತುಪಡಿಸಿದ್ದು ಸಣ್ಣ ಸಾಧನೆಯೇನೂ ಅಲ್ಲವಲ್ಲ, ಜ. 15 ಮತ್ತು 16ರಂದು ಹೀಗೆ ಎರಡು ದಿನಗಳ ಕಾಲ ಪರ್ಯಾಯ ವಿವಾದದ ಸೌಹಾರ್ದಯುತ ಪರಿಹಾರಕ್ಕಾಗಿ ನಡೆದ ಗುಪ್ತಸಭೆಗಳಿಗೆ ಲೆಕ್ಕವಿಲ್ಲ. ಅಷ್ಟ ಮಠಾಧೀಶರು ಒಂದೆಡೆ ಒಟ್ಟಾಗಿ ಸೇರಿ ಸಭೆ ನಡೆಸದ ಕಾರಣ ಗುಪ್ತಸಭೆಗಳು ಬಿಡಿಬಿಡಿಯಾಗಿ ಹಲವು ಬಾರಿ ನಡೆಯುವಂತಾಯಿತು.

ಪುತ್ತಿಗೆ ಮತ್ತು ಶೀರೂರು ಸ್ವಾಮಿಗಳು ಒಂದು ಕಡೆ ಇದ್ದರೆ, ಇತರ ಆರು ಮಠಗಳ ಏಳು ಮಠಾಧೀಶರು ಇನ್ನೊಂದು ಕಡೆಯಿದ್ದರು. ಇವರಲ್ಲೂ 2-3 ಗುಂಪು, ಗುಪ್ತಸಭೆ ನಡೆಸಿ ನಡೆಸಿ ಸ್ವಾಮಿಗಳು ಸುಸ್ತಾದರು. ಜ. 16ರ ರಾತ್ರಿ 11.30 ರಾಘವೇಂದ್ರ ಮಠ ಮತ್ತು ಪಲಿಮಾರು ಮಠದಲ್ಲಿ ಗುಪ್ತಸಭೆ ನಡೆಸಿ ಹೊರಟವರು ಒಬ್ಬೊಬ್ಬರು ಒಂದೊಂದು ರೀತಿ ಹೇಳಿಕೆ ನೀಡಿದರು. ಪೇಜಾವರರು ವಿಕೋಪಗೊಂಡ ಬಗ್ಗೆ ಬಹಿರಂಗಪಡಿಸಿ ತಮ್ಮ ಮಠದೊಳಗೆ ನುಗ್ಗಿ ಮಲಗಿಬಿಟ್ಟರು. ಪೇಜಾವರ ಮಠದೊಳಗೆ 5-10 ನಿಮಿಷ ಆಗುವಷ್ಟರಲ್ಲಿ ಮಠದ ಹೊರಗಡೆ ನಿಂತಿತೊಂದು ಮಹಾರಾಷ್ಟ್ರ ನೋಂದಣಿಯ ಸ್ಕಾರ್ಪಿಯೋ ಕಾರು. ಕಾರಿಂದ ಇಳಿದು ಮಠದೊಳಗೆ ಹೋದವರು "ಬಿ.ಆರ್. ಶೆಟ್ಟಿ ಕರೆಯುತ್ತಾರೆ" ಎಂದಾಕ್ಷಣ ಏನು? ಯಾಕೆ? ಯತ್ತ? ಏನೊಂದೂ ಕೇಳದೆ, ಯಾರಲ್ಲೂ ಏನೂ ಹೇಳದೆ, ಶಿಷ್ಯರ ವಿರೋಧ ಲೆಕ್ಕಿಸದೆ ಹೊರಬಂದು ಕಾರು ಹತ್ತಿಬಿಟ್ಟರು ಪೇಜಾವರ.

ಮುಂಬೈನಲ್ಲಿ ಹೋಟೆಲ್ ಉದ್ಯಮಿಯಾಗಿರುವ ಶೆಟ್ಟಿ ಉಡುಪಿ ಮೂಲದ ಯುವಕರ ತಂಡವನ್ನೂ ಕಟ್ಟಿಕೊಂಡಿರುವ ತಾಕತ್ತಿನ ಮನುಷ್ಯ. ಕಾರೊಳಗೆ ಇದ್ದದ್ದು ಇದೇ ಬಿ.ಆರ್. ಶೆಟ್ಟಿ ಹಾಗೂ ಪುತ್ತಿಗೆ ಮಠದ ಅಮೆರಿಕಾ ವಾಸಿ ಸ್ವಾಮಿ. ಪುತ್ತಿಗೆ ಪರವಾಗಿ ಬಿ.ಆರ್. ಶೆಟ್ಟಿ ಪೇಜಾವರರನ್ನು ಮನ ಒಲಿಸುವ ಕಾರ್ಯ ಆರಂಭಿಸಿದ್ದು ಕಾರಿನೊಳಗೆಯೇ. ಯಾರೊಬ್ಬರೂ ಎಲ್ಲಿಯೂ ಕಾರಿನಿಂದ ಇಳಿಯಲಿಲ್ಲ. ಕಾರು ಒಂದು ಗಂಟೆ ಕಾಲ ಉಡುಪಿ ನಗರದ ಸುತ್ತ ವೀಡಿ ನಗರ, ಉದ್ಯಾವರ, ಅಜ್ಜರಕಾಡು ಎಂದು ಸುತ್ತಾಡಿತು. ಕೆಲವು ಕಡೆ ರಸ್ತೆಬದಿಯಲ್ಲಿ ನಿಂತಿತು. ಒತ್ತಾಯ, ಒತ್ತಡ, ತಂತ್ರ, ಬೆದರಿಕೆಗಳು, ಬ್ಲಾಕ್‌ಮೇಲ್ ಎಲ್ಲವೂ ನಡೆದು ಕಾರು 12.30ಕ್ಕೆ ಪೇಜಾವರ ಮಠದ ಹಿಂಭಾಗಕ್ಕೆ ಬಂದು ಪೇಜಾವರರನ್ನು ಇಳಿಸಿಬಿಟ್ಟಿತು. ಸ್ಥಳದಲ್ಲಿ ಠಿಕಾಣಿ ಹೂಡಿದ್ದ ಪತ್ರಕರ್ತರ ಜತೆ ಮಾತಾಡಿದ ಪುತ್ತಿಗೆ ಮಾತುಕತೆ ಯಶಸ್ವಿ, ವಿವಾದ ಅಂತ್ಯವಾಗಿದೆ ಎಂದರೆ ಪೇಜಾವರರು, ವಿವಾದ ಸೌಹಾರ್ದಯುತವಾಗಿ ಕೊನೆಗೊಳ್ಳುವ ಹಂತದಲ್ಲಿದೆ. ನಾಳೆ ಅಧಿಕೃತವಾಗಿ ಘೋಷಿಸುವುದಾಗಿ ತಿಳಿಸಿದರು. ಇದು ಪೇಜಾವರ ಸ್ಟೈಲು. ಪರ್ಯಾಯ ವಿವಾದಕ್ಕೆ ಮುಂಬೈ ಜಗತ್ತು ಕಾಲಿಟ್ಟದ್ದರ ರಿಸಲ್ಟ್!

## ಪೇಜಾವರ ಔಟ್! ಹೆಗ್ಗಡೆ ಇನ್!!

'ಕೊನೆಗೂ ಪರ್ಯಾಯ ವಿವಾದ ಸುಖಾಂತ್ಯ ಕಾಣಲಿಲ್ಲ. ಜ. 17ರ ಮಧ್ಯರಾತ್ರಿ ಬಳಿಕ ಪುತ್ತಿಗೆ ವಿರೋಧಿ ಸ್ವಾಮಿಗಳಲ್ಲಿ ಬಹುತೇಕ ಸ್ವಾಮಿಗಳು ರಥ ಬೀದಿಯಲ್ಲಿರುವ ತಮ್ಮ ಮಠಗಳಿಂದಲೇ ಕಾಲ್ಕಿತ್ತರು. 17ರ ಸಂಜೆವರೆಗೆ ಪುತ್ತಿಗೆ ಜತೆಗಿದ್ದ ಶಿರೂರು ಸಹಿತ ಸಪ್ತ ಮಠಾಧೀಶರಲ್ಲಿ ಯಾರೊಬ್ಬರೂ ಪುತ್ತಿಗೆ ಜತೆಗೆ ಪಲ್ಲಕ್ಕಿ ಮೆರವಣಿಗೆಯಲ್ಲಿ ಭಾಗವಹಿಸದೆ ಬಹಿಷ್ಕರಿಸಿದರು. 750 ವರ್ಷಗಳ ಇತಿಹಾಸದಲ್ಲಿ ಹೀಗಾಗುತ್ತಿರುವುದು ಇದೇ ಮೊದಲು. ಪುತ್ತಿಗೆಯನ್ನು ಸರ್ವಜ್ಞ ಪೀಠ (ಮಧ್ವಾಚಾರ್ಯರು ಕುಳಿತುಕೊಳ್ಳುತ್ತಿದ್ದ ಪೀಠ)ದಲ್ಲಿ ಕುಳಿತುಕೊಳ್ಳಿಸಿ, ಬೀಗದ ಕೀ ಕೊಟ್ಟು ಅಕ್ಷಯ ಪಾತ್ರೆ ಹಸ್ತಾಂತರಿಸಬೇಕಿದ್ದ ಕೃಷ್ಣಾಪುರಸ್ವಾಮಿ ಪಲಾಯನಿಸಿದ್ದರು. ಕೃಷ್ಣಾಪುರ ಮಠದ ಸ್ವಾಮಿ ಮಾಡಬೇಕಾದ ಕೆಲಸವನ್ನು ತೀರ್ಥಹಳ್ಳಿಯಿಂದ ಬಂದ ಭೀಮನಕಟ್ಟೆ ಸ್ವಾಮಿ ನಿರ್ವಹಿಸಿದರು. ಮುಂಜಾನೆ ರಾಜ್ಯ ಗಣದಲ್ಲಿ ನಡೆದ ಪರ್ಯಾಯ ದರ್ಬಾರ್‌ನಲ್ಲಿ ಸಪ್ತ ಮಠಾಧೀಶರ ಸ್ಥಾನಮಾನ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ತುಂಬಿದ್ದರು. ತಮ್ಮ ಗುರಿ ಸಾಧಿಸಿದ್ದರು.


ಉಪವಾಸ ಕೈಗೊಂಡಿದ್ದ ಪೇಜಾವರ ಶ್ರೀ

## ವಿಶ್ವಶಾಂತಿಯೆಂಬ ನಾಟಕ

ವಿಶ್ವಶಾಂತಿಯ ಹರಿಕಾರನೆಂದು ಸ್ವಯಂ ಪ್ರಚಾರ ಗಿಟ್ಟಿಸಿಕೊಳ್ಳುತ್ತಿರುವ ಪುತ್ತಿಗೆ ಸುಗುಣೇಂದ್ರರ ನಾಟಕ ಪರ್ಯಾಯ ದರ್ಬಾರ್‌ನಲ್ಲಿ ಬಯಲಾಯಿತು. ಶಾಂತಿಯ ಮಾತು ಆಡುತ್ತಲೇ ಪುತ್ತಿಗೆ ಸ್ವಾಮಿ ರಾಜಾಂಗಣ ಸನ್ಮಾನ ಮಾಡಿದ್ದು ಹಿಂಸೆಯ ಪ್ರತಿನಿಧಿಗೆ. ಅಯೋ... ಲ್ಲಿದ್ದ ಮಸೀದಿ ಧ್ವಂಸ ಮಾಡಿದ್ದನ್ನು ಸಮರ್ಥಿ... ಗುಜರಾತ್ ನರಮೇಧವನ್ನು ಸ್ವಾಗತಿಸಿದ, ರಾಮ ಸೇ... ಗಾಗಿ ಬಸ್‌ಗೆ ಬೆಂಕಿ ಹಚ್ಚಿ ಇಬ್ಬರು ಅಮಾಯಕ... ಜೀವಂತವಾಗಿ ದಹಿಸಿದ್ದನ್ನು ಆನಂದಿಸಿದ, ಬಾಬಾಬು... ಗಿರಿಯಲ್ಲಿ ಅಶಾಂತಿಯನ್ನು ಕದಡುತ್ತಾ ವಿಕೃತ ಸಂತ... ಅನುಭವಿಸುತ್ತಿರುವ, ಗೋಡ್ಸೆ ಅನುಯಾಯಿ ಪ್ರಮೋ... ಮುತಾಲಿಕನನ್ನು ಸುಗುಣೇಂದ್ರರು ಸನ್ಮಾನಿಸುವ ಮ... ತಾವು ಪ್ರತಿಪಾದಿಸುತ್ತಿರುವ ಶಾಂತಿ ಯಾ... ಎನ್ನುವುದನ್ನು ಸ್ಪಷ್ಟಪಡಿಸಿದರು. ಪುತ್ತಿಗೆಯ ... ಮಂತ್ರಕ್ಕೆ ಭೇಷ್ ಎನ್ನಬೇಕೇ?

## ಬ್ಲಾಕ್‌ಮೇಲ್

ಕೃಷ್ಣ ದೇವಾಲಯದ ಪೂಜಾಧಿಕಾರದ ಹಕ್ಕ... ಪುತ್ತಿಗೆ ಮಾಡಿದ ತಂತ್ರಗಳು ಹಲವು. ತಮ್ಮ ಬದ್ಧ... ಗಳಾದ ಪೇಜಾವರ ಕಿರಿಯ ಯತಿಪ್ರಸನ್ನ, ಅದಮ... ಮಠದ ಕಿರಿಯಯತಿ, ಪಲಿಮಾರು ಮಠದ ವಿದ್ಯಾಧೀ... ಇತರ ವಿರೋಧಿ ಸ್ವಾಮಿಗಳನ್ನು ಬ್ಲಾಕ್‌ಮೇಲ್ ಮಾಡ... ಹೇಸಲಿಲ್ಲ ಪುತ್ತಿಗೆ ಸ್ವಾಮಿ. ಸರ್ವಜ್ಞ ಪೀಠಾರೋ... ಮಾಡುವುದೆಂದರೆ, ಕೃಷ್ಣದೇಗುಲದ ಅಧಿಕಾರದ ಚು... ಹಿಡಿದಂತೆ. ಪೇಜಾವರ ಹಿರಿಯ ಯತಿ ವಿಶ್ವೇಶ, ... ಯೂರು ಮಠದ ವಿದ್ಯಾವಲ್ಲಭ ಹಾಗೂ ಶಿರೂರು ಮ... ಲಕ್ಷ್ಮೀವರ ಇವರನ್ನು ಹೊರತುಪಡಿಸಿ, ಪುತ್ತಿಗೆ ಪೀ... ರೋಹಣಕ್ಕೆ ಉಳಿದವರ ವಿರೋಧವಿದ್ದರೂ ಅಭ... ಪೂರ್ವ ಜನಬೆಂಬಲ ಮತ್ತು 100 ಮಂದಿ ಮು... ಗೂಂಡಾಗಳ ರಕ್ಷಣೆಯಲ್ಲಿ, ಹೆಗ್ಗಡೆಯ ಧೈರ್ಯ... ಸುಗುಣೇಂದ್ರ ಪೀಠಾರೋಹಣ ಮಾಡಿದ್ದು ಸ್ವ... ಲಾಭಕ್ಕಾಗಿ. ಕೃಷ್ಣ ವಿಗ್ರಹವನ್ನು ದುರುಪಯೋಗಪಡಿಸುತ್ತಿ... ಪುತ್ತಿಗೆ ಸ್ವಾಮಿ ಪೂಜಾಧಿಕಾರ ಪಡೆದು ವಾರ ಕಳೆದ... ಇನ್ನೂ ಕೃಷ್ಣ ವಿಗ್ರಹವನ್ನು ಮುಟ್ಟಿ ಪೂಜೆ ಮಾಡು... ಶಿರೂರು ಸ್ವಾಮಿಯಿಂದ ವಿಗ್ರಹವನ್ನು ಮುಟ್ಟಿ ಮಾ... ಬೆಳಗ್ಗಿನ ಪೂಜೆಗಳನ್ನು ಮಾಡಿಸುತ್ತಿರುವ ಪು... ಸದ್ಯ ಮಾಡುತ್ತಿರುವುದು ವಿಗ್ರಹವನ್ನು ಸ್ಪರ್ಶ... ಮಾಡುವ ಮಧ್ಯಾಹ್ನದ ಮತ್ತು ರಾತ್ರಿಯ ಪೂಜೆಗ... ಮಾತ್ರ.

ನಾಳೆ ಮಾಡುತ್ತೇನೆ, ...ಡಿದ್ದು ಮಾಡು... ಎನ್ನುತ್ತಲೇ ಇತರ ಮಠಾಧೀಶರ ಮುಂದೆ ಬೇಡಿ... ಪಟ್ಟಿ, ಶರತ್ತುಗಳನ್ನು ಮಂಡಿಸುತ್ತಾ ದೊಡ್ಡ ... ಮಾಡಲು ಹುನ್ನಾರ ನಡೆಸುತ್ತಿದ್ದಾರೆ. ವರ್ಷದ... ಶಿಷ್ಯನನ್ನು ಸ್ವೀಕರಿಸಿ ಅಧಿಕಾರ ಕೊಟ್ಟು, ವಿಶ್ವ... ಮಠ ಸ್ಥಾಪನೆಯನ್ನು ಘೋಷಿಸಿ ಅಮೆರಿಕಾಕ್ಕೆ ತೆರ... ಸಂಚು ನಡೆಸಿದ್ದಾರೆ ವಿಶ್ವಶಾಂತಿಯ ಹರಿಕಾರ! ಚಿನ್ನ, ಭೂಮಿ, ಹೆಣ್ಣು ಇವುಗಳಿಗಾಗಿ ಕಾಮ, ಕ್ರೋ... ಮೋಹ, ಮದ, ಮತ್ಸರಗಳನ್ನು ಉಳಿದು ಮಿಕ್ಕೆಲ್ಲ... ತ್ಯಜಿಸಿರುವ ಖಾವಿಧಾರಿ ಸ್ವಾಮಿಗಳು ಪರ್ಯಾ... ವಿವಾದದ ಮೂಲಕ ಸಣ್ಣವರಾಗಿದ್ದಾರೆ. ಸಾಮ... ಗಿಂತಲೂ ಸಾಮಾನ್ಯರಾಗಿದ್ದಾರೆ.

-ಶ್ರೀರಾಮ ದಿವಾ...

# ಹುಬ್ಬಳ್ಳಿ: ಪಾಪು-ಬಿಜೆಪಿಗಳ ಕನ್ನಡ ಹಾರಾಟ, ಬಸವರಾಜ ದೇವರ ಕನ್ನಡ ಹೋರಾಟ!

ಈಗ ಬಿಜೆಪಿಗಳೂ ಕನ್ನಡ ಹಾರಾಟಕ್ಕಿಳಿದಿದ್ದಾರೆ, ಕ್ಷಮಿಸಿ ಕನ್ನಡ ಹೋರಾಟಕ್ಕಿಳಿದಿದ್ದಾರೆ! ರೇಲ್ವೇ ನೇಮಕಾತಿಯಲ್ಲಿ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ ಎಂದು ರಾಜ್ಯಾದ್ಯಂತ ದೊಡ್ಡ ಮಟ್ಟದ ಕೂಗು ಎದ್ದಿದ್ದು, ಈ ಹೋರಾಟದಲ್ಲಿ ರಾಜ್ಯದ ಸಂಸದರು ತಮಗೂ ಇದಕ್ಕೂ ಏನೂ ಸಂಬಂಧವಿಲ್ಲವೆಂಬಂತೆ ದೂರ ಉಳಿದದ್ದು, ಕೊನೆಗೆ ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಕರ್ನಾಟಕ ರಕ್ಷಣಾ ವೇದಿಕೆ ಒಂದಿಷ್ಟು ಕೂಗಾಡಿ ತನ್ನ ಬೇಳೆ ಕಾಳು ಬೇಯಿಸಿಕೊಂಡಿದ್ದು, ರೇಲ್ವೇ ನೇಮಕಾತಿ ಮುಂದೂಡಿದ್ದು, ಮುಂದೂಡಿದ ಮಾಹಿತಿ ಸಿಗದೇ ಅಪ್ಲಿಕೇಶನ್ ಫಾರ್ಮ್ ಹಿಡಿದು ಅಭ್ಯರ್ಥಿಗಳು ಪರದಾಡಿದ್ದು—ಇದೆಲ್ಲಾ ಮೊನ್ನೆ ಮೊನ್ನೆ ನಡೆದ ಕನ್ನಡ ಹೋರಾಟದ ಇತಿಹಾಸ. ಅದೆಲ್ಲಾ ಮುಗಿದ ಮೇಲೆ ಈಗ ಕುಂಭಕರ್ಣ ನಿದ್ದೆಯಿಂದೆದ್ದ ಬಿಜೆಪಿಗಳು ಕಣ್ಣೊರೆಸುತ್ತಾ 'ಕನ್ನಡಿಗರಿಗೆ ಅನ್ಯಾಯ ಆಗ್ತಿದೆ, ಎಂಪಿಗಳೆಲ್ಲಾ ಬರ್ರೋ ಬರ್ರೋ ಹೋರಾಟ ಮಾಡೋಣ' ಅಂತ ಕಣಕ್ಕಿಳಿದಿದ್ದಾರೆ. ಎಲೆಕ್ಷನ್ ಹತ್ತಿರ ಬರ್‍ತಾ ಇರೋದ್ರಿಂದ ಅವರಿಗೆ ನಿದ್ದೆಯಿಂದ ಎಚ್ಚರ ಆಗಿರೋದ್ರಲ್ಲಿ ಯಾರಿಗೂ ಅನುಮಾನ ಇಲ್ಲ ಬಿಡಿ. ಅವರನ್ನು ನೋಡಿದ ಯಾರಿಗಾದರೂ 'ಅಯ್ಯೋ ಪಾಪ' ಎನಿಸದಿರದು.

ಮೊನ್ನೆ ಜನವರಿ 20ನೇ ತಾರೀಖು ಹುಬ್ಬಳ್ಳಿಯ ಅನಂತ ರೆಸಿಡೆನ್ಸಿಯಲ್ಲಿ ಒಂದು ಸಭೆ ಕರೆಯಲಾಗಿತ್ತು, ರೇಲ್ವೇ ನೇಮಕಾತಿಯಲ್ಲಿ ಕನ್ನಡಿಗರಿಗೆ ಅನ್ಯಾಯವಾಗುತ್ತಿರುವುದನ್ನು ಪ್ರತಿಭಟಿಸಿ ಹೋರಾಟ ಕಟ್ಟುವುದು ಈ ಸಭೆಯ ಉದ್ದೇಶವಾಗಿತ್ತು, ಈ ಸಭೆಯನ್ನು ಪಾಟೀಲ ಪುಟಪ್ಪ ಕ್ಷಮಿಸಿ ಪಾಟೀಲ್ ಪುಟ್ಟಪ್ಪ ಅವರು ಕರೆದರೋ ಅಥವಾ ಬಿಜೆಪಿಯ ಸಂಸದ ಪ್ರಹ್ಲಾದ್ ಜೋಶಿ ಕರೆದರೋ ಅನ್ನೋದು ಇನ್ನೂ ನಿಗೂಢವಾಗಿದೆ. ಅದೇನೇ ಇರಲಿ ಇದಕ್ಕೆ ಸಂಸದರ ಸಭೆ ಅಂತ ಕರೆದು ಉಳಿದವರನ್ನೆಲ್ಲಾ ನಿರ್ದಾಕ್ಷಿಣ್ಯವಾಗಿ ಹೊರಗಟ್ಟಲಾಗಿತ್ತು, ಇದರಲ್ಲಿ ಭಾಗವಹಿಸಿದವರು ಕೇವಲ ನಾಲ್ಕು ಜನ ಸಂಸದರು. ಅದೂ, ಅವರೆಲ್ಲರೂ ಬಿಜೆಪಿಯವರೇ—ಪಿಸಿ ಗದ್ದಿಗೌಡರ್, ಪ್ರಹ್ಲಾದ ಜೋಶಿ, ಕರುಣಾಕರ ರೆಡ್ಡಿ ಮತ್ತು ಸುರೇಶ್ ಅಂಗಡಿ. ಆದರೆ ದುರಂತ ಎಂದರೆ, ಇದು ಸಭೆಯಾಗುವ ಬದಲು ರಣರಂಗವಾಗಿದ್ದು.

ಸಭೆಯಲ್ಲಿ ಭಾಗವಹಿಸಿದವರೆಲ್ಲರೂ ಬಿಜೆಪಿ ಸಂಸದರೇ ಆಗಿದ್ದರಿಂದ ಇದು ಕನ್ನಡ ಹೋರಾಟಕ್ಕಾಗಿ ಎಂಪಿಗಳ ಸಭೆ ಆಗೋದರ ಬದಲು ರಾಜಕೀಯಕ್ಕಾಗಿ ಬಿಜೆಪಿಗಳ ಸಭೆಯಾಗಿ ಹೋಗಿತ್ತು, ಜೊತೆಗೆ ಸಂಘ ಪರಿವಾರದ ಜನರೂ ತುಂಬಿಕೊಂಡಿದ್ದರು. ಬಿಜೆಪಿಯ ಮಾಜಿ ಶಾಸಕ ಸಿಸಿ ಪಾಟೀಲ, ಮದನ ದೇಸಾಯಿ, ಅಶೋಕ ಕಾಟವೆ, ಲಿಂಗರಾಜ ಪಾಟೀಲ, ಪಾಲಿಕೆ ಸದಸ್ಯರಾದ ವೀರಣ್ಣ ಸವದಿ, ಡಿ.ಕೆ. ಚವ್ಹಾಣ ಮುಂತಾದ ಬಿಜೆಪಿಗಳು ಬಿಳಿಬಟ್ಟೆ ಕೇಸರಿ ಟವೆಲ್ ಹಾಕಿಕೊಂಡು ಒಳ್ಳೆ ಮದುವೆ ಮನೆಗೆ ಬಂದಹಾಗೆ ಬಂದಿದ್ದರು. ಕಾಂಗ್ರೆಸ್‌ನ ಹಿರಿಯ ನಾಯಕರು ಕನ್ನಡ ಹೋರಾಟದ ಬಗ್ಗೆ ತಲೆಕೆಡಿಸಿಕೊಳ್ಳದಿದ್ದರೂ ಮರಿ ನಾಯಕರಾದ ಪ್ರಸಾದ ಅಬ್ಬಯ್ಯ, ಮಹೇಂದ್ರ ಸಂಘಿ, ರಾಜಶೇಖರ್ ಮೆಣಸಿನಕಾಯಿ, ಬಾಬಾಜಾನ್ ಮುಧೋಳ, ... ಬಪ್ಪ, ಬೀಳಾರ, ಬಿಎಪಿಯ ಶೋಭಾ ಬಳ್ಳಾರಿ ಮು... ದವರೂ ಭಾಗವಹಿಸಿದ್ದರಾದ... ಬಿಜೆಪಿಗಳ ಅಬ್ಬರದಲ್ಲಿ ಅವರ... ಯಾರಿಗೂ ಕೇಳಿಸಲೇ ಇಲ್ಲ. ಕನ್ನ... ರಕ್ಷಣಾ ವೇದಿಕೆಯ ಭೀಮಾಶ... ಕೂಡ ಸಭೆಯಲ್ಲಿದ್ದರೂ ಅ... ಮಾತನಾಡಲು ಅವಕಾಶವೇ ಕೊ... ಲಿಲ್ಲ. ಇದರಿಂದ ಉರಿದುಬಿದ್ದ... ಮೈಕ್ ಕಿತ್ತುಕೊಂಡು ಭಾ... ಕೊಯ್ಯಲು ಪ್ರಾರಂಭಿಸಿ... ಹೋರಾಟದಲ್ಲಿ ಭಾಗವಹಿ... ಸಂಸದರ ಬಟ್ಟೆ ಬಿಚ್ಚುತ್ತೇವೆ, ಆಟ... ಹೊಡೆಯುತ್ತೇವೆ ಅಂತ ಬೀದಿ... ಥರ ಅವಾಜ್ ಹಾಕಿದ. ... ಕಾಯುತ್ತಿದ್ದ ಚೆಡ್ಡಿಗಳು ನಮ...


ಬಸವರಾಜ ದೇವರ

ಬಿಸಂತಿ ಎಂದಾಕ್ಷಣ ಬರೀ ರಾಣೇಬೆನ್ನೂರಿನಲ್ಲಿ ಏಕೆ, ಇಡೀ ಹಾವೇರಿ ಜಿಲ್ಲೆಯ ಖಾದಿ ಆಸಾಮಿಗಳೆಲ್ಲ ಒಂದು ಕ್ಷಣ ಪುಳಕಿತರಾಗುತ್ತಾರೆ. ಮೂವತ್ತು ವರ್ಷಗಳಿಂದ ರಾಣೇಬೆನ್ನೂರಿನಲ್ಲಿ ಹೈಟೆಕ್ ಘರ್‌ವಾಲಿ ಎಂಬ ನೈಕ್‌ನೇಮಿನಿಂದಲೇ ಚಿರಪರಿಚಿತಳಾಗಿರುವ, ಹಿರಿ-ಮರಿ ಖಾದಿ ಪುಢಾರಿಗಳೊಂದಿಗೆ ಅನ್ಯೋನ್ಯ ಬಾಂಧವ್ಯ ಇಟ್ಟುಕೊಂಡು ರಾಜಾರೋಷವಾಗಿ ವೇಶ್ಯಾವಾಟಿಕೆ ನಡೆಸುತ್ತಿರುವವಳೇ ಬಸಂತಿ. ಅಂದರ್ ಹೋಗುವುದಕ್ಕೂ ಹೆದರದ, ಬಾಹರ್ ಬರುವ ಕಲೆಯನ್ನೂ ಕರಗತ ಮಾಡಿಕೊಂಡಿರುವ, ಟೇಸ್ಟಿಗೆ ತಕ್ಕ ಐಟಂ ಸರಬರಾಜು ಮಾಡುವ ಕಲೆಯಲ್ಲಿ ನುರಿತಿರುವ ಹೈಟೆಕ್ ಫ್ಲೆಶ್ ಟ್ರೇಡ್ ಕ್ವೀನ್ ಬಸಂತಿ ಅಲಿಯಾಸ್ ಬಸವಂತೆವ್ವಾ ಈಳಗೇರ್ ಮೊನ್ನೆ ಮೊದಲಬಾರಿಗೆ ಖಾಕಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾಳೆ. ಬಸಂತಿಯ ಹೈಟೆಕ್ ವೇಶ್ಯಾವಾಟಿಕೆ ಅಡ್ಡೆಯ ಮೇಲೆ ರೇಡ್ ನಡೆದು ಅನೇಕ ಹೈಟೆಕ್ ವೇಶ್ಯೆಯರನ್ನು ಬಂಧಿಸಲಾಗಿದೆ. ಆದರೆ ಕೆಲವೇ ಸಮಯದಲ್ಲಿ ಆಕೆ ಹೊರಬಂದಿರುವುದು ಆಕೆಗಿರುವ ತಾಕತ್ತನ್ನು ಎತ್ತಿ ತೋರಿಸುತ್ತದೆ.

ಒಂದು ಕಾಲದಲ್ಲಿ ಜಿಲ್ಲೆಯನ್ನಾಳಿದ ಕಾಂಗ್ರೆಸಿಗರಿಗೆ ಅತೀ ಹತ್ತಿರವಾಗಿರುವ ಬಸಂತಿ ಮಾಜಿ ಮಂತ್ರಿ ಕೆ.ಬಿ.ಕೋಳೀವಾಡನ ಟೊಂಕದ ರಾಣಿಯೂ ಹೌದು; ರಾಣೇಬೆನ್ನೂರಿನ ಭಜರಂಗಿ ಚೆಡ್ಡಿಗಳ ಬೆಸ್ಟ್ ಫ್ರೆಂಡ್ ಕೂಡ ಹೌದು. ಸ್ವಲ್ಪ ದಿನಗಳಲ್ಲೇ ಎದುರಾಗಲಿರುವ ಎಲೆಕ್ಷನ್‌ಗಾಗಿ ಪರಸ್ಪರ ಕಿತ್ತಾಡಿ ಕಂಡಲ್ಲಿ ಬೆಂಕಿ ಹಚ್ಚೋ ಸ್ಕೀಮ್ ಹಾಕಿಕೊಂಡಿದ್ದ ರಾಮ್-ರಹೀಮ್‌ನ ಪಕ್ಷಗಳೀಗ ಮೊದಲು ಬಸಂತಿಯನ್ನು ಸೇಫ್ 'ಮಾಡೋ ಚಿಂತೆ, ಆಮೇಲೇನಿದ್ದರೂ ಓಟಿನ ಸಂತೆ ಅಂತ ಶುರು ಹಚ್ಚಿಕೊಂಡಿದ್ದಾರೆ!


## ಸಿಲ್ವರ್ ಜುಬ್ಲಿ ಘರವಾಲಿ ರೇಡ್!

ಐವತ್ತೈದರ ಆಸುಪಾಸಿನ ನಿತ್ಯ ಸುಮಂಗಲಿ ಬಸಂತಿ ಅಲಿಯಾಸ್ ಬಸವಂತೆವ್ವಾ ಅಶೋಕ ಈಳಗೇರ್ ಮೂಲತಃ ರಾಣೆಬೆನ್ನೂರು ಹತ್ತಿರದ ಕಾಗಿನೆಲೆ ಗ್ರಾಮದವಳು. ವಯಸ್ಸಿಗೆ ಬರುವ ಮೊದಲೇ ಹಣ್ಣು ತಿನ್ನೋ ಚಾಳಿಯಿದ್ದ ಈಕೆ, ಇಪ್ಪತ್ತು ವರ್ಷ ತುಂಬುವ ಮೊದಲೇ ಊರುಬಿಟ್ಟು ಊರೂರು ಅಲೆಯಲಾರಂಭಿಸಿದವಳು. ಆಗ ಸಾಥ್ ನೀಡಿದ ಅಶೋಕ್ ಎನ್ನುವವನೊಂದಿಗೆ ತಾಳಿ ಕಟ್ಟಿಸಿಕೊಂಡು ಮುಂದೊಂದು ದಿನ ಅವನನ್ನೇ ನಾಪತ್ತೆ ಮಾಡಿ ನಿತ್ಯಸುಮಂಗಲಿಯಾದವಳು. ಹಣಗಳಿಕೆಗೆ ಅತ್ಯಂತ ಸುಲಭ ಮಾರ್ಗ ಎಂದುಕೊಂಡು ವೇಶ್ಯಾವಾಟಿಕೆ ದಂಧೆಗೆ ಧುಮುಕಿ ಪುಣೆ, ಮುಂಬೈ ಎಲ್ಲಾ ಸುತ್ತಿ ಅನುಭವ ಪಡೆದುಕೊಂಡಳು. ನೋಡು ನೋಡುತ್ತಿದ್ದಂತೆ ವೇಶ್ಯಾವಾಟಿಕೆಯ ದಂಧೆಯ ಸಾಮ್ರಾಜ್ಯವನ್ನೇ ಕಟ್ಟಿಕೊಂಡಳು. ಹಳ್ಳಿಗಾಡಿನಿಂದ ಬರುವ ಹುಡುಗಿಯರನ್ನು ಪುಸಲಾಯಿಸಿ, ಅವರ ಮೈಮಾರಿ ತಾನು ಕೊಬ್ಬಿದಳು. ಇವಳ ಹೀನಕೃತ್ಯಕ್ಕೆ ಉತ್ತರ ಕರ್ನಾಟಕದ ಅದೆಷ್ಟು ಹುಡುಗಿಯರು



DYSP ಎಂ.ಎಂ.ಅಗಡಿ

ಸೂಳೆಗಾರಿಕೆಯ ಪಾಪಲೋಕದಲ್ಲಿ ನರಳುತ್ತಿದ್ದಾರೋ? ತನ್ನ ಸಾಮ್ರಾಜ್ಯವನ್ನು ಬೇರೆ ರಾಜ್ಯಗಳಿಗೂ ವಿಸ್ತರಿಸಿರುವ ಈಕೆ ಹೊರರಾಜ್ಯದ ಹುಡುಗಿಯರನ್ನೂ ಮೈಮಾರುವ ದಂಧೆಗೆ ಇಳಿಸಿ ಹಣ ಮಾಡುತ್ತಿದ್ದಾಳೆ. ರಾಣೆಬೆನ್ನೂರಿನ ಪ್ರತಿಷ್ಠಿತ ಬಡಾವಣೆಯಲ್ಲಿ ಭವ್ಯ ಬಂಗಲೆಯೊಂದನ್ನು ನಿರ್ಮಿಸಿಕೊಂಡಿದ್ದಾಳೆಂದರೆ ಅವಳು ಅದೆಷ್ಟು ಹುಡುಗಿಯರನ್ನು ಪಾಪದ ಕೂಪಕ್ಕೆ ದೂಡಿದ್ದಾಳೆಂದು ನೀವೇ ಯೋಚಿಸಿ.



ಕೋಳಿವಾಡ

## ಖಾಕಿಗಳ ಕರಾಮತ್ತೋ, ಕರೆನ್ಸಿಯ ಕಿರಿಕ್ಕೋ?

ವಾಸ್ತವದಲ್ಲಿ ಬಸಂತಿ ಈ ಮಟ್ಟದಲ್ಲಿ ಬೆಳೆಯಲು ಹಾವೇರಿ ಜಿಲ್ಲೆಯ ಖಾದಿ-ಖಾಕಿಗಳಿಬ್ಬರೂ ಕಾರಣ ಎಂಬುದು ಎಲ್ಲರಿಗೂ ಗೊತ್ತಿರುವ ರಹಸ್ಯ. ಜಿಲ್ಲೆಯ ಪೋಲೀಸರಿಗೆ ಪುಷ್ಕಳವಾಗಿ ಮೇಯಲು ಹಸಿರು ಹುಲ್ಲಿರುವ ಪ್ರದೇಶ ಎಂದರೆ ರಾಣೆಬೆನ್ನೂರು. 'ಲಕ್ಷ ಕೊಟ್ಟು ಇಲ್ಲಿಗೆ ಬಂದ್ರೆ ಕೋಟಿ ತಗೊಂಡು ಹೋಗ್ತೀವಿ' ಅನ್ನೋದು ಖಾಕಿಗಳ ಖದರು. ಅಂತಲೇ ಡಿವೈಎಸ್‌ಪಿ ಎಂ.ಎಂ. ಅಗಡಿ ರಾಣಿ ಬಿಟ್ಟಾನೇ ಹೊರತು ರಾಣೆಬೆನ್ನೂರನ್ನಲ್ಲ. ಹಾಗಾಗಿಯೇ ಪರ್ಮನೆಂಟಾಗಿ ಇಲ್ಲಿ ತಳವೂರಿಬಿಟ್ಟಿದ್ದಾನೆ. ಈತ ಮಟ್ಕಾ, ಜೂಜು, ಇಸ್ಪೀಟು ಮತ್ತು ವೇಶ್ಯಾವಾಟಿಕೆ ಅಡ್ಡೆಗಳಿಗೆ ಪೋಲೀಸ್ ಸೆಕ್ಯೂರಿಟಿ ಕೊಟ್ಟು ನಡೆಸುತ್ತಾನೆಂದರೆ ಅದೆಷ್ಟರ ಮಟ್ಟಿಗೆ ಅದರಿಂದ ಕಮಾಯಿಸುತ್ತಿದ್ದಾನೆಂದು ಗೊತ್ತಾಗುತ್ತದೆ. ಆದರೆ, ಈ ಅಡ್ಡೆಗಳು ಸಮಯಕ್ಕೆ ಸರಿಯಾಗಿ ಕಾಸು ಎಣಿಸಿಕೊಡದಿದ್ದರೆ ಈತ ಹೇಗೆ ತಿರುಗಿಬೀಳುತ್ತಾನೆಂಬುದಕ್ಕೆ ಬಸಂತಿಯ ಅರೆಸ್ಟ್ ಒಂದು ಸಣ್ಣ ಸ್ಯಾಂಪಲ್.

ಬಸಂತಿ ಬಸ್ಟಾಂಡಿಗೆ ಹತ್ತಿರದಲ್ಲಿಯೇ ಸೆರಗು ಹಾಸುವ ದಂಧೆಯನ್ನು ಅವ್ಯಾಹತವಾಗಿ ಮಾಡುತ್ತಿರುವುದು ನಿನ್ನೆ ಮೊನ್ನೆಯ ಕತೆಯೇನಲ್ಲ, ಸುಮಾರು ಹತ್ತು-ಹದಿನೈದು ವರ್ಷಗಳಿಂದಲೂ ನಡೆಯುತ್ತಿರುವ ಕರ್ಮಕಾಂಡವದು. ತಿಂಗಳೊಂದಕ್ಕೆ ನಲವತ್ತರಿಂದ ಐವತ್ತು ಸಾವಿರ ದುಡ್ಡನ್ನು ಕೇವಲ ಇವಳಿಂದಲೇ ಖಾಕಿಗಳು ಪೀಕುತ್ತಿದ್ದಾರೆಂದರೆ, ಹೆಚ್ಚು ಕಡಿಮೆ ಅಷ್ಟೇ ಮೊತ್ತದ ಹಣವನ್ನು ರಾಜಕಾರಣಿಗಳು ನುಂಗುತ್ತಿದ್ದಾರೆಂದರೆ ಈಕೆಗಿರುವ ವೇಶ್ಯಾವಾಟಿಕೆ ಜಾಲ ಎಂಥದ್ದಿರಬಹುದೆಂದು ಊಹಿಸಿಕೊಳ್ಳಬಹುದು. ಜನ ಈ ಪರಿಯ ಹೀನ ದಂಧೆಯಿಂದ ರೋಸಿಹೋಗಿ ಅಲ್ಲಲ್ಲಿ ಪ್ರತಿರೋಧದ ದನಿಗಳೂ ಕೇಳಿಬಂದಾಗ ಪೋಲೀಸರು ಆಗಾಗ ಒಂದೊಂದು ರೇಡ್ ಮಾಡುತ್ತಿದ್ದರು. ಬಸಂತಿಗೂ ಇದು ರಾತ್ರಿ ಹಗಲಿನಷ್ಟೇ ಸಲೀಸಾಗಿ ಹೋಗಿತ್ತು. ಹುಡುಗ ಹುಡುಗಿಯರನ್ನು ಸ್ಟೇಶನ್ನಿಗೆ ಕರೆದುಕೊಂಡು ಹೋಗಿ, ಫೈನ್ ಕಟ್ಟಿಸಿಕೊಂಡು, ಎರಡು ದಿನ ರೆಸ್ಟ್ ಮಾಡಿಸಿ ಮತ್ತೆ ಪೊಲೀಸರೇ ಖುದ್ದಾಗಿ ಅವರನ್ನು ಬಸಂತಿಯ ಹತ್ತಿರ ತಂದು ಬಿಟ್ಟು ಹೋಗುತ್ತಿದ್ದರು. ಗದುಗಿನ ಹಲವಾರು ಪೊಲೀಸರು ಈಕೆಯ ಸೇವೆ ಮಾಡುವ ಮೂಲಕವೇ ಮೂರು ತಲೆಮಾರಿಗೆ ಆಗುವಷ್ಟು ದುಡ್ಡನ್ನು ಗುಡ್ಡೆಹಾಕಿಕೊಂಡು ಹೋಗಿದ್ದಾರೆ. ಈಗ ತೈಲಿ ಹಿಡಕೊಂಡು ದುಡ್ಡು ತುಂಬುವ ಸರತಿ ಸಧ್ಯದ ಪೊಲೀಸ್ ಅಧಿಕಾರಿಗಳದ್ದು.

ಆದರೆ, ಪ್ರೊಬೇಷನರಿ ಸರ್ವೀಸ್‌ಗೆ ಅಂತ ಬಂದಿರುವ ಡಿಎಸ್‌ಪಿ ಟಿ.ಟಿ. ಶಿವಕುಮಾರ ಅದ್ಯಾವ ಜಿದ್ದಿಗೆ ಬಿದ್ದನೋ ಗೊತ್ತಿಲ್ಲ, ಒಂದು ಸಾರಿಯೂ ಅರೆಸ್ಟ್ ಅನ್ನೋ ಪದವನ್ನೇ ಕೇಳಿರದ ಬಸಂತಿಯನ್ನು ಅರೆಸ್ಟ್ ಮಾಡಿ ಮೈತುಂಬಾ ಸೆಕ್ಷನ್‌ಗಳನ್ನು ಹಾಕಿಬಿಟ್ಟಿದ್ದಾನೆ. ಶಿವಕುಮಾರ್ ಆಕೆಯ ಮನೆಯನ್ನು ರೇಡ್ ಮಾಡಿದಾಗ ಆಂಧ್ರದ ವಿಜಯವಾಡದ ಶಿವಾನಿ, ರಾಜಮಂಡ್ರಿಯ

# ರಾಣೇಬೆನ್ನೂರು: ಫ್ಲೆಷ್ ಟ್ರೇಡ್ ಕ್ವೀನ್ ಬಸಂತಿ ಅಂದರ್-ಬಾಹರ್!



ಬಂಧನಕ್ಕೊಳಗಾದ ಹೈಟೆಕ್ ಘರವಾಲಿ ಮತ್ತು ಇತರರು

ಜ್ಯೋತಿ, ವೆಲ್ಲೂರಿನ ಶಾಂತಿ ಹಾಗೂ ರವಿಕುಮಾರ್, ಹರಿಹರದ ಪ್ರಭು, ಬ್ಯಾಡಗಿಯ ಮಹೇಶ್ ಶಿವಾನಂದ ಬಳ್ಳಾರಿ ಸೇರಿದಂತೆ ಬಸಂತಿಯ ಖಾಸಾ ಮಗ ಅನಿಲ್ ಸಿಕ್ಕಿಬಿದ್ದಿದ್ದಾರೆ. ಆದರೆ, ಪಕ್ಷಭೇದ ಮರೆತು ಈಕೆಯ ರಕ್ಷಣೆಗೆ ಬರುವ ರಾಜಕಾರಣಿಗಳ ಹಿಂದೇ ಈಕೆಯ ಹಿಂದಿರುವಾಗ ಆಕೆ ಹೆದರುತ್ತಾಳೆಯೇ? ಎರಡೇ ದಿನಗಳಲ್ಲಿ ಜಾಮೀನು ಪಡೆದು ಹೊರಬಂದು ಮತ್ತೆ ಫೀನಿಕ್ಸ್‌ನಂತೆ ಎದ್ದು ನಿಂತಿದ್ದಾಳೆ.

## ಬಸಂತಿಗೆ ಕೋಳಿವಾಡನೇ ಗಾಡ್‌ಫಾದರ್!

ರಾಣೇಬೆನ್ನೂರು ಕ್ಷೇತ್ರವನ್ನು ಅನಾಮತ್ತು ಇಪ್ಪತ್ತು ವರ್ಷ ಆಳಿರುವ ಪಕ್ಕಾ ಪ್ರಿಯ ಕೆ.ಬಿ. ಕೋಳಿವಾಡ ಸದಾ ಅಡಿಕೆ, ಎಲೆ ಜಗಿಯುವುದರ ಜೊತೆ ಬಸಂತಿಯಂಥ ಘರವಾಲಿಗಳನ್ನೂ ಜಗಿದು ಉಗಿದಿದ್ದಾನೆ. ಪಾರ್ಟಿ ಮೀಟಿಂಗ್‌ನಿಂದ ಹಿಡಿದು ಕೋಳಿವಾಡನ ಬರ್ತ್‌ಡೆ ಕೇಕ್ ಕಟ್ ಮಾಡುವ ತನಕ ಎಲ್ಲಾ ಜವಾಬ್ದಾರಿಗಳ ಉಸ್ತುವಾರಿಯನ್ನು ಬಸಂತಿಗೇ ಕೊಡಲಾಗುತ್ತದೆ.

ಇಪ್ಪತ್ತು ವರ್ಷಗಳ ಹಿಂದೆ ಗುರುಪ್ರಸಾದ ಎಂಬ ಸಣ್ಣ ಲಾಡ್ಜಿನಲ್ಲಿ ಮೈಮಾರುವ ದಂಧೆಯನ್ನು ಶುರು ಮಾಡಿದ ಬಸಂತಿಗೆ ಗಾಡ್‌ಫಾದರ್ ಆಗಿ ನಿಂತು ಆಕೆಯನ್ನು ಬೆಳೆಸಿದವನು ಈ ಕೋಳಿವಾಡ; ತನ್ನ ಮನೆಯ ಪಕ್ಕದಲ್ಲಿಯೇ ಆಕೆಗೆ ಒಂದು ಸೈಟು ಕೊಡಿಸಿ ಭವ್ಯ ಬಂಗಲೆಯೊಂದನ್ನು ನಿರ್ಮಿಸಲು ಫೇಟ್ ಫ್ಲವರ್ ಥರಾ ಕೆಲಸ ಮಾಡಿದವನು ಈತ. ಆಕೆ ಅದ್ಯಾವ ಧರ್ಮವನ್ನು ಕಾಪಾಡುತ್ತಿದ್ದಾಳೋ ಗೊತ್ತಿಲ್ಲ, ತನ್ನ ಬಂಗಲೆಗೆ 'ಧರ್ಮಶ್ರೀ' ಅಂತ ಹೆಸರಿಟ್ಟಿದ್ದಾಳೆ. ಪ್ರತಿಷ್ಠಿತ ರಾಜರಾಜೇಶ್ವರಿ ನಗರದ ಮೊದಲನೇ ಕ್ರಾಸಿನಲ್ಲಿಯೇ ತಲೆ ಎತ್ತಿರುವ 'ಧರ್ಮಶ್ರೀ'ಯೇ ಈಗವಳ ಅಡ್ಡೆ. ಎಡಬದಿಗೆ ಮಾಜಿ ಮಂತ್ರಿ ಕೋಳಿವಾಡನ ಮನೆ, ಬಲಬದಿಗೆ ಮಾಜಿ ಶಾಸಕ ಸೋಮಲಿಂಗಪ್ಪನವರ ಮನೆ. ಇಬ್ಬರು ಪ್ರಭಾವಿ ರಾಜಕಾರಣಿಗಳ ಮಧ್ಯದಲ್ಲಿ ಬಸಂತಿಯ 'ಧರ್ಮಶ್ರೀ'ಯ ಹೈಟೆಕ್ ವೇಶ್ಯಾವಾಟಿಕೆಯ ಅಡ್ಡೆ! ಅಲ್ಲದೆ, ಎದುರಿಗೆ ರಾಜರಾಜೇಶ್ವರಿ ಹೆಣ್ಣುಮಕ್ಕಳ ಕಾಲೇಜು ಮತ್ತು ಹಾಸ್ಟೆಲ್! ಎಂಥಾ ಕಾಂಬಿನೇಶನ್!!

ಕೋಳಿವಾಡನ ಖಾಸಾ ಶಿಷ್ಯ ಮತ್ತು ನಗರಸಭೆಯ ಮಾಜಿ ಸದಸ್ಯ ಸದಾನಂದ ಕುಂದಾಪೂರ್ ಬಸಂತಿಯ ಆಮದನಿಗೆ ಪ್ರಮುಖ ಪಂಪ್ ಆಗಿದ್ದವನು. ಕ್ರಿಕೆಟ್ ಬೆಟ್ಟಿಂಗ್, ಇಸ್ಪೀಟ್, ಮಟ್ಕಾ, ಜೂಜು ಈ ರೀತಿಯ ಅಕ್ರಮ ದಂಧೆಗಳೇ ಈತನ ಜೀವಾಳ. ಉದಯ, ರಾಜನಂದಿ ಎನ್ನುವ ಆಸಾಮಿಗಳು ರಾಘವೇಂದ್ರ ಹೋಟೆಲ್ ಅಂತ ಒಂದು ಬೋರ್ಡು ತಗಲು ಹಾಕಿಕೊಂಡು ಅವ್ಯಾಹತವಾಗಿ ನಡೆಸುವ ವೇಶ್ಯಾವಾಟಿಕೆ ದಂಧೆಗೆ ಬಸಂತಿಯೇ ಸಾರಥಿ! ಕಾಂಗ್ರೆಸ್‌ನ ರಾಮನಗೌಡ, ಬಸಣ್ಣ ಪ್ರಕಾಶ್ - ಹೀಗೇ ಬಸಂತಿಯ ಅಂಗಳದಲ್ಲಿ ಖಾದಿಗಳ ಹಿಂಡೇ ಜೊಲ್ಲು ಸುರಿಸುತ್ತಾ ನಿಂತಿರುತ್ತದೆ.

## ಭಜರಂಗಿಗಳಿಗೂ ಬಸಂತಿ ಟಾನಿಕ್!

ನಮ್ಮ ದೇಶದ ಸಂಸ್ಕೃತಿಯನ್ನು ಕಾಪಾಡಲು ಕಂಟ್ರಾಕ್ಟ್ ಹಿಡಿದುಕೊಂಡವರಂತೆ ಭಜನೆ ಮಾಡುತ್ತಿರುವ ಭಜರಂಗಿಗಳೂ ಬಸಂತಿಯ ಹಿಂದೆ ಸದಾ ಜೊಲ್ಲು ಸುರಿಸುತ್ತಾ ಬಿದ್ದಿರುತ್ತಾರೆ. ಭಜರಂಗದಳದ ನಾಯಕನೊಬ್ಬ ಬಸಂತಿಯ ದಂಧೆಗೆ ಗಿರಾಕಿಗಳನ್ನು ಒದಗಿಸುತ್ತಾನೆ. ಇವನಿಗೆ ಪ್ರಕಾಶ್ ಎಂಬಾತ ಸಾಥ್ ನೀಡುತ್ತಾನೆ. ರಾಣೆಬೆನ್ನೂರಿಗೆ ಕೋಮು ಬೆಂಕಿ ಹಚ್ಚುವ ಕೆಲಸವಿಲ್ಲದಿದ್ದಾಗ ಬಸಂತಿಯ ಮನೆಯಲ್ಲಿ ಕಾಮ ಹಚ್ಚುವ ಕಸುಬಿನಲ್ಲಿ ಇವರು ತೊಡಗಿರುತ್ತಾರೆ.

ಹೀಗೆ ಒಂದೆಡೆ, ಕಾಂಗ್ರೆಸ್ ಪಕ್ಷದವರ ಹಿಂಡು, ಇನ್ನೊಂದೆಡೆ ಪೊಲೀಸರ ದಂಡು, ಮಗದೊಂದೆಡೆ ಚೆಡ್ಡಿಗಳ ಕಪಿಸೈನ್ಯ. ಬಸಂತಿಗೆ ಇಷ್ಟು ಸಾಕಲ್ಲವೆ ಸಾವಿರಾರು ಹುಡುಗಿಯರನ್ನು ಹರಿದು ತಿನ್ನೋಕೆ? ರಾಣೇಬೆನ್ನೂರನ್ನು ನರಕ ಮಾಡೋಕೆ?

**-ಹುರಳಿಕುಪ್ಪಿ ವಿನಯ್**

---

ಕುರಿತು ಮಾತನಾಡುತ್ತಿದ್ದಾನೆ ಎಂದುಕೊಂಡು ಉಮಾಶಂಕರನ ಮೇಲೆ ಹರಿಹಾಯ್ದುಬಿಟ್ಟರು. ಬಾಯಿಮಾತಿನ ಚಕಮಕಿ ಕೊನೆಗೆ ಕೈಗೆ ತಿರುಗಿಬಿಟ್ಟಿತು. ಕರುಣಾಕರ ರೆಡ್ಡಿಯ ಗನ್‌ಮ್ಯಾನ್‌ಗಳು ಉಮಾಶಂಕರನ ಬಟ್ಟೆ ಹರಿದುಹಾಕಿಬಿಟ್ಟರು. ಅಂದರೆ, ಉಮಾಶಂಕರ ಸಂಸದರ ಬಟ್ಟೆ ಬಿಚ್ಚುತ್ತೇವೆ ಎಂದು ಹೇಳಿದ ಐದು ನಿಮಿಷಗಳೊಳಗೆ ಅವನ ಬಟ್ಟೆಯನ್ನೇ ಗನ್‌ಮ್ಯಾನ್‌ಗಳು ಹರಿದು ಬಿಟ್ಟಿದ್ದರು. ಕೊನೆಗೆ ಪೊಲೀಸರು ಬಂದು ಉಮಾಶಂಕರನನ್ನೂ ಒಳಗೊಂಡಂತೆ ಕರವೇ ಕಾರ್ಯಕರ್ತರನ್ನು ಸಭೆಯಿಂದ ಹೊರಗೆ ಹಾಕಿದರು.

ಇದು ಕನ್ನಡಕ್ಕಾಗಿ ನಡೆಯುತ್ತಿರುವ ಚಳವಳಿ! ನಂತರದಲ್ಲಿ ಸಭೆಯಲ್ಲಿ ಚರ್ಚೆಗಿಂತ ಪಾಪುನ ಪ್ರವಚನವೇ ಜಾಸ್ತಿಯಾಗಿತ್ತು, ರಾಜ್ಯದಲ್ಲಿ ಎಲ್ಲೆಲ್ಲಿ ಜೋಡಿ ಮಾರ್ಗ ಹಾಕಬೇಕು, ಎಲ್ಲೆಲ್ಲಿ ಹೊಸ ಮಾರ್ಗ ಹಾಕಬೇಕು ಎಂದು ರೇಲ್ವೇ ಇಲಾಖೆಗೆ ದೊಡ್ಡ ಪಟ್ಟಿಯನ್ನೇ ಪಾಪು ಕೊಟ್ಟರು. ಹೋರಾಟ ಹೇಗೆ ಮಾಡಬೇಕು, ಯಾರನ್ನೆಲ್ಲಾ ಇದರಲ್ಲಿ ಒಳಗೊಳ್ಳಬೇಕು, ಇದನ್ನೊಂದು ಜನ ಹೋರಾಟವಾಗಿ ಹೇಗೆ ಕಟ್ಟಬೇಕು ಎಂಬುದನ್ನು ಚರ್ಚಿಸುವುದರ ಬದಲು ರೇಲ್ವೆ ಇಲಾಖೆಗೆ ಪಟ್ಟಿ ಕೊಡುವುದರಲ್ಲೇ ಪಾಪು ಅರ್ಧ ಟೈಮ ಖರ್ಚು ಮಾಡಿದರು. ಇವರ ಮಾತನ್ನು ಲಾಲು ಕೇಳುವಂತಿದ್ದರೆ ಕನ್ನಡಕ್ಯಾಕೆ ಈ ಗತಿ ಬರ್ತಿತ್ತು ಅಂತ ಹುಬ್ಬಳ್ಳಿಯ ಜನ ಅಂದುಕೊಂಡಿದ್ದರಲ್ಲಿ ಆಶ್ಚರ್ಯವಿಲ್ಲ ಬಿಡಿ.

ಅಷ್ಟಕ್ಕೆ ನಿಲ್ಲದ ಪಾಪು, ಉತ್ತರ ಕರ್ನಾಟಕದ ಹಿಂದುಳಿದಿಕೆಯ ಬಗ್ಗೆ, ತೆಲಂಗಾಣ ಮಾದರಿಯ ಹೋರಾಟದ ಬಗ್ಗೆ, 371ನೇ ವಿಧಿಯ ಅನ್ವಯ ಉತ್ತರ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡುವ ಬಗ್ಗೆ, ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸುವ ಬಗ್ಗೆ, ಬೆಳಗಾವಿ ಸಮಸ್ಯೆಯ ಬಗ್ಗೆ - ಹೀಗೇ ಮುಂಖಾನುಮುಂಖವಾಗಿ ಭಾಷಣ ಬಿಗಿದದ್ದೇ ಆಯಿತು. ಪಾಪುನ ಭಾಷಣ ಕೇಳಿದ



ಕನ್ನಡ ಉಳುವಿಗಾಗಿ ಚೆಡ್ಡಿ ಸಂಸದರೊಂದಿಗೆ ಪಾಪು

ಕೆಲವರಿಗೆ ಇದು ರೇಲ್ವೇ ನೇಮಕಾತಿಯಲ್ಲಿ ಕನ್ನಡಿಗರಿಗಾಗುತ್ತಿರುವ ಅನ್ಯಾಯದ ವಿರುದ್ಧ ಹೋರಾಟ ನಡೆಸುವುದಕ್ಕಾಗಿ ನಡೆಯುತ್ತಿರುವ ಸಭೆಯೋ ಅಥವಾ ಪಾಪುನ ಪ್ರವಚನ-ಆಶೀರ್ವಚನಗಳ ಸಭೆಯೋ ಎಂಬ ಬಗ್ಗೆ ಅನುಮಾನ ಬಂದಿದ್ದಂತೂ ಸತ್ಯ.

## ಬಸವರಾಜ ದೇವರ ಚಳವಳಿ

ಕನ್ನಡಿಗರಿಗೆ ರೇಲ್ವೇ ಇಲಾಖೆಯಿಂದಾಗುತ್ತಿರುವ ಅನ್ಯಾಯವನ್ನು ಖಂಡಿಸಿ ಧಾರವಾಡ ತಾಲ್ಲೂಕಿನ ಮನಸೂರು ಮಠದ ಬಸವರಾಜ ದೇವರು ಉಪವಾಸ ಸತ್ಯಾಗ್ರಹ ಕೈಗೊಂಡಿರುವುದು ಎಲ್ಲರಿಗೂ ಗೊತ್ತಿದೆ. ಜನವರಿ 13ರಿಂದ ಪ್ರಾರಂಭಗೊಂಡಿರುವ ಈ ಸತ್ಯಾಗ್ರಹ ಇನ್ನೂ ಕೂಡ ಮುಂದುವರೆದಿದೆ. ರಾತ್ರಿ ಕೇವಲ ಗಂಜಿಯನ್ನು ಮಾತ್ರ ಕುಡಿದು ಸತ್ಯಾಗ್ರಹ ನಡೆಸುತ್ತಿದ್ದಾರೆ ಈ ದೇವರು. ಸತ್ಯಾಗ್ರಹ ಪ್ರಾರಂಭವಾದ ಏಳನೇ ದಿನಕ್ಕೆ ಪೊಲೀಸರು ಬಂದು 'ದೇವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ' ಎಂದು ಅವರನ್ನು ಬಲವಂತವಾಗಿ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಧಾಖಲಿಸಿದ್ದರು. ನಂತರ ಹುಬ್ಬಳ್ಳಿಯ ಕಿಮ್ಸ್‌ಗೆ ಕರೆದುಕೊಂಡು ಬಂದರು. ಇವರ ಬಲವಂತದ ಉಪಚಾರ ತನಗೆ ಬೇಡ ಎಂದು ದೇವರು ಜನವರಿ 31ರಂದು ಮನಸೂರು ವಿದ್ಯಾಪೀಠದ ಎದುರು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಘೋಷಿಸಿದ್ದಾರೆ. ಇಷ್ಟೆಲ್ಲಾ ಬೆಳವಣಿಗೆಗಳು ನಡೆದರೂ ಯಾವುದೇ ಕನ್ನಡ ಸಂಘಟನೆಗಳಾಗಲೀ, ಸಂಸದರಾಗಲೀ, ಪಾಪುವಾಗಲೀ, ಮಾಜಿ ಶಾಸಕರಾಗಲೀ ದೇವರ ಹೋರಾಟದಲ್ಲಿ ದನಿಗೂಡಿಸಲಿಲ್ಲ, ಕನಿಷ್ಠ ಒಂದು ಪತ್ರಿಕಾ ಹೇಳಿಕೆಯನ್ನೂ ಕೊಡಲಿಲ್ಲ; ಇದಕ್ಕೆ ಅವರು ಕೊಟ್ಟ ಕಾರಣವೇನೆಂದರೆ 'ಬಸವರಾಜ ದೇವರು ನಕ್ಸಲೀಯ ಬೆಂಬಲಿಗರು' ಎಂದು.

ಕೊನೆಗೂ ರಾಜಕಾರಣಿಗಳಲ್ಲಿ ಬಸವರಾಜ ದೇವರನ್ನು ಭೇಟಿಯಾಗಿದ್ದು ಧಾರವಾಡದ ಮಾಜಿ ಶಾಸಕ ಎಸ್.ಆರ್. ಮೋರೆ ಮಾತ್ರ. ಧಾರವಾಡದ ಮುಸ್ಲಿಮ್ ಸಂಘಟನೆಗಳು, ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮುಂತಾದ ಸಂಘಟನೆಗಳ ಕಾರ್ಯಕರ್ತರು ಮೊದಲಿನಿಂದಲೂ ಬಸವರಾಜ ದೇವರ ಜೊತೆಗಿವೆ. ಜನವರಿ 31ರಂದು ಅವರು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿರುವುದರಿಂದ ಜನವರಿ 30ರಂದೇ ಅವರನ್ನು ಬಂಧಿಸುವ ತಯಾರಿಯಲ್ಲಿ ಪೊಲೀಸರಿದ್ದಾರೆ.

ಹೀಗೆ, ಹುಬ್ಬಳ್ಳಿ-ಧಾರವಾಡಗಳಲ್ಲಿ ಪಾಪು ಮತ್ತು ಚಡ್ಡಿಗಳ ನೇತೃತ್ವದಲ್ಲಿ ಕನ್ನಡ ಹಾರಾಟ, ಬಸವರಾಜ ದೇವರ ನೇತೃತ್ವದಲ್ಲಿ ಕನ್ನಡ ಹೋರಾಟ ನಡೆಯುತ್ತಿದೆ.

**-ವರದಿಗಾರ**


## ದೇವದುರ್ಗ

# ಬಣ್ಣ ಕಳೆದುಕೊಂಡಿರುವ ಆಲ್ಕೋಡ ಹನುಮಂತಪ್ಪ

ರಾಯಚೂರು ಜಿಲ್ಲೆಯ ದೇವದುರ್ಗದ ರಾಜಕೀಯವನ್ನು ವಿವರಿಸಬೇಕೆಂದರೆ ಒಂದರ್ಥದಲ್ಲಿ ಅಲ್ಲಿನ ಭ್ರಷ್ಟಾಚಾರದ ಬಾರಾ ಬಾನಗಡಿಗಳನ್ನೇ ವಿವರಿಸಬೇಕಾಗುತ್ತದೆ. ಅನಕ್ಷರತೆಯಲ್ಲಿ ಇಡೀ ದೇಶದಲ್ಲಿಯೇ ಅತ್ಯಂತ ಹಿಂದುಳಿದ ತಾಲೂಕುಗಳಲ್ಲಿ ಅಗ್ರಗಣ್ಯ ತಾಲೂಕು ಎಂಬ ಹಣೆಪಟ್ಟಿ ಹೊತ್ತುಕೊಂಡ ದೇವದುರ್ಗವನ್ನು ಸ್ವತಃ ಆ ದೇವರೆ ಬಂದು ನಿಂತು ದುರಸ್ತಿ ಮಾಡಬೇಕೆಂದರೂ ಕಷ್ಟವಾಗುತ್ತದೆ. ಇಲ್ಲಿಯ ಜನಗಳ ಅನಕ್ಷರತೆಯನ್ನು ಚೆನ್ನಾಗಿ ಮನಗಂಡಿರುವ ರಾಜಕಾರಣಿಗಳು ಮಾತ್ರ ತಮ್ಮ ಕಾಲಾವಧಿಯಲ್ಲಿ ಹೊಗದಸ್ತಾಗಿ ಮೇಯ್ದು ಹೋಗಿಬಿಡುತ್ತಾರೆ. ಒಂದರ್ಥದಲ್ಲಿ ಇಲ್ಲಿ 'ಉಂಡೂ ಹೋಗಬಹುದು, ಕೊಂಡೂ ಹೋಗಬಹುದು'. ಈ ಹಿಂದೆ ಇಲ್ಲಿಂದಲೇ ಚುನಾಯಿತನಾದ ಬಿ.ಶಿವಣ್ಣ, ಪುಷ್ಪಾವತಿ, ಬಿ.ಟಿ.ಲಲಿತಾ ನಾಯಕ, ಯಲ್ಲಪ್ಪ ಅಕ್ಕರಕಿ ಇದೀಗ ಆಲ್ಕೋಡ ಹನುಮಂತಪ್ಪ ಎಲ್ಲರೂ ಈ ಭ್ರಷ್ಟಾಚಾರದ ಗಂಗೋತ್ರಿಯಲ್ಲಿ ಮಿಂದು ಎದ್ದವರೆ ಆಗಿದ್ದಾರೆ.


ಆಲ್ಕೋಡ್ ಹನುಮಂತಪ್ಪ

"ಹೊಸದಾಗಿ ಅಗಸ ಎತ್ತೆತ್ತಿ ಒಗೆದ" ಎಂಬಂತೆ ಶಾಸಕನಾಗುವುದಕ್ಕಿಂತಲೂ ಪೂರ್ವದಲ್ಲಿ ಆಲ್ಕೋಡ ಹನುಮಂತಪ್ಪ ಸ್ವಲ್ಪ ಭರವಸೆಯನ್ನು ಹುಟ್ಟುಹಾಕಿದ. ಹೊಸ ಶೈಲಿಯ ಮಾತುಗಳ ಮೂಲಕ, ಜನಸಾಮಾನ್ಯನ ನೋವಿಗೆ ಸ್ಪಂದಿಸಿ; ಮೇಲು-ಕೀಳು ಎಂಬ ಜಾತಿತಾರತಮ್ಯಗಳೆಲ್ಲ ಹಸಿ ಸುಳ್ಳುಗಳು ಎಂದು ಹೇಳಿದ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಮಾತಿಗೆ ಹೆಚ್ಚು ಒತ್ತು ನೀಡಿದ. ಭ್ರಷ್ಟ ಅಧಿಕಾರಿ ನೌಕರರನ್ನು ಹೆಡಮುರಗಿ ಕಟ್ಟಿ ನಿಲ್ಲಿಸಿದ. ಅವರು ಮಾಡಿದ ಭ್ರಷ್ಟಾಚಾರದ ಹಗರಣಗಳನ್ನು ಪತ್ರಕರ್ತರನ್ನು ಕರೆ ಕರೆದು ಸುದ್ದಿ ಮಾಡಿದ. ಮೇಲ್ಮನೆ ಸದಸ್ಯನಾದ ನಂತರ ಧಾರವಾಡದಿಂದ ನೇರ ಬಂದು ತವರೂರು ದೇವದುರ್ಗದಲ್ಲಿ ಠಿಕಾಣಿ ಹೂಡಿದ. ಮುಂದಿನ ಎಂ.ಎಲ್.ಎ. ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ತಾಲೂಕಿನಾದ್ಯಂತ 'ಬಸವ ಕೇಂದ್ರ'ದ ಗೆಳೆಯರ, ಪ್ರಗತಿಪರ ಚಿಂತಕರ, ಬುದ್ಧಿಜೀವಿಗಳ, ಪತ್ರಕರ್ತರ ಒಡನಾಟ ಇಟ್ಟುಕೊಂಡು ತಾನೊಬ್ಬ ಸಮಾಜ ಚಿಂತಕ ಎಂಬಂತೆ ಬಿಂಬಿಸುತ್ತಲೇ ನಡೆದ. ಎದುರಿಗೆ ಸಿಕ್ಕಸಿಕ್ಕವರ ಹೆಗಲ ಮೇಲೆ ಕೈಹಾಕಿ 'ಅಪ್ಪ-ಅಣ್ಣ' ಎಂದು ಬಣ್ಣದ ಮಾತುಗಳನ್ನು ಆಡುತ್ತ ಸಾಚಾತನದ ಫೋಜುನೀಡಿದ.



ಯಲ್ಲಪ್ಪ ಅಕ್ಕರಕಿ


ಹನುಮಂತಪ್ಪ ಆಲ್ಕೋಡನ ಈ ಹೊಸ ವರಸೆ ಕಂಡು ನಿಜಕ್ಕೂ ಇಲ್ಲಿನ ಜನ ಬಾಯ್ತೆರೆದು ತಮ್ಮ ಇಷ್ಟು ದಿನದ ದಟ್ಟದಾರಿದ್ರ್ಯವೆಲ್ಲ ಬಟಾಬಯಲಾಗುತ್ತದೆ ಎಂದು ಭ್ರಮಿಸಿದರು. ಏನಿಲ್ಲವೆಂದರೂ ಕನಿಷ್ಟ ಜಾತಿ ರಾಜಕೀಯವೆಂಬ ಕೀಳು ಹುನ್ನಾರಗಳಾದರೂ ತಪ್ಪಿ ಎಲ್ಲರೂ ಕನಿಷ್ಟ ನೆಮ್ಮದಿಯ ಬದುಕಾದರೂ ದೂಡಬಹುದು ಎಂದು ಪರಿಭಾವಿಸಿದರು. ಶುದ್ಧ ಹಸ್ತದ ರಾಜಕೀಯ ಮುಖಂಡನಿಂದ ಹಲವಾರು ಕಚೇರಿಯ ಹಂದಿಗಳು ಬೇರೆ ತಾಲೂಕಿಗೆ ತಾವೇ ತಾವಾಗಿ ಓಟ ಕಿತ್ತಬಹುದು ಎಂದು ಎಲ್ಲರೂ ತಿಳಿದಿದ್ದರು.

ಆದರೆ ಆಲ್ಕೋಡ ಹನುಮಂತಪ್ಪ ತಾನು ನಿಜಕ್ಕೂ ಯಾವುದರಿಂದ ನಿರ್ಮಿತವಾದ ವ್ಯಕ್ತಿ ಎಂಬುದನ್ನು ತೋರಿಸಿಕೊಳ್ಳಲು ಬಹಳ ಕಾಲ ಹಿಡಿಯಲಿಲ್ಲವೆನಿಸುತ್ತದೆ. 'ಬಡತನವನ್ನೇ ಹಾಸಿಹೊದ್ದು ಬದುಕಿದರು' ಎಂದು ಹೇಳುತ್ತಾರಲ್ಲ ಅಂತಹ ಕಡು ಬಡತನದ ನೋವುಗಳನ್ನು ಉಂಡುಟ್ಟು ಬದುಕಿದ ಹನುಮಂತಪ್ಪ ಆಲ್ಕೋಡ ದೇವದುರ್ಗವೆಂಬ ಸಮೃದ್ಧವಾದ ಹುಲ್ಲುಗಾವಲು ಹಾಗೂ ಕಾವಲು ಕಾಯುವ ಕೆಲಸಗಾರ್‍ಯಾರೂ ಇಲ್ಲದ್ದರಿಂದ ಸಂಪೂರ್ಣ ತಿಂದುಂಡು 'ಡರ್' ಎಂದು ತೇಗಿಬಿಟ್ಟ ಸಮಾಚಾರಗಳು ಈಗ ಇಡೀ ಕ್ಷೇತ್ರದ ತುಂಬ ಚಾಲ್ತಿಯಲ್ಲಿವೆ. ಕೇವಲ 40 ತಿಂಗಳ ಹಿಂದೆ ಈತನ ಹಿಂದುಮುಂದೆ ಓಡಾಡಿಕೊಂಡಿದ್ದ ಗೆಳೆಯರು-ಹಿತೈಷಿಗಳು ಈಗ ಯಾರೂ ಈತನ ಹತ್ತಿರ ಸುಳಿಯುತ್ತಿಲ್ಲದಿರುವುದು ವಿಪರ್ಯಾಸದ ಸಂಗತಿಯಾಗಿದೆ.


ಬದಲಾಗಿ ಲಕ್ಷ್ಮಣ ಅಕ್ಕರಕಿ, ಹಣಮಂತರಾಯ ಚಿಕ್ಕಗುಡ್ಡದ, ಲಕ್ಷ್ಮಣ ರಾಠೋಡ, ರಾಘವೇಂದ್ರ ಕೋಲ್ಕರ್ ಎಂಬ ನಾಮರ್ಧ ಚೇಲಾಗಳನ್ನೆ ತನ್ನ ಅಧಿಕೃತ ವಕ್ತಾರರಂತೆ ಬಿಂಬಿಸುತ್ತ ನಡೆದ. ಅಂದಂತೆ ಲಕ್ಷ್ಮಣ ರಾಠೋಡನಿಗೆ ಎತ್ತು, ಎಮ್ಮೆ, ದನ-ಕರುಗಳನ್ನು ತಿಂದು ಹಾಕುವ ಕೆಲಸವನ್ನು ವಹಿಸಿಕೊಟ್ಟ. ಇವತ್ತಿಗೂ ಈ ಪುಣ್ಯಾತ್ಮನ ಹೆಸರು ಹೇಳಿಕೊಂಡು ತಮ್ಮ ಕಾಲಲ್ಲಿಯ ಚಪ್ಪಲಿ ಸವೆಸುತ್ತ ಕಣ್ಣೀರಿಡುತ್ತ ನಿತ್ಯವೂ ದೇವದುರ್ಗಕ್ಕೆ ಬಂದು ಹೋಗುವ ಜನರನ್ನು ಯಾರಾದರೂ ನೋಡಬಹುದು.

ಮತ್ತೊಬ್ಬ ಘಟಿಂಗ ರಾಘವೇಂದ್ರ ಕೋಲ್ಕರ್‌ನನ್ನಂತೂ ಟ್ರಾನ್ಸ್‌ಫರ್ ಬಿಜಿನೆಸ್‌ಗಾಗಿಯೇ ಆಲ್ಕೋಡ ನೇಮಿಸಿಕೊಂಡ. ಈತ ಈ ದಂಧೆಯಲ್ಲಿ ತಿಂದುಂಡದ್ದು ಜೀರ್ಣಿಸಿಕೊಳ್ಳದಷ್ಟು. ಕೃಷಿ ಮತ್ತು ಅಂಗನವಾಡಿ ಕೇಂದ್ರಗಳ ನೇಮಕಾತಿಯಲ್ಲಂತೂ ತಿಂದ ಸೆಗಣಿಯ ಮೊತ್ತ ಎಲ್ಲರಿಗೂ ಗೊತ್ತಿರುವಂಥದ್ದು. ಲಕ್ಷ್ಮಣ ಅಕ್ಕರಕಿಯ ಮೂಲಕವಂತೂ ಆಲ್ಕೋಡ ಇಡೀ ದೇವದುರ್ಗದ ಎಲ್ಲಾ ಸ್ಕೀಮ್‌ಗಳು ನೇರ ತನ್ನ ತಿಜೋರಿಗೆ ಹರಿಯುವಂತೆ ನೋಡಿಕೊಂಡ ಕುಖ್ಯಾತಿ ಇದೆ. ಎಸ್.ಡಿ.ಎಂ.ಸಿ.ಸ್ಕೂಲ್ ಅಧ್ಯಕ್ಷ, ರಾಜ್ಯ ಮಟ್ಟದ ಕ್ರೀಡಾ ಪ್ರಾಧಿಕಾರದ ಸದಸ್ಯ, ಅಂಗನವಾಡಿ ನೇಮಕಾತಿಯ ಅಧ್ಯಕ್ಷ. ಇದಲ್ಲದೆ ಯಾವುದೇ ಇಲಾಖೆಯ ಕೆಲಸ ಕಾರ್ಯಗಳು ಇವರ ಸುಪರ್ದಿಯಲ್ಲೇ ನಡೆಯಬೇಕು ಎಂಬುದು ಆಲ್ಕೋಡನ ಅಲಿಖಿತ ಆಜ್ಞೆಯೇ ಆಗಿತ್ತು. ದಾನಪ್ಪ ಆಲ್ಕೋಡ ಎಂಬ ಸಹೋದರನ ದೆಸೆಯಿಂದ ಉಂಟಾಗಿರುವ ಕಳಂಕವಂತೂ ಅಳಿಸಲೂ ಸಾಧ್ಯವೇ ಇಲ್ಲ ಎನ್ನುವಷ್ಟು ಬೃಹತ್ತಾಗಿ ಬೆಳೆದಿದೆ.





ಮಾನಪ್ಪ ವಜ್ಜಲ

ಗ್ರಾಮೀಣ ರಸ್ತೆ, ಜಿಲ್ಲಾ ಮುಖ್ಯ ರಸ್ತೆ, ಮುಖ್ಯ ರಸ್ತೆಯ ಸುಧಾರಣೆಯ ನೆವದಲ್ಲಿ, ಪ್ರಕೃತಿ ವಿಕೋಪ, ಬರಕಾಮಗಾರಿ, ವಿವಿಧ ಕುಡಿಯುವ ನೀರಿನ ಯೋಜನೆ ಹಾಗೂ ನಿರ್ವಹಣೆ ಮುಂತಾದವುಗಳ ಹೆಸರಿನ ಮೇಲೆ ನಡೆಸಿದ ಹಗಲು ದರೋಡೆ ಎಂಥವರನ್ನೂ ನಾಚಿಸುತ್ತಿವೆ. ಪಂ.ರಾ.ಇಂ. ವಿಭಾಗದ ಎ.ಇ.ಇ. ಗಣಪತಿ ಸಾಕ್ರೆಯನ್ನು ಹಿಡಿದುಕೊಂಡು ಮಾಡಿದ ಲೂಟಿ ತನಿಖೆ ನಡೆಸಿದ್ದೆ ಆದರೆ ಹನುಮಂತಪ್ಪನ ಅಸಲಿತನ ಬಟಾಬಯಲಾಗಿ ಹೋಗಲಿದೆ. ಲೋಕೋಪಯೋಗಿ ಇಲಾಖೆಯಿಂದ ನಬಾರ್ಡ, ಸಿ.ಆರ್.ಎಫ್. 3054, 5054 ಮುಂತಾದ ಯೋಜನೆಗಳ ಅಡಿಯಲ್ಲಿ ಮಾಡಿದ ಯಾವ ಕೆಲಸಗಳು ಗುಣಮಟ್ಟದವುಗಳಾಗಿಲ್ಲ, ಏಕೆಂದರೆ ಸಂಬಂಧಿಸಿದ ಕೆಲಸಗಳ ಇಂಜಿನಿಯರ ಮೂಲಕ ಆಲ್ಕೋಡ 35 ರಿಂದ 40 ಲಕ್ಷ ಹಣದ ಥೈಲಿಯನ್ನು ಫಿಕ್ಸ್ ಮಾಡಿಕೊಂಡಿದ್ದ ಎಂಬುದೂ ಇಂದು ಎಲ್ಲೆಡೆಯೂ ಜನಜನಿತ.


ಬಸವರಾಜಪಾಟೀಲ್ ಇಟಗಿ

ಹಣವನ್ನು ಎತ್ತಿ ಹಾಕುವುದಕ್ಕೆ ಕೆಲವು ಸ್ಕೀಮ್‌ಗಳನ್ನು ಆಲ್ಕೋಡ ಯಾವುದೇ ಶರ್ಮ್ ಇಲ್ಲದೆ ಕೈಗೆತ್ತಿಕೊಳ್ಳುತ್ತಾರೆ. 2005-2006ರ ಸಾಲಿನಲ್ಲಿ ಹಿಂದೊಮ್ಮೆ ನಿರ್ಮಿತವಾಗಿದ್ದ ದೇವತ್ಕಲ್-ಹುಲಿಗುಡ್ಡ ಹಳ್ಳದ ಸೇತುವೆಗೆ ಪ್ರಕೃತಿ ವಿಕೋಪದ ನಿಧಿಯಿಂದ 40 ಮರುವರ್ಷ ಮತ್ತೆ 25 ಲಕ್ಷ, ಬರಪರಿಹಾರ ಯೋ... ಯಡಿ ಮತ್ತೆ 25 ಲಕ್ಷ ಹೀಗೆ ಒಂದೇ ಕಾಮ... ವಿವಿಧ ಬಿಲ್‌ಗಳನ್ನು ಸೃಷ್ಟಿಸಿ ಆ ಎಲ್ಲಾ ಬಾ... ನೇರ ಹನುಮಂತಪ್ಪನ ಖಜಾನೆಗೆ ಹರಿದುಬರು... ವ್ಯವಸ್ಥೆ ಮಾಡಲಾಗಿತ್ತು ಎಂದು ಜೆ.ಡಿ.ಎಸ್. ಕಾ... ಕರ್ತರೆ ಇಂದು ಬೀದಿಗುಂಟ ನಿಂತು ಮಾತಾಡುತ್ತಿ...

ಪ್ರಾಮಾಣಿಕ, ನಿಷ್ಠಾವಂತ ಹಾಗೂ ಬುದ್ಧಿ... ಗೆಳೆಯರನ್ನು ಹಿಂದೊಮ್ಮೆ... ಹಿಂದಿಟ್ಟುಕೊಂಡು ಫೋ... ಕೊಡುತ್ತಿದ್ದ ಹನುಮ... ಮಂತ್ರಿಯಾಗುತ್ತಲೇ ಅವ... ಚಳ್ಳೆಹಣ್ಣು ತಿನ್ನಿಸಿದ. ವಿ... ಪರಿಷತ್ತಿನ ಮಾಜಿ ... ಬಸವರಾಜ ಪಾಟೀಲ ... ರಾಜ್ಯ ರೈತ ಮೋರ್ಚಾ... ಅಧ್ಯಕ್ಷ ಚಂದ್ರಶೇಖರ ... ಬುಡ್ಡನಗೌಡ ಪಾಟೀಲ ... ಟಕಲ್ ಮುಂತಾದ ... ಎಸ್. ಮುಖಂಡರಿಂದ ಬಹುದೂರ ನ... ಬಿಟ್ಟಿದ್ದಾನೆ. ಇವರೆಲ್ಲ ... ದೇವದುರ್ಗದಲ್ಲಿ ಆಲ್... ಹನುಮಂತಪ್ಪನ ಬಾಲ ... ಈ ಸಲ ಕಟ್ ಮಾ... ಬೇಕೆಂದು ಪಣತೊಟ್ಟ... ಅಲ್ಲಲ್ಲಿ ಬಹಿರಂಗವಾಗಿಯೇ ಸಭೆಗಳು ... ಪತ್ರಿಕಾ ಹೇಳಿಕೆಗಳು ಪ್ರಕಟವಾಗುತ್ತಿವೆ...

ಇದೆಲ್ಲ ಕಂಡು ಸಹಜವಾಗಿ ಕಾಂಗ್... ಹೊಸ ಹುರುಪು ತುಂಬಿಕೊಳ್ಳು... ಎ.ಪಿ.ಎಂ.ಸಿ.ಯ ದೇವಿಂದ್ರಪ್ಪ, ರಾಮಣ್ಣ... ಬಗೇರಾ, ಯಲ್ಲಪ್ಪ ಅಕ್ಕರಕಿ, ಖಗೆ... ಅಳಿಯ ರಾಧಾಕೃಷ್ಣ ಜಿಲ್ಲಾ ಕಾಂಗ್ರೆ... ವಸಂತಕುಮಾರ ಮುಂತಾದವರೂ ... ಕೈನೋಡೇ ಬಿಡಬೇಕೆಂದು ತಯಾ... ನಡೆಸಿದ್ದಾರೆ. ಬಿಜೆಪಿಯಿಂದ ಟಿ.ಎಲ್.ನಾಯಕ ... ಮಾಜಿ ಡಿ.ಐ.ಜಿ.ಟಿ.ಆರ್.ನಾಯಕ ಸಜ್ಜಾಗುತ್ತಿದ್ದಾರೆ. ... ಸಲ ಹೆಚ್ಚಿನ ಮತಗಳನ್ನು ಪಡೆದಿದ್ದ (ಪಕ್ಷೇ... ಅಭ್ಯರ್ಥಿಯಾಗಿ ನಿಂತಿದ್ದ) ಮಾನಪ್ಪ ವಜ್ಜಲ ರಾಜ್ಯ... ಪಕ್ಷಗಳ ಟಿಕೆಟಿನ ಬೇಟೆ ನಡೆಸಿದ್ದಾನೆ.

ಆಲ್ಕೋಡ ತಾಲೂಕಿನಾದ್ಯಂತ ಹಲವಾರು ... ಗಳನ್ನು ಮಾಡಿಸಿದ್ದರೂ ಕೀಳುಜಾತಿರಾಜಕಾರಣ ಹಾ... ಒಬ್ಬರ ವಿರುದ್ಧ ಒಬ್ಬರನ್ನು ಎತ್ತಿಕಟ್ಟಿ ಆಡುವ ಆಟಗಾ... ತನ್ನ ಚರಿಸ್ಮಾ ಕಳೆದುಕೊಂಡಂತೆ ಆಗಿದೆ. ರೆಡ್ಡಿ ವ... ಬಣಜಿಗ ಎಂಬ ಭೇದವನ್ನು ಜನರ ನಡುವೆ... ತಾನು ಇದೊಂದು ಬಾರಿ ದೇವದುರ್ಗದಿಂದ ... ಬರಬೇಕು ಎಂಬ ಹವಣಿಕೆಗೆ ಇಲ್ಲಿನ ಮತದಾ... ಸಲ ಎಳ್ಳು ನೀರು ಬಿಡಬಹುದೆನಿಸುತ್ತದೆ.

-ವಿಶ್ವಾರಾಧ್ಯ ಸತ್ಯಂಪೇ...

---

## ಕೊಪ್ಪಳ

### ಜಿಲ್ಲಾ ನೌಕರರ ಸಂಘದ ಎಲೆಕ್ಷನ್:

# ಸಮಬಲದ ಹಗ್ಗಜಗ್ಗಾಟ

ಕೊಪ್ಪಳ ಜಿಲ್ಲಾ ಸರ್ಕಾರಿ ನೌಕರರ ಸಂಘದ ಚುನಾವಣೆ ಭಯಂಕರ ಬಿರುಸಿನಿಂದ ಕೂಡಿದ್ದು ಅಧ್ಯಕ್ಷ ಸ್ಥಾನದ ಅಭ್ಯರ್ಥಿಗಳಾದ ಎಂ. ವೀರೇಶ್ ಮತ್ತು ಶಂಭುಲಿಂಗನಗೌಡ್ರ ಬಣಗಳ ನಡುವೆ ಸಮಬಲದ ಹಗ್ಗಜಗ್ಗಾಟ ಆರಂಭಗೊಂಡಿದೆ.


ಈ ನಡುವೆ ಅಧಿಕಾರವಿಲ್ಲದೆ ಕೂತುಕೊಂಡಿರುವ ರಾಜಕಾರಣಿಗಳು ತೆರೆಯ ಹಿಂದೆ ಕುಳಿತು ಸದರಿ ಚುನಾವಣೆಯ ಲಗಾಮು ಕೂಡ ಹಿಡಿದಿದ್ದಾರೆ. ಇದರೊಂದಿಗೆ ಜಾಗತಿ ಲೆಕ್ಕಾಚಾರವೂ ಪ್ರಮುಖ ಅಸ್ತ್ರವಾಗಿದ್ದು ಪ್ರಜ್ಞಾವಂತರೆಲ್ಲ ಈ ಚುನಾವಣೆಯತ್ತ ಬೆರಗಿನಿಂದ ನೋಡುವಂತಾಗಿದೆ.

ನಾಲ್ಕು ವರ್ಷದ ಅವಧಿಗೆ ಆಯ್ಕೆಗೊಳ್ಳಬೇಕಿರುವ ಎಂ. ವೀರೇಶ ಬಣದಲ್ಲಿ ವೀರೇಶ್ ಅಧ್ಯಕ್ಷ ಸ್ಥಾನಕ್ಕೂ, ಮಲ್ಲಪ್ಪ ಗಟ್ಟಿ ಖಜಾಂಚಿ ಸ್ಥಾನಕ್ಕೂ, ಸಣ್ಣ ಭೀಮಣ್ಣ ರಾಜ್ಯ ಪರಿಷತ್ ಸ್ಥಾನಕ್ಕೂ ಸ್ಪರ್ಧಿಸಿದ್ದರೆ, ಶಂಭುಲಿಂಗನಗೌಡ್ರ ಬಣದಲ್ಲಿ ಶಂಭುಲಿಂಗನಗೌಡ್ರು ಅಧ್ಯಕ್ಷ ಸ್ಥಾನಕ್ಕೂ, ಯಂಕಪ್ಪ ಖಜಾಂಚಿ ಸ್ಥಾನಕ್ಕೂ, ಧನಂಜಯ ರಾಜ್ಯ ಪರಿಷತ್ ಸ್ಥಾನಕ್ಕೂ ಸ್ಪರ್ಧಿಸಿದ್ದಾರೆ.


ಎಂ.ವೀರೇಶ

ಈ ಮುಂಚೆ ಜಿಲ್ಲಾ ಘಟಕದ ಕಾರ್ಯಕಾರಿ ಸಮಿತಿಗೆ ಅವಿರೋಧವಾಗಿ ಆಯ್ಕೆಯಾಗಿದ್ದ ಬಸವರಾಜ ಆಕಳವಾಡಿ, ವಿನಯ ಕುಮಾರ್, ಮಂಜುನಾಥ, ಮಹ್ಮದ್ ಇಸ್ಮಾಯಿಲ್, ಬಸವರಾಜ್ ಕುಂಬಾರ್ ಸೇರಿದಂತೆ 39 ಜನರು ಅವಿರೋಧವಾಗಿ ಆಯ್ಕೆಗೊಂಡಿದ್ದು, ಉಳಿದ 18 ಸ್ಥಾನಗಳಿಗೆ ರಾಜಶೇಖರ ಗೌಡ, ರವೀಂದ್ರ ಜೋಶಿ, ಎನ್.ಎಸ್ ಪಾಟೀಲ್, ಪತ್ರೆಪ್ಪ ಚತ್ತರಕಿ ಸೇರಿದಂತೆ ಇತರರು ಆಯ್ಕೆಗೊಂಡಿದ್ದು ಒಟ್ಟು 64 ಜನರಲ್ಲಿ ಸರಳ ಗೆಲುವಿಗೆ 33 ಮತಗಳು ಬೇಕಿವೆ.

ನೌಕರರ ಭವನದಲ್ಲಿ ವಸತಿ ಗೃಹ ಕಟ್ಟಿಸಿದ್ದು, ಬೋರ್‌ವೆಲ್ ಕೊರೆಯಿಸಿದ್ದು, ಕಾಂಪೌಂಡ್ ನಿರ್ಮಿಸಿದ್ದು, ವೇತನಕ್ಕಾಗಿ ಹೋರಾಟ ಮಾಡುತ್ತಿರುವುದನ್ನೇ ಶಂಭುಲಿಂಗನಗೌಡ್ರ ಭರ್ಜರಿಯಾಗಿ ಪ್ರಚಾರ ಮಾಡುತ್ತಿದ್ದು ಇದನ್ನೆ ಮತಗಳಿಕೆಗೆ ಬಂಡವಾಳ ಮಾಡಿಕೊಳ್ಳುತ್ತಿದ್ದಾರೆ. ಇನ್ನೋರ್ವ ಸ್ಪರ್ಧಿ ಎಂ. ವೀರೇಶ್ ಹೊಸಬರಿಗೆ ಅವಕಾಶ ನೀಡಿ ಎಂಬ ಸ್ಲೋಗನ್ ಜೊತೆ ಹಿಂದಿನ ಅವಧಿಯಲ್ಲಿ ಶಂಭುಲಿಂಗನಗೌಡ್ರ ಒಡನಾಡಿಗಳಾಗಿದ್ದವರನ್ನು ತಮ್ಮತ್ತ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಜೊತೆಗೆ, ಐದನೇ ವೇತನ ಆಯೋಗದ ಎರಡನೇ ವರದಿಯನ್ನು ಅನುಷ್ಠಾನ ಮಾಡಬೇಕು, ನೌಕರರ ಭವನದಲ್ಲಿ ಸಭಾಂಗಣ ನಿರ್ಮಾಣ ಮಾಡಬೇಕು, ಸರ್ಕಾರಿ ನೌಕರರಿಗೆ ಆಗುತ್ತಿರುವ ಕಿರುಕುಳ ತಪ್ಪಿಸಿ ಸೌಹಾರ್ದ ವಾತಾವರಣ ನಿರ್ಮಾಣ ಮಾಡಬೇಕು, ಶಿಕ್ಷಕರಿಗೆ ಗುರುಭವನ ಕಟ್ಟಿಸಬೇಕು, ಸರ್ಕಾರಿ ನೌಕರರಿಗೆ ವಸತಿ ಗೃಹಗಳ ಹಂಚಿಕೆಯಲ್ಲಿ ಪಾರದರ್ಶಕತೆ ತರಬೇಕು - ಹೀಗೆ ಹತ್ತು ಹಲವು ಉದ್ದೇಶಗಳನ್ನು ಮುಂದಿಟ್ಟುಕೊಂಡು ಮತ ಯಾಚಿಸುತ್ತಿದ್ದಾರೆ.


ಶಂಭುಲಿಂಗನಗೌಡ್ರ

ನೌಕರರ ಸಂಘದ ಎರಡು ಚುನಾವಣೆಗಳನ್ನು ಎದುರಿಸಿರುವ ಶಂಭುಲಿಂಗನಗೌಡ್ರ ಬಣದಲ್ಲಿ ಬಹಳಷ್ಟು ಅಭ್ಯರ್ಥಿಗಳು ಸೋತಿದ್ದರೂ ತಂತ್ರಗಾರಿಕೆ ಮೂಲಕ ಗೆಲ್ಲುವ ಪ್ರಯತ್ನ ನಡೆಸಿದ್ದಾರೆ. ಎಂ. ವೀರೇಶ್ ಮಾತ್ರ ಹೊಸಬರಿಗೆ ಅವಕಾಶ ಎನ್ನುವ ಸ್ಲೋಗನ್ ಜೊತೆ ಶಂಭುಲಿಂಗನಗೌಡ್ರ ವಿರೋಧಿ ಅಲೆಯನ್ನು ಕ್ಯಾಚ್ ಮಾಡಿ ಗೆಲ್ಲುವ ತಂತ್ರ ರೂಪಿಸುತ್ತಿದ್ದಾರೆ.

'ಹಿಂದಿನ ಅಧ್ಯಕ್ಷ ಶಂಭುಲಿಂಗನಗೌಡ್ರ ಜನರಲ್ ರಾಜಕಾರಣಿಯಂತೆ ವರ್ತಿಸಿದರು. ಜಾತಿ ರಾಜಕಾರಣದಲ್ಲಿ ಕುತ್ತಿಗೆ ತನಕ ಮುಳುಗಿದರು. ಅದಕ್ಕೆ ಅವರನ್ನು ಬಿಟ್ಟು ವೀರೇಶ್ ಬಣದಲ್ಲಿ ಗುರುತಿಸಿಕೊಂಡಿದ್ದೇವೆ' ಎನ್ನುತ್ತಾರೆ ಕಾರ್ಯಕಾರಿ ಸಮಿತಿಯ ಇಬ್ಬರು ಸದಸ್ಯರು. ಆದರೆ ಇದ್ಯಾವುದನ್ನೂ ಒಪ್ಪದ ಶಂಭುಲಿಂಗನಗೌಡ್ರು, ಎಲ್ಲರಿಗೂ ಸಮಾನ ಹಕ್ಕು ನೀಡಿದ್ದೆ ಎನ್ನುತ್ತಾರೆ.

ಗೆಲ್ಲಲು ಎಲ್ಲ ತಂತ್ರ, ಮನವೊ... ಶಿಫಾರಸ್ಸು ನಡೆದಿರುವ ಈ ಚುನಾ... ಯಲ್ಲಿ ಶಂಭುಲಿಂಗನಗೌಡ್ರ, ಎಂ. ವೀ... ತಲಾ 40-45 ಜನರ ಬೆಂಬ... ಎಂದು ಹೇಳಿಕೊಳ್ಳುತ್ತಾ ತಿರುಗಾಡು... ಆದರೆ ರವಿವಾರ ಬೆಳಗ್ಗೆ ಹೆ... ಅವಿರೋಧವಾಗಿ ಆಯ್ಕೆಗೊಂಡಿದ... 20 ಜನ ಸೇರಿದಂತೆ 40 ... ವೀರೇಶ್ ಜೊತೆ ಗುರುತಿಸಿಕೊಂಡ... ಶಂಭುಲಿಂಗನಗೌಡ್ರ ತಮ್ಮ ... ವಿರೋಧಿ ಅಲೆಯನ್ನು ಬಗ್ಗು ಬಡಿ... ದ್ದರೆ ಗೆಲ್ಲುವುದು ತುಂಬಾ ಕಷ್ಟ. ಅದಕ್ಕಿರು... ಇನ್ನು ಮೂರೇ ದಿನ.

ಹಾಗಂತ ವೀರೇಶರ ಗುಂಪಿನಲ್ಲಿರುವ ಕೆಲ... ಕಿತ್ತುಕೊಳ್ಳುವ ಯತ್ನವನ್ನು ಶಂಭುಲಿಂಗನ... ಮಾಡಿದ್ದಾರೆ. ಆದರೆ, ಆದನ್ನು ವೀರೇಶ ... ನಿಭಾಯಿಸುತ್ತಾರೆ ಎಂಬುದರ ಮೇಲೆ ಅವರ ಭವಿ... ನಿಂತಿದೆ. ಸಮಬಲದ ಈ ಚುನಾವಣೆಯಲ್ಲಿ ... ಗೆದ್ದರೂ ಕೇವಲ 2-3 ಮತಗಳ ಅಂತರ... ಗೆಲ್ಲುತಾರೆ. ಸದ್ಯಕ್ಕೆ ಹವಾ ಮಾತ್ರ ವೀರೇಶರ ಪರ... ಆದರೆ, ಈಗಾಗಲೇ ಅಧಿಕಾರ ನಡೆಸಿ ... ಕುತಂತ್ರಗಳನ್ನು ಮೈಗೂಡಿಸಿಕೊಂಡಿರುವ ... ಲಿಂಗನಗೌಡ್ರ ಜನವರಿ 30ರ ತನಕ ಸುಮ್ಮನೇ ಇ... ತ್ತಾರಾ?

- ವರದಿ...

■ ಮೈಸೂರು ■

# 'ಕಾಡಾ'ದ ಕಳ್ಳ ಮರೀಗೌಡನಿಗೆ ಬಳ್ಳಾರಿ ಗೂಸ!



ಮೈಸೂರಿನ 'ಕಾಡಾ'ದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಯಾಗಿರುವ ಕೆಎಎಸ್ ಅಧಿಕಾರಿ ಎ. ಮರೀಗೌಡ ಬಳ್ಳಾರಿಯ ರೈತರಿಂದ ಗೂಸ ತಿಂದ ಕತೆ ಇದು. ಎರಡು ದಶಕದ ಹಿಂದೆ ಬೆಂಗಳೂರಿನ ಕೋರ್ಟೊಂದರಲ್ಲಿ ಗುಮಾಸ್ತನಾಗಿದ್ದ ಈತ ಇವತ್ತು ಭರ್ತಿ ಮೂವತ್ತೈದು ಕೋಟಿ ರೂಪಾಯಿಗಳಷ್ಟು ಆಸ್ತಿಯ ಒಡೆಯನಾಗಿದ್ದಾನೆ ಎಂದರೆ ಯಾರೂ ನಂಬುವುದಿಲ್ಲ. ಆದ್ರೆ, ನಂಬದ್ರೆ ನಂಬಿ ಬಿಟ್ರೆ ಬಿಡಿ, ಅಸಲೀಯತ್ತು ಇರೋದೇ ಹೀಗೆ ಅನ್ನದೇ ನಮಗೂ ವಿಧಿಯಿಲ್ಲ.

ಅಸಲಿಗೆ ಈ ಮರೀಗೌಡನೆಂಬ ಸರ್ಕಾರಿ ಹೆಗ್ಗಣ ಈ ಪರಿ ಬಿಲಕೊರೆದು ಖಜಾನೆ ದುಡ್ಡು ನುಂಗಿ ಹಾಕಿದೆ ಎಂಬ ಸತ್ಯಸಂಗತಿ ಎಂದೂ ಬಯಲಿಗೆ ಬರುತ್ತಿರಲಿಲ್ಲವೇನೋ. ಆದರೆ, ಮರೀಗೌಡನ ಧನದಾಹವೇ ಅವನು 'ಕಾಡಾ' ಭೂಸ್ವಾಧೀನಾಧಿಕಾರಿಯಾಗಿ ಎಲ್ಲೆಲ್ಲಿ ಎಷ್ಟೆಷ್ಟು ನುಂಗಿದ್ದಾನೆ, ಯಾರ್‍ಯಾರಿಗೆ ಎಷ್ಟೆಷ್ಟುದ್ದ ತಿರುಪತಿ ನಾಮ ಬಳಿದಿದ್ದಾನೆ ಎಂಬುದನ್ನು ಬಹಿರಂಗಪಡಿಸಿದೆ.

ಹಾಲಿ ಮೈಸೂರಿನ 'ಕಾಡಾ'ದಲ್ಲಿ ಭೂಸ್ವಾಧೀನಾಧಿಕಾರಿಯಾಗಿರುವ ಎ. (ಐನಾತಿ) ಮರೀಗೌಡನಿಗೆ ಶ್ರೀರಂಗಪಟ್ಟಣದಲ್ಲಿ ಒಂದು ತೋಟ ಮತ್ತು ಫಾರಂ ಹೌಸಿದೆ. ಈಗ್ಗೆ ಹದಿನೈದು ದಿನಗಳ ಹಿಂದೆ 100 ಜನ ರೈತರು 5 ಟೆಂಪೋ ಮಾಡಿಕೊಂಡು ಅವನ ತೋಟಕ್ಕೆ ಲಗ್ಗೆ ಇಟ್ಟಿದ್ದರು. ಏನೋ ಗಲಾಟೆ ನಡೆಯುತ್ತಿದೆ ಎಂದು ನೋಡಿದರೆ ಬಂದ ರೈತರೆಲ್ಲಾ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಿಂದ ಬಂದವರಾಗಿದ್ದರು. ಇನ್ನೂ ವಿಶೇಷ ಎಂದರೆ ಆ ಕ್ಷೇತ್ರದ ಶಾಸಕ ಹಾಗೂ ಮಾಜಿ ಗೃಹಮಂತ್ರಿಯಾಗಿದ್ದ ಎಂ.ಪಿ. ಪ್ರಕಾಶರೇ ಖುದ್ದಾಗಿ 'ಹೋಗಿ, ಆ ಮರೀಗೌಡ ಎಲ್ಲಿದ್ದರೂ ಬಿಡಬೇಡಿ, ದುಡ್ಡು ಹಣ ವಸೂಲಿ ಮಾಡಿಕೊಂಡು ಬನ್ನಿ' ಎಂದು ಈ ರೈತರನ್ನು ಹುರಿದುಂಬಿಸಿ ಶ್ರೀರಂಗಪಟ್ಟಣದ ತನಕ ರವಾನಿಸಿದ್ದರು! ಈ ಘಟನೆಯ ತಳಬುಡ ಶೋಧಿಸಲು ಹೊರಟಾಗ ನಮಗೆ ಸಿಕ್ಕಿದ್ದೇ ಈ ಐನಾತಿ ಮರೀಗೌಡನ 'ಕಾಡಾ'ದ ಕಳ್ಳಕತೆ.

## ರೈತರಿಗೆ ಹತ್ತು ಕೋಟಿಯ ತಿರುಪತಿ ನಾಮ!

ಬಳ್ಳಾರಿ-ಗದಗ ಜಿಲ್ಲೆಗಳ ವ್ಯಾಪ್ತಿಗೆ ಬರುವ ಸಿಂಗಟಾಲೂರು, ಹುಲಿಗುಡ್ಡ ಏತ ನೀರಾವರಿ ಯೋಜನೆಯ ಬಗ್ಗೆ ನಿಮಗೆ ಗೊತ್ತಿರಬೇಕು. ಈ ಯೋಜನೆಯಿಂದಾಗಿ ತುಂಗಭದ್ರಾ ನದಿಯ ಹಿನ್ನೀರಿನಲ್ಲಿ ಮುಳುಗಡೆಯಾಗುವ ಪ್ರದೇಶಗಳಿಗೆ ಸಂಬಂಧಿಸಿದಂತೆ ವಿಶೇಷ ಭೂಸ್ವಾಧೀನಾಧಿಕಾರಿಯಾಗಿದ್ದ ಮರೀಗೌಡ ಅಲ್ಲೊಂದು ವಿಶೇಷ ಎತ್ತುವಳಿ ಸ್ಕೀಂ ಪರಿಚಯಿಸಿ ನೂರಾರು ರೈತರಿಗೆ ವಂಚನೆ ಮಾಡಿ ರಾತ್ರೋರಾತ್ರಿ ಮೈಸೂರಿಗೆ ಓಡಿಹೋಗಿದ್ದ.

ಯಾವುದೇ ಸರ್ಕಾರ ರೈತರ ಜಮೀನು ಸ್ವಾಧೀನಪಡಿಸಿಕೊಳ್ಳುವಾಗ ನೀರಾವರಿ ಭೂಮಿಗೆ ಹೆಚ್ಚು ಹಣವನ್ನು ಮತ್ತು ಒಣಭೂಮಿಗೆ ಕಡಿಮೆ ಮೊತ್ತವನ್ನು ಪರಿಹಾರವನ್ನಾಗಿ ನಿಗದಿಪಡಿಸಿರುತ್ತದೆ. ಸಿಂಗಟಾಲೂರು ಹುಲಿಗುಡ್ಡ ಏತ ನೀರಾವರಿ ಯೋಜನೆಯಲ್ಲೂ ಇಂಥದ್ದೊಂದು ಪದ್ಧತಿಯನ್ನು ಸರ್ಕಾರ ಅಳವಡಿಸಿತ್ತು. ವರ್ಷಕ್ಕೆ ಎರಡು ಬೆಳೆ ಬೆಳೆಯುವ ನೀರಾವರಿ ಜಮೀನಿಗೆ ಪ್ರತಿ ಎಕರೆಗೆ 2,23,500 ರೂ.ಗಳನ್ನೂ, ವರ್ಷಕ್ಕೆ ಒಂದು ಬೆಳೆ ಬೆಳೆಯುವ ಒಣ ಭೂಮಿ ಜಮೀನಿನ ಪ್ರತಿ ಎಕರೆಗೆ 1,75,000 ರೂ.ಗಳನ್ನೂ ಹಾಗೂ ಇನ್ನಿತರ ಒಣ ಭೂಮಿಗೆ ಪ್ರತಿ ಎಕರೆಗೆ 1,50,000 ರೂ.ಗಳನ್ನೂ ಪರಿಹಾರವಾಗಿ ನಿಗದಿಗೊಳಿಸಲಾಗಿತ್ತು. ಹಣ ದೋಚಲು ಮರೀಗೌಡ ಕಳ್ಳದಾರಿ ಕಂಡುಕೊಂಡಿದ್ದೇ ಇಲ್ಲಿ. ಈ ಯೋಜನೆಯಡಿ ಮುಂಡರಗಿ ತಾಲ್ಲೂಕಿನ ಹೆಮ್ಮಿಗೆ, ಗಮ್ಮೆಗೋಳ, ಬಿದರಹಳ್ಳಿ ಹಾಗೂ ಹೂವಿನಹಡಗಲಿ ತಾಲ್ಲೂಕಿನ ಅಲ್ಲಿಪುರ, ಮೊಗಳ, ವನಹಳ್ಳಿ ಗ್ರಾಮಗಳ ಒಟ್ಟು 500ರಷ್ಟು ರೈತರು ಸಾವಿರಾರು ಎಕರೆ ಭೂಮಿಯನ್ನು ಕಳೆದುಕೊಂಡರು. 'ಹೇಗೂ ಜಮೀನಂತೂ ಹೋಗೋದು ಹೋಯ್ತು, ನಾನ್ಹೇಳಿದ ಹಾಗೆ ನೀವು ಕೇಳಿದ್ರೆ, ಪರಿಹಾರವನ್ನಾದ್ರೂ ಜಾಸ್ತಿ ಕೊಡಿಸ್ತಿನಿ' ಅಂತ ಈ ಮರೀಗೌಡ ರೈತರಿಗೆ ಆಮಿಷ ಒಡ್ಡಿದ.

ಅವನ ತಂತ್ರ ಏನೆಂದರೆ, ವರ್ಷಕ್ಕೆ ಬರೀ ಒಂದೇ ಬೆಳೆ ಬೆಳೆಯುವ ಜಮೀನು ಮತ್ತು ಇನ್ನಿತರ ಒಣಭೂಮಿಗಳನ್ನು ಸಾರಾಸಗಟಾಗಿ ನೀರಾವರಿ ಜಮೀನೆಂದು ದಾಖಲೆ ಸೃಷ್ಟಿಸಿ ಸರ್ಕಾರದಿಂದ ರೈತರಿಗೆ ಹೆಚ್ಚು ಮೊತ್ತದ ಪರಿಹಾರ ಕೊಡಿಸುವುದು. ಹೀಗೆ ಒಂದೊಂದು ಎಕರೆಗೆ 50 ಸಾವಿರದಿಂದ ಹಿಡಿದು ಒಂದು ಲಕ್ಷದ ತನಕ ಪರಿಹಾರದ ಮೊತ್ತ ಹೆಚ್ಚಾಗುತ್ತದೆಂದು ನಂಬಿದ ರೈತರು ಪಾಪ ಈತನ ಬಲೆಗೆ ಬಿದ್ದೇಬಿಟ್ಟರು. ಅದರಲ್ಲೂ ನಾಲ್ಕರಿಂದ ಹತ್ತು ಎಕರೆಗಳಷ್ಟು ಜಮೀನನ್ನು ಹೊಂದಿದ್ದ ರೈತರು ಮರೀಗೌಡನಿಗೆ ಮರುಮಾತನಾಡದೆ ಶರಣಾಗಿಬಿಟ್ಟರು. ಹೀಗೆ ಬಲೆಗೆ ಬಿದ್ದ ರೈತರಿಂದ ಈತ ತನಗೂ ಮತ್ತು ತನ್ನ ಮೇಲಾಧಿಕಾರಿಗಳಿಗೂ ಕೈಬೆಚ್ಚಗೆ ಮಾಡುವುದಕ್ಕೆ ಹಣ ಕೊಡಬೇಕೆಂದು ರೈತರಿಗೆ ಒತ್ತಾಯಿಸಿದ. ಆಗಲೇ ಹೆಚ್ಚುವರಿ ಹಣ ಸಿಗುತ್ತದೆಂದು ನಂಬಿದ್ದ ರೈತರು ಹಿಂದುಮುಂದು ನೋಡದೆ ಸಾಲಸೋಲ ಮಾಡಿ ಇವನಿದ್ದಲ್ಲಿಗೆ ಬಂದು ಹಣ ಸುರಿದರು. ಹೀಗೆ ರೈತರಿಂದ ಮರೀಗೌಡ ಕಿತ್ತ ಹಣದ ಮೊತ್ತ ಏನಿಲ್ಲವೆಂದರೂ ಹತ್ತು ಕೋಟಿ ದಾಟುತ್ತದೆ!

ಯಾವಾಗ ರೈತರ ಗಂಟು ಸೇಫಾಗಿ ಮರೀಗೌಡನ ಜೇಬು ಸೇರಿತೋ ಆತ ಹೇಳದೇಕೇಳದೆ ಮೈಸೂರಿಗೆ ವರ್ಗ ಮಾಡಿಸಿಕೊಂಡು ರಾತ್ರೋರಾತ್ರಿ ಪರಾರಿಯಾಗಿಬಿಟ್ಟ. ರೈತರಿಗೆ ಇತ್ತ ಮರೀಗೌಡನಿಗೆ ಕೊಟ್ಟ ಹಣವೂ ಸಿಗಲಿಲ್ಲ, ಅತ್ತ ಪರಿಹಾರವೂ ಸಿಗಲಿಲ್ಲ. ಕೊಟ್ಕೋಳು ಕೋಡಂಗಿ ಇಸ್ಕೊಂಡೋನು ಈರಭದ್ರ ಎಂಬಂತಾದ ಅಮಾಯಕ ರೈತರಿಗೆ ಆವಾಗ ತಾವು ಮಾಡಿದ ತಪ್ಪಿನ ಅರಿವಾಯಿತು. ಯಾವಾಗ ಮೈಸೂರಿನ 'ಕಾಡಾ' ಕಾಲೋನಿಯಲ್ಲಿ ಮರೀಗೌಡ ಕಾಣಿಸಿಕೊಂಡನೋ ಅವನನ್ನು ತದುಕಿಯಾದರೂ ದುಡ್ಡು ವಸೂಲಿ ಮಾಡಬೇಕೆಂಬ ನಿರ್ಧಾರಕ್ಕೆ ಬಳ್ಳಾರಿ ರೈತರು ಬಂದುಬಿಟ್ಟಿದ್ದರು. ಅದಕ್ಕೆ ಎಂ.ಪಿ. ಪ್ರಕಾಶರೂ ಇವರಿಗೆ ಬೆನ್ನು ತಟ್ಟಿ ಕಳಿಸಿದ್ದರು. ಈಗ್ಗೆ ಹದಿನೈದು ದಿನಗಳ ಹಿಂದೆ ಅವರೆಲ್ಲಾ ಸೇರಿ ಮರೀಗೌಡನನ್ನು ಹುಡುಕಿಕೊಂಡು ಸೀದಾ ಶ್ರೀರಂಗಪಟ್ಟಣದಲ್ಲಿರುವ ಅವನ ಮನೆಗೇ ದಾಳಿಯಿಟ್ಟರು.

ಪಾಂಡವಪುರದ ಚಿಕ್ಕೇನಹಳ್ಳಿಯವನಾದ ಮರೀಗೌಡ ಈ ಪರಿ ಭ್ರಷ್ಟ ಹೆಗ್ಗಣವಾಗುವ ಮೊದಲು ಒಂದು ಸುಂಡಿಲಿಯಾಗಿ ಕೋರ್ಟ್ ನೌಕರಿಗೆ ಸೇರಿಕೊಂಡಿದ್ದ. ಆಮೇಲೆ ಕೆಎಎಸ್ ಪರೀಕ್ಷೆ ಬರೆದು, ಯಾರ್‍ಯಾರದ್ದೋ ಕೈಕಾಲು ಹಿಡಿದು ಪಾಸೂ ಆಗಿ ಮೊದಲನೇ ಬಾರಿಗೆ ಶ್ರೀರಂಗಪಟ್ಟಣದ ತಹಶೀಲ್ದಾರನಾಗಿ ಬಂದಿದ್ದ. ಇದು ನಡೆದದ್ದು 1984-85ರಲ್ಲಿ. ಹೀಗೆ ತಹಶೀಲ್ದಾರನಾಗಿ ಬಂದವನು ಮೊಗರಳ್ಳಿ ಗ್ರಾಮದಲ್ಲಿ ಆರು ಎಕರೆ ಭೂಮಿಯನ್ನು ಅಕ್ರಮವಾಗಿ ಎತ್ತಾಕಿಕೊಂಡ. ಸರ್ವೆನಂಬರ್ 83 ಮತ್ತು 102ರಲ್ಲಿದ್ದ ಈ ಭೂಮಿಯನ್ನು ಅಕ್ರಮ-ಸಕ್ರಮದ ನೆಪದಲ್ಲಿ ಮೊದಲು ತನ್ನ ತಾಯಿ ಮತ್ತು ತಂಗಿಯ ಹೆಸರಿನಲ್ಲಿ ಮಂಜೂರು ಮಾಡಿಸಿಕೊಂಡ.



ಮರೀಗೌಡನ ಮನೆಮುಂದೆ ಪ್ರತಿಭಟಿಸುತ್ತಿರುವ ರೈತರು

ನಂತರದಲ್ಲಿ ಅದೇ ಜಮೀನನ್ನು ದಾನದ ರೂಪದಲ್ಲಿ ತನ್ನ ಮಕ್ಕಳ ಹೆಸರಿನಲ್ಲಿ ವಾಪಸ್ ಪಡೆದುಕೊಂಡಿದ್ದಾನೆ. ಈ ಜಮೀನಿನ ಇವತ್ತಿನ ಮಾರ್ಕೆಟ್ ಬೆಲೆ ಕನಿಷ್ಠ ಎಂದರೂ ಏಳು ಕೋಟಿ ಆಗುತ್ತದೆ!

ಅದಿರಲಿ, ಹೀಗೆ ಹೂವಿನಹಡಗಲಿಯ ರೈತರು ತನ್ನ ತೋಟದ ಮನೆಗೆ ದಾಳಿ ಮಾಡಿದಾಗ ಮನೆಯಲ್ಲಿ ಮರೀಗೌಡ ಇರಲಿಲ್ಲ. ಆತನ ಮಗ ಎಂ. ಚಂದನ್ ಮಾತ್ರ ಇದ್ದ. ಬಳ್ಳಾರಿಯಿಂದ ಇಲ್ಲಿಯತನಕ ಅಪ್ಪನನ್ನು ಹುಡುಕಿಕೊಂಡು ಬಂದಿದ್ದಾರೆಂದರೆ ಪರಿಸ್ಥಿತಿ ಸ್ವಲ್ಪ ಕಷ್ಟವೇ ಇದೆ ಅಂದುಕೊಂಡು ಆತ ತಕ್ಷಣವೇ ತೋಟದ ನಾಯಿಗಳನ್ನು ಅವರ ಮೇಲೆ ಛೂ ಬಿಟ್ಟು ಬೆದರಿಸಿದ. ಅಲ್ಲದೇ, ಲೋಕಲ್ ಗೂಂಡಾಗಳನ್ನು ಕರೆಸಿದ; ದೊಣ್ಣೆ ಲಾಂಗುಗಳೊಂದಿಗೆ ಬಂದ ಆ ರೌಡಿಗಳೆಲ್ಲ ರೈತರು ಭಯಭೀತರಾಗುವಂತೆ ಮಾಡಿದ್ದಾರೆ. ಆದರೆ ಅದು ಟೆಂಪೋಗಳಲ್ಲಿ ಬಂದಿದ್ದ ರೈತರಿಗೆ ಸ್ಥಳೀಯ ರೈತನಾಯಕ ವರುಣಾ ಮಹೇಶ್ ನೆರವಿಗೆ ನಿಂತದ್ದರಿಂದ ಮರೀಗೌಡನ ಮರಿ ಚಂದನ್‌ನ ರೌಡಿಜಂ ಕೆಲಸ ಮಾಡಲಿಲ್ಲ. ಅಷ್ಟು ಹೊತ್ತಿಗಾಗಲೇ ಪೊಲೀಸರಿಗೂ ಸುದ್ದಿ ಮುಟ್ಟಿ ಅವರೂ ಸ್ಥಳಕ್ಕೆ ದೌಡಾಯಿಸಿದ್ದಾರೆ.

ಸ್ಥಳಕ್ಕೆ ಬಂದ ಪೊಲೀಸರು ಮರೀಗೌಡನನ್ನು ಕರೆಸುವಂತೆ ಚಂದನ್‌ಗೆ ಒತ್ತಾಯಿಸಿದರೂ ಆತ ಅಪ್ಪನನ್ನು ಕರೆಸಲಿಲ್ಲ. ಏಕೆಂದರೆ, ರೈತರ ಸಿಟ್ಟು ರಟ್ಟೆಗೆ ಬರುತ್ತಿರುವ ಈ ಹೊತ್ತಿನಲ್ಲಿ ಅಪ್ಪನೇನಾದರೂ ಇಲ್ಲಿಗೆ ಬಂದರೆ ಒಂದು ಮೂಳೆ ಕೂಡ ಸಿಗದಂತೆ ತದುಕಿಬಿಡುತ್ತಾರೆಂಬ ಭಯ ಅವನಿಗೆ. ಹಾಗಾಗಿ ಪೊಲೀಸರು ಎಷ್ಟೇ ಹೇಳಿದರೂ ಮರೀಗೌಡನನ್ನು ಆತ ಕರೆಸಲೇ ಇಲ್ಲ. ಕೊನೆಗೆ ಮಾಜಿ ಸಂಸದ ಜಿ. ಮಾದೇಗೌಡರ ಮಧ್ಯಸ್ಥಿಕೆಯಲ್ಲಿ ಸಂಧಾನವೊಂದನ್ನು ಏರ್ಪಡಿಸಲಾಯಿತು.

## ಮರೀಗೌಡನಿಗೆ ಬಳ್ಳಾರಿ ಗೂಸ!

ಆದರೆ ಮರೀಗೌಡ ಎಂಥ ಜಿದ್ದಿನ ಮನುಷ್ಯ ಎಂದರೆ, ಸಂಧಾನಸಭೆಯಲ್ಲೂ ತಾನು ದುಡ್ಡು ತಗೊಂಡೇ ಇಲ್ಲ ಎಂದು ವಾದಿಸುತ್ತಿದ್ದ. ಸ್ಥಳೀಯ ಟಿವಿ ಚಾನೆಲ್‌ನ ಕ್ಯಾಮೆರಾಮನ್ ಒಬ್ಬ ತನ್ನ ಕ್ಯಾಮೆರಾದಲ್ಲಿ ಸಭೆಯ ಘಟನಾವಳಿಗಳೆಲ್ಲವನ್ನೂ ಸೆರೆಹಿಡಿಯುತ್ತಿದ್ದಾಗ ಮರೀಗೌಡ ಆ ಕ್ಯಾಮೆರಾ ಕಿತ್ತುಕೊಂಡು ವರದಿಗಾರನ ಮೇಲೆ ಹಲ್ಲೆ ಮಾಡಿಬಿಟ್ಟ. ಪ್ರಾಯಶಃ ರೈತರೂ ಇಂತಹ ಒಂದು ಘಟನೆಯಾಗುವುದನ್ನೇ ಕಾಯುತ್ತಿದ್ದರೋ ಏನೋ ಎಲ್ಲರೂ ಎದ್ದು ಮರೀಗೌಡನ ಬಟ್ಟೆ ಹರಿಯುವ ಹಾಗೆ ತದುಕಿಬಿಟ್ಟರು. ಬಳ್ಳಾರಿಯಲ್ಲಿ ಅಷ್ಟು ದಿನ ಇದ್ದು ಎಷ್ಟೆಲ್ಲಾ ಜನರಿಗೆ ಮೋಸ ಮಾಡಿ ಪಂಗನಾಮ ಹಾಕಿದ್ದರೂ ಮರೀಗೌಡ ಬಳ್ಳಾರಿ ಗೂಸದ ರುಚಿ ನೋಡಿರಲಿಲ್ಲ ಎನ್ನಿಸುತ್ತೆ. ಬಳ್ಳಾರಿ ರೈತರು ಅವನಿಗೆ ಆ ರುಚಿಯನ್ನು ಅವನ ತವರಿನಲ್ಲೇ ತೋರಿಸಿಬಿಟ್ಟರು.

ಬಳ್ಳಾರಿ ಗೂಸ ಎಷ್ಟೊಂದು ಭೀಕರವಾಗಿತ್ತೆಂದರೆ, ಅದು ಬಿದ್ದಿದ್ದೇ ತಡ ತಪ್ಪಾಯ್ತು ತಪ್ಪಾಯ್ತು ಅಂತ ರೈತರ ಕಾಲಿಗೆ ಬೀಳತೊಡಗಿದ. ಜಿ. ಮಾದೇಗೌಡರು ಅವತ್ತೇನಾದರೂ ಅಲ್ಲಿರದಿದ್ದರೆ ಮರೀಗೌಡನ ಎಲುಬುಗಳನ್ನು ಪುಡಿ ಮಾಡಿ, ಗೋಣಿಚೀಲದಲ್ಲಿ ತುಂಬಿ ಕಾವೇರಿ ನದಿಗೆ ಎಸೆದು ಬಿಡುತ್ತಿದ್ದರೋ ಏನೋ? ಅವನ ಅದೃಷ್ಟ ಚೆನ್ನಾಗಿತ್ತು, ಬಚಾವಾದ. ಕೊನೆಗೆ, ತಾನು ಹಣ ತೆಗೆದುಕೊಂಡದ್ದನ್ನು ಒಪ್ಪಿಕೊಂಡನಲ್ಲದೇ ಫೆಬ್ರವರಿ 10ನೇ ತಾರೀಖಿನ ಒಳಗೆ ತಾನು ಪಡೆದ ಅಷ್ಟೂ ಮೊತ್ತದ ಹಣವನ್ನು ವಾಪಾಸ್ಸು ಕೊಡುವುದಾಗಿ ಒಪ್ಪಿಕೊಂಡಿದ್ದಾನೆ. ಪ್ರಾಯಶಃ ಈ ಬಾರಿಯೇನಾದರೂ ಮಾತಿಗೆ ತಪ್ಪಿದರೆ ಅವನಿಗೇನು ಗತಿ ಬರುತ್ತೋ ಗೊತ್ತಿಲ್ಲ. ಮರೀಗೌಡ ಸದ್ಯಕ್ಕೀಗ ಸಹಕುಟುಂಬ ಪರಿವಾರ ಸಮೇತವಾಗಿ ಜೈಲಿನಲ್ಲಿದ್ದಾನೆ. (ಬಾಕ್ಸ್ ನೋಡಿ) ಫೆಬ್ರವರಿ ನಾಲ್ಕಕ್ಕೆ ಹೊರಬರಬಹುದು. ಹೊರಬಂದ ಮೇಲೂ ತನ್ನ ನಖರಾಗಳನ್ನು ತೋರಿಸಿದರೆ ಅವನನ್ನು ಆ ದೇವರೇ ಕಾಪಾಡಬೇಕು. ■

# ಮೋಸವನ್ನೇ ಮೈಗೂಡಿಸಿಕೊಂಡಿದ್ದಾನೆ!

ಮರೀಗೌಡನ ಮೈಯಲ್ಲೆಲ್ಲಾ ಮೋಸದ ರಕ್ತವೇ ಹರಿಯುತ್ತಿದೆ ಎಂಬುದಕ್ಕೆ ಇನ್ನೊಂದು ಉದಾಹರಣೆ ಇಲ್ಲಿದೆ. ಈತನಿಗೆ ಮೈಸೂರಿನ ವಿಜಯನಗರ ಒಂದನೇ ಹಂತದ 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆಯಲ್ಲಿ ಒಂದು ಮನೆಯಿದೆ (ಎಚ್‌ಐಜಿ-89). ಅದನ್ನು ಅಭಿವೃದ್ಧಿಪಡಿಸಿ ವಾಸಕ್ಕಾಗಿ ಮೊದಲನೇ ಅಂತಸ್ತನ್ನು, ವಾಣಿಜ್ಯಕ್ಕಾಗಿ ಎರಡು ಮತ್ತು ಮೂರನೇ ಅಂತಸ್ತನ್ನು ಕಟ್ಟಿಸುವ ಜವಾಬ್ದಾರಿಯನ್ನು ಸ್ವಾಮಿಗೌಡ ಎಂಬ ಗುತ್ತಿಗೆದಾರನಿಗೆ ಕೊಟ್ಟಿದ್ದ. ಕರಾರಿನಂತೆ ಸ್ವಾಮಿಗೌಡ ಶೇ. 80ರಷ್ಟನ್ನು ಆಗಲೇ ಕಟ್ಟಿ ಮುಗಿಸಿದ್ದ. ಆದರೆ, ಸ್ವಾಮಿಗೌಡನಿಗೆ ಕೇವಲ 13.50 ಲಕ್ಷ ರೂ.ಗಳನ್ನು ಮಾತ್ರವೇ ಕೊಟ್ಟು ಬಾಕಿ ಇರುವ ಸುಮಾರು 16 ಲಕ್ಷ ರೂ.ಗಳನ್ನು ನಾಮ ಎಳೆದಿದ್ದಾನೆ. ಕೇಳಿದರೆ, 'ನಾನು ಕೆಎಎಸ್ ಅಧಿಕಾರಿ, ನನಗೆ ಸರ್ಕಾರದಲ್ಲಿ ಹಿರಿಯ ಅಧಿಕಾರಿಗಳ ಬೆಂಬಲವಿದೆ. ಹೆಚ್ಚು ಕಡಿಮೆ ಮಾಡಿದರೆ ನಿನ್ನನ್ನು ಸರ್ವನಾಶ ಮಾಡುತ್ತೇನೆ' ಎಂದು ಸ್ವಾಮಿಗೌಡನಿಗೆ ಧಮಕಿ ಹಾಕಿದ್ದಾನೆ. ಅಲ್ಲದೇ ಅದಕ್ಕೂ ಬಗ್ಗದಿದ್ದರೆ ಕೊಲೆ ಮಾಡಿಸುವುದಾಗಿಯೂ ಬೆದರಿಸಿದ್ದಾನೆ. ಈ ಬಗ್ಗೆ ಸ್ವಾಮಿಗೌಡ ವಿಜಯನಗರ ಪೊಲೀಸ್ ಠಾಣೆಯಲ್ಲಿ ದೂರನ್ನೂ ದಾಖಲಿಸಿದ್ದಾರೆ.

ಈ ನಡುವೆ ಆತ ಬೇರೆ ಗುತ್ತಿಗೆದಾರರಿಂದ ಉಳಿದ ಕಟ್ಟಡದ ಕಾಮಗಾರಿಯನ್ನು ಮುಗಿಸಲು ಪ್ರಯತ್ನಿಸುತ್ತಿದ್ದರಿಂದ ನ್ಯಾಯಾಲಯವು ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರುವಂತೆ ಆದೇಶ ಹೊರಡಿಸಿದೆ. ಆದರೆ ನ್ಯಾಯಾಲಯಕ್ಕೂ ಜಗ್ಗದ ಮರೀಗೌಡ ತನ್ನ ಮಕ್ಕಳಾದ ಚಂದನ್ ಮತ್ತು ಪುನೀತ್‌ರೊಂದಿಗೆ ಸೇರಿ ಕಳೆದ ಅಕ್ಟೋಬರ್ 21ರಂದು ನಿರ್ಮಾಣಕ್ಕಾಗಿ ಮನೆಯಲ್ಲಿಟ್ಟಿದ್ದ ಸಾಗವಾನಿ ನಾಟಾವನ್ನು ಕದ್ದು ಸಾಗಿಸುತ್ತಿದ್ದರು. ಈ ಕುರಿತು ವಿಜಯನಗರ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ (ಎಫ್‌ಐಆರ್ ಸಂಖ್ಯೆ 172/07). ಈತ ಸಾಗವಾನಿ ನಾಟಾ ಸಾಗಿಸುವಾಗ ಪೊಲೀಸರು ಅದನ್ನು ವಶಪಡಿಸಿಕೊಂಡಿದ್ದರು. ಆದರೆ ಈಗ ಮರೀಗೌಡ ಸ್ಟೇಶನ್ನಿನಿಂದಲೇ ನಾಟಾವನ್ನು ಕದ್ದು ಒಯ್ದಿದ್ದಾನೆ! ಈ ಕೇಸಿನಲ್ಲಿ ಆತನನ್ನು ತನ್ನ ಮಕ್ಕಳ ಸಮೇತವಾಗಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು ನ್ಯಾಯಾಲಯವು ಫೆಬ್ರವರಿ ನಾಲ್ಕರ ತನಕ ಅವರನ್ನು ಜೈಲಿಗಟ್ಟಿದೆ.

ಆದರೂ ಮರೀಗೌಡ ಮಾತ್ರ ಇನ್ನೂ ಗುರ್ ಅನ್ನುವುದನ್ನು ಬಿಟ್ಟಿಲ್ಲ. 'ಮಾಜಿ ಗೃಹಸಚಿವ ಎಂ.ಪಿ. ಪ್ರಕಾಶ್ ಮತ್ತು ರಾಜ್ಯಪಾಲರ ಸಲಹೆಗಾರರಾದ ತಾರಕಾನಾಥನ್ ಅವರು ನನ್ನ ಕ್ಲೋಸ್ ಫ್ರೆಂಡ್. ನನ್ನ ಮೇಲೆ ಎಷ್ಟೆಲ್ಲಾ ಲೋಕಾಯುಕ್ತ ಕೇಸುಗಳಿದ್ದರೂ ಅವುಗಳಿಗೇ ಹೆದರುವುದಿಲ್ಲ, ಇನ್ನು ಈ ಜುಜುಬಿ ಕೇಸಿಗೆ ಹೆದರುತ್ತೇನಾ?' ಅಂತ ಹೂಂಕರಿಸುತ್ತಿದ್ದಾನೆ. ಅಂದರೆ, ಇವನು ಕೇಸಿಗೆ ಹೆದರುವುದಿಲ್ಲ, ಅಂದಂಗಾಯ್ತು. ಇವನು ಹೆದರೋದೇನಿದ್ದು, ಬಳ್ಳಾರಿ ಗೂಸಕ್ಕೆ ಮಾತ್ರ ಅನ್ನಿಸುತ್ತೆ!

## ಮರೀಗೌಡನ ಆಸ್ತಿ ಎಷ್ಟು?

ಈ ಪ್ರಶ್ನೆಗೆ ಮರೀಗೌಡನಂತೂ ಉತ್ತರಿಸುವುದಿಲ್ಲ. ಅದನ್ನು ನಾವೇ ಕೆದಕಬೇಕಷ್ಟೆ. ಒಂದಿಷ್ಟೇ ಕೆದಕಿದಾಗ ಸಿಕ್ಕಿದ್ದನ್ನು ಇಲ್ಲಿ ಕೊಟ್ಟಿದ್ದೇವೆ.

- ಬೆಂಗಳೂರು-ಮೈಸೂರು ರಸ್ತೆಯ ಫನ್ ಫೋರ್ಟ್ ಎದುರು ಸರ್ವೆ ನಂಬರ್ 7, 8, 10, 11 ಮತ್ತು 12ರಲ್ಲಿ ಸುಮಾರು 25 ಎಕರೆ ಜಮೀನು ಮತ್ತು 15 ಚದರದ ಮನೆಯನ್ನು ಹೊಂದಿದ್ದಾನೆ. ಇದರ ಬೆಲೆ ಸುಮಾರು 20 ಕೋಟಿ.
- ಶ್ರೀರಂಗಪಟ್ಟಣದಲ್ಲಿ ತಹಶೀಲ್ದಾರನಾಗಿದ್ದಾಗ ಮೈಸೂರು-ಕೆಆರ್‌ಎಸ್ ಮುಖ್ಯ ರಸ್ತೆಯ ಬಳಿ ಇರುವ ಮೊಗರಳ್ಳಿ ಗ್ರಾಮದ ಸರ್ವೆ ನಂಬರ್ 83 ಮತ್ತು 102ರಲ್ಲಿ ಆರು ಎಕರೆ ಜಮೀನನ್ನು ಅಕ್ರಮವಾಗಿ ಎತ್ತಿಕೊಂಡು, ನಂತರ ಅಕ್ರಮ-ಸಕ್ರಮದಡಿಯಲ್ಲಿ ತನ್ನ ತಾಯಿ ಮತ್ತು ತಂಗಿಯ ಹೆಸರಿನಲ್ಲಿ ಸಕ್ರಮ ಮಾಡಿಸಿಕೊಂಡು ಕೊನೆಗೆ ದಾನದ ರೂಪದಲ್ಲಿ ತನ್ನ ಮಕ್ಕಳ ಹೆಸರಿನಲ್ಲಿ ಮಾಡಿಸಿಕೊಂಡಿದ್ದಾನೆ. ಇದರ ಬೆಲೆ ಸುಮಾರು 7 ಕೋಟಿ ಆಗುತ್ತದೆ.
- ಮೈಸೂರಿನ ವಿಜಯನಗರದ ಮೊದಲನೇ ಹಂತದಲ್ಲಿ 70 ಚದರದ ಮನೆ (ಎಚ್‌ಐಜಿ - 89). ಇದು ಮರೀಗೌಡನ ಹೆಸರಿನಲ್ಲೇ ಇದ್ದು ಇದರ ಬೆಲೆ ಸುಮಾರು ಒಂದು ಕೋಟಿ.
- ಮೈಸೂರಿನ ವಿಜಯನಗರ ನಾಲ್ಕನೇ ಹಂತದಲ್ಲಿ 50 x 80 ಅಳತೆಯ ಒಂದು ನಿವೇಶನವನ್ನು ತನ್ನ ಸಂಬಂಧಿಕರ ಹೆಸರಿನಲ್ಲಿ ಪಡೆದಿದ್ದು ನಂತರದಲ್ಲಿ ದಾನ ರೂಪದಲ್ಲಿ ತನ್ನ ಕುಟುಂಬದವರ ಹೆಸರಿಗೆ ವರ್ಗಾಯಿಸಿಕೊಂಡಿದ್ದಾನೆ. ಇದರ ಬೆಲೆ ಸುಮಾರು 50 ಲಕ್ಷ.
- ಬೆಂಗಳೂರಿನ ಬಿಟಿಎಂ ಲೇಔಟಿನಲ್ಲಿ 30 x 80 ಒಂದು ನಿವೇಶನದಲ್ಲಿ ಸುಮಾರು 65 ಚದರದ ಒಂದು ಕಟ್ಟಡದಲ್ಲಿ 8 ಮನೆಗಳನ್ನು ಕಟ್ಟಿಸಿದ್ದಾನೆ. ಒಂದು ವರ್ಷದ ಹಿಂದೆಯಷ್ಟೇ ಕಟ್ಟಿಸಿರುವ ಈ ಕಟ್ಟಡದ ಬೆಲೆ ಸುಮಾರು 3 ಕೋಟಿ. ಇದು ಮರೀಗೌಡನ ಪತ್ನಿ ಗೌರಮ್ಮನ ಹೆಸರಿನಲ್ಲಿದೆ.
- ಬೆಂಗಳೂರಿನ ಇತರ ಬಡಾವಣೆಗಳಲ್ಲಿ ಎರಡು ಮನೆಗಳು (ವಿವರ ಸಿಗಬೇಕಷ್ಟೆ)
- ಒಂದು ಟಾಟಾ ಸಫಾರಿ ಕಾರು (ಕೆ.ಎ. 51/ ಎಂ-9600), ಒಂದು ಫೋರ್ಡ್ ಫಿಯಸ್ಟಾ ಕಾರು (ಕೆಎ-09/ಪಿ-1811), ಒಂದು ಟ್ರ್ಯಾಕ್ಟರ್ ಮತ್ತು ಕೆಲವು ದ್ವಿಚಕ್ರ ವಾಹನಗಳು. ಇತ್ಯಾದಿ... ಇತ್ಯಾದಿ...


ಇನ್ನು ಪೂರ್ತಿ ಕೆದಕಿದರೆ ಅದೆಷ್ಟು ಸಿಗುತ್ತೋ? ●

ಗೌರಿ ಲಂಕೇಶ್



## ಗಿಡುಗಗಳಿಗೆ ಬಲಿಯಾದ ಗಿಳಿ ಬೆನಜೀರ್ 5

# ಮುರಿದುಬಿದ್ದ ದಾಂಪತ್ಯ



AF

ಭಾರತದ ಇಂದಿರಾ ಗಾಂಧಿ, ಇಸ್ರೇಲಿನ ಗೋಲ್ಡಾ ಮಿಯರ್, ಶ್ರೀಲಂಕಾದ ಸಿರಿಮಾವೊ ಬಂಡಾರನಾಯ್ಕೆ, ಟರ್ಕಿಯ ತನ್ಸು ಸಿಲ್ಲರ್ ಮತ್ತು ಫಿಲಿಪೈನ್ಸ್‌ನ ಗ್ಲೋರಿಯಾ ಅರ್ರೊರೊ- ಈ ಎಲ್ಲ ಮಹಿಳಾ ನಾಯಕಿಯರ ಗಂಡಂದಿರು ಹೇಗೆ ತಮ್ಮ ಹೆಂಡತಿಯ ನೆರಳಿನಲ್ಲಿ ವಾಸಿಸಲು ಇಷ್ಟಪಡಲಿಲ್ಲವೋ ಹಾಗೆಯೇ ಬೆನಜೀರ್‌ಳ ಗಂಡ ಜರ್ದಾರಿ ಕೂಡ ಇಷ್ಟಪಡಲಿಲ್ಲ. ಅದರಲ್ಲೂ ಬೆನಜೀರ್‌ಳ ಗೈರುಹಾಜರಿಯಲ್ಲಿ ಆತ ಒಮ್ಮೆ ಪಾಕಿಸ್ತಾನಕ್ಕೆ ಹೋಗಿ ಪಿಪಿಪಿ ಪಕ್ಷದ ನೇತೃತ್ವವನ್ನು ವಹಿಸಿಕೊಳ್ಳಲು ಯತ್ನಿಸಿದ್ದೂ ಆಕೆಗೆ ಇಷ್ಟವಾಗಿರಲಿಲ್ಲ. ಹಾಗೆಯೇ ಆತನ 'ಕಮಿಷನ್' ದಂಧೆಯಿಂದಾಗಿ ತಾನು ಅಧಿಕಾರ ಕಳೆದುಕೊಳ್ಳಬೇಕಾಗಿದ್ದು, ತನ್ನ ಹೆಸರಿಗೆ ಕಳಂಕ ಅಂಟಿಕೊಂಡಿದ್ದು ಅವಳಲ್ಲಿ ಬೇಸರ ಮೂಡಿಸಿತ್ತು. ಇದೆಲ್ಲದರೊಂದಿಗೆ ಆತ ಬೇರೆ ಸ್ತ್ರೀಯರೊಂದಿಗೆ ಚಕ್ಕಂದವಾಡುತ್ತಾನೆ ಎಂಬ ಗುಸುಗುಸು ಕೂಡ ಬೆನಜೀರ್‌ಳನ್ನು ಕೆರಳಿಸಿತ್ತು.

ಸಂಸಾರ, ಅಧಿಕಾರ, ಜನ ಬೆಂಬಲ... ಇವೆಲ್ಲವನ್ನು ಕಳೆದುಕೊಂಡಿದ್ದ ಬೆನಜೀರ್ ವಿರುದ್ಧ ನವಾಜ್ ಷರೀಫ್‌ನ ಸರ್ಕಾರ ದಾಳಿ ಶುರು ಮಾಡಿತ್ತು. ಆಕೆಯ ಮೇಲೆ, ಗಂಡ ಜರ್ದಾರಿಯ ಮೇಲೆ ಭ್ರಷ್ಟಾಚಾರದ ಪ್ರಕರಣಗಳನ್ನು ದಾಖಲಿಸಿಕೊಂಡು ವಿಚಾರಣೆ ಪ್ರಾರಂಭಿಸಿತು. ಅದೇ ಹೊತ್ತಿಗೆ 'ಮಿಸ್ಟರ್ 10 ಪರ್ಸೆಂಟ್' ಎಂದು ಕುಖ್ಯಾತಿ ಪಡೆದಿದ್ದ ಜರ್ದಾರಿ ಫ್ರಾನ್ಸ್, ಪೋಲಾಂಡ್, ಸ್ಪೇನ್ ಮತ್ತು ಸ್ವಿಜರ್‌ಲ್ಯಾಂಡ್‌ಗಳಲ್ಲಿ ಬಿಲಿಯನ್ ಗಟ್ಟಲೆ ಅಕ್ರಮವಾಗಿ ಗಳಿಸಿದ್ದ ಹಣ ಮತ್ತು ಆಸ್ತಿ ಹೊಂದಿರುವುದು ಹಾಗೂ ಬೇರೆಬೇರೆ ಕಂಪನಿಗಳಲ್ಲಿ ಬ್ಲಾಕ್‌ಮನಿ ಹೂಡಿರುವುದು ಪತ್ತೆಯಾಗಿ ಆ ದೇಶಗಳಲ್ಲೂ ತನಿಖೆಗಳು ಪ್ರಾರಂಭವಾದವು.

ಇವೆಲ್ಲದರಿಂದ ಬೆನಜೀರ್ ತತ್ತರಿಸಿ ಹೋದಳು. ಎರಡು ವರ್ಷಗಳ ಕಾಲ ಆದು ಹೇಗೋ ಎಲ್ಲವನ್ನು ಏಕಾಂಗಿಯಾಗಿಯೇ ನಿಭಾಯಿಸಿದಳು. 1999 ರಲ್ಲಿ ಅವಳ ವೈರಿ ನವಾಜ್ ಷರೀಫ್‌ನನ್ನು ಸೈನ್ಯಾಧಿಕಾರಿ ಪರ್ವೇಜ್ ಮುಷರಫ್ ಅಧಿಕಾರದಿಂದ ಉರುಳಿಸಿ ತಾನೇ ಸರ್ವಾಧಿಕಾರಿ ಎಂದು ಘೋಷಿಸಿಕೊಂಡ. ಹೊಸ ಸರ್ಕಾರವಾದರೂ ತನ್ನನ್ನು ಕಾಡಬಾರದೆಂಬ ಗುಪ್ತ ಆಶಯದೊಂದಿಗೆ "ನವಾಜ್ ಷರೀಫ್‌ನಿಗೆ ಸರಿಯಾದ್ದೇ ಆಯಿತು. ಮುಷರಫ್‌ನ ಸರ್ಕಾರ ಆದಷ್ಟು ಬೇಗ ಚುನಾವಣೆಗಳನ್ನು ಕರೆಯಲಿ" ಎಂದು ಬೆನಜೀರ್ ಸೈನ್ಯಾಧಿಕಾರವನ್ನು ಸ್ವಾಗತಿಸಿದಳು!

ಆದರೆ ಇದರಿಂದ ಮುಷರಫ್‌ನನ್ನು ಸುಮ್ಮನಾಗಿಸಲಾಗಲಿಲ್ಲ. "ನವಾಜ್ ಷರೀಫ್ ಮತ್ತು ಬೆನಜೀರ್ ಭುಟ್ಟೊ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ" ಎಂದು ಆತ ಹೇಳಿದನಲ್ಲದೆ ನವಾಜ್ ಷರೀಫ್‌ನನ್ನು ಜೈಲಿಗಟ್ಟಿ, ಬೆನಜೀರ್ ವಿರುದ್ಧದ ವಿಚಾರಣೆಯನ್ನು ಇನ್ನಷ್ಟು ತೀಕ್ಷ್ಣಗೊಳಿಸಿದ. ಇದೆಲ್ಲದರಿಂದ ಗಾಳಿ ಯಾವ ದಿಕ್ಕಿನಲ್ಲಿ ಬೀಸುತ್ತಿದೆ ಎಂದರಿತ ಬೆನಜೀರ್ ತನ್ನ ತಾಯಿ ಮತ್ತು ಮಕ್ಕಳನ್ನು ಕರೆದುಕೊಂಡು ದುಬೈಗೆ ಹಾರಿಹೋದಳು. ಹೀಗೆ ಸ್ವಯಂ ಇಚ್ಛೆಯಿಂದ 1998 ರಲ್ಲಿ ಗಡಿಪಾರಾದ ಬೆನಜೀರ್ ಮತ್ತೆ ಪಾಕಿಸ್ತಾನಕ್ಕೆ ಹಿಂದಿರುಗಿದ್ದು ಸುಮಾರು ಒಂಭತ್ತು ವರ್ಷಗಳ ನಂತರ. ಹಾಗೆ ವಾಪಸ್ಸು ಬಂದವಳು ಭಯೋತ್ಪಾದಕನ ಗುಂಡೇಟಿಗೆ ಬಲಿಯಾದಳು.

ಆದರೆ ಆಕೆ ತಾಯ್ನಾಡಿನಿಂದ ದೂರ ಇದ್ದ ಆ ಒಂಭತ್ತು ವರ್ಷಗಳ ಕಾಲದಲ್ಲೂ ಆಕೆ ಜನರ ಮನಸ್ಸಿನಿಂದ ದೂರವಿರಲಿಲ್ಲ, ತನ್ನ ಪಾಕಿಸ್ತಾನ್ ಪೀಪಲ್ಸ್ ಪಕ್ಷದ ನಾಯಕರಿಗೆ, ಪತ್ರಕರ್ತರಿಗೆ ಆಕೆ ಒಂದು ಫೋನ್ ಕರೆ ಅಥವಾ ಒಂದು ಇ-ಮೇಲ್ ಅಷ್ಟು ಮಾತ್ರ ದೂರವಿದ್ದಳು. ಆಕೆ ತನ್ನ ತಾಯಿಯನ್ನು ನೋಡಿಕೊಳ್ಳುತ್ತಾ, ಮೂವರು ಮಕ್ಕಳನ್ನು ಪೋಷಿಸುತ್ತಾ ದುಬೈನಲ್ಲಿರಲಿ ಅಥವಾ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಪುನರ್ ಸ್ಥಾಪನೆ ಆಗಬೇಕೆಂದು ಲಂಡನ್‌ನಲ್ಲಿ ಪ್ರಚಾರಾಂದೋಲನದಲ್ಲಿ ತೊಡಗಿರಲಿ, ಇಂಟರ್‌ನೆಟ್ ಮತ್ತು ಮೊಬೈಲ್ ಫೋನ್ ಮೂಲಕ ಪಾಕಿಸ್ತಾನದೊಂದಿಗೆ 24 ಗಂಟೆಗಳ ಸಂಪರ್ಕ ಇಟ್ಟುಕೊಂಡಿದ್ದಳು.

ಅಗತ್ಯ ಬಿದ್ದಾಗ ತನ್ನ ಪಕ್ಷದವರೊಂದಿಗೆ ವೀಡಿಯೋ ಕಾನ್ಫರೆನ್ಸಿಂಗ್ ಮಾಡುತ್ತಿದ್ದಳು, ಪಾಕಿಸ್ತಾನಿ ಪತ್ರಕರ್ತರಿಗೆ ಇ-ಮೇಲ್ ಮೂಲಕ ಸುದೀರ್ಘ ಸಂದರ್ಶನಗಳನ್ನು ನೀಡುತ್ತಿದ್ದಳು, ಇಂಗ್ಲೆಂಡಿನ ಟಿವಿ ಚಾನೆಲ್‌ಗಳು ಚರ್ಚೆಗಳಿಗೆ ಕರೆದಾಗಲೆಲ್ಲ ಭಾಗವಹಿಸುತ್ತಿದ್ದಳು, ಪಾಕಿಸ್ತಾನದಲ್ಲಿ ಹೇಗೆ ಸೈನ್ಯವು ದುರಾಡಳಿತ ನಡೆಸುತ್ತಿದೆ ಎಂಬುದನ್ನೂ ಕುರಿತಂತೆ ಹಲವಾರು ವಿಷಯಗಳ ಬಗ್ಗೆ ಪ್ರಮುಖ ವಿದೇಶಿ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದಳು. ಆಕೆಯ ಮಾತು ಪಿಪಿಪಿ ಸದಸ್ಯರಿಗೆ ವೇದವಾಕ್ಯವಾಗಿತ್ತು. ತನ್ನ ಪಕ್ಷದ ಮೇಲೆ ಆಕೆಗೆಷ್ಟು ಹಿಡಿತವಿತ್ತೆಂದರೆ ಅದರಲ್ಲಿ ಬಿರುಕು ಮೂಡಿಸಿ ಬೆನಜೀರ್‌ಳ ಶಕ್ತಿಯನ್ನು ಮುರಿಯಲು ಪರ್ವೇಜ್ ಮುಷರಫ್ ಅದೆಷ್ಟೇ ತಿಣುಕಾಡಿದರೂ, ಪ್ರಧಾನಮಂತ್ರಿ ಹುದ್ದೆಯನ್ನೇ ಆಮಿಷವಾಗಿ ತೋರಿಸಿದರೂ, ಆತನಿಂದ ಅವಳ ಪಕ್ಷವನ್ನು ಒಡೆಯಲು ಸಾಧ್ಯವಾಗಲಿಲ್ಲ.

ಅಷ್ಟೊಂದು ವರ್ಷಗಳ ಕಾಲ ಆಕೆ ಪರದೇಶದಲ್ಲಿದ್ದರೂ ತನ್ನ ಪಕ್ಷವನ್ನು ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದ ಏಕೈಕ ನಾಯಕಿ ಬೆನಜೀರ್ ಎಂದರೆ ತಪ್ಪಾಗಲಾರದು.

ಆದರೆ ಇವೆಲ್ಲವುಗಳ ನಡುವೆ ಆಕೆಯ ತಮ್ಮ ಮುರ್ತಾಜಾ ಶೂಟ್‌ಔಟ್‌ನಲ್ಲಿ ಸಾವನ್ನಪ್ಪಿದ ಪ್ರಕರಣದ ವಿಚಾರಣೆ ಮತ್ತು ಸ್ವತಃ ಬೆನಜೀರ್ ಮತ್ತಾಕೆಯ ಗಂಡ ಜಂಟಿಯಾಗಿ ಎದುರಿಸುತ್ತಿದ್ದ ಭ್ರಷ್ಟಾಚಾರದ ವಿಚಾರಣೆಗಳೂ ನಡೆಯುತ್ತಿದ್ದು ಅವುಗಳ ಮೇಲೆ ಬೆನಜೀರ್‌ಗೆ ಯಾವ ಹಿಡಿತವೂ ಇರಲಿಲ್ಲ.

ಪಾಕಿಸ್ತಾನದ ಸುಪ್ರೀಂಕೋರ್ಟ್‌ನ ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ನಡೆದ ಮುರ್ತಾಜಾ ಕೊಲೆ ಪ್ರಕರಣದ ವಿಚಾರಣೆ ಎಲ್ಲರಿಂದಲೂ ಮಾಹಿತಿ ಸಂಗ್ರಹಿಸಿ, ಎಲ್ಲರ ವಾದ-ವಿವಾದಗಳನ್ನು ಆಲಿಸಿ ಕೊನೆಗೂ ನೀಡಿದ ತೀರ್ಪಿನಲ್ಲಿ "ಜರ್ದಾರಿಗೂ, ಈ ಕೊಲೆಗೂ ಸಂಬಂಧವಿತ್ತೆಂದು ಸ್ಪಷ್ಟಪಡಿಸುವ ಮತ್ತು ಕಾನೂನಿನಡಿ ಒಪ್ಪತಕ್ಕಂತಹ ಯಾವುದೇ ಮಾಹಿತಿ ದೊರಕಿಲ್ಲ, ಆದರೂ ಪೊಲೀಸರೇ ಮಾಡಿದ ಕಾನೂನುಬಾಹಿರ ಕಗ್ಗೊಲೆ ಇದೆಂಬುದರ ಬಗ್ಗೆ ಯಾವುದೇ ಅನುಮಾನಗಳಿಲ್ಲ, ಅಧಿಕಾರದ ಉನ್ನತ ಹುದ್ದೆಗಳಲ್ಲಿದ್ದ ಜನರ ಪಿತೂರಿ ಮತ್ತು ಹಸಿರುನಿಶಾನೆ ಇಲ್ಲದೆ ಇಂತಹ ಒಂದು ಕಗ್ಗೊಲೆ ನಡೆಯುತ್ತಿರಲಿಲ್ಲ" ಎಂದು ಹೇಳಿತು. ವಿಚಿತ್ರವೆಂದರೆ ಬೆನಜೀರ್ ಕೂಡ ತನ್ನ ಸಹೋದರನ ಕೊಲೆಯ ಹಿಂದೆ ಪಿತೂರಿ ಇತ್ತೆಂದು ಒಪ್ಪಿಕೊಂಡಳು. ಆದರೆ ಆಕೆಯ ಪ್ರಕಾರ ಪಿತೂರಿ ನಡೆಸಿದ್ದು ತನ್ನ ಗಂಡ ಜರ್ದಾರಿ ಅಲ್ಲ, ಬದಲಾಗಿ ತನ್ನನ್ನು ಅಧಿಕಾರದಿಂದ ಉರುಳಿಸಿದ್ದ ಅಧ್ಯಕ್ಷ ಫರೂಖ್ ಲೆಗ್ಹಾರಿ ಪಿತೂರಿ ನಡೆಸಿದ್ದ! "ಅದು ಹೇಗೆ?" ಅಂತ ಯಾರೋ ಕೇಳಿದ್ದಕ್ಕೆ "ಒಬ್ಬ ಭುಟ್ಟೊನನ್ನು ಕೊಂದು ಇನ್ನೊಬ್ಬಳು ಭುಟ್ಟೊಳನ್ನು ದೇಶದಿಂದ ಓಡಿಸುವ ಸಂಚು!" ಅಂದಿದ್ದಳು ಬೆನಜೀರ್. ಆದರೆ ಯಾರೂ ಆಕೆಯನ್ನು ನಂಬಲಿಲ್ಲ.

ಪಾಕಿಸ್ತಾನದಲ್ಲಿ ಜರ್ದಾರಿ ವಿರುದ್ಧದ ಕೊಲೆ ಆರೋಪ ಸಾಬೀತಾಗಲಿಲ್ಲ. ಆದರೆ 2003 ರಲ್ಲಿ ಸ್ವಿಜರ್‌ಲ್ಯಾಂಡ್‌ನ ನ್ಯಾಯಾಧೀಶರೊಬ್ಬ ಬೆನಜೀರ್ ಮತ್ತು ಜರ್ದಾರಿ ಜಂಟಿ ಮಾಲೀಕತ್ವದ ಬೊಮರ್ ಫೈನಾನ್ಸ್ ಕಂಪನಿ ಎಸ್‌ಜಿಎಸ್ ಮತ್ತು ಕೊಟಕ್ನಾ ಎಂಬ ಸ್ವಿಸ್ ಕಂಪನಿಗಳಿಂದ 15 ಮಿಲಿಯನ್ ಡಾಲರ್‌ಗಳನ್ನು ಲಂಚದ ರೂಪದಲ್ಲಿ ಪಡೆದಿತ್ತು ಎಂಬುದನ್ನು ಸಾಬೀತುಪಡಿಸಿದ್ದರು. ಅಷ್ಟೇ ಅಲ್ಲದೆ, ಅವರಿಬ್ಬರೂ ಆರು ತಿಂಗಳ ಜೈಲು ಶಿಕ್ಷೆ ಅನುಭವಿಸಬೇಕು, ಐದು ಮಿಲಿಯನ್ ಡಾಲರ್ ದಂಡ ತೆರಬೇಕು ಮತ್ತು 11.9 ಮಿಲಿಯನ್ ಡಾಲರ್‌ಗಳನ್ನು ಪಾಕಿಸ್ತಾನದ ಸರ್ಕಾರಕ್ಕೆ ಹಿಂದಿರುಗಿಸಬೇಕು ಎಂದು ತೀರ್ಪು ನೀಡಿದ್ದರು.

ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ ಬೆನಜೀರ್ 2005 ರಲ್ಲಿ ಸ್ವಿಸ್ ನ್ಯಾಯಾಲಯದ ಮುಂದೆ ಹಾಜರಾಗಿ ತನಗೂ ಆ ಕಂಪನಿಗಳಿಗೂ ಯಾವುದೇ ಸಂಬಂಧವಿಲ್ಲ, ಅವುಗಳ ಅಸ್ತಿತ್ವದ ಬಗ್ಗೆಯೇ ತನಗೆ ಗೊತ್ತಿಲ್ಲ, ಅದೆಲ್ಲ ತನ್ನ ಗಂಡ ಮತ್ತು ತಾಯಿಗೆ ಸಂಬಂಧಿಸಿದ್ದು ಎಂಬ ಹೇಳಿಕೆ ನೀಡಿದಳು. ಆ ಹೊತ್ತಿಗೆ ಆಕೆಯ ಗಂಡ ಇನ್ನೂ ಪಾಕಿಸ್ತಾನದ ಜೈಲಿನಲ್ಲಿದ್ದ, ಆಕೆಯ ತಾಯಿ ನುಸ್ರತ್‌ಗೆ ಆಲ್‌ಝೈಮರ್ಸ್ ಕಾಯಿಲೆಯಿಂದಾಗಿ ತನ್ನ ಹೆಸರೇ ಮರೆತಿತ್ತು!



ಇಂತಹ ಹಸಿಹಸಿ ಸುಳ್ಳುಗಳನ್ನು ಬೆನಜೀರ್ ಹೇಳುತ್ತಿರುವುದನ್ನು ಕೇಳಿಸಿಕೊಂಡ ನ್ಯಾಯಾಲಯ ಇನ್ನೊಂದು ದಾಖಲೆಯನ್ನು ತೋರಿಸಿ "ಇದರಲ್ಲಿ ಅಕಸ್ಮಾತ್ ನೀನು ಅಥವಾ ನಿನ್ನ ಗಂಡ ತೀರಿಕೊಂಡರೆ ನಿಮ್ಮ ಜಂಟಿ ಮಾಲೀಕತ್ವದ ಬೋಮರ್ ಕಂಪ[...] ಆಸ್ತಿಗಳನ್ನು ಭುಟ್ಟೊ ಮತ್ತು ಜರ್ದಾರಿ ಕುಟುಂ[...] ನಡುವೆ ಸಮಾನವಾಗಿ ಹಂಚಬೇಕು ಎಂಬ ಒಪ್ಪ[...] ಸಹಿ ಹಾಕಿದ್ದೀಯಲ್ಲಾ?" ಎಂದು ಕೇಳಿತು. "[...] ಗೊತ್ತಿಲ್ಲದೆ ನಾನು ಸಹಿ ಹಾಕಿರಬಹುದು. ಆ ದಾ[...] ಬಗ್ಗೆ ನನಗೇನೂ ಗೊತ್ತಿಲ್ಲ" ಎಂದೇ ಉತ್ತರಿಸ[...] ಬೆನಜೀರ್. ಅಷ್ಟೇ ಅಲ್ಲ, ಸ್ವಿಸ್ ಬ್ಯಾಂಕೊಂ[...] ಜರ್ದಾರಿ ಇಟ್ಟಿದ್ದ 1,50,000 ಡಾಲರ್ ಬೆಲೆಬಾ[...] ವಜ್ರದ ನೆಕ್‌ಲೇಸ್ ಆಗಲಿ, ಇತರೆ ವಜ್ರ ವೈಢೂ[...]ಗಳಾಗಲಿ, ಕೋಟ್ಯಂತರ ರೂಪಾಯಿಗಳ ಬಗ್ಗೆ [...] ತನಗೆ ಏನೇನೂ ಗೊತ್ತಿಲ್ಲ ಎಂದು ಹೇಳಿದ್ದಳು [...]

ಇದಿಷ್ಟು ಬರೀ ಸ್ವಿಜರ್‌ಲ್ಯಾಂಡ್‌ನಲ್ಲಿ ಅಕ್ರಮ[...] ಬಚ್ಚಿಟ್ಟಿದ್ದ ಹಣದ ಕತೆ. ಇದರ ಇನ್ನೊಂದು [...] ಬ್ರಿಟನ್ನಿನಲ್ಲಿ ಅನಾವರಣಗೊಳ್ಳುತ್ತಿತ್ತು, ಜರ್ದಾರಿ ಮಾ[...]ಕತ್ವದ ಕಂಪನಿಯೊಂದು ಸರ್ರೆ ಎಂಬಲ್ಲಿ ನಾಲ್ಕು [...]ಯನ್ ಡಾಲರ್‌ನಷ್ಟು ಬೆಲೆಬಾಳುವ ಅರಮನೆಯ[...] ಆಸ್ತಿಯನ್ನು ಖರೀದಿಸಿತ್ತು. ಇದು ಕೂಡ ಲ[...] ಹಣದಿಂದಲೇ ಖರೀದಿಸಲಾಗಿದೆ ಎಂದು ಸ್ಪಷ್ಟವಾ[...] ಜರ್ದಾರಿ "ನಾನದನ್ನು ಕೊಂಡಿಲ್ಲ" ಎಂದು ಹೇ[...] ಆಗ ಬ್ರಿಟಿಷ್ ಸರ್ಕಾರ ಆ ಅರಮನೆಯನ್ನು ಹ[...] ಹಾಕಿ, ಬಂದ ಹಣವನ್ನು ಪಾಕಿಸ್ತಾನದ ಸರ್ಕಾ[...] ನೀಡಲು ನಿರ್ಧರಿಸಿತು. ಈ ನಿರ್ಧಾರ ಹೊರಬೀಳು[...] ಜರ್ದಾರಿ "ಹೌದು, ಆ ಮನೆ ನನ್ನದೆ" [...] ಒಪ್ಪಿಕೊಂಡ. ಅದನ್ನು ಕುರಿತ ವಿಚಾರಣೆ ಈ[...] ನಡೆಯುತ್ತಿದೆ.

ಪೋಲಾಂಡ್‌ನ ಒಂದು ಕಂಪನಿಯಿಂದ 8[...] ಟ್ರ್ಯಾಕ್ಟರ್‌ಗಳನ್ನು ಖರೀದಿಸುವ ಒಪ್ಪಂದಕ್ಕೆ ಸಹಿ [...] ಎರಡು ಮಿಲಿಯನ್ ಡಾಲರ್‌ಗಳ ಕಿಕ್‌ಬ್ಯಾಕ್ ಪಡೆ[...] ಈಗ ತನಿಖೆಗೊಳಪಟ್ಟಿದೆ. ಹಾಗೆಯೇ ಪಾಕಿ[...] ವಾಯುಪಡೆಯ ಜೆಟ್ ವಿಮಾನಗಳಿಗೆ ಬಿಡಿ[...]ಗಳನ್ನು ನೀಡಲು ಡಸಾಲ್ಟ್ ಏವಿಯೇಷನ್ [...] ಕಂಪನಿಯೊಂದಿಗೆ ಮಾಡಿಕೊಂಡ ಒಪ್ಪಂದ [...] ಕಿಕ್‌ಬ್ಯಾಕ್‌ಗಳೂ ಸಾಕಷ್ಟು ಧೂಳು ಎಬ್ಬಿಸಿದೆ. [...]ರೊಂದಿಗೆ ಚಿನ್ನದ ಆಮದು ನೀತಿಯಿಂದ ಬಂದ ಲ[...] ಲಂಚವೂ ದುಬೈನ ಬ್ಯಾಂಕ್‌ನಲ್ಲಿ ಜರ್[...] ಖಾತೆಯಲ್ಲಿರುವುದು ಪತ್ತೆಯಾಗಿದೆ.

ದೇಶ ವಿದೇಶಗಳಲ್ಲಿ ಇಂತಹ ಕೇಸ್‌ಗಳಲ್ಲಿ [...] ಕೊಂಡಿದ್ದ ಬೆನಜೀರ್ ಆನಂತರ ಸಂದರ್ಶನವೊಂ[...] ಹೀಗೆ ಆತ್ಮವಿಮರ್ಶೆ ಮಾಡಿಕೊಂಡಿದ್ದಳು: "ಹಿನ್ನೆ[...]ದಲ್ಲಿ ನಾನು ಭ್ರಷ್ಟಾಚಾರದ ಆರೋಪಗಳನ್ನು [...] ರೀತಿಯಲ್ಲಿ ಎದುರಿಸಬೇಕಿತ್ತು ಅನಿಸುತ್ತದೆ. ನಾನಲ್ಲದಿ[...] ಬೇರೆಯವರು ಕಿಕ್‌ಬ್ಯಾಕ್‌ಗಳನ್ನು ಪಡೆಯುವುದು [...] ಎಂಬಂತಾಗಿತ್ತು. ಸರ್ಕಾರ ಕೂಡ ಇದನ್ನೆಲ್ಲ ಬ[...]ಯಿಸುವ ಧೋರಣೆಯನ್ನಿಟ್ಟುಕೊಳ್ಳದೆ ಅಧಿ[...] ನಡೆಸುವುದೇ ಇಂತಹ ಬಿಸಿನೆಸ್‌ನಿಂದ ಎಂಬಂ[...] ಆದರೆ ಅನುಭವದಿಂದಲೇ ಎಲ್ಲರೂ ಕಲಿಯುತ್ತಾರೆ[...] ಅನುಭವ ಅಂದರೇನು? ತಪ್ಪುಗಳನ್ನು ಮಾ[...] ಮೂಲಕವೇ ಸರಿಯಾದದ್ದನ್ನು ಮಾಡುವು[...] ಕಲಿಯುವುದು."

ಅದೇ ಸಂದರ್ಭದಲ್ಲಿ ತನ್ನ ಪತಿ ಜರ್ದಾ[...] ಬಗ್ಗೆಯೂ ಮಾತನಾಡುತ್ತಾ "ಅವರ ಬಗ್ಗೆ [...] ಸರ್ಕಾರದಲ್ಲಿ ಅವರ ಪಾತ್ರದ ಬಗ್ಗೆ ಹಲವು ಟೀಕೆ[...] ಕೇಳಿದ್ದೇನೆ. ಆದರೆ ಪಾಕಿಸ್ತಾನದಂತಹ ಸಂಪ್ರದಾ[...] ದೇಶದಲ್ಲಿ ಮಹಿಳೆಯೊಬ್ಬಳು ಅಧಿಕಾರದಲ್ಲಿ[...] ಹಲವು ಸಂಪ್ರದಾಯಸ್ಥರು ಆಕೆಯೊಂದಿಗೆ ಮಾತ[...]ವುದಿಲ್ಲ. ಅಂತಹ ಸಮಸ್ಯೆ ಎದುರಾದಾಗ ನನ್ನ [...] ನನ್ನ ಪರವಾಗಿ ಮಾತನಾಡುತ್ತಿದ್ದರು. ಆ ನಿ[...] ನನಗೆ ತುಂಬಾ ನೆರವಾದರು. ಮಾತ್ರವಲ್ಲ, ನಾವಿ[...]


ಮದುವೆಯಾಗಿ ಎರಡು ದಶಗಳಾದರೂ ಅವರು [...] ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದಾರೆ ಮತ್ತು [...] ವರ್ಷಗಳನ್ನು ಅನಾರೋಗ್ಯದ ಕಾರಣಕ್ಕೆ ಅಮೆರಿಕಾ[...] ಕಳೆದಿದ್ದಾರೆ. ನಮ್ಮ ಮೂವರು ಮಕ್ಕಳಿಗೆ ತಂದೆ[...] ಇಲ್ಲದಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಯಾರಾ[...]

ಅವರ ವಿರುದ್ಧ ಮಾತನಾಡಿದರೆ ಏನನ್ನಬೇಕು ಎಂದೇ ನನಗೆ ತೋಚುವುದಿಲ್ಲ" ಎಂದಿದ್ದಳು ಬೆನಜೀರ್.

ತೋರಿಕೆಗೆ ಆಕೆ ತನ್ನ ಗಂಡನ ಬಗ್ಗೆ ವಿಷಾದ, ಅನುಕಂಪ ವ್ಯಕ್ತಪಡಿಸುತ್ತಿದ್ದಳಾದರೂ ಅವರ ದಾಂಪತ್ಯ ಜೀವನದಲ್ಲಿ ಬಿರುಕುಗಳು ಮೂಡಲಾರಂಭಿಸಿದ್ದವು. ಇದಕ್ಕೆ ಹಲವು ಕಾರಣಗಳೂ ಇದ್ದವು.

ಭಾರತದ ಇಂದಿರಾ ಗಾಂಧಿ, ಇಸ್ರೇಲಿನ ಗೋಲ್ಡಾ ಮಿಯರ್, ಶ್ರೀಲಂಕಾದ ಸಿರಿಮಾವೊ ಬಂಡಾರನಾಯ್ಕೆ, ಟರ್ಕಿಯ ತನ್ಸು ಸಿಲ್ಲರ್ ಮತ್ತು ಫಿಲಿಪ್ಪೈನ್ಸ್‌ನ ಗ್ಲೋರಿಯಾ ಅರೊಯೊ- ಈ ಎಲ್ಲ ಮಹಿಳಾ ನಾಯಕಿಯರ ಗಂಡಂದಿರು ಹೇಗೆ ತಮ್ಮ ಹೆಂಡತಿಯ ನೆರಳಿನಲ್ಲಿ ವಾಸಿಸಲು ಇಷ್ಟಪಡಲಿಲ್ಲವೋ ಹಾಗೆಯೇ ಬೆನಜೀರ್‌ಳ ಗಂಡ ಜರ್ದಾರಿ ಕೂಡ ಇಷ್ಟಪಡಲಿಲ್ಲ. ಅದರಲ್ಲೂ ಬೆನಜೀರ್‌ಳ ಗೈರುಹಾಜರಿಯಲ್ಲಿ ಆತ ಒಮ್ಮೆ ಪಾಕಿಸ್ತಾನಕ್ಕೆ ಹೋಗಿ ಪಿಪಿಪಿ ಪಕ್ಷದ ನೇತೃತ್ವವನ್ನು ವಹಿಸಿಕೊಳ್ಳಲು ಯತ್ನಿಸಿದ್ದೂ ಆಕೆಗೆ ಇಷ್ಟವಾಗಿರಲಿಲ್ಲ.

ಹಾಗೆಯೇ ಆತನ 'ಕಮಿಷನ್' ದಂಧೆಯಿಂದಾಗಿ ತಾನು ಅಧಿಕಾರ ಕಳೆದುಕೊಳ್ಳಬೇಕಾಗಿದ್ದು ತನ್ನ ಹೆಸರಿಗೆ ಕಳಂಕ ಅಂಟಿಕೊಂಡಿದ್ದು ಅವಳಲ್ಲಿ ಬೇಸರ ಮೂಡಿಸಿತ್ತು. ಇದೆಲ್ಲದರೊಂದಿಗೆ ಆತ ಬೇರೆ ಸ್ತ್ರೀಯರೊಂದಿಗೆ ಚಕ್ಕಂದವಾಡುತ್ತಾನೆ ಎಂಬ ಗುಸುಗುಸು ಕೂಡ ಬೆನಜೀರ್‌ಳನ್ನು ಕೆರಳಿಸಿತ್ತು.



ಲಂಚದ ಹಣದಲ್ಲಿ ಕೊಂಡಿದ್ದ ಅರಮನೆ, ಕುದುರೆ, ವಜ್ರ

ಈ ಎಲ್ಲ ಕಾರಣಗಳಿಗಾಗಿಯೇ ಆತ 2004ರಲ್ಲಿ ಜೈಲಿನಿಂದ ಬಿಡುಗಡೆ ಪಡೆದು ಪಾಕಿಸ್ತಾನದಿಂದ ಹೊರಬಂದರೂ ಬೆನಜೀರ್ ಮತ್ತು ಮೂವರು ಮಕ್ಕಳೊಂದಿಗೆ ದುಬೈನಲ್ಲಿ ವಾಸಿಸಲಿಲ್ಲ. ಬದಲಾಗಿ ಆತ ದೂರದ ಅಮೆರಿಕದಲ್ಲಿ ಮಾಕ್ಸಿಮಿಲಿಯನ್ ಎಂಬ ತನ್ನ ನಾಯಿಯೊಂದಿಗೆ ವಾಸಿಸುತ್ತಿದ್ದ. ಇದನ್ನು ಕಂಡು ಹಲವರು "ಇವರಿಬ್ಬರ ದಾಂಪತ್ಯ ಜೀವನ ಮುಗಿದಂತೆಯೇ" ಎಂದು ವಿಶ್ಲೇಷಿಸಿದ್ದರು.

ಆದರೆ ಜರ್ದಾರಿ ಬಿಡುಗಡೆಗೊಂಡಾಗ ಜನರ ನಿರೀಕ್ಷೆಯೇ ಬೇರೆಯದ್ದಾಗಿತ್ತು. ಆಗತಾನೇ ಪಾಕಿಸ್ತಾನದಲ್ಲಿ ಬಾಲಿವುಡ್‌ನ 'ವೀರ್‌ಜರಾ' ಎಂಬ ಹಿಂದಿ ಚಿತ್ರ ತುಂಬಾ ಜನಪ್ರಿಯವಾಗಿತ್ತು. ಎಷ್ಟರಮಟ್ಟಿಗೆ ಅಂದರೆ ಸ್ವತಃ ಪರ್ವೇಜ್ ಮುಷರಫ್‌ನೊಂದಿಗೆ ಭಾರತಕ್ಕೆ ಭೇಟಿ ನೀಡಿದ್ದ ಆತನ ಪತ್ನಿ ಒಂದು ಔತಣಕೂಟಕ್ಕೆ 'ವೀರ್-ಜರಾ' ಚಿತ್ರದಲ್ಲಿ ನಟಿಸಿದ್ದ ರಾಣಿ ಮುಖರ್ಜಿ ಬರಬೇಕೆಂದೂ, ತಾನು ಆಕೆಯನ್ನು ಭೇಟಿಯಾಗಬೇಕೆಂದೂ ಬಯಸಿದ್ದಳು.

ಅಂದು ಜರ್ದಾರಿ ಜೈಲಿನಿಂದ ಹೊರಬಂದಾಗ ಜನ ಉತ್ಸಾಹದಿಂದ ಆತನನ್ನು ಬರಮಾಡಿಕೊಂಡಿದ್ದರು. ತನ್ನ ಹೆಂಡತಿಯಿಂದ ದೂರವಾಗಿ ನಾಲ್ಕು ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದ ಜರ್ದಾರಿಯಲ್ಲಿ 'ವೀರ್'ನನ್ನೂ, ಆತನಿಗಾಗಿ ದುಬೈನಲ್ಲಿ ಕಾಯುತ್ತಿದ್ದ ಬೆನಜೀರ್‌ಳಲ್ಲಿ 'ಜರಾ'ಳನ್ನು ಕಂಡಿದ್ದರು ಆ ಜನ. ಆದರೆ ವಾಸ್ತವವವೇ ಬೇರೆಯಾಗಿತ್ತು.

ಬಿಡುಗಡೆಗೊಂಡ ಹಲವು ತಿಂಗಳಲ್ಲೇ ಆತ ಹೃದಯ ಚಿಕಿತ್ಸೆಗೆಂದು ದುಬೈ ಆಸ್ಪತ್ರೆಯೊಂದರಲ್ಲಿ ದಾಖಲಾದಾಗ ಆತನನ್ನು ನೋಡಲು ಬಂದ ಆತನ ತಂದೆತಾಯಿ ಬೆನಜೀರ್‌ಳ ಐಷಾರಾಮಿ ಬಂಗಲೆಯಲ್ಲಿ ತಂಗದೇ ಹೋಟೆಲ್ ಒಂದರಲ್ಲಿ ಉಳಿದುಕೊಂಡಿದ್ದರು. ಆತ ಚೇತರಿಸಿಕೊಂಡ ನಂತರ ಆತ ಸ್ವಿಸ್ ನ್ಯಾಯಾಲಯದ ಮುಂದೆ ಹಾಜರಾಗಬೇಕಿತ್ತು, ಇದರಿಂದ ತಪ್ಪಿಸಿಕೊಳ್ಳಲು ಆತ "ಇನ್ನೂ ಹೆಚ್ಚು ಚಿಕಿತ್ಸೆ ಬೇಕಿದೆ" ಎಂಬ ನೆಪ ಒಡ್ಡಿ ಅಮೆರಿಕಕ್ಕೆ ಹಾರಿಹೋದ. ಆಮೇಲೆ ಅಲ್ಲಿಂದಲೇ "ವೈದ್ಯರು ದೀರ್ಘಕಾಲದ ವಿಮಾನ ಪ್ರಯಾಣ ಮಾಡಕೂಡದು ಎಂದಿದ್ದಾರೆ. ಆದ್ದರಿಂದ ನಾನು ಸ್ವಿಜರ್‌ಲ್ಯಾಂಡ್‌ಗೆ ಬರಲಾಗುವುದಿಲ್ಲ" ಎಂದು ಹೇಳಿ ಅಲ್ಲೇ ಉಳಿದುಕೊಂಡ. ಇದೇ ಸಮಯಕ್ಕೆ ಬೆನಜೀರ್ ಕೂಡ ಸ್ವಿಸ್ ನ್ಯಾಯಾಲಯದ ಮುಂದೆ ಹಾಜರಾಗಿ ತನ್ನ ಗಂಡನ ಚಟುವಟಿಕೆಗೂ ತನಗೂ ಯಾವ ಸಂಬಂಧವೂ ಇಲ್ಲ ಎಂದಿದ್ದು ಇವರಿಬ್ಬರು ಬೇರೆಬೇರೆ ಆಗಿದ್ದಾರೆ ಎಂಬ ರೂಮರ್‌ಗಳಿಗೆ ಕಾರಣವಾಗಿತ್ತು. ಈ ವಿಷಯದ ಬಗ್ಗೆ ಪತ್ರಿಕೆಗಳು ವರದಿ ಮಾಡಿದಾಗಲೂ ಬೆನಜೀರ್ ಆಗಲಿ, ಜರ್ದಾರಿಯಾಗಲಿ, ಪಿಪಿಪಿ ಆಗಲಿ ಅವು ಗಳನ್ನು ಅಲ್ಲಗಳೆಯುವ ಉಸಾಬರಿಗೆ ಹೋಗಲೇ ಇಲ್ಲ.

ಬೆನಜೀರ್‌ಳ ವೈವಾಹಿಕ ಬದುಕು ಅಂತ್ಯಗೊಂಡಿದ್ದರೂ ಜರ್ದಾರಿಯಿಂದ ವಿಚ್ಛೇದನೆ ಪಡೆಯುವ ಪ್ರಸ್ತಾಪ ಮಾತ್ರ ಇರಲೇ ಇಲ್ಲ. ಒಂದು ಮಕ್ಕಳ ಕಾರಣಕ್ಕಾಗಿ ಮತ್ತು ಎರಡು ರಾಜಕೀಯ ಕಾರಣಗಳಿಗಾಗಿ. ತನ್ನ ಗಂಡನ ಬಗ್ಗೆ ಆಕೆಗೆ ಎಷ್ಟೇ ಕೋಪ, ವೈಮನಸ್ಸಾಗಿದ್ದರೂ ಪಾಕಿಸ್ತಾನದ ಜನತೆ ವಿಚ್ಛೇದನೆ ಪಡೆದಿರುವ ಮಹಿಳೆಯೊಬ್ಬಳನ್ನು ಯಾವುದೇ ಕಾರಣಕ್ಕೂ ತಮ್ಮ ನಾಯಕಿಯಾಗಿ ಸ್ವೀಕರಿಸುವುದಿಲ್ಲ ಎಂಬ ಕಟುಸತ್ಯ ಆಕೆಗೆ ಗೊತ್ತಿತ್ತು.

ಬೆನಜೀರ್‌ಳ ವೈಯಕ್ತಿಕ ಜೀವನದಲ್ಲಿ ಇಷ್ಟೆಲ್ಲಾ ನಡೆಯುತ್ತಿದ್ದಾಗ ಪಾಕಿಸ್ತಾನದಲ್ಲೂ ಹಲವಾರು ರಾಜಕೀಯ ಬೆಳವಣಿಗೆಗಳು ಜರುಗುತ್ತಿದ್ದವು. ಬಾಯಿ ಮಾತಿಗೆ ಪ್ರಜಾಪ್ರಭುತ್ವ ಎಂದೆಲ್ಲ ಅರಚುವ ಅಮೆರಿಕ ಸೈನ್ಯಾಧಿಕಾರಿ ಮುಷರಫ್‌ಗೆ ತನ್ನೆಲ್ಲ ಬೆಂಬಲವನ್ನು ನೀಡುತ್ತಿತ್ತು. ಅಷ್ಟೇ ಅಲ್ಲ ತಾನು ಭಯೋತ್ಪಾದನೆ ವಿರುದ್ಧ ಸಾರಿರುವ ಸಮರದಲ್ಲಿ ಬೆನಜೀರ್ ನೇತೃತ್ವದ ಪ್ರಜಾಪ್ರಭುತ್ವಕ್ಕಿಂತ ಮುಷರಫ್‌ನ ಸೈನ್ಯಾಧಿಕಾರವೇ ಮುಖ್ಯ ಎಂಬ ನಿಲುವನ್ನು ಹೊಂದಿತ್ತು.

ಅಷ್ಟೊತ್ತಿಗಾಗಲೇ ನವಾಜ್ ಷರೀಫ್ ಕೂಡ ದುಬೈಗೆ ವಲಸೆ ಬಂದಿದ್ದರಿಂದ ಮುಷರಫ್‌ನನ್ನು ಒದ್ದೋಡಿಸಲು ತಾವಿಬ್ಬರೂ ಯಾಕೆ ಕೈಜೋಡಿಸಬಾರದೆಂಬ ಪ್ರಸ್ತಾಪವನ್ನು ಬೆನಜೀರ್ ಆತನ ಮುಂದಿಟ್ಟಳು. ನನ್ನ ವೈರಿಯ ವೈರಿ ನನ್ನ ಸ್ನೇಹಿತ ಎಂಬ ತಂತ್ರದಿಂದಾಗಿ ಮಾಜಿ ವೈರಿಗಳಾಗಿದ್ದ ಬೆನಜೀರ್ ಮತ್ತು ಷರೀಫ್ ಜೊತೆಗೂಡಿ ಮುಷರಫ್ ವಿರುದ್ಧ 'ಪ್ರಜಾತಂತ್ರಕ್ಕೊಂದು ಶಾಸನ' ಎಂಬ ಒಪ್ಪಂದಕ್ಕೆ ಸಹಿ ಹಾಕಿದ್ದರು.

ಆದರೆ ಬೆನಜೀರ್‌ಳಿಗೆ ಅರ್ಥವಾಗಲಾರಂಭಿಸಿತ್ತು. ಅಮೆರಿಕ, ಅಲ್ಲಾ ಮತ್ತು ಆರ್ಮಿ ಎಂಬ ಮೂರು `A'ಗಳ ಸಹಾಯವಿಲ್ಲದೆ ತಾನು ಪಾಕಿಸ್ತಾನದಲ್ಲಿ ಅಧಿಕಾರಕ್ಕೆ ಬರುವುದು ಅಸಾಧ್ಯ ಎಂಬುದು ಆಕೆಗೆ ಗೊತ್ತಾಗಿತ್ತು.

ಆಗ ಆಕೆ ಈ ಮೂರು `A'ಗಳನ್ನು ಓಲೈಸಿಕೊಳ್ಳುವ ಪ್ರಯತ್ನಗಳನ್ನು ಪ್ರಾರಂಭಿಸಿದಳು. ಇದನ್ನು ಕಂಡು "ಇವಳನ್ನು ನಂಬಕ್ಕಾಗುವುದಿಲ್ಲ" ಎಂದು ನವಾಜ್ ಷರೀಫ್ ಹುಲುಬಿದ್ದ.

ತನ್ನ ಪರವಾಗಿ ಅಮೆರಿಕ ಸರ್ಕಾರದೊಂದಿಗೆ ಲಾಬಿ ಮಾಡಲು ದುಬಾರಿ ಪಿಆರ್ ಸಂಸ್ಥೆಗಳನ್ನು ನೇಮಿಸಿಕೊಂಡಳು. ಅಮೆರಿಕದ ಅಧಿಕಾರಿಗಳೊಂದಿಗೆ ಚರ್ಚೆಗಳನ್ನು ನಡೆಸಿದಳು. ವಿಶ್ವಸಂಸ್ಥೆಯಲ್ಲಿರುವ ಇಸ್ರೇಲ್ ದೇಶದ ರಾಯಭಾರಿಯನ್ನು ಭೇಟಿ ಆದಳು. ಯಾವ ತಾಲಿಬಾನ್ ಅನ್ನು ತಾನೇ ಹಿಂದೊಮ್ಮೆ ಬೆಂಬಲಿಸಿ ಅಫಘಾನಿಸ್ತಾನದಲ್ಲಿ ಅದು ಅಧಿಕಾರ ವಹಿಸಿಕೊಳ್ಳುವಂತೆ ಸಹಕರಿಸಿದ್ದಳೋ ಅದೇ ತಾಲಿಬಾನ್ ಅನ್ನು ಈಗ ಕಟುವಾಗಿ ಟೀಕಿಸಲಾರಂಭಿಸಿದಳು. ತನ್ನ ಈ ಎಲ್ಲಾ ಪ್ರಯತ್ನಗಳಿಗೆ ಬ್ರಿಟನ್ನಿನ ಪ್ರಧಾನಿ ಗಾರ್ಡನ್ ಬ್ರೌನ್‌ನ ನೆರವು ಪಡೆದಳು.

ಅಮೆರಿಕ ಬೆನಜೀರ್ ಬಗ್ಗೆ ತನ್ನ ನಿಲುವಿನಲ್ಲಿ ಮೃದು ಧೋರಣೆಯನ್ನು ಅನುಸರಿಸುವುದಕ್ಕೆ ಅದರದೇ ಆದ ಕಾರಣಗಳಿದ್ದವು. ಯಾಕೆಂದರೆ ಅಷ್ಟೊತ್ತಿಗಾಗಲೇ ಮುಸ್ಲಿಂ ದೇಶಗಳಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುತ್ತೇನೆಂಬ ಅಮೆರಿಕದ ಮಾತು ಬರೀ ಬೊಗಳೆ ಎಂದು ಸಾಬೀತಾಗಿತ್ತು. ■

# ಅಸ್ಪೃಶ್ಯತೆ ಹುಟ್ಟಿದ್ದು ಉಡುಪಿಯಲ್ಲಂತಲ್ಲಾ!




ಉಡುಪಿ ಮಠದ ಸಮುಕ್ಕೆ ಅಸ್ಪೃಶ್ಯತೆ ಆಚರಣೆಯಿಂದ ಪರಿಹಾರ ಕಂಡುಕೊಂಡಿತಂತಲ್ಲಾ. ಇದರಿಂದ ಸಂತೃಪ್ತಗೊಂಡ ಭಕ್ತಸಮೂಹ ಕೈ ಸಡಿಲಬಿಟ್ಟು ಬಾರಿಸಿ ಬೀಸಣಿಗೆ ತೆಗೆದುಕೊಂಡು ಗಾಳಿ ಬೀಳಿಸಿಕೊಳ್ಳುತ್ತಾ, "ಸುಮ್ಮನೆ ಮಠದ ಮರ್ಯಾದೆ ಹಾಳು ಮಾಡಿಕೊಳ್ಳುವುದಕ್ಕಿಂತ ಸರಾಗವಾಗಿ ಪರ್ಯಾಯ ನಡೆಸಬಹುದಿತ್ತು. ಈ ಹಾಳು ಪೇಜಾವರರಿಗೆ ಮಂಡೆ ಸಮಯಿಲ್ಲ. ಕೃಷ್ಣನನ್ನು ಮುಟ್ಟುವುದು ಬೇಡ, ಹಾಗೆ ಪೂಜೆ ಮಾಡಿ ಅಂದರೆ ಹೇಗೆ? ಪರ್ಯಾಯ ಸ್ವಾಮಿ ಹೂಮುಟ್ಟುವುದಿಲ್ಲವ? ಆ ಹೂ ಕೃಷ್ಣನಿಗೆ ತಾಕುವುದಿಲ್ಲವ? ಮಂಡೆ ಸಮ ಇದ್ದವರು ಇಂತಹ ಷರತ್ತು ಹಾಕುವುದುಂಟೆ?" ಎಂದು ಮಾತನಾಡಿಕೊಳ್ಳುತ್ತಿದ್ದಾರಂತಲ್ಲಾ. ಕೃಷ್ಣನನ್ನು ಮುಟ್ಟದೆ ಪೂಜೆ ಮಾಡಬೇಕೆಂಬ ಪೇಜಾವರ ಶ್ರೀಗಳ ಷರತ್ತಿಗೆ ಬೆಚ್ಚಬಿದ್ದಿರುವ ಜಿ. ರಾಜಶೇಖರ್ ಕಡೆಯ ವಿಚಾರವಾದಿಗಳು "ಈ ದೇಶದಲ್ಲಿ ಅಸ್ಪೃಶ್ಯತೆ ಹೇಗೆ ಹುಟ್ಟಿತು, ಮತ್ತು ಎಲ್ಲಿ ಹುಟ್ಟಿತು ಎಂದು ಹೆಗ್ಗೋಡಿನಲ್ಲಿ ಕುಳಿತು ಚರ್ಚಿಸುವ ವಿಪ್ರೋತ್ತಮರು ಉಡುಪಿಗೆ ಬಂದು ಪರಿಶೀಲಿಸುವುದೊಳ್ಳೆಯದು" ಎಂದು ಆಡಿಕೊಂಡಿದ್ದಾರಂತಲ್ಲಾ, ಥೂತ್ತೇರಿ!

* * * *

ಟೈರು, ಟ್ಯೂಬು, ಬಾಡಿ, ಇಂಜನ್ ಯಾವುದೂ ಸರಿಯಿಲ್ಲದ ಸ್ವಾತಂತ್ರ ಪೂರ್ವದ ಹಳೆ ಪಾರ್ಗು ಗಾಡಿಯಾದ ಕಾಂಗ್ರೆಸ್ ಬಸ್ಸಿನೊಳಕ್ಕೆ ಜೆಡಿಎಸ್ ಎಕ್ಸ್‌ಪ್ರೆಸ್‌ನಿಂದ ಜಿಗಿದ ಜನ ಓಡಿಬಂದು ಹತ್ತಿಕೊಳ್ಳುವುದನ್ನು ನೋಡಿದ ಮೈಸೂರು ಕಡೆ ಬೆಂಕಿ ಮಹದೇವು ಬೆಂಕಿಯಾಗಿ "ಈ ಜೆಡಿಎಸ್‌ನ ದಡೂತಿ ಜನ ಹೀಗೆ ಬಂದು ತುಂಬಿಕೊಂಡರೆ ಗತಿಯೇನ್ರಿ? ಹೊರಗಿನಿಂದ ಬಂದವರೆಲ್ಲಾ ಟಾಪಿನ ಮೇಲೆ ಕೂರಿ" ಎಂದು ಕೂಗುತ್ತಿರುವಾಗಲೇ ವಿಶ್ವನಾಥ್ ಎಂಬ ಮಾತಿನ ಮಲ್ಲ ಬಂಗಾರಪ್ಪನ ಕಡೆಗೂ ಕೈ ಬೀಸಿ ಕರೆಯುತ್ತಿದ್ದಾರಂತಲ್ಲಾ. ಇದರಿಂದ ಬೆಚ್ಚಿ ಬಿದ್ದ ಕಾಗೋಡು ತಿಮ್ಮಪ್ಪ "ರೀ ವಿಶ್ವನಾಥ್, ಆ ಬಂಗಾರಪ್ಪ ಬಂದರೆ ಸ್ಟೇರಿಂಗ್ ಹಿಡಿದುಕೊಳ್ಳಲು ಬರುತ್ತಾನೆ. ಅವನನ್ನು ಯಾಕೆ ಕರಿತಿರ್ರಿ? ಅವ್ನೊಬ್ಬ ಶನಿ" ಎಂದರಂತಲ್ಲಾ. "ಬಂಗಾರಪ್ಪ ಇಡೀ ರಾಜ್ಯದ ನಾಯಕ. ನೀವು ಸಾಗರಕ್ಕೂ ನಾಯಕರಲ್ಲ ಎಂಬುದು ಈಚೆಗೆ ಸಾಬೀತಾಗಿದೆ. ಅದಕ್ಕೆ ಬಂದು ಖರ್ಗೆ ಹಿಂದೆ ಸುತ್ತುತ್ತಿದ್ದೀರಿ" ಎಂದು ವಿಶ್ವನಾಥ್ ಉತ್ತರಿಸಿದರಂತಲ್ಲಾ. ಇದರಿಂದ ಕೆರಳಿದ ಕಾಗೋಡು ತಿಮ್ಮಪ್ಪ "ಉಷಾರು, ನಿನ್ನ ನಾಲಿಗೆ ಸೀಳಿ ಕಾರಹಚ್ಚಿ ನರಕಕ್ಕೆ ನೂಕ್ತಿನಿ" ಎಂದರಂತಲ್ಲಾ. ಈ ಇಬ್ಬರ ಜಗಳ ನೋಡಿದ ಕಾಂಗ್ರೈಗಳು "ಅವರಿಬ್ಬರೂ ಸಮಾನ ಮನಸ್ಕರು. ವಹಿಸಿದ ಖಾತೆಗಳನ್ನು ಹಗಲುರಾತ್ರಿ ನಿಭಾಯಿಸಿದ ಕಾರಣಕ್ಕೆ ದ್ವಿಪತ್ನಿ ವ್ರತಸ್ಥರಾಗಿದ್ದಾರೆ. ಕಡಿದಾಡಿಕೊಂಡೇ ಜೊತೆಯಲ್ಲಿರಬಹುದಾದ ಏಕೈಕ ಪಾರ್ಟಿ ಕಾಂಗ್ರೆಸ್" ಎಂದು ಹೆಮ್ಮೆಯಿಂದ ಹೇಳಿಕೊಂಡು ತಿರುಗುತ್ತಿವೆಯಂತಲ್ಲಾ, ಥೂತ್ತೇರಿ!!

* * * *

ದೇವೇಗೌಡರು ಆಡಿರುವ ಮಾತಿನಿಂದ ಕರ್ನಾಟಕದ ರಣಧೀರಪಡೆ ರಕ್ಷಣಾ ಪಡೆ ಸದ್ದಿಲ್ಲದೆ ಕುಳಿತಿರಬೇಕಾದರೆ, ಚೆಡ್ಡಿಪಡೆ ವಿಪರೀತ ಕೆರೆದುಕೊಂಡು ಗಾಯ ಮಾಡಿಕೊಂಡಿವೆಯಂತಲ್ಲಾ. ಈ ಬಗ್ಗೆ ಇವರ ಕಮಾಂಡೆಂಟ್ ಸದಾನಂದ ಗೌಡರಿಗೆ ಫೋನ್ ಮಾಡಿದರೆ ಹೇಗೆ ಅನ್ನಿಸಿ ಫೋನ್ ಮಾಡಿದೆ.

"ಹಲೋ, ಸದಾನಂದ ಗೌಡರೆ. ನಾನು ಯಾಹೂ, ಒಂದು ಪ್ರಶ್ನೆ ಕೇಳಬೇಕು."

"ಒಂದಲ್ಲ, ಎರಡು ಪ್ರಶ್ನೆ ಕೇಳಿ, ಉತ್ತರ ಕೊಡ್ತೇನೆ."

"ದೇವೇಗೌಡರು 'ನಾನು ಕರ್ನಾಟಕದಲ್ಲಿ ಹುಟ್ಟಬಾರದಿತ್ತು' ಅಂದವುರಲ್ಲಾ?"

"ಅವರು ಹಾಗೆ ಹೇಳಿದ್ದರಿಂದ ನಮ್ಮ ಮನಸ್ಸಿಗೆ ತುಂಬ ಬೇಸರ ಆಗಿದೆ. ಅವರು ಇರಾಕಿನಲ್ಲಿ ಹುಟ್ಟಬೇಕಿತ್ತು. ಇವರು ಅಲ್ಲಿ ಹುಟ್ಟಿದ್ದರೆ ಸದ್ದಾಂ ಅಲ್ಲಿ ಹುಟ್ಟುತ್ತಿರಲಿಲ್ಲ. ಆದ್ದರಿಂದ ಇವರಲ್ಲಿ ಸುಖವಾಗಿರಬಹುದಿತ್ತು" ಎಂದರಲ್ಲಾ, ಥೂತ್ತೇರಿ!!

* * * *

ದೇವೇಗೌಡರ ಹುಟ್ಟಿಗೆ ಚೆಡ್ಡಿಗಳೆಲ್ಲಾ ಸಾಬರ ದೇಶವನ್ನೇ ತೋರುತ್ತಿವೆಯಲ್ಲಾ, ಏನಿದರ ಮರ್ಮ ಎನ್ನುತ್ತ ಎಡೂರಪ್ಪನಿಗೆ ಫೋನ್ ಮಾಡಿದೆ.

"ಹಲೋ ಎಡೂರಪ್ಪನವರೆ, ಒಂದು ಮಾತು ಕೇಳಬೇಕಾಗಿತ್ತು?"

"ಕೇಳಿ ಇವರೆ, ತಾವ್ಯಾರು ಅದು ಮೊದ್ಲೇಳಿ?"

"ಯಾಹೂ ಅಂತ ಸಾರ್, ಪತ್ರಕರ್ತ. ದೇವೇಗೌಡ್ರ ಮಾತಿಗೆ ನೀವೇನನ್ನತೀರಿ?"

"ಈ ಮಾತನ್ನ ನಾನು ಖಂಡಿಸ್ತಿನಿ. ನಾನು ಬೂಕನಕೆರೆಯವನಾದ್ರೂ, ಜೀವನಕ್ಕೆ ತೊಂದ್ರೆಯಾಗಿ ಶಿಕಾರಿಪುರದಲ್ಲಿದ್ರೂ, ಯಾಕಪ್ಪ ನಾನು ಬೂಕನಕೆರೆಲ್ಲಿ ಹುಟ್ಟಿದೆ ಅಂತ ಇವತ್ತಿಗೂ ಹೇಳಿಲ್ಲ. ಮಾನ್ಯ ದೇವೇಗೌಡ್ರು ಮುಂದೆ ಪಾಕಿಸ್ತಾನದಲ್ಲಿ ಹುಟ್ಟೊದೆ ಒಳ್ಳೆದು."

## ಥೂತ್ತೇರಿ
ಯಾಹೂ

"ಯಾಕ್ ಸಾರ್ ಪಾಕಿಸ್ತಾನದಲ್ಲಿ ಹುಟ್ಟಬೇಕು?"

"ಅದು ನಮ್ಮ ವೈರಿಗಳ ದೇಶ. ದಿನನಿತ್ಯ ಬಾಂಬ್ ದಾಳಿ ನೆಡೀತನೇ ಇರುತ್ತೆ. ಅಂತ ದೇಶದಲ್ಲಿ ಹುಟ್ಟಕ್ಕೇ ಲಾಯಕ್ಕು ದೇವೇಗೌಡ್ರು."

"ಇನ್ನೊಂದು ವಿಷಯ ಸಾರ್?"

"ಹೇಳಿ?"

"ಗೌಡ್ರು ಇಲ್ಲಿ ಹುಟ್ಟಲಾಗಿ, ಅವರಿಗೊಬ್ಬ ಆತುರದ ಮಗ ಹುಟ್ಟಲಾಗಿ, ಅಧಿಕಾರದ ಇಲ್ಲಿ ಸತ್ತೋಗತಯಿದ್ದ ನೀವು ಉಪಮುಖ್ಯಮಂತ್ರಿ ಆದ್ರಿ. ಹಣಕಾಸಿನ ಮಂತ್ರಿಯಾದ್ರಿ. ನೂರಾರು ಕೋಟಿ ರೂಪಾಯಿನ ಒಡೆಯರಾದ್ರಿ."

"ರೀ ಯಾಹೂ ಅವರೆ, ಬಾಯಿಗೆ ಬಂದಂಗೆ ಮಾತಾಡಬೇಡಿ. ನನ್ನ ಹೋರಾಟಕ್ಕೆ ತಕ್ಕ ಫಲ ನನಗೆ ಸಿಕ್ಕಿದೆ. ಈ ದೇವೇಗೌಡ ಇಲ್ಲಿ ಹುಟ್ಟಲಾಗಿ ನಾನು ಬರೀ ಏಳು ದಿನ ಮುಖ್ಯಮಂತ್ರಿಯಾಗಿದ್ದೆ. ನಾನೇನು ಇವರಿಗೆ ಅನ್ಯಾಯ ಮಾಡಿದ್ದೆ? ಮಾಡ್ತಿನಿ, ಮುಂದೆ ಅವ್ರುರಿಲ್ಲೆಲ್ಲೂ ಹುಟ್ಟದಂಗೆ ಮಾಡ್ತಿನಿ....."

ಥೂ! ಥೂ! ಥೂತ್ತೇರಿ!!! ■



# ತೇಜಮ್ಮ ಈಗ ಸಿನಿಮಾ 'ಇ'ರೋಯಿನ್!

ತನ್ನ ಬಗ್ಗೆ ತಾನೇ ಕಲ್ಪಿಸಿಕೊಂಡು, ಕತೆ ಬರೆದು, ತಾನೇ ದುಡ್ಡು ಹಾಕಿ, ಸಿನಿಮಾ ತೆಗೆದು, ಅದಕ್ಕೆ ತಾನೇ 'ಹೀರೋಯಿನ್' ಆಗಿ ನಟಿಸುವುದು ಎಲ್ಲಾದರೂ ಉಂಟಾ?

ನಂಬಿದರೆ ನಂಬಿ ಬಿಟ್ಟರೆ ಬಿಡಿ; ಕನಕಪುರದ ಸಂಸದೆ ಕಂ ಮಾಜಿ ಪತ್ರಕರ್ತೆ ಯಾನೇ ಒಂದಾನೊಂದು ಕಾಲದ ಲೇಡಿ ಕಾಮ್ರೇಡ್ ತೇಜಸ್ವಿನಿ ಶ್ರೀರಮೇಶ್ ಅರ್ಥಾತ್ ತೇಜಸ್ವಿನಿಗೌಡರು ಹೀಗೊಂದು ವಿಲಕ್ಷಣ ಸಾಹಸಕ್ಕೆ ಕೈಹಾಕಿದ್ದಾರೆ. ಸಿನಿಮಾದ ಹೆಸರೇ ತೇಜಸ್ವಿನಿ ಅಂತೆ. ಮೇಡಂ ತೇಜಮ್ಮನವರೇ ಅದಕ್ಕೆ 'ಇರೋಯಿನ್' ಅಂತೆ. ಅವರೇ ಅದಕ್ಕೆ one of the ಪ್ರೊಡ್ಯೂಸರ್ ಅಂತೆ.

ಅವರದೇ ಕತೆ, ಅವರದೇ ದುಡ್ಡು, ಅವರೇ 'ಇ'ರೋಯಿನ್ನು. ಅಂದಮೇಲೆ ಐಟಮ್ಮು, ಡ್ಯಾನ್ಸು, ಫೈಟಿಂಗು, ಟಾಕಿಂಗು, ಮಿಂಚಿಂಗು, ಪಂಚಿಂಗು ಇಲ್ದೇ ಇರುತ್ತಾ?

ಅಂದಹಾಗೆ ಮೇಡಂ ತೇಜಮ್ಮ ಈ ಸಿನಿಮಾದ ಕೊನೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿ ಆಗ್ತಾರಂತೆ! ಸಾಕ್ಷಾತ್ ಮಾಯಾವತಿಯೇ ನಾಚುವಂತೆ ಕರ್ನಾಟಕದ ಘಟಾನುಘಟಿ ರಾಜಕಾರಣಿಗಳನ್ನೆಲ್ಲ ಭ್ರಷ್ಟಾಚಾರದ ಆರೋಪದ ಮೇಲೆ ಮುಖ್ಯಮಂತ್ರಿಣಿ ತೇಜಸ್ವಿನಿಯವರೇ ನಿಂತು ಜೈಲಿಗೆ ಹಾಕಿಸ್ತಾರಂತೆ!

ಇನ್ನೂ ತಮಾಷೆಯೆಂದರೆ, ಸದ್ಯದಲ್ಲೇ ಸೆಟ್ಟೇರಲಿರುವ ತೇಜಸ್ವಿನಿ ಚಿತ್ರದ ವಿಲನ್ ಯಾರು ಗೊತ್ತೆ? ಡಿ.ಕೆ. ಶಿವಕುಮಾರ್! ಜೊತೆಗೆ ರಾಮನಗರದ ಮಾಜಿ ಕಾಂಗ್ರೆಸ್ ಎಮ್ಮೆಲ್ಲೇ ಸಿ.ಎಂ. ಲಿಂಗಪ್ಪ, ಮಾಜಿ ಮಂತ್ರಿ ಎಚ್.ಎಂ. ರೇವಣ್ಣ, ಚನ್ನಪಟ್ಟಣದ ಶಾಸಕ ಯೋಗೀಶ್ವರ್ ಮತ್ತು ಓರ್ವ ಪತ್ರಕರ್ತನೂ ಈ ಚಿತ್ರದ ಇತರೇ 'ವಿಲನ್'ಗಳಂತೆ!



ಮೇ ತಿಂಗಳ ಹೊತ್ತಿಗೆ ಸಿನಿಮಾ ಬಿಡುಗಡೆ ಗ್ಯಾರಂಟಿ ಎಂದು ಆಣೆ ಪ್ರಮಾಣ ಮಾಡಿ ಹೇಳುವವನು ಸದರಿ ಚಿತ್ರದ ಡೈರೆಕ್ಟರ್ ಕಂ ಆಕ್ಟರ್ ನಿಖಿಲ್ ಮಂಜು. ಮುಖಾಮುಖಿ ತೇಜಮ್ಮನ ರಿಯಲ್ ಲೈಫ್ ಸ್ಟೋರಿಯ ಯಾವ ಅಧ್ಯಾಯ ಈ ಪುಣ್ಯಾತ್ಮನ ಪಾಲಿಗೆ ಅಷ್ಟೊಂದು ರಸವತ್ತೆನ್ನಿಸಿತು? ಒಬ್ಬ ವ್ಯಕ್ತಿಯ ಇನ್ನರ್ಧ ಬದುಕನ್ನು ಕಲ್ಪಿಸಿಕೊಂಡು ಆತ ಬದುಕಿರುವಾಗಲೇ ಸಿನಿಮಾ ಮಾಡುವುದು ಎಷ್ಟು ಸರಿ? ಬ್ರೂಸ್‌ಲಿ, ವೀರಪ್ಪನ್, ಫೂಲನ್ ದೇವಿ, ವಿಕೃತ ಕಾಮಿ ಉಮೇಶ್ ರೆಡ್ಡಿ, ಸಾಂಗ್ಲಿಯಾನಾ, ಕೆಂಪಯ್ಯ, ಕಿರಣ್ ಬೇಡಿ, ಕೊತ್ವಾಲ್ ಇತ್ಯಾದಿಗಳ ಪೈಕಿ ತೇಜಸ್ವಿನಿಯವರದು ಯಾವ ಕ್ಯಾಟಗರಿಯ ಸ್ಟೋರಿ? ಇದು ಸೆಮಿ ಡಾಕ್ಯುಮೆಂಟರಿಯಾ ಅಥವಾ ಫುಲ್ ಟೈಂ ಫ್ಯಾಂಟಸಿಯಾ? ಇನ್ನೂ ಕೇಂದ್ರ ಮಂತ್ರಿಯಾಗಿಲ್ಲ, ಕನಿಷ್ಠ ಎರಡನೇ ಬಾರಿ ಸಂಸದೆಯಾಗಿ ಗೆದ್ದೂ ಇಲ್ಲ, ತನ್ನದೇ ಪಕ್ಷ ಕಟ್ಟಿ ಎಮ್ಮೆಲ್ಲೆಯಾಗಿದ್ದು ಅಥವಾ ಪಕ್ಷೇತರಳಾಗಿ ನಿಂತು ಗೆದ್ದಿದ್ದೂ ಇಲ್ಲ, ಮೇಧಾ ಪಾಟ್ಕರ್ ಥರದ ಹೋರಾಟಗಾರ್ತಿಯೂ ಅಲ್ಲ, ಜನಪರ ಹೋರಾಡಿ ಜೈಲಿಗೆ ಹೋದ ಸಣ್ಣ ನಿದರ್ಶನವೂ ಇಲ್ಲ, ಯಾವ ದೊಡ್ಡ ಸಾಧನೆ ಗೈದಿದ್ದಾಳೆಂದು ತನ್ನ ಬಗ್ಗೆ ತಾನೇ self boosting ಸಿನಿಮಾ ನಿರ್ಮಿಸುತ್ತಿದ್ದಾಳೆ ಮುಖಾಮುಖಿ ತೇಜಮ್ಮ?

ಈ ಹಿಂದೆ ಗುಲ್ಜಾರ್‌ಖಾನ್ ತಾನೇ ದುಡ್ಡು ಹಾಕಿ ತಾನೇ ಹೀರೋ ಆಗಿ ನಟಿಸಿ ಚಿತ್ರ ನಿರ್ಮಿಸಿದ್ದು ಕೊನೆಗೆ ಯಾವ ಗತಿಗೆ ಬಂತೆಂಬುದನ್ನು ಜನ ಕಂಡಿದ್ದಾರೆ. ಅಂಥಾ ರಾಮಕೃಷ್ಣ ಹೆಗಡೆಯೇ ಚಿದಂಬರ ಶೆಟ್ಟಿಯ 'ಮರಣ ಮೃದಂಗ' ಚಿತ್ರದಲ್ಲಿ ನಟಿಸಿದ್ದು ಕಾಲ್ಪನಿಕ ಪಾತ್ರವಾಗಿತ್ತೇ ಹೊರತು ಹೆಗಡೆ ತನ್ನದೇ ರಿಯಲ್ ಸ್ಟೋರಿಯನ್ನು ಸಿನಿಮಾ ಮಾಡಿಕೊಳ್ಳಲಿಲ್ಲ, ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಟಿ.ಎನ್. ಸೀತಾರಾಮರ 'ಮುಕ್ತ' ಧಾರಾವಾಹಿಯಲ್ಲಿ ಮುಖ್ಯಮಂತ್ರಿಯಾಗಿ ನಟಿಸಿದ್ದಾಗಲಿ, ಇನ್ನಾರೋ ಅದ್ಭಕಸುಬಿ ಮುತ್ತಪ್ಪ ರೈ ಬಗ್ಗೆ ಸಿನಿಮಾ ಮಾಡುತ್ತೇನೆಂದು ಮಂಗಳಾರತಿ ಮಾಡಿಸಿಕೊಂಡಿದ್ದಾಗಲಿ, ಸಾಂಗ್ಲಿಯಾನಾ, ದಯಾನಾಯಕ್, ಕೆಂಪಯ್ಯ, ಕಿರಣ್ ಬೇಡಿಯಂಥ ಖಾಕಿ ಕಾಪ್‌ಗಳ ಕುರಿತಂತೆ ಬಂದ ಚಿತ್ರಗಳಿಂದಾಗಲಿ, ಅದರ ಕಥಾನಾಯಕರಿಗೆ ನಯಾಪೈಸೆಯ ಪ್ರಯೋಜನವಾಗಿಲ್ಲ, ಶಂಕರ್‌ನಾಗ್ ಕಾರಣಕ್ಕೆ 'ಸಾಂಗ್ಲಿಯಾನಾ' ಹಿಟ್ ಆಗಿದ್ದು ಬಿಟ್ಟರೆ ಆ ಕಾರಣಕ್ಕೇ ಪೊಲೀಸ್ ಅಧಿಕಾರಿ ಸಾಂಗ್ಲಿಯಾನಾರನ್ನು ಕರೆದು ಯಾರೂ ಮಂತ್ರಿ ಮಾಡಲಿಲ್ಲ.

ಇದೆಲ್ಲಾ ಗೊತ್ತಿದ್ದೂ ತನ್ನ ಬಗ್ಗೆ ತಾನೇ ದುಡ್ಡು ಹಾಕಿ ತಾನೇ ನಟಿಸಿ ಸಿನಿಮಾ ಮಾಡುವ ಹುಚ್ಚು ಮುಖಾಮುಖಿ ತೇಜಮ್ಮನಿಗೆ ಯಾಕೆ ಬಂತು? ಇಂಥದೊಂದು ಚೀಪ್ ಗಿಮಿಕ್ ಮಾಡಿ ಯಾವ ಲಾಭ ಗಳಿಸಲು ಆಕೆ ಲೆಕ್ಕ ಹಾಕಿರಬೇಕು? ಈಗಾಗಲೇ ಗುಲ್ಲೆದ್ದಿರುವಂತೆ ಈ ಚಿತ್ರಕ್ಕೆ ನಿಜಕ್ಕೂ ಮುತ್ತಪ್ಪ ರೈ ಫೈನಾನ್ಸ್ ಮಾಡುತ್ತಿದ್ದಾನಾ? ಅಥವಾ ಕುಮಾರಣ್ಣನ ಕಸ್ತೂರಿ ಚಾನಲ್ ಆಕರ್ಷಕ ಸ್ಯಾಟಿಲೈಟ್ ರೈಟ್ಸ್‌ನ ಆಮಿಷ ಒಡ್ಡಿರುವುದರಿಂದಲೇ ತೇಜಮ್ಮನಿಗೆ ಬಣ್ಣ ಹಚ್ಚುವ ಪಿತ್ಥ ನೆತ್ತಿಗೇರಿದೆಯಾ?

ಇಂಥ ಗುಲ್ಲುಗುಮಾನಿಗಳನ್ನೆಲ್ಲ ಒತ್ತಟ್ಟಿಗಿಟ್ಟು ತೇಜಮ್ಮನ ಖಾಸಗಿ ಬದುಕು ಮತ್ತು ಕಾಂಗ್ರೆಸ್ ಸ್ಥಾನಮಾನಗಳನ್ನೇ ಪರಾಂಭರಿಸಿದರೆ ಅಲ್ಲಿ ಹುಳುಕು ಕೊಳಕುಗಳ ಗಬ್ಬುನಾತ ಬಿಟ್ಟರೆ ಬೇರೇನಿಲ್ಲ. ಮುಖ್ಯವಾಗಿ ತೇಜಸ್ವಿನಿ ಮತ್ತು ಅವರ ಪತಿ ಶ್ರೀರಮೇಶ್ ಸದ್ಯ ಒಟ್ಟಿಗಿಲ್ಲ, ಆ ಕಾರಣಕ್ಕೇ ತೇಜಸ್ವಿನಿ ಶ್ರೀರಮೇಶ್ ಎಂದಿದ್ದ ತಮ್ಮ ಹೆಸರನ್ನು ತೇಜಸ್ವಿನಿಗೌಡ ಎಂದು ಪುನರ್ ನಾಮಕರಣ ಮಾಡಿಕೊಂಡಿದ್ದಾರೆಂಬುದು. ಇದು ಅವರ ಕಡುವೈರಿಗಳ ಕುಹಕವಷ್ಟೇ ಅಲ್ಲ, ಅದು ವಾಸ್ತವ ಕೂಡ.



ಕಾಂಗ್ರೆಸ್ ಹೈಕಮಾಂಡ್ ತನ್ನ ಅಂಗೈಯಲ್ಲಿದೆ, ಅಂಥಾ ರಾಹುಲ್ ಗಾಂಧಿಯೇ ಬೇಕುಬೇಡದ್ದಕ್ಕೆಲ್ಲಾ ತನ್ನನ್ನು ಕರೆಕರೆದು ಮಾತಾಡಿಸುತ್ತಾರೆಂದು ಕಂಡಕಂಡಲ್ಲಿ ಫೋಜು ಕೊಡುತ್ತಿದ್ದ ತೇಜಮ್ಮನ 'ನಿಜಬಣ್ಣ' ಮೇಡಂ ಸೋನಿಯಾಗೂ ಗೊತ್ತಾಗಿಬಿಟ್ಟಿದೆ. ಪ್ರಾರಂಭದಲ್ಲಿ ಉದಯ ಟೀವಿಯಲ್ಲಿ ಮುಖಾಮುಖಿ ಮಾಡಿಕೊಂಡಿದ್ದ ಈಕೆಯನ್ನು ಕರೆದು ಕಾಂಗ್ರೆಸ್ ಟಿಕೆಟ್ ಕೊಡಿಸಿ ದೇವೇಗೌಡರ ವಿರುದ್ಧ ಗೆಲ್ಲಿಸಿದ್ದು ದೀಕೆ. ಓರ್ವ ಪತ್ರಕರ್ತೆಗೆಂದು ಕಾಂಗ್ರೆಸ್ ಕೊಟ್ಟ ಗೌರವವಾಗಿತ್ತು. ಆ ಕಾರಣಕ್ಕಾದರೂ ತೇಜಮ್ಮ ದೀಕೆಗೆ ಋಣಿಯಾಗಿರಬೇಕಿತ್ತು, ಕನಿಷ್ಠ ಕಾಂಗ್ರೆಸ್ಸಿಗಾದರೂ ನಿಯತ್ತಿನಿಂದಿರಬೇಕಾಗಿತ್ತು.

ಯಾವತ್ತು ಜೆಡಿಎಸ್-ಬಿಜೆಪಿ ಕೂಟ ಅಧಿಕಾರಕ್ಕೆ ಬಂತೋ ದೀಕೆಯ ವಿರುದ್ಧ ಕತ್ತಿಮಸೆಯಲು ಅಪ್ಪಮಕ್ಕಳಿಗೊಂದು ಆಯುಧ ಬೇಕಾಗಿತ್ತು, ತೇಜಮ್ಮನಿಗೆ ಪಂಪ್ ಹೊಡೆದರು. ಬೆಂಗಳೂರಿನ ಪ್ರತಿಷ್ಠಿತ ಎಚ್‌ಎಸ್‌ಆರ್ ಲೇಔಟನಲ್ಲಿ ತೇಜಮ್ಮನ ಹೆಸರಿಗೆ ಒಂದೂವರೆ ಕೋಟಿಯ ಸೈಟು ಮಂಜೂರಾಯಿತು. ಅದಕ್ಕೆ ಪ್ರತಿಯಾಗಿ ದೀಕೆ ವಿರುದ್ಧ ಕಂಡಕಂಡಲ್ಲಿ ಕಟಕಿಯಾಡಿದ ತೇಜಸ್ವಿನಿಗೂ ರಾಮಗನರದ ಕಾಂಗ್ರೆಸ್ ಕಾರ್ಯಕರ್ತರಿಗೂ ಮಾರಾಮಾರಿಯೇ ನಡೆದು ಹೋಯಿತು. ತನ್ನನ್ನು ಗೆಲ್ಲಿಸಿದ್ದ ರಾಮನಗರದ ಮಾಜಿ ಶಾಸಕ ಸಿ.ಎಂ. ಲಿಂಗಪ್ಪನನ್ನೇ ವಾಚಾಮಗೋಚರ ಬಯ್ದಾಡಿದ್ದು ಮಾಗಡಿಯ ಮಾಜಿ ಮಂತ್ರಿ ರೇವಣ್ಣನಂಥ ಕಾಂಗ್ರೆಸ್ ನಾಯಕನನ್ನೇ ಬಾಯಿಗೆಬಂದಂತೆ ಹೀಯಾಳಿಸಿದ್ದು, ದೀಕೆ ಸೇರಿದಂತೆ ಕನಕಪುರ ಸಂಸತ್ ಕ್ಷೇತ್ರದ ಬಹುತೇಕ ಕಾಂಗ್ರೆಸ್ ನಾಯಕರೆಲ್ಲ ಈಕೆಯ ವಿರುದ್ಧ ತಿರುಗಿಬಿದ್ದದ್ದು ಬಹುಶಃ ಯಾರೇ ಕಾಂಗ್ರೆಸ್ ಎಂಪಿಯೊಬ್ಬನ ವಿರುದ್ಧ ನಡೆದಿರದ ರಾದ್ಧಾಂತವಾಗಿತ್ತು.

ಈ ಹಂತದಲ್ಲೇ ಆಂಧ್ರದ ಕಾಂಗ್ರೆಸ್ ಎಂಪಿ ಲಗಡಪತಿರಾಜು ಮತ್ತು ತೇಜಸ್ವಿನಿ ಮಧ್ಯೆ ಗೆಳೆತನವೊಂದು ಚಿಗುರಿಕೊಂಡಿದೆ. ಲಗಡಪತಿರಾಜು ಪ್ರತಿಷ್ಠಿತ Anco ಗ್ರೂಪ್ ಆಫ್ ಕಂಪೆನೀಸ್‌ನ ಧಣಿ. ಆಂಧ್ರದ ಮುಖ್ಯಮಂತ್ರಿ ವೈ.ಎಸ್. ರಾಜಶೇಖರರೆಡ್ಡಿಗೆ ಪರಮಾಪ್ತ. ಕರ್ನಾಟಕದಲ್ಲಿ ಉಷ್ಣ ವಿದ್ಯುತ್, ರಸ್ತೆ ಕಾಮಗಾರಿ, ಜಲವಿದ್ಯುತ್ ಮತ್ತು ರಿಯಲ್ ಎಸ್ಟೇಟ್ ದಂಧೆಯಲ್ಲಿ 1200 ಕೋಟಿ ರೂಪಾಯಿಗಳ ವಿವಿಧ ಪ್ರಾಜೆಕ್ಟುಗಳನ್ನಿಟ್ಟುಕೊಂಡೇ ತೇಜಸ್ವಿನಿಯನ್ನು ಛೂಬಿಟ್ಟದ್ದ.

ತೇಜಮ್ಮ ಮುಖ್ಯಮಂತ್ರಿ ಕುಮಾರಣ್ಣನಿಗೆ ಮಸ್ಕಾ ಹೊಡೆದು ಲಗಡಪತಿರಾಜುವಿನ ಒಂದೊಂದೇ ಪ್ರಾಜೆಕ್ಟುಗಳಿಗೆ ಸರ್ಕಾರಿ ಕ್ಲಿಯರೆನ್ಸ್ ಕೊಡಿಸುತ್ತಾ ಬಂದರು. ಲಗಡಪತಿರಾಜು ಕನಿಷ್ಠ ತನ್ನ ಸಾವಿರ ಕೋಟಿಗೆ 10 ಪರ್ಸೆಂಟ್‌ನಂತೆ ಕಮಿಷನ್ ಕೊಟ್ಟರೂ ತೇಜಮ್ಮನಿಗೆ ಅದೊಂದೇ ಬಾಬ್ತಿನಿಂದ 100 ಕೋಟಿ ಬರಬೇಕು. ಜೊತೆಗೆ ಎಚ್‌ಎಸ್‌ಆರ್ ಲೇಔಟನಲ್ಲಿ ಕುಮಾರ್ ಗಿಫ್ಟಾಗಿ ಕೊಟ್ಟ ಭರ್ಜರಿ ಸೈಟು. ಇಷ್ಟಾದಮೇಲೆ ಪತಿ ಶ್ರೀರಮೇಶ್ ಇದ್ದರೆಷ್ಟು ಬಿಟ್ಟರೆಷ್ಟು?

ಅದೇನು ವೈಮನಸ್ಸಿತ್ತೋ ಪತಿ ಶ್ರೀರಮೇಶ್ ಇದ್ದಕ್ಕಿದ್ದಂತೆ ತೇಜಮ್ಮನಿಗೆ ಗುಡ್‌ಬೈ ಹೇಳಿಬಿಟ್ಟರು. ಇದನ್ನೇ ಕಾಯುತ್ತಿದ್ದ ಪದ್ಮನಾಭನಗರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹರಿರೆಡ್ಡಿ ಇದ್ದಕ್ಕಿದ್ದಂತೆ ಮೇಡಂ ಬಲಗೈ ಬಂಟನಾದ. ಜೊತೆಗೆ ನಿಖಿಲ್ ಮಂಜು ಎಂಬ ಸಿನಿಮಾ ಶೂರನೊಬ್ಬ ಸಮಯಕಾದು 'ಮೇಡಂ ನಿಮ್ದೂ ಕಲರ್‌ಫುಲ್ ಲೈಫು. ಸೋನಿಯಾಗಾಂಧಿ, ಮಮತಾ ಬ್ಯಾನರ್ಜಿ, ಮಾಯಾವತಿ ಸಾಲಿಗೆ ಸೇರಬೇಕಾದ ನೀವು ಇವತ್ತಲ್ಲ ನಾಳೆ ಕರ್ನಾಟಕದ ಚೀಫ್ ಮಿನಿಸ್ಟರ್ ಆಗಬೇಕಾದವ್ರು. ನಿಮ್ಮ ಬಗ್ಗೇನೇ ಒಂದು ಪಿಕ್ಚರ್ ತೆಗೆದು ಅದರಲ್ಲಿ ನೀವೇ ಆಕ್ಟ್ ಮಾಡಿದ್ರೆ ಬೊಂಬಾಟಾಗಿರ್‍ತದೆ. ನೀವು ರಾಜ್ಯದ ಮುಖ್ಯಮಂತ್ರಿ ಆಗೋ ಕತೆ ಇಟ್ಟು ಪಿಕ್ಚರ್ ಮಾಡಿಬಿಟ್ರೆ ಹಂಡ್ರೆಡ್ ಡೇಸ್ ಗ್ಯಾರಂಟಿ...' ಎಂದುಬಿಟ್ಟ.

ತಲೆತಿರುಕನ ಮಾತು ತಲೆಹರಟೆಗೆ ತಾನೇ ಸೊತ್ತು? ತೇಜಮ್ಮನ ಸಿನಿಮಾ ಪ್ರಾಜೆಕ್ಟ್ ರೆಡಿಯಾಗಿದ್ದೇ ಹೀಗೆ. ಒಂದೆಡೆ ಗಾಡ್‌ಫಾದರ್ ದೀಕೆ ಮತ್ತು ಸಿ.ಎಂ. ಲಿಂಗಪ್ಪ ರೇವಣ್ಣರ ವೈರಿ. ಮತ್ತೊಂದೆಡೆ ಹೈಕಮಾಂಡ್ ಕೆಂಗಣ್ಣು. ಇನ್ನೊಂದೆಡೆ ಪತಿಯೇ ದೂರ. ಮುಂಬರುವ ಎಲೆಕ್ಷನ್ ಹೊತ್ತಿಗೆ ತನಗೆ ಕನಿಷ್ಠ ಕಾಂಗ್ರೆಸ್ ಟಿಕೆಟ್ಟಾದರೂ ಗ್ಯಾರಂಟಿಯಾಗಬೇಕೆಂದರೆ ತಾನು ಒಕ್ಕಲಿಗರ ಹೆಣ್ಣುಮಗಳು, ದೇವೇಗೌಡರಿಗೆ ಪರ್ಯಾಯ ಗೌಡ್ತಿ, ಮುಂದೊಮ್ಮೆ ಒಕ್ಕಲಿಗರೇ ಮುಖ್ಯಮಂತ್ರಿಯಾಗುವುದಾದರೆ ಅದಕ್ಕೆ ತಾನೇ ಲಾಯಕ್ಕೆಂಬುದನ್ನು ಹೈಕಮಾಂಡಿಗೂ, ರಾಜ್ಯ ಕಾಂಗ್ರೆಸ್ ನಾಯಕರಿಗೂ ಮುಟ್ಟಿಸಬೇಕಲ್ಲ!

ಅದಕ್ಕೆಂದು ತೇಜಮ್ಮನ ತಲೆಗೆ ಹೊಳೆದ ಐಡಿಯಾನೇ ಈ ಸಿನಿಮಾ. ನಿಖಿಲ್ ಮಂಜು ಎಂಬಾತನೇ ಇದರ ಡೈರೆಕ್ಟರ್. ಈ ಪೈಕಿ ರಮೇಶ್ ಅರವಿಂದ್ ಕೂಡ ಒಬ್ಬ ಹೀರೋ ಅಂತೆ. ತೇಜಸ್ವಿನಿ ಎದುರಿಗೆ ಹೀರೋ ಆಗುವಂಥ ದಾರಿದ್ರ್ಯ ಸದ್ಯ ರಮೇಶ್‌ಗಿರಲಿಕ್ಕಿಲ್ಲ, ಹಾಗೊಮ್ಮೆ ರಮೇಶ್ ತೇಜಮ್ಮನ ಜೊತೆ ಡ್ಯುಯೆಟ್ ಹಾಡಿದ್ದೇ ಆದರೆ ಬಹುಶಃ ಅದೇ ಅವರ ಹೀರೋಗಿರಿಯ ಕೊನೆಯ ಚಿತ್ರವಾದರೆ ಅಚ್ಚರಿಯಿಲ್ಲ.

ಅಂದಹಾಗೆ ಸರ್ವಂ ತೇಜಸ್ವಿನಿಮಯಂ ಆದ ಈ ಚಿತ್ರಕ್ಕೆ ಕತೆ, ಚಿತ್ರಕತೆ, ಡ್ಯಾನ್ಸು, ಡೈಲಾಗು, ಪ್ರೊಡ್ಯೂಸರ್, ಆಕ್ಟರ್ ಇತ್ಯಾದಿಗಳ ಸಾಲಿಗೆ ಕೊನೆಗೆ ಪ್ರೇಕ್ಷಕಿ ಎಂಬ ಪದವನ್ನೂ ಸೇರಿಸಬೇಕಾ ಎಂಬುದೇ ಅಸಲಿ ಪ್ರಶ್ನೆ.

ಕತೆ, ಚಿತ್ರಕತೆ, ಇರೋಯಿನ್ನು, ನಿರ್ಮಾಪಕಿ ಮತ್ತು ಪ್ರೇಕ್ಷಕಿ ಎಲ್ಲವೂ ಶ್ರೀಮತಿ ತೇಜಸ್ವಿನಿ ಎಂದು ಶೀರ್ಷಿಕೆಯಿಟ್ಟರೆ ಹೇಗಿರುತ್ತೆ?

-ವರದಿಗಾರ




ನಿರ್ದೇಶಕ ನಿಖಿಲ್

## ಮೇಡಂ ಜೊ… ಮುತ್ತಪ್ಪಣ್ಣನ ಮನೆ… ಹೋಗಿದ್ದೆ

### ತೇಜಸ್ವಿನಿಯ ನಿರ್ದೇಶಕ ನಿಖಿಲ್ ಮಂಜು ಸಂದರ್ಶನ

ತೇಜಸ್ವಿನಿ ಚಿತ್ರದ ಡೈರೆಕ್ಟರ್ ನಿಖಿಲ್ ಮಂಜುವಿನದೂ ವಿಚಿತ್ರ ಕತೆಯೆ. ಈತ ಸದ್ಯ ತೇಜಸ್ವಿನಿಗೆ ಪರಮಾಪ್ತೆಯಾಗಿರುವ ಕಿತ್ತಿಗುಪ್ಪೆಯ ಕಾಂಗ್ರೆಸ್ ಲೀಡರ್ ಕಾತ್ಯಾಯಿನಿ ಎಂಬಾಕೆಯ ತಮ್ಮ. 2006 ರಲ್ಲಿ ತಾನು ಅನನ್ಯ ಕಾಸರವಳ್ಳಿಯನ್ನು ಹಾಕಿಕೊಂಡು 'ದೇಸಿ' ಎಂಬ ಆರ್ಟ್ ಮೂವಿ ತೆಗೆದೆ. ಅದು ಮುಂಬಯಿಯಲ್ಲಿ ನಡೆದ ಏಷ್ಯನ್ ಫಿಲ್ಮ್ ಫೆಸ್ಟಿವಲ್‌ಗೆ ಸೆಲೆಕ್ಟ್ ಆಗಿತ್ತೆಂಬುದು ಈತನ ಸ್ವಯಂವಿವರಣೆ. ತಾನು ಚೈತ್ರದ ಚಿಗುರು, ಶೃತಿ ನಟಿಸಿದ್ದ ಊರ್ವಶಿ ಚಿತ್ರದಲ್ಲೂ ಆಕ್ಟ್ ಮಾಡಿದ್ದೆ ಎನ್ನುತ್ತಾನೆ. ಚಂದನದಲ್ಲಿ ಬಂದ ಸವಿಗಾನ ಧಾರಾವಾಹಿಯಲ್ಲಿ ನಟಿಸಿದ್ದೆ, ನಂತರ ನಾನೇ ಕನಕ ಎಂಬ ಧಾರಾವಾಹಿ ತೆಗೆದೆ ಎನ್ನುತ್ತಾನೆ.

ಅದ್ಹೇಗೆ ತೇಜಸ್ವಿನಿ ಮೇಲೆ ಅಭಿಮಾನ ಬಂತು? ಎಂಬ ಪ್ರಶ್ನೆಗೆ ತನ್ನದೇ ಶೈಲಿಯ ಉತ್ತರ ಕೊಡುತ್ತಾನೆ ನಿಖಿಲ್ ಮಂಜು.



"ಮೇಡಮ್ಮನ್ನ ನಾನು ಮುಖಾಮುಖಿ ಬರ್‍ತಿತ್ತಲ್ಲ; ಆ ಕಾಲದಿಂದಲೂ ಅಬ್ಸರ್ವ್ ಮಾಡುತ್ತಲೇ ಇದ್ದೆ. ಇಲ್ಲಿಗೆ ಒಂದೂವರೆ ವರ್ಷದ ಹಿಂದೆ ಅಕ್ಕ ಕಾತ್ಯಾಯಿನಿ ಜೊತೆ ಹೋಗಿ ಮಾತಾಡಿಸಿದೆ. ಒಂದೇ ನೋಟಕ್ಕೆ ಮೇಡಂ ಒಳ್ಳೆಯವ್ರು ಅನ್ನಿಸ್ತು. ಹೇಗೂ ನಂದು ಸಿನಿಮಾ ಕಸುಬಲ್ವೆ? ಅವರದೇ ಕತೆ ಇಟ್ಕೊಂಡು ಸಿನಿಮಾ ಮಾಡಿದ್ರೆ ಬೊಂಬಾಟಾಗಿರ್‍ತದೆ ಎಂದು ಮೇಡಂಗೆ ಹೇಳ್ದೆ. ಒಂದೇ ಮಾತಿಗೆ ಓಕೆ ಎಂದುಬಿಟ್ರು. ಅವತ್ತಿನಿಂದಲೇ ಸ್ಕ್ರಿಪ್ಟ್ ಮಾಡೋಕ್ಕೆ ಶುರು ಮಾಡ್ದೆ. ಸ್ಕ್ರಿಪ್ಟ್ ಓಕೆ ಆಯ್ತು. ಇದರಲ್ಲಿ ತೇಜಸ್ವಿನಿಯವರೇ ಹೀರೋಯಿನ್ನು. ಹೋರಾಟ ಮಾಡ್ತಾ ಮಾಡ… ಕರ್ನಾಟಕದ ಚೀಫ್ ಮಿನಿಸ್ಟರ್ ಆಗ್ತಾರೆ. ಅದಕ್ಕೂ ಮೊದಲು ಪತ್ರಕರ್ತೆ ಆಗಿರ್‍ತಾರೆ. ಸಿನಿಮಾದಲ್ಲಿ ಲಕ್ಷ್ಮಿ ಮತ್ತು ಅನಂತ್‌ನಾಗ್ ಕೂ… ಆಕ್ಟ್ ಮಾಡ್ತಾರೆ. ತಮಿಳಿನ ಹೆಸರಾಂತ ಪೋ… ನಟ ನಾಜೆರ್ ಮತ್ತು ಹಿಂದಿಯಿಂದ ಟಿನೂ ಆನಂದ್ ಕೂಡ ಆಕ್ಟ್ ಮಾಡ್ತಾರೆ. ಮೇ ಹೊತ್ತಿಗೆ ಸಿನಿಮಾ ರಿಲೀಜ್ ಆಗ್ತದೆ. ಸಿನಿಮಾ… ತೇಜ ಅಥವಾ ತೇಜಸ್ವಿನಿ ಅಂತಾನೇ ಹೆಸರಿಡ… ಇದೀವಿ" ಎನ್ನುತ್ತಾನೆ ನಿಖಿಲ್ ಮಂಜು.

ಈ ಚಿತ್ರದಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿಯದು ನೆಗೆಟೀವ್ ರೋಲಾ ಅಥವಾ ಪಾಸಿಟೀವಾ? ಎಂಬ ಪ್ರಶ್ನೆಗೆ 'ಕುಮಾರಣ್ಣಂದು ಪಾಸಿಟೀವ್ ಅಂದ್ರೆ ಹಿತೈಷಿ… ಪಾತ್ರ' ಎನ್ನುತ್ತಾನೆ. ಹಾಗಾದ್ರೆ ದೀಕೇದು ವಿಲ… ರೋಲಾಗಿರಲೇಬೇಕು?

'ಹೌದು, ಈ ಚಿತ್ರದಲ್ಲಿ ದೀಕೆ, ಸಿ.ಎಂ. ಲಿಂಗಪ್ಪ, ರೇವಣ್ಣರ ಥರ ಇರೋ ಸಿಮಿಲರ್ ಪಾತ್ರಗಳಿವೆ'. ರಾಮನಗರದಲ್ಲಿ ಲಿಂಗಪ್ಪನ ಕಡೆಯವ್ರು ತೇಜಸ್ವಿನಿಯವರ ಮೇಲೆ ಹಲ್ಲೆ ನಡೆಸಿದ ಘಟನೆಯೂ ಇದೆಯಾ? ಎಂದರೆ 'ಮತ್ತೆ ಅದೇ ಮೇನ್ ಸ್ಟೋರಿ ಅಲ್ವಾ?' ಎನ್ನುತ್ತಾನೆ. ಮುತ್ತಪ್ಪ ರೈ ಫೈನಾನ್ಸ್ ಮಾಡ್ತಾರ… ಹೌದಾ ಎಂಬ ಪ್ರಶ್ನೆಗೆ "ಮುತ್ತಪ್ಪಣ್ಣ ಹಿಂದಿನಿಂದಲೂ ಮೇಡಮ್ಮನ್ನ ಸಪೋರ್ಟ್ ಮಾಡ್ತಾನೇ ಇದ್ದಾರೆ. ನಾನೂ ಕೂಡ ಒಂದೆರಡ… ಬಾರಿ ಮೇಡಂ ಜೊತೆ ಹೋಗಿ ಮುತ್ತಪ್ಪ ರೈ… ಅನ್ನು ಭೇಟಿ ಮಾಡಿದ್ದೆ. ತುಂಬಾನೇ ಪ್ರೋತ್ಸಾ… ಕೊಟ್ರು. ಬಹುಶಃ ಅವರ ಕಡೆಯವರೇ ಈ ಸಿನಿಮಾಕ್ಕೆ ದುಡ್ಡು ಹಾಕಿದ್ದಾರಾ ಅಥವಾ ಬೇರ… ಯಾರಾದರೂ ಫೈನಾನ್ಸ್ ಮಾಡ್ತಿದ್ದಾರಾ ಎಂಬ… ಬಗ್ಗೆ ಮೇಡಮ್ ಅವತ್ತಿನಿಂದಲೂ ಸೀಕ್ರೆಟ್ ಮೇಂಟೇನ್ ಮಾಡ್ತಾನೇ ಇದ್ದಾರೆ. ಯಾರು ದುಡ್ಡು ಹಾಕಲಿ ಬಿಡಲಿ ಮೇಡಂ ಖಂಡಿತ ಆ… ಮಾಡೇ ಮಾಡ್ತಾರೇ' ಎನ್ನುತ್ತಾನೆ ಡೈರೆಕ್ಟರ್ ನಿಖಿಲ್ ಮಂಜು.

ಬಿಎಸ್‌ಪಿಯಿಂದ ಅವರ ಮಾಜಿ ಅಧ್ಯಕ್ಷ ಬಿ. ಗೋಪಾಲ್‌ರನ್ನು ಮಾಯಾವತಿ ಉಚ್ಚಾಟಿಸಿದ್ದಕ್ಕೂ, ಎಡಗೈ-ಬಲಗೈ ಕಚ್ಚಾಟಕ್ಕೂ ಬಿಲ್‌ಕುಲ್ ಸಂಬಂಧವಿಲ್ಲವಾದರೂ [illegible] ಹುಟ್ಟುಹಾಕಲೇ [illegible] ಪ್ರಶ್ನೆಗಳು ತಲೆ ಎತ್ತುತ್ತಲೇ ಇವೆ.

ಹಾಗೊಮ್ಮೆ ಗೋಪಾಲ್ ಉಚ್ಚಾಟನೆ ಬಲಗೈಗೆ ಅಂದರೆ ಹೊಲೆಯರಿಗೆ ಆದ ಅವಮಾನವೇ ಆಗಿದ್ದರೆ ಇಷ್ಟು ವರ್ಷಗಳ ಕಾಲ ಅವರನ್ನು ಬಿಎಸ್‌ಪಿಯ ರಾಜ್ಯಾಧ್ಯಕ್ಷರನ್ನಾಗಿ ಇರಿಸಿದ್ದಾದರೂ ಏಕೆ?

ಹೊಸ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಎಡಗೈ ಅಂದರೆ ಮಾದಿಗರು ಅಂದ ಮಾತ್ರಕ್ಕೆ ಬಿಎಸ್‌ಪಿಯಲ್ಲಿ ಬಲಗೈ ದಲಿತರ ಕತೆ ಮುಗಿದಂತಾಯಿತೆ? ಬಿಎಸ್‌ಪಿಯ ಇತರೇ ರಾಜ್ಯನಾಯಕರಾದ ಎನ್.ಮಹೇಶ್,

ಮಾದಾರ ಚನ್ನಯ್ಯ ಸ್ವಾಮೀಜಿಗೆ ಮುಖ್ಯಮಂತ್ರಿ ಕುಮಾರಸ್ವಾಮಿ ಸೇರಿದಂತೆ ದೇವೇಗೌಡರಾದಿಯಾಗಿ ವಾಪಾ, ಹೊಡದು ಕೊಂಡೇ ಬಂದದ್ದು ಒಂದೆಡೆಯಾದರೆ ಮತ್ತೊಂದೆಡೆ ಮಾದಿಗ ಜನಾಂಗದ ಹಿರಿಯ ಐಎಎಸ್ ಗೋನಾಳ ಭೀಮಪ್ಪನವರನ್ನು ಲೋಕಸೇವಾ ಆಯೋಗದ ಅಧ್ಯಕ್ಷರನ್ನಾಗಿಸಿದರು. ಬಾಬು ರಾವ್ ಮುಂಡಬಯಂಥ ಮತ್ತೊಬ್ಬ ಐಎಎಸ್‌ಗೆ ಫಲವತ್ತಾದ ಸಮಾಜ ಕಲ್ಯಾಣ ಇಲಾಖೆಯ ಕಮಿಷನರ್‌ಗಿರಿ,



# ಎಡಗೈ ಬಲಗೈ ಜಿದ್ದಾಜಿದ್ದಿ

ಗೋಪಿನಾಥ್, ಶ್ರೀಧರ ಕಲಿವೀರ, ಜಿಗಣಿ ಶಂಕರ್ ಮುಂತಾದವರೆಲ್ಲ ಬಲಗೈ ದಲಿತರಾದಾಗ್ಯೂ ಈ ಥರದ ಎಡಗೈ-ಬಲಗೈ ಬಿರುಕಿಗೆ ಕಾರಣವೇನು? ಹಾಗೆಂದ ಮಾತ್ರಕ್ಕೆ ಗೋಪಾಲ್ ಬಿಎಸ್‌ಪಿ ತೊರೆದು ಕಾಂಗ್ರೆಸ್ ನಾಯಕ ಖರ್ಗೆ ಜೊತೆ ಕೈ ಜೋಡಿಸುತ್ತಾರ? ಅಥವಾ ಬಜೆಪಿಯ ಎಮ್ಮೆಲ್ಸಿ ಡಿ.ಎಸ್. ವೀರಯ್ಯ ಗೋಪಾಲ್ ಮತ್ತವರ ಬೆಂಬಲಿಗರನ್ನು ಬಜೆಪಿಗೆ ಸೆಳೆಯುತ್ತಾರ?



ಮಾರಸಂದ್ರ ಮುನಿಯಪ್ಪ

ಹೀಗೆ ಶುರುವಾಗುವ ಬಿಎಸ್‌ಪಿ ಸಂಬಂಧಿ ಎಡಗೈ ಮತ್ತು ಬಲಗೈ ಜಿದ್ದಾಜಿದ್ದಿಗೆ ಇಂಥಾದ್ದೆ ಕಾರಣ ಬೇಕೆಂದಿಲ್ಲ. ಒತ್ತಾಸೆ ಎಡಗೈ ಮತ್ತು ಬಲಗೈ ವೈಷಮ್ಯ ಕನಿಷ್ಟ ಈ ಕಾರಣಕ್ಕಾದರೂ ಉಲ್ಬಣಿಸುವಂತೆ ಮಾಡುವುದೇ ಪ್ರತಿಯೊಬ್ಬರ ಹುನ್ನಾರ. ಇದಕ್ಕೆ

## ರಾ. ಸೋಮನಾಥ್

ಬಿಎಸ್‌ಪಿಯ ಉಚ್ಚಾಟಿತ ನಾಯಕ ಗೋಪಾಲ್ ಬಲಿಯಾಗುತ್ತಾರಾ ಎಂಬುದಷ್ಟೇ ಪ್ರಶ್ನೆ.

ಅಷ್ಟಕ್ಕೂ ಗೋಪಾಲ್ ಕಳೆದ ಏಳು ವರ್ಷಗಳಿಂದ ಬಹುಜನ ಸಮಾಜ ಪಕ್ಷದ ಅಧ್ಯಕ್ಷಗಾದಿಯಲ್ಲಿದ್ದೇ ಚಲಾವಣೆಯಲ್ಲಿದ್ದವರು. ಸ್ವಭಾವದಲ್ಲಿ ಮುಂಗೋಪಿ. ಜನಸಾಮಾನ್ಯರ ಜೊತೆ ಹೆಚ್ಚು ಬೆರೆತವರಲ್ಲ. ಒಂದು ತರನಾದ ಉಡಾಫೆ ಇಟ್ಟುಕೊಂಡೇ ರಾಜ್ಯ ಬಿಎಸ್‌ಪಿಯ ಸಾರಥ್ಯ ವಹಿಸಿದ ಗೋಪಾಲ್ ರಿಂದಾಗಿಯೇ ಎ.ಕೆ.ಸುಬ್ಬಯ್ಯ ಬಿಎಸ್‌ಪಿ ಬಿಟ್ಟರು ಎನ್ನುವವರಿದ್ದಾರೆ. ಗೋಪಾಲ್ ಹೇಳಿಕೇಳಿ ದಲಿತರಲ್ಲಿ ಬಲಗೈ ಪಂಗಡದವರು. ಬಲಗೈ ಅರ್ಥಾತ್ ಹೊಲೆಯರೆಂದರೆ ಕರ್ನಾಟಕದ ಮಟ್ಟಿಗೆ ಅಂಬೇಡ್ಕರ್‌ವಾದಿಗಳು, ವಿಶೇಷವಾಗಿ ಬೌದ್ಧ ಮತಾವಲಂಬಿಗಳಾಗಿದ್ದರಿಂದಲೇ ಬಹುಜನ ಸಮಾಜ ಪಕ್ಷದ ಮೇಲೆ ಬಲಗೈ ದಲಿತರು [illegible] ಸಾಧಿಸಿಕೊಂಡೇ ಬಂದರು. ಸಹಜವಾಗೇ ಇದು [illegible]




ಗೋಪಾಲ್

ಈ ಕಾರಣಕ್ಕೆ, ಬಲಗೈ ದಲಿತ ಐಪಿಎಸ್ ಮತ್ತು [illegible] ಅಧಿಕಾರಿಗಳನ್ನು ಪೋಷಿಸಿಕೊಂಡೇ ಬಂದ [illegible] ಎಡಗೈ ಮಾದಿಗರೆಂದರೆ ಅಲರ್ಜಿ. ಇದನ್ನು [illegible]

ಇನ್ನೊಬ್ಬ ಐಎಎಸ್ ಅನಿಲ್ ಕುಮಾರ್‌ಗೆ ಆಹಾರ ಮತ್ತು ನಾಗರಿಕ ಸರಬರಾಜು ಖಾತೆಯ ಉಸ್ತುವಾರಿ ಸಿಕ್ಕು ಆಲ್ಕೋಡ್ ಹನುಮಂತಪ್ಪನಂಥವರಿಗೆ ಕ್ರೀಡಾ ಇಲಾಖೆ ಸಿಕ್ಕ ಮೇಲೆ ಇಡೀ ಮಾದಿಗರೆಲ್ಲ ಜೆಡಿಎಸ್ ಮತ್ತು ದೇವೇಗೌಡರ ಪರ ಎಂಬಂತಾಗಿ ಹೋಯಿತು.

ಇದರಿಂದ ಕಾಂಗ್ರೆಸ್ಸಾಗಲಿ ಖರ್ಗೆಯಾಗಲಿ ಎಚ್ಚೆತ್ತುಕೊಳ್ಳಲಿಲ್ಲವಾದರೂ ಬಹುಜನ ಸಮಾಜ ಪಕ್ಷದ ನಾಯಕಿ ಮಾಯಾವತಿಗೆ ಬಿಸಿ ಮುಟ್ಟಿತ್ತು. ಅಸಲಿಗೆ ಎರಡು ವರ್ಷದ ಹಿಂದೆಯೇ ಬಿಎಸ್‌ಪಿ ಅಧ್ಯಕ್ಷ ಗೋಪಾಲ್‌ರನ್ನು ಇಳಿಸಿ ಆ ಜಾಗಕ್ಕೆ ಮಾದಿಗರ ಲೀಡರ್ ಒಬ್ಬನನ್ನು ತರುವುದು ಮಾಯಾವತಿ ಯೋಜನೆಯಾಗಿತ್ತು. ಈ ನಿಟ್ಟಿನಲ್ಲಿ ಗೋಪಾಲ್ ಏನೇನೂ ಮಾಡದೇ ಹೋದಾಗ ಸಹಜವಾಗೇ ಮಾಯಾವತಿ ಗರಮ್ಮಾಗಿದ್ದಾರೆ.

ಇಲ್ಲಿ ಮಾಯಾವತಿಯ ಥಿಯರಿಯೇ ಬೇರೆಯಿದೆ. ಅದೆಂದರೆ ಕಾನ್ಸಿರಾಮ್ ಹೇಳಿದಂತೆ ಎಡಗೈ ಮತ್ತು ಬಲಗೈ ದಲಿತರನ್ನು ಒಟ್ಟೊಟ್ಟಿಗೆ ಕೊಂಡೊಯ್ಯುವುದೇ ನಿಜವಾದ ಅಂಬೇಡ್ಕರ್‌ವಾದ. ಕರ್ನಾಟಕದಲ್ಲಿ ವಿಶೇಷವಾಗಿ ಮಾದಿಗರು ಕಾಂಗ್ರೆಸ್ ಮತ್ತು ಬಜೆಪಿಯಲ್ಲಿರುವುದಕ್ಕೆ ಮುಖ್ಯಕಾರಣ ಅವರು ಅಂಬೇಡ್ಕರ್‌ವಾದಿಗಳಾಗದೇ ಇರುವುದು. ಮಾದಿಗರನ್ನು ಅಂಬೇಡ್ಕರ್‌ವಾದಿಗಳನ್ನಾಗಿ ಮಾಡಬೇಕೆಂದರೆ ಅವರನ್ನು ಬಿಎಸ್‌ಪಿಯತ್ತ ಸೆಳೆಯಲೇಬೇಕು. ಮಾದಿಗರು ಬಿಎಸ್‌ಪಿಯತ್ತ ಬಾರದೇ ಬಿಎಸ್‌ಪಿಯ ಮೂಲ ಮತಬ್ಯಾಂಕ್ ಥಿಯರಿ ಪೂರ್ಣಗೊಳ್ಳುವುದಿಲ್ಲ.



ಮಲ್ಲಿಕಾರ್ಜುನ ಖರ್ಗೆ

ಇಂಥ ಲೆಕ್ಕ ಹಾಕಿಕೊಂಡೇ ಇದ್ದ ಮಾಯಾವತಿಗೆ ಯಾವತ್ತು ಮಾದಿಗರೆಲ್ಲ ದೇವೇಗೌಡರತ್ತ ವಾಲುತ್ತಿದ್ದ ಸುದ್ದಿ ಬಂತೋ ತಲೆಬಿಸಿ ಹೆಚ್ಚಾಗಿದೆ. ಆ ನಿಟ್ಟಿನಲ್ಲಿ ಅಧ್ಯಕ್ಷ ಗೋಪಾಲ್ ನಿಷ್ಕ್ರೀಯರಾಗಿದ್ದು ಇನ್ನೂ ಆತಂಕ ಹುಟ್ಟಿಸಿದೆ. ದೇವೇಗೌಡರತ್ತ ವಾಲುತ್ತಿದ್ದ ಮಾದಿಗರನ್ನು ತಡೆಗಟ್ಟಲು ಇಲ್ಲಿಗೆ ತಿಂಗಳ ಹಿಂದೆಯೇ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿಯವರನ್ನು ಕಂಡು ಮಾತಾಡಿದ ಮಾಯಾವತಿ ಆಪ್ತೊತ್ತಿಗಾಗಲೇ ಎಡಗೈ ನಾಯಕ ಮಾರಸಂದ್ರ ಮುನಿಯಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಲು ನಿರ್ಧರಿಸಿದ್ದಾಗಿತ್ತು. ಅದಕ್ಕೆಂದೇ ಡಿಸೆಂಬರ್ 23 ರಂದು ಬೆಂಗಳೂರಿನಲ್ಲಿ ದೊಡ್ಡ ರ್‍ಯಾಲಿಯನ್ನು ಸಂಘಟಿಸಲಾಗಿತ್ತು. ಮಾಯಾವತಿಯ ಭಾಷಣವನ್ನು ಭಾಷಾಂತರಿಸಲು ಇಂತ ಬಿಎಸ್‌ಪಿ ರಾಜ್ಯಾಧ್ಯಕ್ಷ ಗೋಪಾಲ್ ತಮ್ಮ ಬಾಯಲ್ಲೇ ಮಾರಸಂದ್ರ ಮುನಿಯಪ್ಪ ಹೊಸ ಅಧ್ಯಕ್ಷರಾಗಿ ನೇಮಕಗೊಂಡಿದ್ದನ್ನು ಸಾರಿ ಹೇಳಬೇಕಾಯಿತು. ತನ್ನ ಅಧ್ಯಕ್ಷ ಪದವಿ

ಕಿತ್ತ ಮಾಯಾವತಿ ಭಾಷಣವನ್ನು ತಾನೇ ಕನ್ನಡಕ್ಕೆ ಭಾಷಾಂತರಿಸಿದ ಗೋಪಾಲ್ ವೇದಿಕೆಯಲ್ಲೇ ಥಂಡಾ ಹೊಡೆದದ್ದು ಒಂದೆಡೆಯಾದರೆ ತನ್ನ ಕಣ್ಣೆದುರಲ್ಲೇ ಮಾರಸಂದ್ರ ಮುನಿಯಪ್ಪ ಅಧ್ಯಕ್ಷರಾದದ್ದು ಅರಗಿಸಿಕೊಳ್ಳಲಾಗಲಿಲ್ಲ. ಸಭೆಯ ನಂತರ ಮಾಯಾವತಿ ಲೀಲಾ ಪ್ಯಾಲೇಸ್ ಹೊಟೇಲಿನಲ್ಲಿ ಸಭೆಕರೆದು ಪಿ.ಜಿ.ಆರ್. ಸಿಂಧ್ಯ, ವೀರ್‌ಸಿಂಗ್, ಗೋಪಾಲ್ ಮತ್ತು ಮುನಿಯಪ್ಪ ಸೇರಿದಂತೆ ನಾಲ್ವರ ಹೈಪವರ್ ಕಮಿಟಿ ರಚಿಸಿದ್ದರು.

ಹಾಗೇ ನೋಡಿದರೆ ಗೋಪಾಲ್‌ರನ್ನು ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯರನ್ನಾಗಿ ಮಾಡಲಾಗಿತ್ತು. ಕರ್ನಾಟಕದಲ್ಲಿ ಮುಂದಿನ ಚುನಾವಣೆಗೆ ಅಭ್ಯರ್ಥಿಗಳನ್ನು ಗುರುತಿಸುವ ಅಧಿಕಾರವೂ ಇತ್ತು. ಸತತ ಏಳು ವರ್ಷಗಳ ಕಾಲ ತಾನು ಅಧ್ಯಕ್ಷನಾಗಿದ್ದನ್ನು ಆತನಕ ಮಾಯಾವತಿ ತನಗೆ ಕೊಟ್ಟ ಸಹಕಾರವನ್ನು ಮರೆತೇಬಿಟ್ಟ ಗೋಪಾಲ್ ಲೀಲಾಪ್ಯಾಲೇಸ್ ಸಭೆಯ ನಂತರವೂ ಹತಾಶರಾಗೇ ಇದ್ದರು. ಇದಾಗಿ ಎರಡನೇ ದಿನಕ್ಕೆ ಸಿಂಧ್ಯ ಮುನಿಯಪ್ಪ, ಮಹೇಶ್ ಮುಂತಾದವರೆಲ್ಲ ಗೋಪಾಲ್ ಮನೆಗೆ ಹೋಗಿ ಮನವೊಲಿಸಿದ್ದಾರೆ. 10ರಂದು ಕಚೇರಿಗೆ ಬಂದು ಹೊಸ ಅಧ್ಯಕ್ಷರಿಗೆ ಬಾವುಟ ಹಸ್ತಾಂತರಿಸುವುದಕ್ಕೂ ಒಪ್ಪಿಸಿದ್ದಾರೆ.

ಆದರೆ ಗೋಪಾಲ್ ಜನವರಿ 11 ರಂದು ಇದ್ದಕ್ಕಿದ್ದಂತೆ ಮಾಯಾವತಿಯವರಿಗೆ ಫೋನ್ ಮಾಡಿ 'ನೀವು ಈ ರೀತಿ ಮಾಡಬಾರದಿತ್ತು. ನನಗೊಂದು ಮಾತು ಕೇಳಬೇಕಾಗಿತ್ತು. ನನಗೆ ಇನ್ನೂ ದೊಡ್ಡ ಸ್ಥಾನಮಾನ ಕೊಡಬೇಕಾಗಿತ್ತು' ಎಂದು ಹೇಳಿದ್ದಾರೆ ಅಷ್ಟೇ. ಮಾಯಾವತಿ ಸಿಟ್ಟು ನೆತ್ತಿಗೇರಿದೆ. ತಕ್ಷಣವೇ ರಾಜ್ಯದ ಉಸ್ತುವಾರಿ ಹೊತ್ತ ವೀರ್‌ಸಿಂಗ್‌ಗೆ ಫೋನ್ ಮಾಡಿ 'ಉಸ್ಕೋ ನಿಕಾಲ್‌ದೋ' ಎಂದಿದ್ದಾರೆ. ಅದಾದ ಮರುದಿನವೇ ವೀರ್‌ಸಿಂಗ್ ಗೋಪಾಲ್ ಉಚ್ಚಾಟನೆಯ ಹೇಳಿಕೆ ಕೊಟ್ಟಿದ್ದಾರೆ.

ಇದಿಷ್ಟೂ ತೆರೆಮರೆಯ ಹಕೀಕತ್ತಾದರೆ ಇದನ್ನೇ ಬಂಡವಾಳ ಮಾಡಿಕೊಳ್ಳಲು ಖರ್ಗೆ ಬಾಲಬಡುಕರ ಒಂದು ಗುಂಪು ಸಕ್ರಿಯಗೊಂಡರೆ, ಬಜೆಪಿಯ ದಲಿತ ಎಮ್ಮೆಲ್ಸಿ ವೀರಯ್ಯ ಗೋಪಾಲ್‌ರನ್ನು ಖಂಡಿತ ಬಜೆಪಿಗೆ ಕರೆತಂದೆ ತೀರ್ತೀನಿ ಎಂದು ಉಡಾಫೆಗಿಳಿದುಬಿಟ್ಟಿದ್ದ. ಗೋಪಾಲ್ ಮುಂದಿಟ್ಟುಕೊಂಡು ಬಲಗೈ ದಲಿತರನ್ನು ಕಾಂಗ್ರೆಸ್ಸಿನತ್ತ ಸೆಳೆಯುವುದು ಐಎಎಸ್ [illegible] ಲೋಕಸೇವಾ ಆಯೋಗದ ಸದಸ್ಯ ದಾಸಯ್ಯರ ಹುನ್ನಾರವಾಗಿತ್ತು. [illegible] ಎಡಗೈ ಮತ್ತು ಬಲಗೈ ಎಂದು ಭೇದ ಹುಟ್ಟಿಸಿ [illegible]





## ಜಾತಿ ಸಮೀಕರಣವೆಂಬ ಜಾಲ

ಪ್ರಜಾಪ್ರಭುತ್ವ, ಜಾತ್ಯತೀತತೆ ಎಂದು ಯಾರು ಏನೇ ಆದರ್ಶದ ಮಾತಾಡಿದರೂ ಇಂಡಿಯಾದಲ್ಲಿ ಚುನಾವಣೆ ಲೆಕ್ಕಾಚಾರಗಳು ನಡೆಯುವುದೇ ಜಾತಿ ಸಮೀಕರಣದ ಆಧಾರದಲ್ಲಿ, ಕರ್ನಾಟಕವೂ ಇದಕ್ಕೆ ಹೊರತಲ್ಲ.

Social Engineering ಎಂಬ ಹೆಸರಿನ ಈ ಕಸರತ್ತನ್ನು ಉತ್ತರ ಭಾರತದಲ್ಲಿ ಮಾಯಾವತಿ ಪರಿಚಯಿಸಿದರೂ ಕರ್ನಾಟಕದಲ್ಲಿ ಆ ಕೆಲಸ ಪ್ರಾರಂಭಿಸಿದ್ದು ದೇವೇಗೌಡ.

2004 ರ ಚುನಾವಣೆಯಲ್ಲಿ ಉತ್ತರ ಕರ್ನಾಟಕದ ಲಿಂಗಾಯತರು ಬಜೆಪಿಯತ್ತ ತಿರುಗಿದ್ದು ಗೊತ್ತಾದ ನಂತರ ಗೌಡರು ಚುರುಕಾಗಿದ್ದರು. ಒಂದು ಕಡೆ ಒಕ್ಕಲಿಗ ಓಟುಗಳನ್ನು ಬಿಗಿ ಮಾಡಿಕೊಳ್ಳುತ್ತಲೇ ಅಹಿಂದ ಸಮುದಾಯವನ್ನು ತಮ್ಮತ್ತ ಸೆಳೆದುಕೊಳ್ಳುವ ಕಸರತ್ತು ಶುರು ಮಾಡಿದರು. ಇದರ ನಡುವೆಯೇ ಸಿದ್ದರಾಮಯ್ಯ ಪಕ್ಷ ಬಿಟ್ಟು ಹೋದಾಗ ಕುರುಬರನ್ನು ಏಕಾಂಗಿಯಾಗಿಸಲು ಅಹಿಂದವನ್ನೇ ಒಡೆದು ನಾಯಕರು, ಉಪ್ಪಾರರು, ಗಾಣಿಗರು, ಗಂಗಾಮತಸ್ಥರು ಹೀಗೆ ದೊಡ್ಡವು ಚಿಕ್ಕವೆಂಬ ಭೇದ ತೋರದೆ ಎಲ್ಲರಿಗೂ ಗಾಳ ಹಾಕತೊಡಗಿದರು. ಈ ಪೈಕಿ ಗೌಡರು ಕಣ್ಣಿಟ್ಟ ಅತೀ ದೊಡ್ಡ ಸಮುದಾಯವೇ ಮಾದಿಗರದ್ದು. ರಾಜಕೀಯವಾಗಿ ಇನ್ನು ಖರ್ಚಾಗಿರದ ಸಂಘಟಿತ ಸಾಮಾಜಿಕ ಬಂಡವಾಳ ಹೊಂದಿರುವ ಈ ಸಮುದಾಯದ ಮೇಲೆ ಬರೀ ಗೌಡರದ್ದಲ್ಲ, ಕಾಂಗ್ರೆಸ್ ಹಾಗೂ ಬಿಎಸ್‌ಪಿಗಳದ್ದೂ ನಿಗಾ ಇತ್ತು.


ಕಾಂಗ್ರೆಸ್‌ನವರು ಬಹಳ ಹಿಂದಯೇ ಸಾಹಿತಿ ಎಲ್. ಹನುಮಂತಯ್ಯನವರನ್ನು ಎಂಎಲ್‌ಸಿ ಮಾಡಿದರೆ ದೇವೇಗೌಡ ಗೋನಾಳ್ ಭೀಮಪ್ಪನವರನ್ನು KPSC ಚೇರ್ಮನ್‌ನನ್ನಾಗಿಸಿದರು. ಈಗ ಬಿಎಸ್‌ಪಿ ಸರದಿ. ಮಾಯಾವತಿ ಈ ವಿಚಾರದಲ್ಲಿ ನಿಷ್ಕ್ರಿಯರಾಗಿ ಉಳಿಯಬಾರದೆಂದು ಮಾದಿಗ ಸಮುದಾಯದ ಮಾರಸಂದ್ರ ಮುನಿಯಪ್ಪನವರನ್ನು ರಾಜ್ಯ ಬಿಎಸ್‌ಪಿಗೆ ಅಧ್ಯಕ್ಷರನ್ನಾಗಿಸಿದ್ದಾರೆ. ಅದೇ ವೇಳೆಗೆ ಲಿಂಗಾಯತ, ಬ್ರಾಹ್ಮಣ ಮತ್ತಿತರ ಮೇಲುಜಾತಿಯವರನ್ನು ಸೇರಿಸಿಕೊಂಡ ಬಿಎಸ್‌ಪಿಯವರು ಅವರನ್ನು ಪದಾಧಿಕಾರಿಗಳನ್ನಾಗಿ ಬಿಂಬಿಸುತ್ತಿದ್ದಾರೆ. ಈ ಬೆಳವಣಿಗೆಗಳಿಂದ ಗೌಡರಿಗಾಗಲಿ ಅಥವಾ ಬಿಎಸ್‌ಪಿಗಾಗಲಿ ಮುಂದಿನ ಎಲೆಕ್ಷನ್‌ನಲ್ಲಿ ಶಾಸಕರ ಸಂಖ್ಯೆ ಹೆಚ್ಚಾಗದಿರಬಹುದು. ಆದರೆ ಬಲಿಷ್ಠ ಎದುರಾಳಿಯನ್ನು ಕನಿಷ್ಠ ಸೋಲಿಸಬಲ್ಲ ಸೂತ್ರವನ್ನಾದರೂ ಈ ಜಾತಿ ಸಮೀಕರಣ ನೀಡುತ್ತದೆ.

ಈ ಬಾರಿಯ ಎಲೆಕ್ಷನ್‌ನಲ್ಲಂತೂ 60 ಲಕ್ಷದಷ್ಟಿರುವ, ಈಗ ಎಚ್ಚೆತ್ತು ಸಂಘಟಿತರಾಗುತ್ತಿರುವ ಮಾದಿಗ ಸಮುದಾಯ ಕನಿಷ್ಠ 40 ಕ್ಷೇತ್ರಗಳಲ್ಲಿ ಖಂಡಿತ ನಿರ್ಣಾಯಕ ಪಾತ್ರ ವಹಿಸಲಿದೆ. ಅಂತಿಮವಾಗಿ ಅದರ ಲಾಭ ಸಿಗುವುದು ಯಾರಿಗೆಂಬುದು ಈಗಂತೂ ತಿಳಿಯುವ ಸಾಧ್ಯತೆಗಳಿಲ್ಲ ಅಷ್ಟೆ.

ಗುಂಪನ್ನು ಒಂದೊಂದು ಪಕ್ಷಕ್ಕೆ ಸೆಳೆದು ಬೇಳೆಬೇಯಿಸಿಕೊಳ್ಳುವಲ್ಲಿ ಮಾಯಾವತಿಯೂ ಒಂದೇ. ಖರ್ಗೆಯೂ ಒಂದೇ.

ದುರಂತವೆಂದರೆ ಇಂಥ ಒಡಕೇ ಇವತ್ತು ದಲಿತರನ್ನು ಒಡೆದುಹಾಕಿದೆ. ದೇವನೂರು, ಸಿದ್ದಲಿಂಗಯ್ಯರಂಥ ಬಲಗೈ ಸಾಹಿತಿಗಳನ್ನು ಎಲ್. ಹನುಮಂತಯ್ಯನವರಂಥ ಎಡಗೈ ಸಾಹಿತಿಗಳು ಮಾತಾಡಿಸುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಐಎಎಸ್‌ಗಳ ಪೈಕಿ ಮುಖಟಿ, ಗೋನಾಳ್ ಭೀಮಪ್ಪ, ಅನಿಲ್‌ಕುಮಾರ್ ಒಂದು ಬದಿಯಾದರೆ ಅದರ ವಿರುದ್ಧ ಭರಣಿ, ಶಿವರಾಮ್, ಸಿದ್ದಯ್ಯರ ಬಲಗೈ ಹಿಂಡು ಕತ್ತಿಮಸೆಯುತ್ತದೆ. ದಲಿತ ಸಂಘಟನೆಗಳೇ ಇಬ್ಭಾಗವಾಗಿವೆ. ಹೋರಾಟಗಾರರೇ ಚಿಲ್ಲರೆಯಾಗಿರುವಾಗ ದಲಿತರ ಒಗ್ಗಟ್ಟೇನಾದರೂ ಅರ್ಥಪೂರ್ಣ [illegible]

# ದರ್ಶನಾಪುರನನ್ನು ಮಕಾಡೆ ಮಲಗಿಸಲು ಮಡ್ಡಿ ತಯಾರು?!



ದರ್ಶನಾಪುರ

ಎರಡು ವಾರಗಳ ಹಿಂದೆ "ಮುಕ್ಕುವೀರ ದರ್ಶನಾಪುರ" ಎಂಬ 'ನಿಮ್ಮ ಶಾಸಕರು ಕಡಿದಿದ್ದೇನು?' ಎಂಬ ಅಂಕಣದಲ್ಲಿ ಪ್ರಕಟವಾದ ವರದಿಯನ್ನು ಸವಿವರವಾಗಿ ಓದಿದ ಇಲ್ಲಿನ ಶಹಾಪುರದ ಜೆಡಿಎಸ್ ಅಧ್ಯಕ್ಷನಾದ ಮಲ್ಲಣ್ಣ ಮಡ್ಡಿ ತನ್ನ ಇಮೇಜನ್ನು ಬದಲಾಯಿಸಿಕೊಳ್ಳಲು ಹೊರಟದ್ದಾನೆನಿಸುತ್ತದೆ.

**ಶಹಾಪುರ**

ಮಾಜಿ ಮಂತ್ರಿ ಶರಣಬಸಪ್ಪ ದರ್ಶನಾಪುರನ ದುರ್‌ದರ್ಶನದ ಮುಖ ಬಟಾಬಯಲಾಗುತ್ತಿದ್ದಂತೆ, ಖ್ಯಾತೆ ತೆಗೆದಿರುವ ಮಡ್ಡಿ ದರ್ಶನಾಪುರ ಬೇರೆ ಪಕ್ಷಕ್ಕೆ ವಲಸೆ ಹೋದರೂ ತಾನು ಮಾತ್ರ ಜೆಡಿಎಸ್‌ನಲ್ಲೇ ಉಳಿಯುವ ಇರಾದೆ ಇಟ್ಟುಕೊಂಡಿದ್ದಾನೆ.

"ದರ್ಶನಾಪುರನ ತಂದೆ ಹಿಂದೊಮ್ಮೆ ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷಕ್ಕೆ ವಲಸೆ ಹೋಗಿದ್ದ. ಆದರೆ ಆಗಲೂ ತಾನು ಸ್ಥಿರವಾಗಿ ಜೆಡಿಎಸ್‌ನಲ್ಲಿಯೇ ಇದ್ದೆ. ಇಂದು ದರ್ಶನಾಪುರ ಪಕ್ಷ ತೊರೆದರೇನಾಯ್ತು? ನಾನು ಮಾತ್ರ ಅಪ್ಪಿತಪ್ಪಿಯೂ ಬೇರೆ ಪಕ್ಷಗಳಿಗೆ ಹೋಗಲಾರೆ" ಎಂದು ಖಂಡತುಂಡವಾಗಿ ಹೇಳುತ್ತಾನೆ.

ಜೊತೆಗೆ ಈ ಸಲ ಜೆಡಿಎಸ್ ಪಕ್ಷದ ವತಿಯಿಂದ ಶಾಸಕ ಸ್ಥಾನಕ್ಕೆ ತಾನು ಅಭ್ಯರ್ಥಿ ಅಂತಲೂ ಘೋಷಿಸಿದ್ದಾನೆ. ವಿಚಿತ್ರವೆಂದರೆ ಹಿಂದೆಯೂ ಹಲವಾರು ಬಾರಿ ಶಾಸಕ ಸ್ಥಾನಕ್ಕೆ ತಾನೇ ಸ್ಪರ್ಧಿ ಎಂದು ಹೇಳುತ್ತ ನಾಮಿನೇಷನ್ ತುಂಬುವ ದಿನ ಹತ್ತಿರ ಬರುತ್ತಿರುವಂತೆ ತನ್ನ ರಾಗ ಬದಲಾಯಿಸಿಕೊಳ್ಳುವುದು ಮಡ್ಡಿಯ ಹಳೆಯ ಚಾಳಿ.




ಮಲ್ಲಣ್ಣ ಮಡ್ಡಿ

ಇದನ್ನು ಸರಿಯಾಗಿ ಗ್ರಹಿಸಿಕೊಂಡಿರುವ ದರ್ಶನಾಪುರ ಅಂಡ್ ಕಂಪನಿ ಈತನನ್ನು ಕೊನೆಯ ಘಳಿಗೆಯಲ್ಲಿ ಹೇಗಾದರೂ ಸೈ 'ಮಳ್ಳ' ಮಾಡಿಬಿಡಬಲ್ಲರು.

ನಿಜಕ್ಕೂ ತಾಲೂಕಿನಾದ್ಯಂತ 'ಹೆಸರು' ಹಾಗೂ 'ಗಟ್ಸ್' ಎರಡನ್ನೂ ಇಟ್ಟುಕೊಂಡಿರುವ ಇದ್ದುದರಲ್ಲಿಯೇ ಉತ್ತಮ ಅನ್ನಬಹುದಾದ ಮಲ್ಲಣ್ಣ ಮಡ್ಡಿ ಶಾಸಕತ್ವದ ಅಖಾಡಕ್ಕೆ ನಿಂತುಕೊಂಡಿದ್ದೇ ಆದರೆ ಶಹಾಪುರ ಚುನಾವಣೆಯ ಕಣ ರಂಗೇರಲಿದೆ. ಆಗ ದರ್ಶನಾಪುರ ಯಾವುದೇ ಪಾರ್ಟಿಯಿಂದ ನಿಂತರೂ ಮಕಾಡೆ ಮಲಗಿಬಿಡುತ್ತಾನೆ. ಮಲ್ಲಣ್ಣ ಮಡ್ಡಿ ಈ ವಿಷಯದಲ್ಲಿ 'ಮಳ್ಳ' ಆಗುತ್ತಾನೋ 'ದರ್ಶನಾಪುರನನ್ನು ಮಕಾಡೆ ಮಲಗಿಸುತ್ತಾನೋ' ಕಾದು ನೋಡಬೇಕು.

-ವರದಿಗಾರ




## ಗುರುಸಿದ್ದನಗೌಡ:
# ಬಾಯಲ್ಲಿ ಬೆಣ್ಣೆ-ಬಗಲಲ್ಲಿ ದೊಣ್ಣೆ

ದಾವಣಗೆರೆ ಜಿಲ್ಲೆಯ ಅತ್ಯಂತ ಬರಪೀಡಿತ ತಾಲ್ಲೂಕಾದ ಜಗಳೂರಿನ ಬಜೆಪಿ ಶಾಸಕ ತಿಪ್ಪಗುಂಡೇರ ಗುರುಸಿದ್ದನಗೌಡ ಹತ್ತು ಹನ್ನೆರಡು ವರ್ಷಗಳ ಕೆಳಗೆ ಒಬ್ಬ ಮಹಾನ್ ಕುಡುಕನಾಗಿದ್ದ. ಕುಡಿದ ನಶೆಯಲ್ಲಿ ಯಾರ್‍ಯಾರದೊ ಮನೆಯ ಬಾಗಿಲು ತಟ್ಟುತ್ತಿದ್ದ. ಈತನ ಮನೆಯ ಮುಂದುಗಡೆಯೇ ವಾಸವಾಗಿರುವ ಜಂಗಾಲೇರು ಜನ (ಆಂಧ್ರದ ಹಗಲು ವೇಷಗಾರರಿಂದ ಬೇರ್ಪಟ್ಟ ಒಂದು ಗುಂಪು) ಒಂದು ದಿನ ಕುಡಿದ ಅಮಲಿನಲ್ಲಿ ಇಂತದೇ ಯಡವಟ್ಟು ಮಾಡಿಕೊಂಡಿದ್ದ ಗುರುಸಿದ್ದನಗೌಡನನ್ನು ಕಂಬಕ್ಕೆ ಕಟ್ಟಹಾಕಿದ್ದರು. ಕುಡಿದು ಚಿತ್ತಾದಾಗ ಯಾರಾದರೂ ಈತನನ್ನು ಹೊತ್ತುಕೊಂಡು ಹೋಗಿ ಮನೆಗೆ ಹಾಕಬರುವುದು ಆಗ ಬಹಳ ಸಾಮಾನ್ಯ ಸಂಗತಿಯಾಗಿತ್ತು. ಈತನ ಅಣ್ಣ ತಿಪ್ಪೆಗುಂಡೇರ ತಿಪ್ಪೇಸ್ವಾಮಿ (ನಳಂದ ಕಾಲೇಜಿನ ಸ್ಥಾಪಕ) ಕೂಡಾ ಗುರುಸಿದ್ದನಗೌಡನನ್ನು ಹಚಾ ಎನ್ನುತ್ತಿದ್ದ. ಆದರೆ ಗುರುಸಿದ್ದನಗೌಡ ರಾಜಕೀಯದ ರಂಗು ಬಳಿದುಕೊಳ್ಳಲು ಶುರುಮಾಡಿದಾಗಿನಿಂದ ಬಹಳ ಸಭ್ಯನಂತೆ ಪೋಸು ಕೊಡುತ್ತಿದ್ದಾನೆ,

ಈತ ರಾಜಕೀಯ ಪುಢಾರಿಯಾಗಿ ಚಿಗುರಿಕೊಳ್ಳುತ್ತಿದ್ದ ಸಂದರ್ಭದಲ್ಲೇ ಇಲ್ಲಿನ ನಾಯಕರು ಮತ್ತು ಲಿಂಗಾಯತರ ನಡುವೆ ನಡೆದ ಹೊಡೆದಾಟವು ಗುರುಸಿದ್ದನಗೌಡನಿಗೆ ರಾಜಕೀಯವಾಗಿ ಒಂದಷ್ಟು ಭವಿಷ್ಯವನ್ನು ತಂದು ಕೊಟ್ಟಿತು. ಹೊಡೆದಾಟದಲ್ಲಿ ಪೆಟ್ಟುತಿಂದವರನ್ನು ನೋಡಲು ಆಸ್ಪತ್ರೆಗೆ ಹೋಗಿ ಬರುವುದು, ಪಂಚಾಯತಿ ಮಾಡುವುದು, ಭಾಷಣಗಳನ್ನು ಬಿಗಿಯುವುದರ ಮೂಲಕ ಮೊದಲು ಲಿಂಗಾಯತರ ನಾಯಕನಾದ, ನಂತರ ಜನತಾ ಪಕ್ಷದೊಂದಿಗೆ ಗುರುಸಿದ್ದನಗೌಡ ಗುರುತಿಸಿಕೊಂಡ. ರಾಜಕೀಯಕ್ಕೆ ಬಂದಮೇಲೆ ಭರ್ಜರಿಯಾಗಿ ನಶ್ಯ ಏರಿಸುತ್ತಿದ್ದ ಗುರುಸಿದ್ದನಗೌಡನಿಗೆ ನಶ್ಯದ ಡಬ್ಬಿಯನ್ನು ಕಾರ್ಯಕರ್ತರು ತಂದು ಕೊಡಬೇಕಾದ ಪರಿಸ್ಥಿತಿ ಇತ್ತು. ಪಿ.ಎಲ್.ಡಿ. ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಗುರುಸಿದ್ದನಗೌಡ ಕಟ್ಟಿಸಿದ್ದ ಮಳಿಗೆಗಳ ಕಾಂಪ್ಲೆಕ್ಸ್ ಕೂಡಾ ಹರಾಜಿಗೆ ಬಂದಿತ್ತು.

ಜನತಾ ಪಕ್ಷದಲ್ಲಿದ್ದು ಬರಕತ್ತಾಗಲು ಸಾಧ್ಯವಾಗದಿದ್ದಾಗ, ಬಾಬ್ರಿ ಮಸೀದಿಯ ಧ್ವಂಸದ ಮೂಲಕ ಆಗತಾನೇ ಬಾಲಬಿಚ್ಚಲಾರಂಭಿಸಿದ್ದ ಚಡ್ಡಿಗಳೊಂದಿಗೆ ಗುರುಸಿದ್ದನಗೌಡ ಸೇರಿಕೊಂಡ. ಪ್ರಾರಂಭದಲ್ಲೇ ಈತನ ಮೊಸಳೆ ಕಣ್ಣೀರಿನಲ್ಲಿ ತೊಯ್ದು ಹೋದ ಕಾರ್ಯಕರ್ತರು ಗುರುಸಿದ್ದನಗೌಡನನ್ನು ಬಿ.ಜೆ.ಪಿ. ಪಕ್ಷದ ತಾಲ್ಲೂಕು ಅಧ್ಯಕ್ಷನನ್ನಾಗಿ ಮಾಡಿದರು. ಅಧ್ಯಕ್ಷನಾದ ಸ್ವಲ್ಪ ದಿನಗಳಲ್ಲೇ ತನ್ನ ರಕ್ತ ಸಂಬಂಧಿಗಳನ್ನು ಮತ್ತು ತನ್ನ ಜೊತೆ ಖಾಸಗಿಯಾಗಿದ್ದವರನ್ನು ಮಾತ್ರವೇ ತನ್ನ ಸುತ್ತಲಿನ ವಲಯವನ್ನಾಗಿಸಿಕೊಂಡು ಪ್ರಾರಂಭದಿಂದಲೂ ಪಕ್ಷಕ್ಕಾಗಿ ಕೆಲಸ ಮಾಡಿದವರನ್ನು ನಿರ್ದಾಕ್ಷಿಣ್ಯವಾಗಿ ಗುರುಸಿದ್ದನಗೌಡ ಮೂಲೆಗುಂಪು ಮಾಡಿದ. ಮೂರು ಬಾರಿ ಸೋತು ನಾಲ್ಕನೆಯ ಬಾರಿಗೆ 2004ರಲ್ಲಿ ಆಯ್ಕೆಯಾದ ನಂತರ ಈತನ ಗೆಲುವಿಗಾಗಿ ದುಡಿದ ಆತ್ಮೀಯರನ್ನು ಸಹ ಯಾವುದೇ ಪಾಪಪ್ರಜ್ಞೆ ಇಲ್ಲದೆ ದೂರಮಾಡಿಕೊಂಡ ಗುರುಸಿದ್ದನಗೌಡ. ಅಷ್ಟೇ ಅಲ್ಲದೆ, ತನ್ನ ಮಕ್ಕಳು ಮತ್ತು ಅಳಿಯಂದಿರ ಕೈಗೆ ಕ್ಷೇತ್ರದ ಸುಲಿಗೆಯ ಜವಾಬ್ದಾರಿಯನ್ನು ವಹಿಸಿಕೊಟ್ಟ.


ಗುರುಸಿದ್ದನಗೌಡ 'ಉಡಾಳನಲ್ಲ, ಆದರೆ ನಯವಂಚಕ' ಎಂದು ಈತನ ಬಗ್ಗೆ ಬಲ್ಲವರು ಹೇಳುತ್ತಾರೆ. ತನ್ನನ್ನು ಕಾಣಲು ಬಂದವರ ಜೊತೆಯಾಗಲೀ, ತನಗಾಗದವರ ಜೊತೆಯಾಗಲೀ ಬಹಿರಂಗವಾಗಿ ಬೆಣ್ಣೆಯಂತೆ ಮಾತನಾಡುವ ಈತ ಯಾವಾಗಲೂ ಬಗಲಲ್ಲಿ ದೊಣ್ಣೆ ಇಟ್ಟುಕೊಂಡಿರುತ್ತಾನೆ. ಈ ಹಿಂದಿನ ಶಾಸಕರಾದ ಅಶ್ವತ್ಥರೆಡ್ಡಿ ಹಾಗೂ ಬಸಪ್ಪನಾಯಕರಿಗಿಂತ ಚೆನ್ನಾಗಿ ಮಾತನಾಡುವ ಕಲೆಯನ್ನು ಕರಗತಮಾಡಿಕೊಂಡಿರುವ ಗುರುಸಿದ್ದನಗೌಡ ದುಡ್ಡು ದೋಚುವ ಕಲೆಯನ್ನು ಚೆನ್ನಾಗಿ ರೂಢಿಗತ ಮಾಡಿಕೊಂಡಿದ್ದಾನೆ. ಆದ್ದರಿಂದ ಶಾಸಕನಾದ ಎರಡು ಮೂರು ವರ್ಷಗಳಲ್ಲೇ ಕೋಟಿಗಳ ಒಡೆಯನಾಗಿದ್ದಾನೆ.

ಪ್ರಧಾನವಾಗಿ ಗುತ್ತಿಗೆ ಕಾಮಗಾರಿಗಳಲ್ಲೇ ಗುರುಸಿದ್ದನಗೌಡ ಬಹಳಷ್ಟು ಗುಂಜಿಕೊಂಡಿದ್ದಾನೆ. ಗುತ್ತಿಗೆ ಕಾಮಗಾರಿ ಟೆಂಡರ್ ಕರೆದಾಗ ತನಗೆ ಬೇಕಾದವರಿಗೇ ಟೆಂಡರ್ ಕೊಡಬೇಕೆಂದು ಅಧಿಕಾರಿಗಳ ಮೇಲೆ ಒತ್ತಡ ತರುವುದರ ಮೂಲಕ ತನ್ನ ಅಳಿಯಂದಿರಾದ ಬಾಬು ಮತ್ತು ಸತೀಶ್‌ಗೌಡನಿಗೇ ಎಲ್ಲ ಪ್ರಧಾನ ಗುತ್ತಿಗೆ ಕಾಮಗಾರಿಗಳನ್ನು ಕೊಟ್ಟಿದ್ದಾನೆ. ಅಷ್ಟೇ ಅಲ್ಲ, ತನ್ನ ಮಕ್ಕಳಾದ ಅರವಿಂದ ಮತ್ತು ಪವನ್‌ನಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ದಬಾವಣೆ ಮಾಡಿಸಿ ಬಿಲ್ಲುಗಳನ್ನು ಪಾಸ್ ಮಾಡಿಸಿಕೊಂಡಿದ್ದಾನೆ.

**ಜಗಳೂರು**

ವಾಸ್ತವವಾಗಿ ಜಗಳೂರು ಕ್ಷೇತ್ರದ ದೊಣೆಹಳ್ಳಿ, ಕಲ್ಲೇದೇವರಪುರ, ಬಿದರಕೆರೆ, ಮುಸ್ಟೂರು ಹಾಗೂ ಸೊಕ್ಕೆ ಗ್ರಾಮಗಳಲ್ಲಿ ಗುರುಸಿದ್ದನಗೌಡನ ಕಡೆಯವರು ನಿರ್ಮಿಸಿರುವ ಚೆಕ್‌ಡ್ಯಾಮ್‌ಗಳ ನಿರ್ಮಾಣಕ್ಕಾಗಿ ಮಾಡಿರುವ ಅಂದಾಜು ವೆಚ್ಚವು ತೀರಾ ಅತಿಯಾದುದೆನಿಸಿದರೆ ಇನ್ನೊಂದು ಕಡೆ ಅಂದಾಜು ವೆಚ್ಚಕ್ಕೆ ತಕ್ಕಂತೆ ಕೆಲಸವಾಗದೇ ಇರುವುದು ಕಣ್ಣಿಗೆ ರಾಚುತ್ತದೆ. ಈ ಚೆಕ್ ಡ್ಯಾಮ್‌ಗಳ ಅಂದಾಜು ವೆಚ್ಚ ಹಾಗೂ ಕಳಪೆ ಕಾಮಗಾರಿಯ ರೀತಿಗಳು ಗುರುಸಿದ್ದನಗೌಡ ಬಳಿದುಕೊಂಡಿರುವ ಕಮಿಷನ್ ಹಣದಲ್ಲಿ ಉಸಿರುಗಟ್ಟಿಹೋಗಿವೆ.

ಜಗಳೂರು ತಾಲ್ಲೂಕು ಹೊಸಕೆರೆಯ ಚೆನ್ನಪ್ಪ ಎಂಬ ಗುತ್ತಿಗೆದಾರ ತಾನು ಮಾಡಿ ಮುಗಿಸಿದ ಕಾಮಗಾರಿ ಕೆಲಸಗಳಿಗೆ ಅಧಿಕಾರಿಗಳ ಕೈಕಾಲು ಹಿಡಿದರೂ ಬಿಲ್ ಪಾಸಾಗಲಿಲ್ಲ. ಹೀಗಾಗಿ ಸೋತು ಹೋದ ಗುತ್ತಿಗೆದಾರ ಚೆನ್ನಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದು ರಾಜ್ಯಾದ್ಯಂತ ಸುದ್ದಿಯಾಗಿತ್ತು. ಗುರುಸಿದ್ದನಗೌಡನ ಮರ್ಜಿಗೆ ಹೊರತಾಗಿರುವ ಇನ್ನೂ ಅನೇಕ ಗುತ್ತಿಗೆದಾರರು ಚೆನ್ನಪ್ಪನ ಪರಿಸ್ಥಿತಿಯನ್ನೇ ಎದುರಿಸುತ್ತಿದ್ದಾರೆ. ಆದರೆ ಗುರುಸಿದ್ದನಗೌಡ ಬಸವನಕೋಟೆ, ಬಳಿಚೋಡು ಗ್ರಾಮಗಳ ಚೆಕ್ ಡ್ಯಾಮ್‌ಗಳ ಗುತ್ತಿಗೆ ಕಾಮಗಾರಿಯನ್ನು ಲ್ಯಾಂಡ್ ಆರ್ಮಿಯವರಿಗೆ ಕೊಟ್ಟದ್ದರಿಂದ ಲ್ಯಾಂಡ್ ಆರ್ಮಿಯವರು ಈತನಿಗೆ ದಾವಣಗೆರೆಯ ಸರಸ್ವತಿ ನಗರದಲ್ಲಿ ಒಂದು ಭರ್ಜರಿ ಸೈಟನ್ನು ಬಹುಮಾನವಾಗಿ ಕೊಟ್ಟಿದ್ದಾರೆನ್ನಲಾಗುತ್ತಿದೆ.



ಗುರುಸಿದ್ದನಗೌಡನ ಕಾಮಗಾರಿ ಕಬಳಿಕೆಯ ಬಗ್ಗೆ ತೋಡಿದಷ್ಟೂ ಆಧಾರಗಳು ಸಿಗುತ್ತವೆ. ಆದರೆ ಈ ಮಹಾಶಯನ ಅಳಿಯಂದಿರು ಕಾಮಗಾರಿ ನಡೆಸಿ ಕುಲಗೆಡಿಸಿರುವ ಒಂದು ಉದಾಹರಣೆಯನ್ನು ಹೇಳಿದರೆ ಗುರುಸಿದ್ದನಗೌಡನ ಕಾಮಗಾರಿ ಕರ್ಮಕಾಂಡವು ಅರ್ಥವಾಗಬಹುದೆನಿಸುತ್ತದೆ. ಗುರುಸಿದ್ದನಗೌಡನ ಅವಧಿಯಲ್ಲಿ ಜಗಳೂರಿನ ಕೆರೆಯ ಅಭಿವೃದ್ಧಿಗೆ 2 ಕೋಟಿ ರೂ. ಮಂಜೂರಾಗಿದ್ದೇ ತಡ ಜಗಳೂರು ಕೆರೆಗೆ ನೀರು ಸಂಗ್ರಹಿಸಲು 'ರಂಗಾಪುರ ಫೀಡರ್ ಕೆನಾಲ್ ಯೋಜನೆ' ಮರುಜೀವ ಪಡೆದುಕೊಂಡಿತು. ವಿಚಿತ್ರವೆಂದರೆ ಇದೇ ಕೆನಾಲ್ ಯೋಜನೆಗೆಂದು ಟ್ರೆಂಚ್ ಹೊಡೆಸಿ, ಕಟ್ಟಡವನ್ನು ಕಟ್ಟಿ ಈ ಹಿಂದೆಯೇ ಒಂದು ಸಾರಿ ಬಿಲ್ ತೆಗೆದುಕೊಳ್ಳಲಾಗಿತ್ತು, ಈಗ ಗುರುಸಿದ್ದನಗೌಡನ ಕಡೆಯವರು ಚಾನಲ್ ಅಗಲ ಮಾಡುತ್ತೇವೆಂದು, ಕಟ್ಟಿದ್ದ ಕಟ್ಟಡವನ್ನು ಕೀಳಿಸಿ, 500 ಮೀ. ಟ್ರೆಂಚ್ ಹೊಡೆಸಿ 50-60 ಲಕ್ಷ ಬಿಲ್ ಪಾಸುಮಾಡಿಕೊಂಡಿರುವುದೂ ಅಲ್ಲದೆ ಈ ಕಾಮಗಾರಿಯ ಭಾಗವಾಗಿ ಚಿಕ್ಕಮ್ಮನಹಟ್ಟಿ-ಹನುಮಂತಾಪುರ ಗೊಲ್ಲರಹಳ್ಳಿಗೆ ಹೋಗುವ ದಾರಿಗೆ ತಡೆಗೋಡೆಯನ್ನು ಕಟ್ಟಿಸಿಬಿಟ್ಟಿದ್ದಾರೆ. ಇದರಿಂದಾಗಿ ಪರಸ್ಪರರು ಈ ಹಳ್ಳಿಗಳಿಗೆ ಹೋಗಿಬರಲಾಗುತ್ತಿಲ್ಲ. ರಂಗಾಪುರದವರು ಅವರ ಹೊಲಗಳಿಗೆ ಹೋಗುವುದೂ ಸಾಧ್ಯವಾಗುತ್ತಿಲ್ಲ, ಇವರು ಬೆಳೆದ ಬೆಳೆಯನ್ನು ಹೊಲಗಳಿಂದ ಮನೆಗೆ ತರಲು ಜಗಳೂರಿನವರೆಗೆ ಹೋಗಿಬರಬೇಕಾಗಿದೆ. ಮಳೆಯೇನಾದರೂ ಬಂದು ತಡೆಗೋಡೆಗೆ ನೀರು ನಿಂತುಬಿಟ್ಟರೆ, ರಂಗಾಪುರ, ಚಿಕ್ಕಮ್ಮನಹಟ್ಟಿ ಮತ್ತು ಗೊಲ್ಲರಹಳ್ಳಿಯ ಜನರು ಹತ್ತು-ಹದಿನೈದು ದಿನಗಳ ಕಾಲ ಓಡಾಟವನ್ನೇ ಬಂದ್ ಮಾಡಿಕೊಳ್ಳಬೇಕಾದಷ್ಟು ಮಟ್ಟಿಗೆ ಗುರುಸಿದ್ದನಗೌಡನ ಕಾಮಗಾರಿಯು ಕಷ್ಟಗಳನ್ನು ಸೃಷ್ಟಿಸಿದೆ.

ಕೂಲಿಗಾಗಿ ಕಾಳು ಯೋಜನೆಗಾಗಿ ಜಗಳೂರು ಕ್ಷೇತ್ರಕ್ಕೆ 2 ಕೋಟಿ ರೂ. ಅನುದಾನ ಬಂದಿ[...] ಯಾವುದೋ ಒಂದು ವೇದಿಕೆಯಲ್ಲಿ ಮಾತ್ರ ಫ[...] ಕ್ರೋಸ್ಕರ ಸ್ವಲ್ಪ ಅಕ್ಕಿಯನ್ನು ವಿತರಿಸಲಾಯಿತೇ [...] ಬಡವರಿಗಾಗಿ ಒಂದು ಕೆ.ಜಿ. ಅಕ್ಕಿಯೂ ವಿ[...]ಯಾಗಿಲ್ಲವೆಂದು ಇಲ್ಲಿನ ಜನ ಹೇಳುತ್ತಾರೆ. [...] ಯೋಜನೆಯ ವತಿಯಿಂದ ಜನರ ಮೂಲಕ ಒ[...] ಕೆಲಸವೂ ನಡೆಯಲಿಲ್ಲ- ಒಂದು ಕೆ.ಜಿ. ಅಕ್ಕಿ[...] ಜನರಿಗೆ ಸಿಗಲಿಲ್ಲವೆನ್ನುವ[...] ಮಾತ್ರ ವಾಸ್ತವ.

ಅಂಗನವಾಡಿ ಕಾ[...]ಕರ್ತೆಯರ ಆಯ್ಕೆಯ ಸಂದ[...]ದಲ್ಲಿ, ಸರ್ಕಾರಿ ನೌಕರರ ವರ್ಗಾವಣೆಯ ವಿಷಯ[...] ಗುರುಸಿದ್ದನಗೌಡ ಸಾಕಷ್ಟು ಗೆಬರಿಕೊಂಡಿದ[...] ಕುಡಿಯುವ ನೀರು ಸರಬರಾಜು ಯೋಜನೆಯಡಿ[...] ಸೂಳೆಕೆರೆಯಿಂದ ಚಿತ್ರದುರ್ಗದ ಮೂಲಕ ಜಗಳೂ[...] ವರೆಗೆ ಮಾಡಿಸಿರುವ ಪೈಪ್ ಲೈನ್ ಕಾಮಗಾರಿಯ[...] ಗುರುಸಿದ್ದನಗೌಡ ಸರಿಸುಮಾರು ಕಾಲುಕೋಟಿ ಕಮಿಷ[...]ಕಿತ್ತಿದ್ದಾನೆಂದು ಹೇಳಲಾಗುತ್ತಿದೆ. ಇವುಗಳ ಜೊ[...] ಗುತ್ತಿಗೆ ಕಾಮಗಾರಿಯ ಅವ್ಯವಹಾರವೂ ಸೇರಿ ಒಂ[...] ಕಾಲದಲ್ಲಿ ನಶ್ಯ ಪುಡಿ ಡಬ್ಬಕ್ಕೆ ಕೈಚಾಚುತ್ತಿ[...] ಗುರುಸಿದ್ದನಗೌಡನ ಹತ್ತಿರ ಇಂದು ಕೋಟಿ ಕೋ[...] ಆಸ್ತಿ ಕಾಲುಮುರಿದುಕೊಂಡು ಬಿದ್ದಿದೆ. ಈತನ ಮಕ್ಕಳ[...] ಈ ಹಿಂದೆ ದ್ವಿಚಕ್ರ ವಾಹನಗಳಿರಲಿಲ್ಲ. ಈ[...] ಗುರುಸಿದ್ದನಗೌಡನ ಕುಟುಂಬ ಸದಸ್ಯರ ಕಾರುಗ[...] ಬೆಲೆಯೇ ಒಂದು ಕೋಟಿ ರೂ. ಮುಟ್ಟಬಹುದ[...] ತುಪ್ಪದಹಳ್ಳಿ ಕೆರೆಯ ಹತ್ತಿರ 30 ಎಕರೆ, ಮಹಾರಾಜ[...] ಹಟ್ಟಿಯಲ್ಲಿ 21 ಎಕರೆ, ಗುಡಿಗುಡಾಳ್ (ಹರಪನಹ[...] ತಾ.) ಮತ್ತಿತರ ಕಡೆ 100 ಎಕರೆಗಳಾಗಬಹುದಾದಷ[...] ಜಮೀನನ್ನು ಗುರುಸಿದ್ದನಗೌಡ ಕೊಂಡಿದ್ದಾನೆ. ಜಗಳೂರಿ[...] ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯನಾಗಿರುವ ಈತನ ಮ[...]ರವಿ 20 ಲಕ್ಷ ರೂ. ಕಾರಿನ[...] ಓಡಾಡುತ್ತಿರುವುದನ್ನು, ಇದ[...] ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿ ಇತ್ತೀ[...] ನಿವೃತ್ತರಾಗಿರುವ ಡಾ.ಶಿವಪ್ರಕಾ[...] ರೆಡ್ಡಿ ಒಂದು ಡಕೋಟ ಕಾರಿನ[...] ಓಡಾಡುತ್ತಿರುವುದನ್ನೂ ಜ[...] ನೋಡುತ್ತಿದ್ದಾರೆ. ಜೊತೆಜೊತ[...] ಕುಡಿದು ಬೀದಿಯಲ್ಲಿ ಬೀಳುತ್ತ[...] ಗುರುಸಿದ್ದನಗೌಡ ಶಾಸಕನಾ[...] ಮೇಲೆ ಹಲವು ಹತ್ತು ಕೋಟಿಗ[...] ಆಸ್ತಿಯನ್ನು ಮಾಡಿಕೊಂಡಿ[...]ವುದನ್ನೂ ಜನರು ಕಣ್ಣು ಕ[...] ಬಿಟ್ಟು ನೋಡುತ್ತಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ನಂ.1[...] 8 ಕಿ.ಮೀ. ದೂರದಲ್ಲಿರುವ ಜಗಳೂರಿನಲ್ಲಿ ಸ್ಟೇ[...] ಪಾಲಿಸಿ ಆಧಾರದ ಮೇಲೆ ನೂರು ಹಾಸಿಗೆಗಳ[...] ಒಂದು ಆಸ್ಪತ್ರೆ ಮತ್ತು ಅಗ್ನಿಶಾಮಕ ಠಾಣೆಗ[...] ಗುರುಸಿದ್ದನಗೌಡ ಶಾಸಕನಾಗಿದ್ದ ಅವಧಿಯ[...] ಕಟ್ಟಲ್ಪಟ್ಟವೆ. ಜೊತೆಗೆ ಗುರುಸಿದ್ದನಗೌಡ ಜಗಳೂರ[...] ಒಂದು ಒಳ್ಳೆಯ ರಸ್ತೆ ಮತ್ತು ಬೀದಿ ದೀಪಗಳ ವ್ಯ[...] ಮಾಡಿದ್ದಾನೆ. ಆದರೆ ಮೊದಲನೇ ಎರಡು ಕೆಲಸಗ[...] ಸ್ಟೇಟ್ ಪಾಲಿಸಿ ಆಧಾರದಲ್ಲಿ ಆಗಿದ್ದರೂ ಇ[...]ವನ್ನೂ ತನ್ನ ಸಾಧನೆಯೆಂದು ಗುರುಸಿದ್ದನಗೌಡ ಹೇ[...] ಕೊಳ್ಳುತ್ತಾನೆ.

ಗುರುಸಿದ್ದನಗೌಡ ರಾಜಕೀಯಕ್ಕೆ ಕಾಲಿಟ್ಟ ದಿನದಿ[...] ಒದ್ದಿಸಿಕೊಂಡವರೆಲ್ಲ ಈಗ ಈತನ ವಿರೋಧಿ ಗುಂಪಿನ[...] ನಿಂತು ಈತನ ಅವನತಿಗಾಗಿ ಕಾಯುತ್ತಿದ್ದಾ[...] ಮತ್ತೊಂದು ಕಡೆ ಈತನಿಂದ ನೊಂದ ಹಿತೈಷಿಗ[...] ಹಿತಶತ್ರುಗಳಾಗಲು ಸರಿಯಾದ ಸಮಯಕ್ಕಾಗಿ ಕಾಯು[...]ದ್ದಾರೆ. ಈತನ ಜೊತೆಯಲ್ಲಿರುವ ಕಾರ್ಯಕರ್ತರ[...] ಕೂಡ ಬರಲಿರುವ ಚುನಾವಣೆಯಲ್ಲಿ ಈತನಿಗೆ ಬಿಜ[...] ಟಿಕೆಟ್ ಸಿಕ್ಕರೆ ಗುರುಸಿದ್ದನಗೌಡ ಗುಡ್ಡೆಹಾಕಿಕೊಂಡಿರು[...] ಸಂಪೂರ್ಣ ಹಣವನ್ನು ನಿಕಾಲಿ ಮಾಡಿಸಿ ಸೇ[...] ತೀರಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಗುರುಸಿದ್ದನಗೌ[...]ಗೇನಾದರೂ ಬಿಜೆಪಿ ಟಿಕೆಟ್ ನೀಡಿದರೆ ಮುಂದಿ[...] ಚುನಾವಣೆಯಲ್ಲಿ ಈ ಪಕ್ಷ ಗುಡಿಸಿಕೊಂಡುಹೋ[...]ವುದು ಜಗಳೂರಜ್ಜನಾಣೆಗೂ ಸತ್ಯ!


-ಚಂದ್ರಶೇಖರ ತೋರಣಘಟ್ಟ

**ಚಿಕ್ಕಮಗಳೂರು**

# ವಿಧಾನಸಭೆಗೆ ಕಾಂಗ್ರೆಸ್ ರಣತಂತ್ರ ಸಿದ್ಧ!

**ಈ ಸಲ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರವನ್ನು ಬಿಜೆಪಿ ತೆಕ್ಕೆಯಿಂದ ಬಿಡಿಸಿ, ತನ್ನ ಬಗಲಿಗೆ ಹಾಕಿಕೊಳ್ಳಲು ಕಾಂಗ್ರೆಸ್ ತಂತ್ರ ರೂಪಿಸಿರುವ ಲಕ್ಷಣ ಕಾಣಿಸುತ್ತಿದೆ. ಚಿಲ್ಲಿ ಶಾಸಕ ಸಿ.ಟಿ. ರವಿಯ ಹುಚ್ಚು ರಾಜಕಾರಣದಿಂದ ಬೇಸತ್ತಿರುವ ಚಿಕ್ಕಮಗಳೂರಿನ ಜನ, ಈ ಸಲದ ಚುನಾವಣೆಯಲ್ಲಿ ತಕ್ಕಮಟ್ಟಿನ ಎದುರೇಟು ನೀಡಿದರೂ ಆಶ್ಚರ್ಯಪಡಬೇಕಿಲ್ಲ.**

## ವಚನಭ್ರಷ್ಟ ಸಿ.ಟಿ. ರವಿ



ಸಿ.ಟಿ.ರವಿ

ಕಳೆದ ಸಲ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ, ಬಾಬಾಬುಡನ್‌ಗಿರಿಯನ್ನು ದತ್ತಪೀಠ ಮಾಡಿಯೇ ತೀರುತ್ತೇನೆಂದು ದತ್ತಮೂರ್ತಿಯ ಮೇಲೆ ಆಣೆ ಮಾಡಿ, ಮುಗ್ಧ ಜನರನ್ನು ಭಾವನಾತ್ಮಕವಾಗಿ ಕೆರಳಿಸಿ, ಅದರ ಕಿಚ್ಚಿನ ಉರಿಯ ಲಾಭವನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಂಡು, ಜೊತೆಗೊಂದಿಷ್ಟು ಅಳಿಲು ಸೇವೆ, ಧರ್ಮಸೇವೆ, ಸಾಮಾಜಿಕ ಕಳಕಳಿಯ, ಜನಪರ ಕಾಳಜಿಯ ಸರಮಾಲೆಯನ್ನಿಡಿದುಕೊಂಡು ಗೆದ್ದುಬಂದಿದ್ದ ಮಾಜಿ ಶಾಸಕ ಸಿ.ಟಿ. ರವಿ, ತನಗೆ ಅಧಿಕಾರ ದೊರೆತ ಮೇಲೆ ಅಮಲು ಕುಡಿದವನಂತೆ ಕಾಣಿಸಿಕೊಂಡಿದ್ದ.

ನಿಮಗೆ ಗೊತ್ತಿದೆ. ಜನರು ರೊಚ್ಚಿಗೆದ್ದಾರು ಅನ್ನುವ ಭಯದಿಂದ ಒಮ್ಮೆ ಕ್ಷುಲ್ಲಕ ಕಾರಣ ಮುಂದಿಟ್ಟುಕೊಂಡು ಮೈಮೇಲೆ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ. ಅಭಿವೃದ್ಧಿ ಚಟುವಟಿಕೆಗಳಿಗೆ ಧಕ್ಕೆಯನ್ನುಂಟು ಮಾಡಲು ಜೆಸಿಬಿ ಅಡಿಯಲ್ಲಿ ಮಲಗಿ ಅಪಹಾಸ್ಯಕ್ಕೀಡಾಗಿದ್ದ. ಬಾಬಾಬುಡನ್‌ಗಿರಿಯಲ್ಲಿ ಪೊಲೀಸರ ಸರ್ಪಗಾವಲಿನ ನಡುವೆ ವಾಗ್ವಾದ, ಮಾತಿನ ಚಕಮಕಿ ನಡೆಸಿ, ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಲು ಹಲ್ಲೆ ಮಾಡಲು ಮುಂದಾಗಿ ತಾನು ಜವಾಬ್ದಾರಿಯುತ ಸ್ಥಾನದಲ್ಲಿರುವ ಶಾಸಕನೆಂಬುದನ್ನು ಮರೆತು ಪಡ್ಡೆ ಹುಡುಗರಂತೆ ಬೇಲಿ ಹಾರಲು ಯತ್ನಿಸಿದ್ದ. ಈತನಿಗೆ ಮತ ಹಾಕಿ ಗೆಲ್ಲಿಸಿದ್ದ ಜನ ಅವತ್ತೇ ನಾಚಿಕೊಂಡಿದ್ದರು.


ಹಾಗೂ ತನ್ನ ನಾಲ್ಕು ವರ್ಷಗಳ ಶಾಸಕನ ಅಧಿಕಾರದ ಅವಧಿಯಲ್ಲಿ ಈತ ಕಡಿದು ಗುಡ್ಡೆ ಹಾಕಿದ್ದು ಅಷ್ಟರಲ್ಲೇ ಇದೆ. ಆದರೆ ತುಂಡು ಭೂಮಿ ಹಿಡಿದುಕೊಂಡಿದ್ದವನು ಶಾಸಕನಾದ ಮೇಲೆ ಕೋಟಿಗಟ್ಟಲೆ ಆಸ್ತಿಪಾಸ್ತಿ ಮಾಡಿಕೊಂಡಿದ್ದು ಹೇಗೆಂದು ತನಿಖೆಯಾಗಬೇಕಷ್ಟೆ. ಇವತ್ತಿಗೆ ಚುನಾವಣಾ ಪೂರ್ವ ಜನರಿಗೆ ಕೊಟ್ಟ ಭರವಸೆಯನ್ನು ಈಡೇರಿಸಲಾರದೆ, ವಚನಭ್ರಷ್ಟನಾಗಿ ಜನರ ಮುಂದೆ ತಲೆ ತಗ್ಗಿಸಿ ನಿಲ್ಲುವಂತ ಪರಿಸ್ಥಿತಿಯೊದಗಿ ಬಂದಿದೆ. ಅವತ್ತು ರವಿಗೆ ಮತ ಹಾಕಿ ಮತಿಗೇಡಿಗಳಾಗಿಬಿಟ್ಟೆವು ಅಂತ ಜನ ಹಪಹಪಿಸುತ್ತಿದ್ದಾರೆಂದರೆ ರವಿಯ ಮುಂದಿನ ರಾಜಕೀಯ ಭವಿಷ್ಯ ಹೇಗಿರಬಹುದೆಂದು ನೀವೇ ನಿರ್ಧರಿಸಿಬಿಡಿ.

## ಇದರ ಲಾಭ ಕಾಂಗ್ರೆಸ್‌ಗೆ

ಹೀಗಾಗಿ ಇದರ ಸಂಪೂರ್ಣ ಲಾಭ ಪಡೆಯಲು ಕಾಂಗ್ರೆಸ್ ಸಜ್ಜಾಗಿ ನಿಂತುಕೊಂಡಿದೆ. ಜಿಲ್ಲಾಧ್ಯಕ್ಷ ಕೆ.ಟಿ. ಮಲ್ಲಿಕಾರ್ಜುನ ಜೊತೆಗಿರುವ ಅಷ್ಟೂ ಘಟಾನುಘಟಿ ರಾಜಕಾರಣಿಗಳು ಶತಾಯಗತಾಯ ಕಾಂಗ್ರೆಸ್ ಗೆಲುವಿಗೆ ಪಣತೊಟ್ಟಂತಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಗರಡಿಯಲ್ಲಿ ಪಳಗಿರುವ ಮದಕರಿಯಂಥ ಬಿ.ಎಲ್. ಶಂಕರ್, ಮಾಜಿ ಸಂಸದ ಡಿ.ಎಂ. ಪುಟ್ಟೇಗೌಡ, ಮಾಜಿ ಮಂತ್ರಿ ಸಗೀರ್ ಅಹ್ಮದ್, ರಾಮದಾಸ್, ಎಂ.ಎಲ್. ಮೂರ್ತಿ, ಟಿ.ಡಿ. ರಾಜೇಗೌಡ, ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರವನ್ನು ಉಳಿಸಿಕೊಳ್ಳಲು ರಣತಂತ್ರ ರೂಪಿಸುತ್ತಲಿದ್ದಾರೆ. ತಮ್ಮ ಜಾಣ್ಮೆಯ ಹಾಗೂ ಬುದ್ಧಿವಂತಿಕೆಯ ರಾಜಕಾರಣವನ್ನು ಪ್ರದರ್ಶಿಸಿರುವ ಕೆಲವು ಮುಖಂಡರು ವರ್ಚಸ್ವಿ ಒಕ್ಕಲಿಗಿತ್ತಿ, ಪ್ರಬಲ ಪ್ರಭಾವಿ ರಾಜಕಾರಣಿ ಡಿ.ಕೆ. ತಾರಾದೇವಿ ಸಿದ್ಧಾರ್ಥರನ್ನು ಮರಳಿ ಕಾಂಗ್ರೆಸ್‌ಗೆ ಕರೆತರುವ ಕೆಲಸ ಪೂರ್ಣಗೊಳಿಸಿದ್ದಾರೆ ಹಾಗೂ ಮುಖಂಡರೊಳಗಿನ ಭಿನ್ನಾಭಿಪ್ರಾಯ ಶಮನಕ್ಕೆ ಪ್ರಯತ್ನಿಸಲಾಗುತ್ತಿದೆ. ಕಾರ್ಯಕರ್ತರು ಉತ್ಸಾಹದಿಂದ ಪಕ್ಷಕ್ಕಾಗಿ ದುಡಿಯಲು ನೆರವಾಗುವಂಥ ಚಟುವಟಿಕೆಗಳು ಆರಂಭಿಸಲಾಗುತ್ತಿದೆ.



ತಾರಾದೇವಿ ಸಿದ್ಧಾರ್ಥ




ಬಿ.ಎಲ್. ಶಂಕರ್

ಸಿ.ಟಿ. ರವಿ ಮಾಡಿರುವ ಲೂಟಿಯನ್ನು, ಆತನ ದರ್ಬಾರನ್ನು ರಕ್ಷಿಸುವ ಹೊಣೆ ಹೊತ್ತುಕೊಂಡಿರುವ ಸಂಘ ಪರಿವಾರದ ಪಡೆಯನ್ನು, ವಚನ ಭ್ರಷ್ಟತೆಯನ್ನು, ದತ್ತ ಜಯಂತಿಯ ಹೆಸರಿನಲ್ಲಿ ನೈಜ ವಿಚಾರಧಾರೆಯನ್ನು ತಿರುಚಿ ಜನಮಾನಸದಲ್ಲಿ ಕೋಮುಭಾವನೆ ಹರಡುವ ಫ್ಯಾಸಿಸ್ಟ್ ಷಡ್ಯಂತ್ರವನ್ನು, ಚಡ್ಡಿಗಳ ಅಟ್ಟಹಾಸವನ್ನು, ಅಭಿವೃದ್ಧಿಯ ಲೋಪದೋಷಗಳನ್ನು, ಉಳಿದಂತೆ ಇನ್ನಿತರ ನೂರೆಂಟು ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಚುನಾವಣಾ ರಣಯಾತ್ರೆ ಮಾಡುವ ತಂತ್ರಗಾರಿಕೆಗೆ ರೂಪುರೇಷೆ ಸಿದ್ಧಪಡಿಸಲಾಗಿದೆ.


## ಟಿ.ಡಿ. ರಾಜೇಗೌಡ ಸೂಕ್ತ ಅಭ್ಯರ್ಥಿ

ಚಿಲ್ಲಿ ರವಿಯ ಸೋಲು ಖಚಿತವಾಗಿದ್ದರೂ ಸಗೀರ್ ಅಹ್ಮದ್‌ರಂಥ ಅಲ್ಪಸಂಖ್ಯಾತ ಕಣಕ್ಕಿಳಿದರೆ ಇದು ಸಾಧ್ಯವಾ? ಅನ್ನೋದು ರಾಜಕೀಯ ವಿಶ್ಲೇಷಕರ ಪ್ರಶ್ನೆ. ಸಗೀರ್ ಘಟಾನುಘಟಿಯೇನೋ ಸರಿ. ಕಾಂಗ್ರೆಸ್ ರಾಜಕಾರಣದಲ್ಲಿ ತೀರ ಪಳಗಿರುವ ಮನುಷ್ಯ. ಅಲ್ಪಸಂಖ್ಯಾತ ಘಟಕದ ರಾಜ್ಯಾಧ್ಯಕ್ಷ. ಜಮ್ಮು-ಕಾಶ್ಮೀರದ ಮುಖ್ಯಮಂತ್ರಿ ಗುಲಾಂನಬಿ ಆಜಾದ್‌ರ ಖಾಸಾ ದೋಸ್ತ್ ಕೂಡ. ಅಲ್ಲಿ ಕಳೆದ ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿಯ ಅಪೇಕ್ಷೆ ಮೇರೆಗೆ ಅಲ್ಲೂ ಚುನಾವಣಾ ಪ್ರಚಾರ ಮುಗಿಸಿ ಬಂದಿರುವ ಪರಿಪಕ್ವ ರಾಜಕಾರಣಿ, ಆದರೆ ಈತ ಇವತ್ತಿಗೂ ಯಾವತ್ತಿಗೂ ಮುಸ್ಲಿಂ ನಾಯಕರಾಗಿ ಬೆಳೆಯಲಿಲ್ಲ, ಬೇರೆ ಜನಾಂಗಗಳಿಗೆ ದ್ರೋಹವನ್ನು ಮಾಡಲಿಲ್ಲ, ತಾನು ಮಂತ್ರಿಯಾಗಿದ್ದ ಕಾಲದಲ್ಲಿ ರಾಜ್ಯಕ್ಕೆ, ಸ್ವಂತ ಜಿಲ್ಲೆಗೆ, ಸ್ವಂತ ಕ್ಷೇತ್ರಕ್ಕೆ ಹೇಳಿಕೊಳ್ಳುವ ಸಾಧನೆ ಮಾಡಿ ತೋರಿಸಲೂ ಇಲ್ಲ, ಇಂಥ ರಾಜಕಾರಣಿಯನ್ನು ಮುಂದಿರಿಸಿಕೊಂಡು ಪ್ರಬಲ ಪೈಪೋಟಿಗೆ ಪ್ರತ್ಯುತ್ತರ ನೀಡುವುದಾದರೂ ಹೇಗೆ ಸಾಧ್ಯ ಹೇಳಿ? ಹೀಗಾಗಿ ಕಳೆದ ಚುನಾವಣೆಯಲ್ಲಿ ಭಾರಿ ಅಂತರದಿಂದ ಸೋಲಬೇಕಾಯಿತು.





ಬಹುಶಃ ಈ ಸಲಕ್ಕೆ ಕಾಂಗ್ರೆಸ್ ಎಡವಲಿಕ್ಕಿಲ್ಲ. ರವಿಯಂಥ ವಾಚಾಳಿ ಹೆಗ್ಗಣವನ್ನು ಬೋನಿನೊಳಗೆ ಕೂಡಿಹಾಕಲು ತೀರ ಚುರುಕುಮತಿ ಬೇಕ್ಕೊಂದನ್ನು ಅದು ಬಳಸಬಹುದು. ಸಗೀರ್ ಬದಲಿಗೆ ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಟಿ.ಡಿ. ರಾಜೇಗೌಡ ಅಥವಾ ಡಿ.ಕೆ. ತಾರಾದೇವಿ ಸಿದ್ಧಾರ್ಥ ಕಟ್ಟಕಡೆಗೆ ಬಿ.ಎಲ್. ಶಂಕರ್ ಸ್ಪರ್ಧೆಗಿಳಿದರೂ ಆಶ್ಚರ್ಯಪಡುವಂತದ್ದೇನಿಲ್ಲ. ಒಂದು ಖಚಿತ ಮಾಹಿತಿಯ ಪ್ರಕಾರ ಡಿ.ಕೆ. ತಾರಾದೇವಿ ಸಿದ್ಧಾರ್ಥರನ್ನು ಲೋಕಸಭೆಗೂ, ಬಿ.ಎಲ್. ಶಂಕರ್‌ರನ್ನು ರಾಜ್ಯಸಭೆಗೂ, ಸಗೀರ್ ಅಹ್ಮದ್‌ರನ್ನು ವಿಧಾನ ಪರಿಷತ್ತಿಗೂ, ಟಿ.ಡಿ. ರಾಜೇಗೌಡರವರನ್ನು ಚಿಕ್ಕಮಗಳೂರು ವಿಧಾನಸಭಾ ಚುನಾವಣೆಗೂ ಕಣಕ್ಕಿಳಿಸಲು ಯೋಚಿಸಲಾಗಿದೆ. ಇದೊಂದು ಒಳ್ಳೆಯ ಬೆಳವಣಿಗೆಯಾದಂತಿದೆ.



ಸಗೀರ್ ಅಹಮದ್

## ಕಡಿಮೆ ಲೆಕ್ಕಾಚಾರದ ಮನುಷ್ಯನಲ್ಲ

ಟಿ.ಡಿ. ರಾಜೇಗೌಡರೇನು ಕಡಿಮೆ ಲೆಕ್ಕಾಚಾರಕ್ಕೆ ಸಿಗುವಂಥ ಮನುಷ್ಯನಲ್ಲ, ಹಿಂದೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದ ಸಮಯದಲ್ಲಿ ಅಭಿವೃದ್ಧಿ ಕೆಲಸಗಳಲ್ಲಿ [illegible] ಬಿಡಿರಲಿಲ್ಲ. ಜಿಲ್ಲೆಯ ಪ್ರಬಲ ಒಕ್ಕಲಿಗ ಸಮುದಾಯದ ನಾಯಕನಲ್ಲದಿದ್ದರೂ ಅವರಿಂದ [illegible] ಕಳೆಸಿಕೊಳ್ಳುವಂತಹ ಕೀಳುಮಟ್ಟದಲ್ಲಿಲ್ಲ. ಜೊತೆಗಿರುವ

> ## ರವಿಯ ಕೋಟ್ಯಂತರ ರೂಪಾಯಿಗಳ ರಿಯಲ್ ಎಸ್ಟೇಟ್ ದಂಧೆ!
>
> ಚಿಕ್ಕಮಗಳೂರಿನ ಬಹುತೇಕ ಮತದಾರರಿಗೆ ಗೊತ್ತಿಲ್ಲದ ರವಿಯ ಮುಖ ಇದು. ಒಂದು ಕಾಲದಲ್ಲಿ ಅಷ್ಟೇನೂ ಸ್ಥಿತಿವಂತನಾಗಿರದಿದ್ದ ಸಿ.ಟಿ. ರವಿ ಈಗ ಹತ್ತಾರು ಕೋಟಿ ರೂಪಾಯಿಗಳ ಲ್ಯಾಂಡ್ ವ್ಯವಹಾರ ನಡೆಸುತ್ತಿದ್ದಾನೆ. ಬೆಂಗಳೂರು, ಮೈಸೂರು, ದೇವನಹಳ್ಳಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಸುತ್ತಮುತ್ತ ರವಿಯ ಅಕ್ರಮ-ಸಕ್ರಮ ರಿಯಲ್ ಎಸ್ಟೇಟ್ ವ್ಯವಹಾರಗಳಿವೆ.
>
> ಈಗಿನ ಮೈಸೂರಿನ ಬಹುತೇಕ ಬಿಜೆಪಿಗಳು ಲ್ಯಾಂಡ್ ಡೀಲ್ ನಡೆಸುತ್ತಿದ್ದು ಬಿಜೆಪಿ ಶಾಸಕನಾಗಿದ್ದ ರವಿಗೆ ಅದರಲ್ಲಿ ಕೈ ಹಾಕಲು ಸಲೀಸಾದ ರಹದಾರಿ ಸಿಕ್ಕಂತಾಗಿತ್ತು. ಇನ್ನು ಬೆಂಗಳೂರಿನಲ್ಲಿ ಕುಪ್ರಸಿದ್ಧ ಬಿಜೆಪಿ ಭೂಗಳ್ಳರಾಗಿರುವ ಅಶೋಕ್ ಹಾಗೂ ಕಟ್ಟಾನಾಯ್ಡುರ ಮಾರ್ಗದರ್ಶದಡಿ ತಾನೂ ಒಂದಷ್ಟು ಭೂಗಳ್ಳತನದ ವಿದ್ಯೆ ಕಲಿತ ರವಿ ಈಗ ಕೋಟ್ಯಾಧೀಶನಾಗಿ ಹೋಗಿದ್ದಾನೆ.
>
> ದೇವನಹಳ್ಳಿ ಬಳಿ ಸರ್ಕಾರಕ್ಕೆ ಸೇರಬೇಕಾಗಿರುವ ಒಂದು ನೂರು ಎಕರೆಗೇ ಬೇಲಿ ಸುತ್ತಿಕೊಂಡಿರುವ ರವಿ ಸರಿಯಾದ ತನಿಖೆ ನಡೆದಿದ್ದೇ ಆದಲ್ಲಿ ನೇರ ಜೈಲಿಗೆ ಹೋಗಬೇಕಾಗುತ್ತವೆ.
>
> ಅಮಾಯಕ ಯುವಕರಿಗೆ ಹಿಂದೂ ಧರ್ಮ, ಭಾರತ ಮಾತೆ ಎಂಬಿತ್ಯಾದಿ ಬುರುಡೆ ಹೊಡೆಯುತ್ತಾ ತಾನು ಮಾತ್ರ ಭಾರತಾಂಬೆಯ ಸೀರೆಯನ್ನೇ ಕದ್ದು (ಸರ್ಕಾರಿ ಭೂಮಿ ಅಂದರೆ ಭಾರತಮಾತೆಯ ಅಸ್ಥಿ ತಾನೆ) ಮಾರಲು ನಿಂತುಬಿಟ್ಟದ್ದಾನೆ. ಚಿಕ್ಕಮಗಳೂರಿನ ಜನ ಈ ದುರಾಶೆಪೀಡಿತ ರವಿ ಬಗ್ಗೆ ಈಗಲಾದರೂ ಎಚ್ಚರಗೊಳ್ಳಲಿ.

ಕಾಂಗ್ರೆಸಿನ ಮುಖಂಡರಲ್ಲಿ ಅನೇಕರು ತಮ್ಮ ಸಮುದಾಯದ ನಾಯಕರೆ ಆಗಿರುವುದರಿಂದ ಆನೆ ಬಲ ಏದ್ದಂತಿದೆ.

ಯಡಿಯೂರಪ್ಪ ಬಿಜೆಪಿಯಿಂದ ಮುಖ್ಯಮಂತ್ರಿಯಾಗದಿದ್ದಾಗ ಲಿಂಗಾಯತ ಮಠಾಧಿಪತಿಗಳೆಲ್ಲ ಆ ಸಮುದಾಯವನ್ನು ಒಗ್ಗಟ್ಟಾಗಿಸುವ ಯತ್ನಕ್ಕಿಳಿದಿದ್ದರಿಂದ, ಅನ್ಯ ಸಮುದಾಯವೆಲ್ಲ ಮಾತಾಡಿಕೊಂಡಂತೆ ಒಗ್ಗಟ್ಟಾಗಿದ್ದಾರೆ. ಅದೂಅಲ್ಲದೆ ಅಲ್ಪಸಂಖ್ಯಾತರು ಜೆಡಿಎಸ್‌ಗೆ ಮತ ಹಾಕಿ ವಂಚನೆಗೀಡಾಗಿದ್ದರು. ಹೇಗೆಂದರೆ ಜೆಡಿಎಸ್, ಬಿಜೆಪಿ ಸಮ್ಮಿಶ್ರ ಸರ್ಕಾರ ಮಾಡುತ್ತದೆಂದು ಕನಸಿನಲ್ಲೂ ಊಹಿಸಿರದಿದ್ದವರು ಮಂಗಳೂರು ಕೋಮುಗಲಭೆಯಿಂದ ಹಿಡಿದು ಕರ್ನಾಟಕದ ಮೂಲೆಮೂಲೆಯಲ್ಲೂ ತಮ್ಮ ಮೇಲೆ ಕೋಮುವಾದಿಗಳಿಂದ ದೌರ್ಜನ್ಯ ನಡೆದಿರುವುದನ್ನು ಚಾಚೂತಪ್ಪದೆ ನೆನಪಿಟ್ಟುಕೊಂಡಿದ್ದಾರೆ. ಕೋಮುವಾದಿ ಸರ್ಕಾರಗಳಿಂದ ದೂರ ಉಳಿಯಬೇಕಾದರೆ ಈ ಸಲ ಕಾಂಗ್ರೆಸ್‌ಗೆ ಮತ ಹಾಕುವ ಉತ್ಸಾಹ ತೋರುತ್ತಲಿದ್ದಾರೆ.

ಇನ್ನು ದಲಿತರ ಮತಗಳಲ್ಲಿ ಹೆಚ್ಚಿನವು ಪಕ್ಷದೊಳಗೆ ಇವೆ. ಅದೂಅಲ್ಲದೆ ಮಾಜಿ ಮುಖ್ಯಮಂತ್ರಿ ಎಸ್ ಬಂಗಾರಪ್ಪ ಕಳೆದ ಬಾರಿ ಚುನಾವಣೆ ಸಮಯದಲ್ಲಿ ಬಿಜೆಪಿ ಸೇರಿಕೊಂಡು ಆ ಪಕ್ಷವನ್ನು ಗೆಲ್ಲಿಸಲು ಯತ್ನಿಸಿಯಾಗಿದ್ದರು. ವಾಜಪೇಯಿಯವರ ವರ್ಚಸ್ಸು ಕೂಡ ಕೆಲಸ ಮಾಡಿತು. [illegible] ಕಾರಣದಿಂದ ಕಾಂಗ್ರೆಸ್ ಗೆಲುವಿಗೆ [illegible]

— [illegible]

# 'ಎಲ್ಲೈ ಸೇವಕನೆ!' ಅಂದ ಎಲ್ಲನ್ನ



ಇನ್ನೇನು ಆಟ ಶುರು ಆಗಬೇಕು, ಆಗ ಒಂದು ವಿಚಿತ್ರ ಘಟನೆ ನಡೆಯಿತು. ಮುಂದೆ ಸುತ್ತಮುತ್ತಲ ಜನ ಆಟಕ್ಕಿಂತಲೂ ಇದರ ಬಗ್ಗೇನೇ ಹೆಚ್ಚು ಮಾತನಾಡ್ತಿದ್ದರು. ಗಣಪತಿ ಪ್ರಾರ್ಥನೆ ಮುಗೀತು. ಪೋತುಲೂರಯ್ಯ ಮೇಲೆ ಒಂದು ಹಾಡು ಹೇಳಿದ್ದಾಯಿತು. ಆಗ ಸೂತ್ರಧಾರನ ವೇಷದಲ್ಲಿ ನಾಗನ್ನ 'ಎಲ್ಲೈ ಸೇವಕನೇ!' ಅಂದ. ಹಿಂದೆ ನಿಂತಿದ್ದ ತಾಳವಾದ್ಯಗಾ ಮುಂದಕ್ಕೆ ಹೆಜ್ಜೆ ಇಟ್ಟು 'ಪ್ರಭೂ!' ಅಂದ. 'ನೀನು ಹುಷಾರಿಯಾಗಿದ್ದೀಯೇನೋ' ಅಂದ ಸೂತ್ರಧಾರ. 'ಇದ್ದೀನಿ ಸ್ವಾಮಿ! ಆದ ನೀವು ಬರುವುದು ಇನ್ನು ತಡವಾದರೆ ನನ್ನ ಹಿಂದೆ ಏನಾದರೂ ಆಗಬೌದು ನೀವು ಬೇಗ ಬರುವುದು ಒಳ್ಳೆಯದು' ಅಂದ ತಾಳವಾದ್ಯಗಾರ. ಈ ಮಾತನ್ನು ಕೇಳಿದ ಎಲ್ಲರಿಗೂ ನಗುವೋ ನಗು. ಅವರ ನಗು ಮುಗಿಯುವವರೆಗೆ ಸುಮ್ಮನಿದ್ದ ನಾಗನ್ನ. ಮುಂದೆ ಆಟ ಶುರುವಾಯಿತು.

ಹಿಂದೆ ಈ ಕೇರಿಯ ಜನರೆಲ್ಲಾ ದೂರದಲ್ಲಿ ಎಲ್ಲೋ ಕೂತು ಇಂಥಾ ನಾಟಕಗಳನ್ನ ನೋಡ್ತಾ ಇದ್ದರು. ಆದರೆ ಈಗ ಅವರೆಲ್ಲಾ ಈ ಆಟಗಾರರಿಗೆ ತುಂಬಾ ಹತ್ತಿರದಲ್ಲೇ ಮಣೆಗಳು, ಚಾಪೆಗಳು, ಜಂಖಾನಾಗಳು, ಕೈಗೆ ಏನು ಸಿಕ್ಕಿದರದು ಹಾಕಿಕೊಂಡು ಕೂತಿದ್ದಾರೆ. ಹತ್ತಿರದಿಂದ ಆಟ ನೋಡೋದು ಅನ್ನೋದೇ ಅವರಿಗೆ ಒಂದು ಹೊಸ ಅನುಭವ. ಒಂದು ಜಾಗದಲ್ಲಿ ಕೂತಿದ್ದವನು ಆಚೆ ಹೋಗಿ ಹಿಂದಕ್ಕೆ ಬರುವಷ್ಟು ಬೇರೆ ಯಾರಾದರೂ ಆ ಜಾಗದಲ್ಲಿ ಕೂತಿದ್ದರೆ ಆ ಜಾಗಕ್ಕಾಗಿ ಜಗಳ, ಬೈಗುಳ ಎಲ್ಲವೂ ಜೋರಾಗಿ ಕೇಳಿಸುತ್ತಿದ್ದವು. ಪಿಟ್ಟೋನು ಬಂದು ಕೋಲು ಕೈಯಲ್ಲಿ ಹಿಡಿದು ಗಲಾಟೆ ಮಾಡುತ್ತಿರುವವರನ್ನೆಲ್ಲಾ ಗದರಿಸಿ ಕುಂತ್ಕಳ್ಳೋ ಕಾಣೋಲ್ವೇನ್ರೋ ಅಂತ ಒಂದು ಕೂಗು ಹಾಕಿದರೆ ಅಲ್ಲಿದ್ದವರೆಲ್ಲಾ ಓಹೋ! ಬಂದ ಅಚ್ಚರೆಡ್ಡಿ ಅಂತ ಅವನನ್ನ ಗೇಲಿ ಮಾಡ್ತಿದ್ದರು. ಊರಲ್ಲಿ ಯಾವುದಾದರೂ ಜಾತ್ರೆ, ಮತ್ತಾವುದೋ ಉತ್ಸವ ನಡೆದರೆ ಅಚ್ಚರೆಡ್ಡಿಯ ಕೆಲಸ ಅದೇನೇ- ಕೈಯಲ್ಲಿ ಕೋಲು ಹಿಡಿದು ಎಲ್ಲರನ್ನೂ ಗದರಿಸೋದು. ಅದೊಂದು ದೊಡ್ಡಸ್ತಿಕೆ, ಯಜಮಾನಿಕೆ. ಇದನ್ನೆಲ್ಲಾ ನೋಡುತ್ತಿದ್ದ ನಾಗನ್ನ ಮಾತ್ರ ಈ ಗಲಾಟೆಯಿಂದ ಎಷ್ಟೋ ಸಂತೋಷಪಡ್ತಿದ್ದ. ಆದರೆ ಆ ಸಂತೋಷ ಯಾಕೆ ಅನ್ನೋದು ಮಾತ್ರ ಅವನಿಗೆ ಗೊತ್ತಿರಲಿಲ್ಲ.

ಇನ್ನೇನು ಆಟ ಶುರು ಆಗಬೇಕು, ಆಗ ಒಂದು ವಿಚಿತ್ರ ಘಟನೆ ನಡೆಯಿತು. ಮುಂದೆ ಸುತ್ತಮುತ್ತಲ ಜನ ಆಟಕ್ಕಿಂತಲೂ ಇದರ ಬಗ್ಗೇನೇ ಹೆಚ್ಚು ಮಾತನಾಡ್ತಿದ್ದರು. ಗಣಪತಿ ಪ್ರಾರ್ಥನೆ ಮುಗೀತು. ಪೋತುಲೂರಯ್ಯನ ಮೇಲೆ ಒಂದು ಹಾಡು ಹೇಳಿದ್ದಾಯಿತು. ಆಗ ಸೂತ್ರಧಾರನ ವೇಷದಲ್ಲಿದ್ದ ನಾಗನ್ನ 'ಎಲ್ಲೈ ಸೇವಕನೇ!' ಅಂದ. ಹಿಂದೆ ನಿಂತಿದ್ದ ತಾಳವಾದ್ಯಗಾರ ಮುಂದಕ್ಕೆ ಹೆಜ್ಜೆ ಇಟ್ಟು 'ಪ್ರಭೂ!' ಅಂದ. 'ನೀನು ಹುಷಾರಿಯಾಗಿದ್ದೀಯೇನೋ' ಅಂದ ಸೂತ್ರಧಾರ. 'ಇದ್ದೀನಿ ಸ್ವಾಮಿ! ಆದರೆ ನೀವು ಬರುವುದು ಇನ್ನು ತಡವಾದರೆ ನನ್ನ ಹಿಂದೆ ಏನಾದರೂ ಆಗಬೌದು. ನೀವು ಬೇಗ ಬರುವುದು ಒಳ್ಳೆಯದು' ಅಂದ ತಾಳವಾದ್ಯಗಾರ. ಈ ಮಾತನ್ನು ಕೇಳಿದ ಎಲ್ಲರಿಗೂ ನಗುವೋ ನಗು. ಅವರ ನಗು ಮುಗಿಯುವವರೆಗೆ ಸುಮ್ಮನಿದ್ದ ನಾಗನ್ನ. ಮುಂದೆ ಆಟ ಶುರುವಾಯಿತು. ಆಟ ನೋಡ್ತಾ ಇದ್ದ ಜನ ಸ್ವೇಚ್ಛೆಯಿಂದ ಸಂತೋಷಪಡ್ತಿದ್ದರು. ಜೋರಾಗಿ ನಗ್ತಾ ಇದ್ದರು. ಶ್ಯಾನುಭೋಗನೋ, ಊರಿನ ಬೇರೆ ದೊಡ್ಡವರೋ ನೋಡ್ತಾರೆ ಅನ್ನೋ ಹೆದರಿಕೆ ಇಲ್ಲದೆ ನಗುತ್ತಿದ್ದರು. ಆಟ ಅವರದು, ಆಟ ಆಡುವವರು ಅವರು, ನೋಡುವವರು ಅವರು. ಅವರ ನಗು ನಿಂತಾಗ ಸೂತ್ರಧಾರ ನಾಗನ್ನ ಹೇಳಿದ ಮಾತು ಅವರೆಲ್ಲರ ಸ್ವಾಭಿಮಾನವನ್ನ ಎತ್ತಿ ನಿಲ್ಲಿಸಿತ್ತು.

'ಎಲ್ಲೈ ಸೇವಕನೇ!'

'ಪ್ರಭೂ!'

'ಘನತೆವೆತ್ತ ಹೊಲೆಯ, ಮಾದಿಗರ ನಾಯಕರಿಬ್ಬರೂ ಬಂದು ತಮ್ಮ ಸ್ಥಾನದಲ್ಲಿ ಆಸೀನರಾಗಿದ್ದಾರೇನೋ ನೋಡುವಂಥವನಾಗು!'

ಈ ಮಾತಿನಿಂದ ಒಂದು ಕ್ಷಣನಿಶ್ಯಬ್ದ. ಯಾರ ಬಾಯಲ್ಲೂ ಉದ್ಗಾರ ಹೊರಡಲಿಲ್ಲ. ಅಲ್ಲಿ ಸೇರಿದ ಜನ ಆ ಮಾತನ್ನ ನಂಬಲಾರದೇ ನಂಬಲೇಬೇಕಾಯಿತು. ನಿಜವಾಗಿಯೂ ಆ ಮಾತನ್ನು ನಾಗನ್ನ ಆಡಿದನಾ ಅನ್ನೋ ಪ್ರಶ್ನೆನೇ ಎಲ್ಲರನ್ನೂ ಕಾಡಿತ್ತು. ಅವನು ಹೇಳಿದ್ದೇನು? ಅದೇ ಮಾತಂದನೇನು? ಜನರಲ್ಲಿ ಸಂಭ್ರಮವೋ ಸಂಭ್ರಮ. ಆಕಾಶದಲ್ಲಿ ಬೆಳದಿಂಗಳ ಮೋಡಗಳು ಗೊಂದಲದಲ್ಲಿ ಬಿದ್ದು ಓಡ್ತಾ ಇದ್ದ ಹಾಗೆ. ಪಿಟ್ಟೋನ ಮೈಯಲ್ಲಿ ವಿಪರೀತ ರಕ್ತ ಸಂಚಲನ-ಯಾಕೆ ಅನ್ನೋದು ಅರ್ಥವಾಗ್ತಾ ಇಲ್ಲ.

'ಎಲ್ಲೈ ಸೇವಕನೇ! ಮಾತುಗಳು ಉಡುಗಿ ಹೋಗಿವೆಯೇನು? ಘನತೆವೆತ್ತ ಹೊಲೆಯರ ಹಿರಿಯ ಮತ್ತು ಅಷ್ಟೇ ಘನತೆವೆತ್ತ ಮಾದಿಗ ಹಿರಿಯ-ಇಬ್ಬರೂ ಬಂದಿದ್ದಾರೋ ಇಲ್ಲವೋ ನೋಡಲಿಲ್ಲವೇನು?'

ನಾಗನ್ನನ ಈ ಮಾತುಗಳು ಈ ಬಾರಿ ಜನರಿಗೆ ಸ್ಪಷ್ಟವಾಗಿ ಕೇಳಿಸಿದವು, ಸ್ಪಷ್ಟವಾಗಿ ಅರ್ಥವಾದವು.

'ಬರುತ್ತಿದ್ದಾರೆ, ಪ್ರಭೂ!'

ಜನರೆಲ್ಲಾ ಹಿಂದಕ್ಕೆ ತಿರುಗಿ ನೋಡಿದರು. ಈ ಮಾತು ಹೇಳೋವರೆಗೂ ಬರಬೇಡ ಅಂತ ನಾಗನ್ನ ಆ ಇಬ್ಬರಿಗೂ ಮೊದಲೇ ತಾಕೀತು ಮಾಡಿದ್ದ. ಅವರಿಬ್ಬರೂ ಆಟ ನಡೆಯೋ ಜಾಗದಿಂದ ಸ್ವಲ್ಪ ದೂರದಲ್ಲಿ ಒಂದು ಕಲ್ಲು ಗುಡ್ಡೆಯ ಮೇಲೆ ಕೂತಿದ್ದವರು ನಾಗನ್ನನ ಸೈಗೆಯನ್ನು ನೋಡಿ ಎದ್ದು ಬಂದರು. ಅಲ್ಲಿಯವರೆಗೂ ಹಳೇ ರೀತಿಯಲ್ಲೇ ದೂರದಲ್ಲಿ ಕುಳಿತಿದ್ದಂತೆಯೇ ಅವರಿಗೆ ಅನ್ನಿಸ್ತಿತ್ತು. ಅವರ ಹೆಸರುಗಳನ್ನ ನಾಗನ್ನನ ಬಾಯಲ್ಲಿ ಕೇಳಿದ ಮೇಲೇನೇ ಇವತ್ತಿನ ಹೊಸತನ ಅವರಿಗೆ ಗೊತ್ತಾಗಿದ್ದು. ಹೌದಲ್ಲ! ಇದು ಹಳೇ ತರಾ ಅಲ್ಲ! ಅಂದುಕೊಂಡರು ಇಬ್ಬರು. ಆ ಸ್ವಲ್ಪ ದೂರ ನಡೆಯೋದೇ ಅವರಿಗೆ ತುಂಬಾ ಕಷ್ಟ ಅನ್ನಿಸ್ತಿತ್ತು. ಹೇಗೆ ನಡೀಬೇಕು ಅನ್ನೋದೇ ಗೊತ್ತಾಗ್ತಿರಲಿಲ್ಲ. ಜನರೆಲ್ಲಾ ತಮ್ಮನ್ನೇ ನೋಡೋದೇ ವಿಚಿತ್ರವಾದ ಅನುಭವವಾಗಿತ್ತು.

'ನಮಗೆ ಇನ್ಮೇಲೆ ಶ್ಯಾನುಭೋಗರು ಇಬ್ಬರಯ್ಯ ಪಿಟ್ಟೋನೇ' ಯಾರೋ ಜೋರಾಗಿ ಕೂಗಿದರು. ದೊಡ್ಡದಾಗಿ ನಗು, ಆ ನಗುವಿನ ನಡುವೆ ಈ ಇಬ್ಬರು ಕುಲ ಮುಖಂಡರು ಮಹಾ ಪ್ರಸ್ಥಾನವನ್ನ ಮುಗಿಸಿ ಆ ನಡೆಯೋ ಹತ್ತಿರಕ್ಕೆ ಬಂದು ಕೂತರು. ಆ ಶುರುವಾಯಿತು.

ನರಸಿಂಹಸ್ವಾಮಿ ತಾನು ಬೇಟೆಗೆ ಹೋಗುತ್ತೇನೆಂದು ಆದಿಲಕ್ಷ್ಮಿಗೆ ಹೇಳಿದರೆ ಆದಿಲಕ್ಷ್ಮಿ ಮೊದಲಿಗೆ ಅವನನ್ನು ಹೋಗಲು ಬಿಡಲಿಲ್ಲ. ಕೊನೆಗೂ ಅವಳನ್ನು ಒಪ್ಪಿ ಕಾಡನ್ನು ಹೊಕ್ಕ ನರಸಿಂಹಸ್ವಾಮಿಯ ಕಣ್ಣಿಗೆ ಚೆಂಚುಲಕ್ಷ್ಮಿ ಬಿದ್ದಳು. ಅವನಿಗೆ ಇಷ್ಟವಾದಳು. ಅವನಿಗೆ ಮ ಹತ್ತೋಕೆ ಮೊದಲುಗೊಂಡು ಜೇನು ತೆಗೆಯೋವರೆಗು ಒಬ್ಬ ಕಾಡಿನ ಹುಡುಗ ಏನೇನು ಮಾಡ್ತಾನೋ ಎಲ್ಲವೂ ಇವನಿಗೂ ಬರುತ್ತೋ ಇಲ್ಲವೋ ತಿಳಕೊಂಡ ನಂತರವೇ ಅವಳು ಅವನಿಗೆ ಸ್ವಲ್ಪ ಹತ್ತಿರವಾದಳು. ಅವಳು ಕೇಳಿದ್ದಕ್ಕೆಲ್ಲಾ ನರಸಿಂಹಸ್ವಾಮಿಯದು ಒಂದೇ ಉತ್ತರ. 'ಓ! ಬರುತ್ತೆ' ಹೀಗೆ ಆಟ ನಡೀತಿರಬೇಕಾದರೆ ಅಲ್ಲಿ ಕಾಣೋವೇ ಜೀವಂತ ಪಾತ್ರಗಳು. ದೇವರು, ದೇವತೆ, ಮಂತ್ರ ಮಾಯ-ಇದ್ಯಾವುದೂ ಇಲ್ಲ. ದಿನನಿತ್ಯದ ಜೀವನವೇ ಕಣ್ಣಮುಂದೆ ನಡೀತಾ ಇದ್ದದ್ದು. ಚೆಂಚುಲಕ್ಷ್ಮಿ ಹಾ ಕೇಳುತ್ತಿರುವಾಗ ಮುದುಕಿ ಸುಬ್ಬರತ್ತ 'ಹಾಗೇ ಅವನಿ ಕಣ ಒಪ್ಪ ಮಾಡೋದು ಬರುತ್ತೋ ಇಲ್ಲವೋ, ಅದು ತಿಳ್ಕೊಳೇ ಹುಡುಗೀ!' ಅಂತ ಕೂಗಿದಳು.

ಎರ್ರೆಂಕಾ ನಿಮ್ಮ ಹುಡುಗನಿಗೆ ಕಣ ಒಪ್ಪ ಮಾಡೋದು ಬರುತ್ತೇನೋ ಯಾರೋ ಕೇಳಿದರು. ನರಸಿಂಹ ವೇಷದಲ್ಲಿದ್ದ ಎಲ್ಲನ್ನ ತಕ್ಷಣವೇ ಹೇಳಿದ. 'ಆಹಾ! ...

## ಭಲಾರೇ ವಿಚಿತ್ರಂ!

ವಿನಯ್ ಲಾಲ್ ಮತ್ತು ಆಶೀಶ್ ನಂದಿ ಸಂಪಾದಿಸಿರುವ ಪರಿಭಾಷಕೋಶದ ಕನ್ನಡದ ಭಾಗಶಃ ಅನುವಾದ 'ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು' ಕುರಿತು 'ಶ್ರೀ'ಯವರು ಬರೆದಿರುವ ವಿಮರ್ಶೆಯಲ್ಲಿ ಆಶೀಶ್ ನಂದಿ ಕುರಿತಾಗಿ ಎರಡು ಗುರುತರವಾದ ಟೀಕೆಗಳನ್ನು ಮಾಡಿದ್ದಾರೆ (ಒಡೆದು ಓದುವ ಬಗೆ... ಹೇಗೆ?, ಜನವರಿ 30,2008). ಆ ಟೀಕೆಗಳು: (1) ''ನಂದಿಯವರ ವಿಚಾರಧಾರೆಗಳು ಕನ್ನಡ ಓದುಗರಿಗೆ ಸಿಕ್ಕಷ್ಟು ಸುಲಭವಾಗಿ ಅದನ್ನು ಒಪ್ಪದವರ ವಿಚಾರಧಾರೆಗಳು ಸಿಗುವುದಿಲ್ಲ'' (2) ''ಆಶೀಶ್ ನಂದಿ ಆಧುನಿಕತೆ ಮತ್ತು ಸಂಪ್ರದಾಯಗಳನ್ನು ಪರಾಮರ್ಶಿಸುವ ಬಗ್ಗೆ ವಿವಿಧ ಚಿಂತಕರು ತಕರಾರುಗಳನ್ನೆತ್ತಿದ್ದಾರೆ. ಒಬ್ಬ ವಿಮರ್ಶಕಿಯಂತೂ ನಂದಿ ಮತ್ತು ಅವರ ಸಿದ್ಧಾಂತವನ್ನು ಅನುಸರಿಸುವ ವಸಾಹತೋತ್ತರ ಚಿಂತಕರನ್ನು 'ಗೊತ್ತಿದ್ದೋ ಗೊತ್ತಿಲ್ಲದೆಯೋ ಹಿಂದೂ ಬಲಪಂಥೀಯರ ಟ್ರೋಜನ್ ಕುದುರೆಗಳು ಇವರು' ಎಂದೂ ಹೇಳಿದ್ದಾರೆ.''

ನನಗೆ ಈ ಟೀಕೆಗಳಿಗೆ ಪ್ರತಿಕ್ರಿಯಿಸುವುದು ಎರಡು ಕಾರಣಗಳಿಗೆ ಜರೂರಾಗಿದೆ. ಒಂದು, ನಾನು ಈ ಕೃತಿಯ ಐದು ಲೇಖನಗಳನ್ನು ಅನುವಾದ ಮಾಡಿದ್ದೇನೆ; ಎರಡು, ಆಶೀಶ್ ನಂದಿಯವರ ಮಾತು-ಬರಹಗಳ ಕುರಿತಾಗಿ ತುಂಬ ಉತ್ಸಾಹ-ಆಸಕ್ತಿಗಳನ್ನು ಉಳ್ಳವರಲ್ಲೂ, ಅವರ ವಿಚಾರಗಳು ನಮ್ಮ ಕಾಲವನ್ನು ಅರಿಯುವಲ್ಲಿ ತುಂಬ ಮುಖ್ಯವಾದವು ಎಂದುಕೊಂಡವರಲ್ಲೂ, ನಾನೂ ಒಬ್ಬ. ಆಶೀಶ್ ನಂದಿಯವರ ವಿಚಾರಗಳು ಕನ್ನಡದ ಓದುಗರಿಗೆ 'ಸುಲಭ'ದಲ್ಲಿ ಸಿಕ್ಕುತ್ತವೆ ಎನ್ನುವುದಕ್ಕೆ 'ಶ್ರೀ' ಬಳಸುವ ಮಾನದಂಡವೇನು ಎನ್ನುವುದು ಅವರ ಬರಹದಲ್ಲಿ ಸ್ಪಷ್ಟವಿಲ್ಲ. ಅಕ್ಷರ ಚಿಂತನಮಾಲೆಯಲ್ಲಿ ಪ್ರಕಟವಾದ ನಂದಿಯವರ ಆಯ್ದ ಬರಹಗಳ ಸಂಗ್ರಹ 'ಆಶೀಶ್ ನಂದಿ ವಿಚಾರ' ಎಂಬ ಪುಸ್ತಕ ಹಾಗು ನಿನಾಸಂ ರಂಗಶಿಕ್ಷಣ ಕೇಂದ್ರ ಪ್ರಕಟಿಸುವ ಮಾಸಿಕ ಪತ್ರಿಕೆ 'ಮಾತುಕತೆ'ಯಲ್ಲಿ ಪ್ರಕಟವಾಗಿರುವ ಅವರ ಭಾಷಣಗಳ ಲಿಖಿತ ಕನ್ನಡ ರೂಪಗಳ ಹೊರತಾಗಿ ನಂದಿಯವರ ಮೂಲಬರಹವನ್ನು ಕನ್ನಡದಲ್ಲಿ ನಾನು ಕಂಡಿಲ್ಲ. ಇವುಗಳು 'ಸುಲಭ'ದಲ್ಲಿ ಸಿಗುವಂತಿದ್ದರೂ, ಈ ಬರಹಗಳನ್ನು ಓದಿದ 'ಕನ್ನಡಬಲ್ಲ ಜನರ' ಸಂಖ್ಯೆಯ ಬಗ್ಗೆ ನನಗೆ ಅನುಮಾನವಿದೆ. ಇನ್ನೂ ಅವರ ವಿಚಾರಗಳನ್ನು ಕನ್ನಡದಲ್ಲಿ ಬರೆಯುವವರು ಪ್ರಚಾರ ಮಾಡುವ ಮಾರ್ಗ; ಡಿ.ಆರ್.ನಾಗರಾಜ್, ಜಿ.ರಾಜಶೇಖರ್ ಮತ್ತು ಕೆ.ವಿ.ಅಕ್ಷರ ತಮ್ಮ ಕೆಲವು ಬರಹಗಳಲ್ಲಿ ಆಶೀಶರ ವಿಚಾರಗಳನ್ನು ಪ್ರಸ್ತಾಪಿಸಿರುವುದನ್ನು ನೋಡಬಹುದು. ಈ ಬರಹಗಳು ತಮ್ಮದೇ ಸ್ವಂತವಾದ ವಿಚಾರಧಾರೆಯ ಸಂದರ್ಭದಲ್ಲಿ ನಂದಿಯವರ ಚಿಂತನೆಗಳನ್ನು ಪೋಷಕವಾಗಿಯೂ, ವಿಮರ್ಶಾತ್ಮಕವಾಗಿಯೂ ತಂದಿವೆಯೇ ಹೊರತಾಗಿ ಒಂದು 'ಪ್ರಚಾರ ಸಾಮಗ್ರಿ'ಯಾಗಿ ಅಲ್ಲ ಎನ್ನುವುದು ಮುಖ್ಯ. ನನ್ನ ಪ್ರಕಾರವಂತೂ ಈ ಬರಹಗಳು ವೈಚಾರಿಕ ಅನುಸಂಧಾನದ ಬಹು ಆರೋಗ್ಯಕರ ಮಾರ್ಗಗಳಾಗಿವೆ. ಈ ಬರಹಗಳನ್ನಾದರೂ ಎಷ್ಟು ಜನ 'ಕನ್ನಡ ಬಲ್ಲವರು' ಓದಿದ್ದಾರೋ ದೇವರೇ ಬಲ್ಲ! ಈಗ 'ಕನ್ನಡದ ಜನರಿಗೆ' 'ಸುಲಭವಾಗಿ' ಲಭ್ಯವಿರುವುದು, ಆಶೀಶ್ ರಾಜಿಯಿಲ್ಲದೆ ಜಾಡಿಸುವ, ಭಾರತದ ಅಧಿಕಾರ ವರ್ಗದ 'ಆಧುನಿಕತೆ' ಹಾಗು 'ಹಿಂದುತ್ವದ ಆಧುನಿಕತೆ'ಯೇ ಹೊರತಾಗಿ ನಂದಿಯವರ ವಿಚಾರಗಳಲ್ಲ. ಉದಾಹರಣೆಗೆ, ದಿ.8.12.2008 ರ ಟೈಮ್ಸ್ ಆಫ್ ಇಂಡಿಯ ಪತ್ರಿಕೆಯಲ್ಲಿ ನಂದಿ ಬರೆದ 'ಬ್ಲೇಮ್ ಇಟ್ ಆನ್ ಮಿಡ್ಲ್ ಕ್ಲಾಸ್' ಲೇಖನವನ್ನೇ ನೋಡಬಹುದು. ಗುಜರಾತಿನ ಸಾಮಾಜಿಕ ಮನೋಸ್ಥಿತಿಯ ಕುರಿತಾದ ಬಹು ತೀಕ್ಷ್ಣವಾದ ಈ ಬರಹಕ್ಕೆ ಅಸಹನೆ, ವಿಷ ತುಂಬಿದ ಪ್ರತಿಕ್ರಿಯೆಗಳು ಎಷ್ಟು ಪ್ರಮಾಣದಲ್ಲಿ





ಬರತೊಡಗಿದವೆಂದರೆ, ಸಂಪಾದಕರು ತಮ್ಮ ಪತ್ರಿಕೆಯ ನಿಲುವು ಹಾಗೂ ಲೇಖನವನ್ನು ಪ್ರಕಟಿಸಿದ ಉದ್ದೇಶವನ್ನು ವಿಶೇಷವಾಗಿ ವಿವರಿಸಬೇಕಾಯಿತು. ಇಂತಹ ಬರಹಗಳು, ಇದೇ ಟೈಮ್ಸ್ ಆಫ್ ಇಂಡಿಯಾದ ಮಾಲಿಕತ್ವದಲ್ಲಿರುವ 'ವಿಜಯ ಕರ್ನಾಟಕ'ದ ಓದುಗರಿಗೆ 'ಸುಲಭವಾಗಿ' ಲಭ್ಯವಿಲ್ಲ! ಲಭ್ಯವಿರುವುದು ಏನಿದ್ದರೂ ಅಂತಹ

...ಲುವುದು ಬರುತ್ತದೆ!' 'ಎಲ್ಲ ಬರೀ ಒಣಜಂಭ' ಸುಭದ್ರ ಭೂದೇವಿಯ ಕಿವಿಯಲ್ಲಿ ಉಸುರಿದಳು. 'ತಳ್ಳೆ ಹುಡುಗೀ!' ಅಂತ ಭೂದೇವಿ ಸುಭದ್ರಳ ಕೆನ್ನೆ ಹಿಂಡಿದಳು. ಭೂದೇವಿಯ ಮಡಿಲಲ್ಲಿ ಮಲಗೇ ಆಟ ನೋಡ್ತಾ ಇದ್ದ ಸುಭದ್ರಳಿಗೆ ಎಲ್ಲಿಲ್ಲದ ಸಂತೋಷ.

ತಾನು ಬೇಕಾದರೆ ತನ್ನ ತಂದೆ ಹತ್ತಿರ ಮಾತಾಡು ಅಂತ ಚೆಂಚುಲಕ್ಷ್ಮಿ ಹೇಳಿದ್ದಕ್ಕೆ ನರಸಿಂಹಸ್ವಾಮಿ ಅವಳ ತಂದೆಯ ಹತ್ತಿರಕ್ಕೆ ಹೋದ. ಅವರಿಬ್ಬರ ಮಾತು ಶುರುವಾಯಿತು. ಆ ತಂದೆ ತನ್ನ ಮಗಳನ್ನ ಇವನಿಗೆ ಕೊಡಬೇಕಾದರೆ ಇವನು ಕೊಡಬೇಕಾದ ಸುಲ್ಕದ ಬಗ್ಗೆ ಮಾತುಕತೆ ನಡೀತು. ನರಸಿಂಹಸ್ವಾಮಿ ಒಂದು ಸೇರು ಅಡಿಕೆ, ಐದು ಕಟ್ಟುಎಲೆ ಕೊಡಬೇಕು ಅಂತ ಮಾತು ನಡೀತಿದ್ದಂತೆಯೇ 'ಅಡಿಕೆ ಒಂದು ಸೇರಲ್ಲವೋ ಕೋಟ! ಒಂದೂವರೆ ಸೇರು' ಎಂದು ಯಾರೋ ಸೇರಿಸಿದರು. ಕೋಟಿಗಾನು ಚೆಂಚುಲಕ್ಷ್ಮಿ ತಂದೆ ವೇಷ ಹಾಕಿದ್ದ. ಇನ್ನೊಬ್ಬ 'ಒಂದೂವರೆ ಸೇರೇನಾ! ಎರಡು ಸೇರು!' ಅವನು ಪಕ್ಕೆಲದಿನ್ನೆಯವ. 'ಕೋಳ್ಳದಿನ್ನೇಲಿ ಒಂದೂವರೆ ಸೇರೇ!' ಕೋಳ್ಳದಿನ್ನೆಯವನೊಬ್ಬನ ಕೂಗು. ಚಿಂತಲಗುಂಟದಲ್ಲಿ ಅಡಿಕೆ ಲೆಕ್ಕ ಇಲ್ಲ, ಅಲ್ಲಿ ಲೆಕ್ಕ ಎಲೆಗಳದು. ಐದು ಕಟ್ಟಲ್ಲ ಏಳು, ಏಳು ಕಟ್ಟು! ಇನ್ನೊಂದು ದನಿ. ಎನ್ನೆಲದಿನ್ನೆ ಲೆಕ್ಕಾನೇ ಸರಿ ಅಂತ ಒಬ್ಬನೆಂದರೆ, ಇಲ್ಲ ಇಲ್ಲ ಪಕ್ಕೆಲದಿನ್ನೆದೇ ಸರಿ ಅಂತ ಮತ್ತೊಬ್ಬ. ಆಟದಲ್ಲಿನ ತೆರದ ಬಗ್ಗೆ ಇಲ್ಲೆ ನಿಜವಾಗ್ಲೂ ದೊಡ್ಡದಾದ ವಾಗ್ವಾದ.

## ಪಿ. ಕಲ್ಯಾಣರಾವ್‌ರವರ

# ಅಸ್ಪೃಶ್ಯ ವಸಂತ



9

**ಅನುವಾದ: ಪ್ರೊ. ನಗರಗೆರೆ ರಮೇಶ್**

ಎಲ್ಲನ್ನನಿಗೆ ಆಶ್ಚರ್ಯ.

ನಾಗನ್ನನಿಗೆ ಆನಂದ.

ಕೋಟಿಗಾನು ಯಾವ ಲೆಕ್ಕ ಹೇಳೋದು ಅಂತ ಅರ್ಥವಾಗದೇ ಸುಮ್ಮನೆ ನಿಂತುಬಿಟ್ಟ.

ನಿಜವಾದ ನಾಟಕ ಹೀಗೇ ನಡೀತಾ ಇತ್ತು. ಜನರ ನಡುವೆ, ಜನರ ಜೊತೆಜೊತೆಯಾಗಿ....

'ಕೊನೆಗೂ ಏನು ತೆರ ಬಯಸುವೆ ಪರ್ವತ ರಾಜಾ!' ನರಸಿಂಹಸ್ವಾಮಿ ವೇಷದ ಎಲ್ಲನ್ನ ಚೆಂಚುಲಕ್ಷ್ಮಿ ತಂದೆಯ ಪಾತ್ರದ ಕೋಟಿಗಾನನ್ನ ಪ್ರಶ್ನೆ ಕೇಳಿದ.

'ಎಲ್ಲಾ ಸೇರಿಸಿ ಹೇಳಿಬಿಡೋ ಕೋಟ!' ಹೊಲೆಯರ ಕೇರಿಯ ಆ ಜಗಳ ಬಿಡಿಸೋ ಪಂಚಾಯತಿಯ ಪ್ರಮುಖನಂತೆ ತನ್ನ ತೀರ್ಪನ್ನು ಹೇಳೇಬಿಟ್ಟ.

ಸೂತ್ರಧಾರಿ ವೇಷದ ನಾಗನ್ನ ನರಸಿಂಹಸ್ವಾಮಿ ಕಡೆ ವಕಾಲತ್ತು ವಹಿಸಿಕೊಂಡು ಹೇಳಿದ.

'ರಾಜನೇ! ಎನ್ನೆಲದಿನ್ನೆ, ಪಕ್ಕೆಲದಿನ್ನೆ, ಕೋಳ್ಳದಿನ್ನೆ, ಚಿಂತಲಗುಂಟ–ಈ ಎಲ್ಲ ಊರುಗಳ ಆಚಾರದ ಪ್ರಕಾರ ಎಲ್ಲಾ ಸೇರಿ ಎಷ್ಟು ಸೇರು ಅಡಿಕೆ ಆದರೆ ಅಷ್ಟು ಸೇರು ಅಡಿಕೆ, ಎಷ್ಟು ಕಟ್ಟು ಎಲೆ ಆದರೆ ಅಷ್ಟು ಕಟ್ಟು ಎಲೆ ಕೊಡಲು ನಾವು ಸಿದ್ಧ ನಿನ್ನ ಪುತ್ರಿಯನ್ನು ನಮ್ಮ ನರಸಿಂಹಸ್ವಾಮಿಗೆ ಕೊಡಲು ನಿನಗೆ ಸಮ್ಮತವಿದೆಯೇ?' ಅಂದ.

'ಇಗೋ, ಇದಪ್ಪ ಮಾತು ಅಂದರೆ.' ಅಂತ ಅಲ್ಲಿದ್ದ ಜನರೆಲ್ಲರ ಒಗ್ಗರಣೆ ಬಿತ್ತು.

ಮದುವೆ ಆದ ಮೇಲೆ ಚೆಂಚುಲಕ್ಷ್ಮಿ, ಆದಿಲಕ್ಷ್ಮಿಯರ ನಡುವಿನ ಸವತಿ ಮತ್ಸರ, ಸವತಿ ಜಗಳ ಅದರಲ್ಲಿ ಎಷ್ಟೊಂದು ಲವಲವಿಕೆ!

ಬೆಳಕು ಹರಿಯೋವರೆಗೂ ನಾಟಕ ನಡೆದಿತ್ತು, ಅಲ್ಲಿದ್ದವರೆಲ್ಲಾ ಆಟವನ್ನ ತೃಪ್ತಿಯಾಗಿ ನೋಡಿದರು. ಅದಕ್ಕಿಂತಲೂ ಹೆಚ್ಚುಗಾರಿಕೆಯ ಮಾತೆಂದರೆ ಎಲ್ಲರೂ ತಮಗೆ ಬೇಕಾದ ಹಾಗೆ, ಸ್ವತಂತ್ರವಾಗಿ ನೋಡಿದರು.

ಆಟ ಮುಗಿದ ಮೇಲೆ ಸುತ್ತಮುತ್ತಲ ಹಳ್ಳಿಗಳ ಜನ ತಂತಮ್ಮ ಊರುಗಳಲ್ಲಿಯೂ ಆಟ ಆಡೋದಕ್ಕೆ ಕರೆದರು. ಪಕ್ಕೆಲದಿನ್ನೆ, ಕೋಳ್ಳದಿನ್ನೆ, ಚಿಂತಲಗುಂಟ– ಹೀಗೆ ನಾಲ್ಕಾರು ಹಳ್ಳಿಗಳಲ್ಲಿ ಯಾವ ಯಾವ ದಿನ ಆಟ ನಡೆಯೋದು ಅನ್ನೋದೂ ಮಾತಾಯಿತು. ಈ ಎಲ್ಲಾ ಮಾತೂ ನಾಗನ್ನನ ಒಪ್ಪಿಗೆಯಂತೆ ಆಯಿತು. ಮೂರು ಊರುಗಳಲ್ಲಿ ಆಟ ಬಹಳ ಚೆನ್ನಾಗಿತ್ತು ಅಂದರು. ಚಿಂತಲ ಗುಂಟದಲ್ಲಿ ಆಟ ಆಡೋವಾಗಂತೂ ನರಸಿಂಹಸ್ವಾಮಿಯ ವಿಶ್ವರೂಪ ಎಲ್ಲನ್ನನಲ್ಲಿ ಸ್ಪಷ್ಟವಾಗಿ ಕಾಣಿಸಿಕೊಳ್ತು. ಆದಿಲಕ್ಷ್ಮಿಯ ಜೊತೆಯಲ್ಲಿದ್ದ ನರಸಿಂಹಸ್ವಾಮಿ, ಉಗ್ರನರಸಿಂಹ, ಚೆಂಚುಲಕ್ಷ್ಮಿಯ ಜೊತೆಯಲ್ಲಿದ್ದ ನರಸಿಂಹ ಈ ಎಲ್ಲರ ನಡುವಿನ ವ್ಯತ್ಯಾಸ ತುಂಬಾ ಚೆನ್ನಾಗಿ ಎಲ್ಲನ್ನನ ಕುಣಿತದಲ್ಲಿ, ಮಾತಿನಲ್ಲಿ ಎದ್ದು ಕಾಣಿಸ್ತಿತ್ತು ಅಂತ ನಾಗನ್ನನಿಗೆ ತೃಪ್ತಿಯಾಯಿತು. ಎಲ್ಲನ್ನ ಸಾಮಾನ್ಯನಲ್ಲ ಮಹಾನಟ.

ಈ ಬಯಲು ಭಾಗವತವೇ, ಸಂಗೀತ, ನೃತ್ಯ, ಅಭಿನಯ– ಇವೆಲ್ಲಾ ಸೇರಿ ರೂಪುಗೊಂಡಿರೋ ವಿಶಿಷ್ಟ ಕಲೆ. ತಮ್ಮ ತಮ್ಮ ದೇವರುಗಳನ್ನ ತಮ್ಮ ಜೊತೆಯವರಂತೆಯೇ ಊಹಿಸಿ ಕೊಂಡು ಅವರ ಜೊತೆ ಮಾತನಾಡ್ತಾ, ಅವರಂತೆ ತಾವೂ ಆಡ್ತಾ ತಮ್ಮಂತೆಯೇ ಅವರನ್ನೂ ಆಡಿಸ್ತಾ ಬಾಳಿದ ಜನರ ಜೀವನ, ಅವರ ಸಂಸ್ಕೃತಿ. ದೇವತೆಗಳನ್ನು, ದೇವರುಗಳನ್ನು ಥೇಟ್ ಹಳ್ಳಿಗಾಡಿನವರಂತೆಯೇ ಕಲ್ಪಿಸಿಕೊಳ್ಳುತ್ತಾ, ಮಾತನಾಡುತ್ತಾ ನಡೆದ ಜನರ ನಡುವೆ ಅಡ್ಡ ಪರದೆಗಳಿಲ್ಲದ ಒಂದು ಸಜೀವ ಪ್ರಕ್ರಿಯೆ.

ನೋಡಿದರೆ ಎನ್ನೆಲದಿನ್ನೆ ನಾಟಕ ನೋಡಬೇಕು ಅನ್ನುವಷ್ಟರ ಮಟ್ಟಿಗೆ ಈ ಆಟ ಹೆಸರುವಾಸಿಯಾಯಿತು. ಚೆಂಚುಲಕ್ಷ್ಮಿಯ ನಂತರ ಪ್ರಹ್ಲಾದ ನಾಟಕ ಕಲಿತರು. ಎಲ್ಲನ್ನ ಹಿರಣ್ಯ ಕಶಿಪುವಾಗಿ ಜನರ ಮನಸ್ಸಿನಲ್ಲಿ ನಿಂತುಬಿಟ್ಟ. ಬಸುರಿಯರು ಈ ಆಟ ನೋಡಬಾರದು ಅಂತ ಟಾಂಟಾಂ ಹಾಕೋ ಅಷ್ಟರ ಮಟ್ಟಿಗಿತ್ತು ಅವನ ಅಭಿನಯ, ವೇಷ. ಇದೆಲ್ಲಾ ಆದಮೇಲೆ ನಾಗನ್ನ ಪೋತುಲೂರಿ ವೀರ ಬ್ರಹ್ಮಯ್ಯ ನಾಟಕ ಕಲಿಸೋಕೆ ಶುರುಮಾಡಿದ.

*(ಮುಂದುವರೆಯುವುದು)*

■

...ಲುವುಗಳ ಬಗ್ಗೆ ಯೋಜಿತ ರೀತಿಯಲ್ಲಿ ಹರಿಬಿಡುವ ...ಎಸ್.ಎಂ.ಎಸ್.ಗಳ ಕೊಚ್ಚೆಯ ಮಹಾಪೂರ! 'ರಾಮ ಜನ್ಮಭೂಮಿ ಚಳವಳಿ' ಮತ್ತು ಆ ಪ್ರಯುಕ್ತ ನಡೆದ ಅಡ್ವಾಣಿಯ ರಥಯಾತ್ರೆಯ ಕಾಲದ ಹಿಂಸೆಯ ಸತ್ಯಶೋಧಕ ಅಧ್ಯಯನವಾದ 'ಕ್ರಿಯೇಟಿಂಗ್ ನ್ಯಾಷನ್ಯಾಲಿಟಿ: ರಾಮಜನ್ಮಭೂಮಿ ಮೂವ್‌ಮೆಂಟ್ ಅಂಡ್ ಸರ್ಚ್ ಫಾರ್ ದಿ ಸೆಲ್ಫ್' ಪುಸ್ತಕ ದೂರ ಉಳಿಯಿತು. ಅದರ ವೈಚಾರಿಕತೆಯಾದರೂ ಕನ್ನಡದ ಓದುಗರಿಗೆ 'ಸುಲಭ'ವಾಗಿ ಸಿಕ್ಕುತ್ತಿದೆಯೋ? 'ಶ್ರೀ'ಯವರು ಈ 'ಸುಲಭವಾಗಿ ಸಿಕ್ಕುವ' ವ್ಯಾಖ್ಯಾನದ ಮೂಲಕ, ಆಶೀಶ್ ನಂದಿಯವರ ವಿಚಾರಗಳು ಅಧಿಕಾರಸ್ಥವಾದವು, ಅವುಗಳಿಗೆ ತಕರಾರು ...ತುತ್ತಿರುವವರ ವಿಚಾರಗಳು ಅಧಿಕಾರ ...ಶೋಧವಾದವು ಎಂಬ ಅರ್ಥ ಹೊರಡಿಸುವ ...ಯತ್ನ ಮಾಡುತ್ತಿದ್ದಾರೆ. ಆಶೀಶರ ಮುಖ್ಯ ಕೃತಿಗಳ ...ಚಾರಗಳನ್ನು ತಾಳ್ಮೆಯಿಂದ ಮನಗಂಡು ...ಮರ್ಶಿಸುವ ವ್ಯವಧಾನವಿಲ್ಲದ ಸೈದ್ಧಾಂತಿಕ ಉಡಾಫೆ ...ದು. ಆಶೀಶರನ್ನು 'ಹಿಂದು ಬಲಪಂಥದ ಟ್ರೋಜನ್ ಕುದುರೆ' ಎಂದು ಕರೆದ 'ಒಬ್ಬ ವಿಮರ್ಶಕಿ'ಯನ್ನು ...ವರ ವಿಚಾರಗಳ ಸಮ್ಮುಖ ಬಂದಿರುವ ಬಲುಮುಖ್ಯ ... ಎಂದು 'ಶ್ರೀ' ... ...ಕೂಡ. '...' ... ... ... 'ಶ್ರೀ'ಯವರ ಈ ... '... ...' ಪತ್ರಿಕೆಯಲ್ಲಿ ಬಂದ ...

'ಸೈದ್ಧಾಂತಿಕತೆ'ಯನ್ನು ತಮಗೇ ತಾವೇ ವಿವರಿಸಿಕೊಳ್ಳುವುದು ಉತ್ತಮ. 'ವಿಜ್ಞಾನ-ತಂತ್ರಜ್ಞಾನಗಳು ಶುದ್ಧಾಂಗ ನಿರಪೇಕ್ಷವಾದವು, ವೈಜ್ಞಾನಿಕತೆಯ ಏಕಮುಖವಾದ ಬೆಳವಣಿಗೆಯೇ ಮನುಕುಲದ ನಿಜವಾದ ಪ್ರಗತಿ' ಎಂಬಿತ್ಯಾದಿ ನಿಲುವುಗಳು, ಆ ನಿಲುವುಗಳಿಂದ ಸಮುದಾಯಗಳ ಮೇಲೆ ನಡೆಯುತ್ತಿರುವ ಹಿಂಸೆಯನ್ನು 'ಅಭಿವೃದ್ಧಿ'ಯ ಹೆಸರಿನಲ್ಲಿ ಸಾರಿಸಿಬಿಡುವುದು ಮತ್ತು ಇದನ್ನು ಕಟುವಾಗಿ ವಿಮರ್ಶಿಸುವವರಿಗೆ 'ಪ್ರತಿಗಾಮಿ'ಗಳೆಂದು ಹಣೆಪಟ್ಟಿ ಹಚ್ಚಿ ಒರೆಸಿ ಹಾಕಲು ನೋಡುವುದು- ಇದೆಲ್ಲವನ್ನು ಮಕ್ಕಿ ಕಾ ಮಕ್ಕಿ ಪಾಲಿಸುವ ಆ 'ವಿಮರ್ಶಕಿ'ಯದ್ದು ನಿಜಕ್ಕೂ ಭಿನ್ನಮತದ ಧ್ವನಿ ಮತ್ತು ಈ ದನಿ ಕನ್ನಡಿಗರಿಗೆ 'ಸುಲಭ'ದಲ್ಲಿ ದಕ್ಕುತ್ತಿಲ್ಲ ಎನ್ನುವುದೇ 'ಶ್ರೀ'ಯವರ ಇಂಗಿತವಾಗಿದ್ದರೆ, ಇದು ಖಂಡಿತ ಆರ್ವೆಲ್ ಹೇಳುವ 'ಭಾಷೆಯನ್ನು ಭ್ರಷ್ಟವಾಗಿಸುವ' ಬಗೆ. 'ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು' ಕೃತಿಯಲ್ಲಿರುವ ಕೆಲವು ಬರಹಗಳ ಕುರಿತಾಗಿ 'ಶ್ರೀ' ಎತ್ತುವ ವಿಮರ್ಶಾತ್ಮಕ ಅನುಮಾನಗಳು ನಿಜಕ್ಕೂ ಗಮನಾರ್ಹವಾದವು. ಈ ಪುಸ್ತಕಕ್ಕೆ ನಾನೇ ಅನುವಾದಿಸಿರುವ ಕೆಲವು ಬರಹಗಳ ಬಗ್ಗೆ ನನ್ನಲ್ಲೂ ಈ ನಮೂನೆಯ ವಿಮರ್ಶಾತ್ಮಕ ಅನುಮಾನಗಳಿವೆ. ಆದರೆ, ನಾವು ಈ ರೀತಿಯ ಅನುಮಾನಗಳನ್ನು ಎತ್ತುವುದೇ ಆಶೀಶ್ ನಂದಿ 'ಹಿಂದು ಬಲಪಂಥದ ಟ್ರೋಜನ್ ಕುದುರೆ' ಎನ್ನುವುದಕ್ಕೆ ದೊಡ್ಡ ಪುರಾವೆ ಎಂಬ ವರಸೆ ಮಾತ್ರ 'ಭಳಾರೇ ವಿಚಿತ್ರಂ'.

■ ಕೆ.ಫಣಿರಾಜ್

# ಕೆಟ್ಟ ವೈದ್ಯರು ಮುಂದೆ ಯಾರಿಗೂ ಹೀಗೆ ಮಾಡದಿರಲಿ



ಸಹೋದರಿ ಗೌರಿಗೆ,

ಕಳೆದ ವಾರದ ನಿಮ್ಮ ಪತ್ರಿಕೆ ನಮ್ಮ ಇಡೀ ಕುಟುಂಬಕ್ಕೆ ಹಾಗೂ ನಮ್ಮ ಬಂಧು ಬಾಂಧವರಿಗೆಲ್ಲಾ ತುಂಬಾ ಸಂತೋಷ ತಂದಿದೆ. ನಮ್ಮ ತಂಗಿ ತುಂಗರೇಣುಕಾಳ ನೋವು ಹೇಗಾದರೂ ಕಡಿಮೆ ಆಯಿತಲ್ಲ. ಡಾ. ಗೋಪಿನಾಥ್, ಆನಂದ್ ಎಂತಹ ನೀಚರು ಅಂತ ನಾಲ್ಕು ಜನರಿಗೆ ಗೊತ್ತಾಗಿ, ಡಾಕ್ಟರ್‌ಗಳಿಗೂ ತಾವು ಮಾಡಿದ ತಪ್ಪಿನ ಅರಿವಾದರೆ ಅಷ್ಟೇ ಸಾಕು.

ನಮ್ಮ ತಂಗಿ ತುಂಗನಿಗೆ ಆಗಿದ್ದು ತುಂಬಾ ಚಿಕ್ಕ ಗಂಟು. ಕಡ್ಡಿಯನ್ನು ಗುಡ್ಡ ಮಾಡಿದರು ಈ ಗೋಪಿನಾಥ್, ಆನಂದ್. ಒಂದೊಂದು ಸಾರಿ ಎಂತಹವರೂ ತಪ್ಪು ಮಾಡುತ್ತಾರೆ ಅಂತ ಹೇಳಬಹುದು. ಆದರೆ ಹೀಗೆ ತಪ್ಪು ಮಾಡಿದ್ದೀರಿ ನೀವೇ ಸರಿ ಮಾಡಿ ಅಂತ ನಮ್ಮ ತಂಗಿ ಹೋಗಿ ಗೋಪಿನಾಥ್ ಎದುರು ಅತ್ತಾಗ ``Don't loose your emotion ಹೋಗಿ ಸುಮ್ನೆ. ಏಯ್ ಆಂಟಿಬಯೋಟಿಕ್ಸ್ ಬರೆದು ಕೊಡು ಇವರಿಗೆ" ಅಂತ ತಮ್ಮ ಅಸಿಸ್ಟೆಂಟ್ ವೈದ್ಯ ಡಾ. ಶಿವಾನಂದ ಸ್ವಾಮಿಗೆ ಹೇಳಿದರು. ನಾನೂ ಅವಳ ಜೊತೆ ಹೋಗಿದ್ದೆ, ಇಡೀ ಆಸ್ಪತ್ರೆಯವರೆಲ್ಲಾ ನೋಡುತ್ತಿದ್ದರೂ ಎಳೆಮಗುವಿನಂತೆ ಬಿಕ್ಕಿಬಿಕ್ಕಿ ಅತ್ತಳು ನನ್ನ ತಂಗಿ. ಆಪರೇಷನ್ ದಿನ ನಾವೆಲ್ಲಾ ಗೋಪಿನಾಥ್ ಅವರ ಕಾಲಿಗೆ ನಮಸ್ಕಾರ ಮಾಡಿದ್ದೆವು.

ನಮ್ಮ ಮನೆಯ ಒಂಭತ್ತು ಮಕ್ಕಳಲ್ಲಿ (ನಮ್ಮ ತಂದೆತಾಯಿಗೆ) ಅವಳೇ ಚಿಕ್ಕವಳು. ಅವಳು ನಮ್ಮೆಲ್ಲರಿಗಿಂತ ತುಂಬಾ ಧೈರ್ಯಸ್ಥೆ, ನಮಗೆಲ್ಲಾ ಅವಳು, ಅವಳ ಗಂಡ ನಾಗರಾಜಮೂರ್ತಿನೇ ಆಸರೆ. ಎಲ್ಲರಿಗೂ ಧೈರ್ಯ, ಸಹಾಯ ಮಾಡುವಂತಹವರು.

ಅಂತಹವಳಿಗೆ ವಿನಾಕಾರಣ ಹೊಟ್ಟೆಕುಯ್ದು ಶಾಶ್ವತವಾಗಿ ಒಂದು ರೀತಿ ಅಂಗವಿಕಲೆ ಮಾಡಿದ್ದಾರೆ. ನಾವು ಮನೆಗೆ ಬಂದ ಮೇಲೆ ಅವರ ಅಸಿಸ್ಟೆಂಟ್ ಡಾ. ಶಿವಾನಂದಸ್ವಾಮಿ ಫೋನ್ ಮಾಡಿ, "ನೀವು ಹೋದಮೇಲೆ ಗೋಪಿನಾಥ್ ಸರಿಯಾಗಿ ಉಗಿದ್ರು ನಿಮ್ಗೆ. ಏನೋ ಅವ್ರು ಹಾಗೆಲ್ಲ ಮಾತಾಡ್ತಾಳೆ. ಈ ತರಹ 300-400 case ಮಾಡಿದ್ದೇನೆ. ಇವಳದ್ದೊಂದು ಫೈಲ್ಯೂರ್ ಆದರೆ ನಾವೇನು ತಲೆ ಕೆಡಿಸಿಕೊಳ್ಳಲ್ಲ ಅಂದ್ರು. ನೀವು ಕೇಸುಗೀಸು ಅಂತ ಹೋಗ್ಬೇಡಿ. ಗೋಪಿನಾಥ್ ಮೇಲೆ ಈಗಾಗಲೇ ಬೇಕಾದಷ್ಟು ಕೇಸ್‌ಗಳಿವೆ. ಯಾರೂ ಗೆಲ್ಲೋಕೆ ಆಗೋಲ್ಲ, ಕೆಲವರು ಕೇಸ್ ಹಾಕಿ ಕೊನೆಗೆ ಸತ್ತುಹೋದ್ರು. ಏನಂದುಕೊಂಡಿದ್ದೀರ ಗೋಪಿನಾಥ್ ಅಂದ್ರೆ" ಅಂತ ಮಾತಾಡಿದರು.



ಆದರೂ ನನ್ ತಂಗಿ ಈ ಶಿವಾನಂದಸ್ವಾಮಿಗೆ ಎಂದೂ ಬಯ್ಯುವುದಿಲ್ಲ, ಯಾರ ಹತ್ತಿರಾನೂ ಅವರ ವಿಷಯ ಮಾತಾಡುವುದಿಲ್ಲ. ಏಕೆಂದರೆ ಆ ಆಸ್ಪತ್ರೆಯಲ್ಲಿ ಸ್ವಲ್ಪನಾದ್ರೂ ಧೈರ್ಯ, ಸಾಂತ್ವನ ಅವಳಿಗೆ ಸಿಕ್ಕಿದ್ರೆ ಅದು ಸ್ವಾಮಿಯವರಿಂದ ಮಾತ್ರ. ಆ ಕೃತಜ್ಞತೆ ಅವಳಿಗಿದೆ.

ಇದೆಲ್ಲಾ ಏನೇ ಆಗಿದ್ದರೂ ಎರಡನೇ ಬಾರಿ ನಾವು ಆಸ್ಪತ್ರೆಗೆ ಹೋದಾಗ ತಾವು ಮಾಡಿರೋ ತಪ್ಪನ್ನು ಈ ಡಾ. ಗೋಪಿನಾಥ್, ಡಾ. ಆನಂದ್ ಅಡ್ಮಿಟ್ ಮಾಡಿಕೊಂಡು ಸರಿ ಮಾಡಿಬಿಟ್ಟಿದ್ದರೆ ಇಷ್ಟೆಲ್ಲಾ ರಾದ್ಧಾಂತ ಆಗುತ್ತಿರಲಿಲ್ಲ, ಅಲ್ಲಿಂದ ನಾವು ಅವತ್ತು ಸೀದ ಡಾ. ಎಚ್. ಗಿರಿಜಮ್ಮನವರ ಬಳಿ ಹೋದೆವು. ಒಬ್ಬ ಪ್ರಸೂತಿ ತಜ್ಞೆಗೆ ಇದು ಇನ್‌ಫೆಕ್ಷನ್ ಆಗಿದೆ ಅಂತ ನೋಡಿದ ಕೂಡಲೇ ಗೊತ್ತಾಗಿ ಡಾ. ಚಂದ್ರಶೇಖರ್‌ನ ಭೇಟಿ ಮಾಡಿಸಿದವರಲ್ಲ, ಅಂತಹ ಎಕ್ಸ್‌ಪರ್ಟ್ ಅನ್ನೋ ಗೋಪಿನಾಥ್ ಅವರಿಗೆ ಯಾಕೆ ಇದು ಗೊತ್ತಾಗಲಿಲ್ಲ?

ಡಾ. ಚಂದ್ರಶೇಖರ್ ಶೋಭಾ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿ ಅವರು ತೆಗೆದ ಬ್ರೆಸ್ಟ್ ಆ ಕಸವನ್ನು ನೋಡಿದರೆ ಹೇಗೆ ತಡೆದುಕೊಂಡಿದ್ಲು ಐದಾರು ತಿಂಗಳು ನಮ್ಮ ತಂಗಿ ಅಂತ ಸಂಕಟಪಟ್ಟೆವು. ಡಾ. ಗಿರಿಜಮ್ಮ, ಡಾ. ಶೋಭಾ ಪಾಂಡವೇಶ್ವರ, ನಮ್ಮತ್ತೆ ಮಗಳು ಡಾ. ನಾಗರತ್ನ ಇವರೆಲ್ಲಾ ಅವಳಿಗೆ ತಾಯಿ ತರಹ ನೋಡ್ಕೊಂಡರು. ಅವರೇ ಅವಳನ್ನು ಬದುಕಿಸಿದರು. ಈ ಕೆಲಸ ಡಾ. ಗೋಪಿನಾಥ್, ಡಾ. ಆನಂದ್ ಅವರು ಯಾಕೆ ಮಾಡಲಿಲ್ಲ?

ಇಷ್ಟೆಲ್ಲಾ ಆದರೂ ನಮ್ಮ ತಂಗಿ ಗಟ್ಟಿಗಿತ್ತಿ. 'ಚಿತ್ರ' ಪತ್ರಿಕೆ ಕೆಲಸ ಬಿಡಲಿಲ್ಲ, ಇವೆಲ್ಲ ನೋವು, ಆಪರೇಷನ್‌ಗಳ ಮಧ್ಯೆಯೂ ತನ್ನ ಕೆಲಸ ತಾನು ಮಾಡುತ್ತಿದ್ದಾಳೆ. ಅವರ ಬಾಸ್ ಬಾಲಚಂದ್ರರವರು, ಕಸ್ತೂರಿಯವರು ಅವಳ ಸ್ಥಿತಿ ಅರ್ಥ ಮಾಡ್ಕೊಂಡು ಪ್ರೋತ್ಸಾಹ ಕೊಟ್ಟ ಉಪಕಾರ ನಮ್ಮ ಕುಟುಂಬ ಎಂದೂ ಮರೆಯುವುದಿಲ್ಲ, ಅವಳ ನೋವು ಮರೆಯುವ ನೆಮ್ಮದಿ ತಾಣ ಅವಳ ಆಫೀಸು.

ನಿಮ್ಮ 'ಲಂಕೇಶ್'ನಲ್ಲಿ ಬಂದಮೇಲೆ ಅವಳಿಗೆ ತುಂಬಾ.... ತುಂಬಾ ಜನರು ಫೋನ್ ಮಾಡುತ್ತಿದ್ದಾರೆ. ಕೆಲವರು ಸರಿಯಾಗಿ ಪಾಠ ಕಲಿಸು ನಾವಿದ್ದೀವಿ ಅಂತಿದ್ದಾರೆ. ಡಾ. ವಿಷ್ಣುವರ್ಧನ್ ಅವರು ಅವಳನ್ನು ಕರೆಸಿ ಮಾತಾಡಿಸಿ, ಎರಡನೇ ಸರ್ಜರಿ ಮಾಡಿದ ಡಾ. ಚಂದ್ರಶೇಖರ್ ನಂಬರ್ ನಮ್ಮ ತಂಗಿ ಹತ್ತಿರಾನೇ ತಗೊಂಡು ವಿಷ್ಣುವರ್ಧನ್ ಅವರೇ ಖುದ್ದು ಫೋನ್ ಮಾಡಿ "ಈ ಬಾರಿನಾದ್ರು ನಮ್ಮ ತುಂಗ ಸರಿಹೋಗಬೇಕು ಡಾಕ್ಟ್ರೇ" ಅಂತ ಇಪ್ಪತ್ತು ನಿಮಿಷ ಮಾತಾಡಿದ್ದಾರೆ.

ಅಂತಹವರೆಲ್ಲರ ಆಶೀರ್ವಾದದಿಂದ ಅವಳು ಬದುಕಿ ಬಂದಿದ್ದಾಳೆ. ಗೌರಿಯವರೇ, ನಮ್ಮ ತಂಗಿ ಬರವಣಿಗೆ ಅಂತ ಪ್ರಾರಂಭಿಸಿದ್ದು ನಿಮ್ಮ ತಂದೆಯವರಾದ ಲಂಕೇಶ್ ಅವರಿಂದ ಇವತ್ತು ನಾವೆಲ್ಲಾ ಅವರನ್ನು ನೆನೆಸುತ್ತೇವೆ. ಅವರ ಮಗಳಾಗಿ ನೀವು ನಮ್ಮ ತಂಗಿ ವಿಷಯದಲ್ಲಿ ನಮಗೆ ಸಹಾಯ ಮಾಡಿದ್ದೀರಿ.

ಮುಂದೆ ಯಾರಿಗೂ ಡಾ. ಗೋಪಿನಾಥ್, ಡಾ. ಆನಂದ್ ಹಾಗೂ ಈ ರೀತಿ ಇರುವ ಡಾಕ್ಟರ್‌ಗಳು ಯಾರಿಗೂ ಹೀಗೆ ಮಾಡದಿರಲಿ, ಅಷ್ಟೇ ನಾವು ...

■ ತುಂಗ ರೇಣುಕಾರವರ ನೊಂದ ಅಕ್ಕಂದಿರು

# ದೇವೇಗೌಡ್ರು ಯಾಕಂತ ಮಾತಂದ್ರು ಗೊತ್ತೇನಕ್ಕ!

ದೇವೇಗೌಡರು ಆಡಿರುವ ಮಾತಿಗೆ ಕಾಳಮಾವನ ಎದುರು ವಾದವಿವಾದಗಳು ಆರಂಭವಾದವು. ಅಂದಿರುವ ಮಾತಿನ ಪರಿಣಾಮವನ್ನು ಗ್ರಹಿಸಿದ ಕಾಳಮಾವ.

"ದ್ಯಾವೇಗೌಡ ಅಂತ ಮಾತ ಅನ್ನಬಾರ್ದಿತ್ತಲ್ವಾ?" ಎಂದು ಯೋಚಿಸತೊಡಗಿದ.

"ಅವ್ರುನ್ಯಾಕಂಗಂದವ್ರುನ ಗೊತ್ತೇನೊ ಮಾವ? ಮನುಸು ರೋಸಿ ಅಂಗಂದಿದ್ದನಂತೆ. ಅದ್ನ ತಿಳಕಂದಿಲ್ಲ ಜನ" ಎಂದು ಒಳಗೇ ನಗತೊಡಗಿದ ಉಗ್ರಿ.

"ಯಾಕಂಗಂದಾ ಅಂತ ಬಿಡಿಸೇಳ್" ಎಂದಳು ಜುಮ್ಮಿ.

"ದ್ಯಾವೇಗೌಡ ಕುಂತಿರೊ ಜಾಗದಲ್ಲಿ ಕಣ್ಣುಬುಟ್ಟು

## ಚಿಲಿಪಿಲಿ ಸೀಮೆಯ ಕಟ್ಟೆಪುರಾಣ

**■ ಬಿ. ಚಂದ್ರೇಗೌಡ**

ನೋಡಿದ್ರೇ ಹೆಡತಿಮಕ ನೋಡಕ್ಯಾಗದಿಲ್ಲ, ಮಗನ್ನಂತೂ ಮಾತಾಡಸಂಗಿಲ್ಲ ಅಂಗಾಗ್ಯದೆ. ಇನ್ನ ಪೇಪರ್ ನೋಡಿಯಾ, ಉಡುಪಿ ಬ್ರಾಂಬ್ರು ಊಟುಕ್ಯಾಗಿ ವಡದಾಡದೇ ವಾರದಿಂದ ಬತ್ತಾ ಅದೆ. ರೈತರು ಬ್ಯಳದಿರೊ ಕಬ್ಬಗೆ ಬೆಂಕಿಹಾಕ್ತ ಅವ್ರೆ. ಕೆಲುವ್ರು ಕಟಾವಿಗೆ ಬಂದಿರೊ ಕಬ್ಬನೆ ಟ್ರಾಕ್ಟ್ರೇಲ್ಲಿ ಉಳುತ ಅವ್ರೆ. ಆ ಬಿಜೆಪಿಗಳು ಬಾಯಿಗೆ ಬಂದಂಗೆ ಬೈಕಂಡು ತಿರುಗ್ತ ಅವ್ರೆ. ಯತ್ತ ಮುಂದಾಗಿ ನೋಡಿದ್ರೂ ದ್ಯಾವೇಗೌಡನ್ನ ಕೊಂಡಾಡೋ ಅಂತ ವಾತಾವರಣವೇ ಇಲ್ಲ, ಅಂತ ಸಮಯದಲ್ಲಿ ಇನ್ನೇನಂದನವ್ರುನೂ? ಈ ಹಾಳೂರಲ್ಲಿ ಯಾಕಾದ್ರೂ ಹುಟ್ಟದೆ ಅಂದುಬುಟ್ಟವ್ನೆ" ಎಂದ ಉಗ್ರಿ.

"ಇರಬವುದು ಬುಡು" ಎಂದು ಕಾಳಮಾವ ನಿರಾಳವಾದ.

"ನಿನಿಗ್ಯಾವಾಗಾರ ಈ ಹಾಳೂರಲ್ಲಿ ಯಾಕುಟ್ಟದೆ ಅಂತ ಅನ್ನಿಸಿತ್ತೆ ಮಾವ?" ಎಂದು ಉಗ್ರಿ ಕಾಳಮಾವನನ್ನು ಕೆಣಕಿದ.

"ಊ ಕಂಡ್ಯ, ಒಂದು ಸತಿಯಾ ಯಾಮಗಿರಿ ಜಾತ್ರಿಗೆ ಎತ್ತೊಡಕಂಡೋಗಿದ್ದೆ. ನಮ್ಮ ಹಿರಿಯೋರು ಬಂದಿದ್ರ. ವಡಕಂಡೋದ ಎತ್ತು ಮಾರಿ ಒಸಿದುಡ್ಡಾಕಿ ಚನಾಗಿರೊ ಎತ್ತು ತರನಾ ಅಂತ ಹೋಗಿದ್ದೆ. ಹೋಯ್ತು ಗವುರಂಗಪ್ಪನ ಜಾತ್ರೆಲಿ ಪೂಜೇನೂ ಮಾಡಿಕಂಡೋಗಿದ್ದೆ."

"ಯಾವು ಗೌರಂಗಪ್ಪನ ಗುಡಿಯೊ ಮಾವ?" ಎಂದಳು ಜುಮ್ಮಿ.

"ಸಂತೆಬಾಚಳ್ಳಿಂದ ಮುಂದಕದೆ ಕಂಡ್ಯ. ಅತ್ತಗೆ ಗ್ವರವಿ, ಇತ್ತಗೆ ವತ್ತಗೆನಳ್ಳಿ. ಒಂದು ಬಂಡೆವಳಗೆ ಗವಿರಂಗ ವಡುದು ಮೂಡ್ಯವ್ನನೆ. ಈದಸ, ಗಬ್ಬದಸನ್ನಲ್ಲ ವಡಕಂಡು ಬಂದು ತಳಗೆ ಮಾಡ್ತರೆ ಜನ. ಅಲ್ಲಿ ನಾವು ಹಣ್ಣುಕಾಯಿ ಪೂಜೆ ಮಾಡಿಕಂಡು ಮುಂದುಕೋದೊ. ಹೋಗಿ ಎತ್ತು ಕಟ್ಟಿದೆ. ಹೇಮಗಿರಿಂದ ಮುಂದಕೆ ಚುಂಚನಕಟ್ಟೆ ಅಲ್ಯಲ್ಲಿ ತಿರುಗಾಡುವಾಗ ಹರಿಕತೆ ಮಾಡೊ ಚಲುವಾಚಾರ್ರು ಸಿಕ್ಕಿದ್ರು."

"ಅವುರು ಇಲ್ಲಿಗೂ ಬಂದು ಹರಿಕತೆ ಮಾಡ ತಿದ್ರಲವೆ?" ಎಂದ ಉಗ್ರಿ.

"ಊ ಹೇಮಗಿರಿ, ಚುಂಚನಕಟ್ಟೆ ಜಾತ್ರೆಲೆಲ್ಲಾ ಹರಿಕತೆ ಮಾಡೋನು. ಅವುನಕುಟ್ಟೆ ತಿರುಗಾಡಿ ಕಂಡು ಮಾತಾಡ್ತ ಮಾತಾಡ್ತ ಚೆಲುವಾಚಾರ್ರೆ ಹುಟ್ಟಿದ್ರೆ ಇಂತ ಜಾಗದಲ್ಲಿ ಹುಟ್ಟಬೇಕು ಅಂದೆ."

"ಅದ್ಯಾಕಂಗನ್ನಕ್ಕೋಗಿದ್ದೆ?" ಎಂದಳು ಜುಮ್ಮಿ.

"ಆಗ ನಮ್ಮ ಕಡೆ ಬರಗಾಲ ಬಂದಿತ್ತು ಕಂಡ್ಯ. ದನಿಗೆ ಮೇವಿಲ್ದೆ ಜನ ದನಿನಗೊಂಡು ಚಚ್ಚಿ ಬುಡತಿದ್ರು. ಹುಲ್ಲಿಲ್ದೆ ಇದೇ ಸೀರುಂದೊಂದಸ ಸತ್ತೋಯ್ತು. ಇಂದ್ರಾಗಾಂಧಿ ಆಗತಾನೆ ಪ್ರಧಾನಿ ಯಾಗಿದ್ಲು, ಆಗ ಅಮೆರಿಕದಿಂದ ಹಲ್ಲುಜ್ವಾಳ ಗೋದವೆ ತರಿಸಿ, ಜನ ಉಳಿಸಿಗಂಡ್ಲು. ಅಂತ ಗೊಟ್ಟು ಗಾಲದಲ್ಲಿ ಯಾಮಾವತಿ ನದಿ ನೀರು ನೋಡಿ ಅಂಗಂದೆ ಕಂಡ್ಯ" ಎಂದು ಕಾಳಮಾವ ದೀರ್ಘ ವಿವರ ನೀಡಿದ.

"ಅಂತೂ ಯಾಮಾವತಿ ವಳೆದಡದಲ್ಲಿ ಹುಟ್ಟಬೇಕು ಅಂದೆ ಅನ್ನು."

"ಅಂಗಂದೆ, ಮನುಸುನ ಕೈಲಿ ಏನಿದ್ದತ್ಲೆ?"

"ಹುಟ್ಟು ನಿನ್ನ ಕೈಲಿದ್ರೆ ಬ್ರಾಂಬ್ರು ಮನೆಲೆ ಹುಟ್ಟತಿದ್ದೆ ಅನ್ನು" ಎಂದು ಜುಮ್ಮಿ ನಕ್ಕಳು.

"ಏ, ಬಾಡು, ಒಳ್ಳೆ ಮೀನು, ಮಾಂಸ ಏನೂ ಸಿಗದ ಜಾಗದಲ್ಲಿ ಅವುನ್ಯಾಕುಟ್ಟತನೆ? ಆದ್ರು ನೀನುಟ್ಟಿರೊ ಜಾಗ ಸರಿಯಾಗದೆ ಕಣೆ."

"ಯಾರುಟ್ಟಿರೊ ಜಾಗ ಸರಿಯಾಗದಪ್ಪ?" ಎಂದು ಕೊಂಡು ವಾಟಿಸ್ಸೆ ಬಂದ.

"ಕಾಳಮಾವ ನಮ್ಮೂರಲ್ಲಲ್ಲದೆ ಇನ್ನೆಲ್ಲಾರ ಹುಟ್ಟಿ ಕ್ಯಾದತೇನೊ?" ಎಂದ ಉಗ್ರಿ.

"ಯಾಕೆ ಇಲ್ಲುಟ್ಟಿಕ್ಕೆ ಇಷ್ಟ ಇರಲಿಲವಂತಾ? ಯಾಕ್ ದ್ವಡಪ್ಪ ನಿನಿಗೆ ದ್ಯಾವೇಗೌಡನ ಬುದ್ಧಿ ಬಂತು? ನೀನಿಲ್ಲಿ ಹುಟ್ಟದೆಯಿದ್ರೆ ದ್ವಡವ್ವ ನಿನಿಗೆ ಸಿಗತಿದ್ಲ? ಈಗುಟ್ಟಿರೊ ಗಂಡು ಮಕ್ಕಳು ನಿನಿಗೆ ಹುಟ್ಟತಿದ್ರ? ನಿನಿಗುಟ್ಟಿರೊ ಯರಡೆಣ್ಣು ಮಕ್ಕಳು ಪಾಪ ಎಲ್ಲುಟ್ಟತಿದ್ರೊ? ಏನೊ, ಸಾಯೋ ಕಡೆಸತಿ ನಿನಗೆ ಇಂತಾ ಬುದ್ಧಿ ಬಂತು? ಇಟೀಸ್ ಸೇಂ ಟು ಅವರ್ ವಿಲೇಜ್."



"ತಲಿಯಲ್ಲ ಮಾತಾಡಬ್ಯಾಡ ಸುಂಕಿರ್ಲ" ಎಂದು ಗುಡುಗಿದ ಕಾಳಮಾವ.

"ನೀನು ನಮ್ಮೂರಲ್ಲಿ ಹುಟ್ಟಿರೊವತ್ತಿಗೆ ಯಪ್ಪತ್ತಾರು ವರ್ಷ ತುಂಬಿಸಿದ್ದಿ. ನಿನ್ನ ಕಣ್ಣೆದ್ರಿಗೆ ನೋಡು, ನಿಂಗೇಗೌಡ್ರು ಸತ್ರು, ಬೈರೇಗೌಡ್ರು ಸತ್ರು, ಇನ್ನು ಬಾಳಿ ಬದುಕಬೇಕಾಗಿದ್ದ ರಾಮೇಗೌಡ ಸತ್ತ, ರಾಜೂಗೌಡ ಸತ್ತ. ಆದ್ರು ನೀನು ಗುಂಡಕಲ್ಲಿನಂಗಿದ್ದಿ. ಆದೇ ಬ್ಯಾರೆ ಊರಲ್ಲಿ ಹುಟ್ಟಿದ್ರೆ ಹೇಳಕ್ಕೆಸರಿಲ್ಲದಂಗೆ ಹೋಯ್ತಿದ್ದೆ" ಎಂದು ವಾಟಿಸ್ಸೆ ರಾಂಗಾದ. ರೇಗಿದ ಕಾಳಮಾವ,

"ಲೇ ಹಾಳ್ಳ ಅವುನಿಗೊಂದು. ಆಟೊತ್ತಿಂದ ಸ...ಯಿದ್ದಿನಿ, ತಲಿಯಲ್ಲ ಮಾತಾಡ್ತನೆ ಅಂಗೆಯಾ" ಎ...

"ಲೇ ಕಾಳಮಾವನಿಗೆ ಇಲ್ಲಿ ಬರಗಾಲ ಬಂ... ಅಂಗನ್ನಿಸಿತ್ತಂತೆ ಕಂಡ್ಯ" ಎಂದಳು ಜುಮ್ಮಿ.

"ಬರಗಾಲ ಬಂದಾಗ ಸಾಯಬೇಕು ಅನ್ನಸ್ತದೆ ... ಇಲ್ಲಿ ಹುಟ್ಟುಬಾರ್ದು ಅನ್ನಸದಿಲ್ಲ, ಯಾಕನ್ನ ... ಹುಟ್ಟು ಯಾರಕೈಲೂ ಇಲ್ಲ, ಅಂಗೇನಾರ ಹುಟ್ಟು ... ಕೈಲಿದ್ರೆ ನಾನು ಉಡುಪಿಲುಟ್ಟಿ ಯಾವುದಾದ್ರು ... ಸ್ವಾಮಿಯಾಗಿ ಮಜಾ ಮಾಡಿಕಂದಿರತಿದ್ದೆ."

"ಇರಿವಂತೆ, ದ್ಯಾವೇಗೌಡಂದಿರೊ ಮಾತು ... ಬತ್ಲ?"

"ಅವುರ ಮಾತು, ಪಾಪ ಮಾಡಿದೋನ ಬ... ಬಂದಿರೊ ಮಾತು ಕಣಕ್ಕ."

"ಆದೇನ್ನ ಅಂಗಂತೀ, ದ್ಯಾವೇಗೌಡೇನು ... ಮಾಡಿದ್ದನೂ?"

"ನೋಡಕ್ಕ ಈ ನಮ್ಮ ಕರ್ನಾಟಕ ಇದೀ ದೇಶ... ಇಲ್ಲ, ಅಂತ ಕರ್ನಾಟಕಕ್ಕೆ ಏಳು ಜ್ಞಾನ... ಬಂದವೆ."

"ಎಲ್ಲಿದ್ದವವ್ರೂ?"

"ಈಸಗಂಡೋರ ಮನೆಲವೆ. ಇಲ್ಲಿ ಕುವ... ಹುಟ್ಟಿದ್ರು, ಕಾರಂತರು ಹುಟ್ಟಿದ್ರು, ಬೇಂದ್ರೆ ... ನನ್ನ ಫ್ರೆಂಡ್ ಲಂಕೇಶ್, ತೇಜಸ್ವಿ, ಇಂಥೋ... ಹುಟ್ಟದ್ರಿಲ್ಲಿ, ಹೇಳಕ್ಕೋದ್ರೆ ಇವತ್ತಲ್ಲ ಹೇಳಬ್ಯಾ... ಅಷ್ಟು ಜನ ಸಾಯಿತಿಗಳಿದ್ರು. ಇನ್ನ ಸಿನಿ... ತಗಂತಿಯಾ? ರಾಜಕುಮಾರಿದ್ರ, ನರಸಿಮ್ಮರಾ... ಬಾಲಕೃಷ್ಣ, ಉದಯಕುಮಾರ, ವಜ್ರಮು... ಹುಟ್ಟಿದ್ರು. ನಾಟಕ ತಗಂಡಿಯಾ? ಗುಬ್ಬಿ ವೀ... ವರದಾಚಾರ್ರು, ಸುಬ್ಬಯ್ಯನಾಯ್ಡು ಪೀರ್ ಸಾಹೇ... ಹಿರಣ್ಣಯ್ಯ ಇಂಥೋರ್ಯಲ್ಲ ಹುಟ್ಟದ್ರಿಲ್ಲಿ."

"ಆ ಪುರಾಣ್ಯಲ್ಲ ಯಾಕ್ಲ ಈಗ?"

"ಕೇಳಿಸಿಗಳಕ್ಕ. ದ್ಯಾವೇಗೌಡ್ರ ಮಗಳಂಗಾಡಬ... ರಾಜಕಾರಣ ತಗಂಡ್ರೆ ಕಡಿದಾಳು ಮಂಜಪ್ಪ... ಮುಖ್ಯಮಂತ್ರಿಯಾಗಿದ್ರೂ ಲಾಯರ್‌ಗಿರಿಲಿ ದುಡ... ಮನೆ ಕಟ್ಟಿಸಿಗಂಡಿದ್ರು. ಮಂತ್ರಿಗಿರಿಲಿ ಯಾವ ಪಾಯ್ದೆ... ಇಲ್ಲ ಅನ್ನಕಂಡಿದ್ದ ಪುಣ್ಯಾತ್ಮ ಅವುನು. ಅವುನು ಬ... ಏಳೆಂಟು ವರ್ಷ ಮುಖ್ಯಮಂತ್ರಿಯಾಗಿದ್ದ ನಿಜಲಿಂ... ನೋರಿಗೆ ಬೆಂಗಳೂರಲ್ಲಿ ಒಂದು ಮನೆ ಇರ... ಊರಿಗೋಗಿ ತೀರಿಕಂಡ್ರು. ಇನ್ನ ಹಿಂದುಳದೋರ...

# ಇವರಿಗೂ 'ಭಾರತರತ್ನ' ಕೊಡಿ!

'ಭಾರತ ರತ್ನ' ಬಿಕ್ಕಟ್ಟಿನಲ್ಲಿದೆ!

ಅದು ಯಾವ ಗಳಿಗೆಯಲ್ಲಿ ಎಲ್.ಕೆ. ಅಡ್ವಾಣಿ ಅವರು ಇದನ್ನು ರಾಜಕೀಯ ಗುರು ವಾಜಪೇಯಿಗೆ ನೀಡಬೇಕೆಂದು ಶಿಫಾರಸ್ಸು ಮಾಡಿದರೋ ಗೊತ್ತಿಲ್ಲ, ಹಾಗೆ ಮಾಡಬೇಕಾದರೆ ಅವರ ಸ್ವಾರ್ಥನೂ ಅದರಲ್ಲಿತ್ತಂತೆ. ಒಂದು ವೇಳೆ ಮುಂದಿನ ಚುನಾವಣೆಯಲ್ಲಿ ಎನ್‌ಡಿಎ ಕೇಂದ್ರದಲ್ಲಿ ಅಧಿಕಾರ ಹಿಡಿದೇಬಿಟ್ಟರೆ ಈ ಹಾಳಾದ ಮುದುಕ ಎಲ್ಲಿ 'ನಾನೇ ಪ್ರಧಾನಿ' ಅಂತ ಯುವಕನ ತರಹ ಎದ್ದು ನಿಲ್ತಾನೋ ಅನ್ನೋ ದಿಗಿಲು ಕಾಡುತ್ತಿತ್ತಂತೆ. ಇದು ನಾಗಜ್ಜೀಗೆ ಮೀಸೆ ಬಂದರೆಗಿಂದರೆ ಸಮಾಚಾರ ದಂತಿದ್ದರೂ ತನ್ನ ಎಚ್ಚರಿಕೇಲಿ ತಾನು ಇರಬೇಕು ಅಂತ ಯೋಚಿಸಿದಾಗ ಈ ವಾಜಪೇಯಿ ಎಂಬ ಮುದುಕನಿಗೂ 'ಭಾರತರತ್ನ' ಅನ್ನೊ ಪ್ರಶಸ್ತೀನೆ ಕೊರಳಿಗೆ ನೇತಾಕಿ ಬಿಟ್ಟರೆ ಅದು ಮೂಲೇಲಿ ಮುಲುಕ್ತಾ ಮುದುರಿಕೊಂಡು ಬಿದ್ದಿರ್ತದೆ ಅನ್ನಿಸಿತಂತೆ. ಅದಕ್ಕೆ ಇರೋ ಇಲ್ಲದಿರೋ ಗುಣಾನೆಲ್ಲ ಅವರ ಮೇಲೆ ಹೇರಿ ಪ್ರಧಾನಿಗೆ ಪತ್ರ ಬರೆದರಂತೆ.... ಇಂತಿಂತಹ ಕಲ್ಯಾಣ ಗುಣಗಳನ್ನು ಹೊಂದಿರುವ ವಾಜಪೇಯಿಗೆ ಭಾರತರತ್ನ ಕೊಡಲೇಬೇಕೂಂತ. ಪ್ರಧಾನಿಗೆ ಪತ್ರ ಬರೆದು ತೆಪ್ಪನೆ ಕುಳಿತರೆ ಆಗಿ ಹೋಯಿತಾ. ಆ ಪತ್ರಾನೂ ಯಾವುದೋ ಒಂದು ಫೈಲಿನಲ್ಲಿ ಬೆಚ್ಚಗೆ ಮಲಗಿಬಿಡುತ್ತೆ ಅನ್ನೋದು ಅಧಿಕಾರ ನಡೆಸಿದ ಅವರಿಗೆ ಗೊತ್ತಿತ್ತಲ್ಲ, ಅದಕ್ಕೇ ಅವರು ಏನು ಮಾಡಿದರು ಅಂದರೆ ಆ ಪತ್ರಾನ ಮಾಧ್ಯಮಗಳಿಗೂ ಬಿಡುಗಡೆ ಮಾಡಿ ಅದೊಂದು ರಾಷ್ಟ್ರೀಯ ಸುದ್ದಿ ಅನ್ನುವ ಹಾಗೆ ನೋಡಿಕೊಂಡರು!

ಈ ಸುದ್ದಿ ತಿಳಿಯುತ್ತಿದ್ದ ಹಾಗೆ ಮಾಯಾವತಿಯವರು ಚುರುಕುಗೊಂಡರು. ಅವರ ಪಕ್ಷದ ಚಿಹ್ನೆ ಆನೆ. ಈ ಆನೆ ಎಂಬೋ ಪ್ರಾಣಿಗೆ ಕಿವಿ ಅನ್ನೋದು ಚುರುಕಂತೆ. ಅದರಂತೆಯೇ ಚುರುಕು ಅದರು ಅನ್ನಿ. ಅವರಿಗೆ ಕಾನ್ಶಿರಾಂಗೆ ಇದನ್ನ ನೀಡದೆ ತನ್ನ ರಾಜಕೀಯ ವೈರಿ ವಾಜಪೇಯಿ ಹೆಸರನ್ನು ಹೇಳುತ್ತಿರುವುದು ಸಹಜವಾಗೇ ಸರಿ ಕಾಣಲಿಲ್ಲ, ಕಾನ್ಶಿರಾಂ ಎದುರು ಈ ವಯಸ್ಸ ನೀವಳಿಸಿ ಬಿಸಾಕಬೇಕು ಅಂತಾನೂ ಅನ್ನಿಸಿತಂತೆ. ಕೊಟ್ಟರೆ ಕಾನ್ಶಿರಾಂಗೇ ಕೊಡಬೇಕು ಅಂತ ಮೊಂಡು ಹಿಡಿದು ಕುಳಿತರು.

ಭಾರತರತ್ನ ಹೆಸರಿನಲ್ಲಿ ಈ ಖೋಟಾ ನಾಣ್ಯಗಳೇ ಮಿರಿಮಿರಿ ಮಿಂಚುತ್ತಿದಾವಲ್ಲ, ಒಳ್ಳೇದಕ್ಕೋ ಕೆಟ್ಟದ್ದಕ್ಕೋ ಇವೇ ಚಲಾವಣೇಲಿ ಇದ್ದರೆ ಜನ ಎಲ್ಲ ಇವರೇ ನಮ್ಮ ನೇತಾರರು ಎಂದು ಭಾವಿಸಿ ಬಿಟ್ಟರೇನು ಗತಿ ಅನ್ನೋ ಭಯ ಬಂದಿರಬೇಕು. ತಮ್ಮ ಹೆಸರೂ ಸ್ವಲ್ಪ ದಿವಸ ಮರೀಲಿ ಅಂತ ಜ್ಯೋತಿ ಬಸುನೇ ಇದಕ್ಕೆ ಹೇಳಿ ಮಾಡಿಸಿದ ವ್ಯಕ್ತಿ ಅಂತ ಕೆಂಪು ಬಾವುಟ ಹಿಡಿದು ಕೂಗಾಡಿದರು. ಪಾಲಿಟ್‌ಬ್ಯೂರೋ ಎಂಬ ರಾಕ್ಷಸ ಮುಂಡೆ ಬಂದು ಭಾರತ ರತ್ನ ಪ್ರಶಸ್ತಿಗೆ ಜ್ಯೋತಿ ಬಸು "ಅಭ್ಯರ್ಥಿ ಅಲ್ಲ" ಎಂದು ಸಾರಿ ಅವರ ಮೆರೆದಾಟಕ್ಕೆ ಕಡಿವಾಣ ಹಾಕಿತು ಅನ್ನುವುದು ಬೇರೆ ಮಾತು. ನಾಲ್ಕು ದಿನ ಆದರೂ ಅವರ ಹೆಸರಿನಲ್ಲಿ ನಾವು ಮೆರೆದವಲ್ಲ ಅನ್ನೋ ಸಮಾಧಾನ ಅಂತೂ ಇದ್ದೇ ಇದೆ.




ಸಮಾಜವಾದಿಗಳೇನು ಕಡುಬುತಿಂತ ಕುಂತಿರಲಿಲ್ಲ, ಈಗಿನ ತಮ್ಮ ತತ್ವ ಸಿದ್ಧಾಂತಗಳಿಗೂ ಸಮಾಜವಾದದ ತತ್ವ ಸಿದ್ಧಾಂತಿಗಳಿಗೂ ಎಣ್ಣೆಸೀಗೇಕಾಯಿ ಸಂಬಂಧವೇ ಇರಬಹುದು. ತಾವೂ ಸಮಾಜವಾದಿಗಳೇ ತತ್ವ ಸಿದ್ಧಾಂತ ಬದಲಾಗಿದೆ ಅಂದರೆ ಬೇಕಾದರೆ ಮಾಜಿ ಸಮಾಜವಾದಿಗಳೇ ಅನ್ನಿ! ಮಾಜಿಯೋ, ಹಾಲಿಯೋ ಅಂತೂ ಸಮಾಜವಾದಿ ಅಂದರೆ ಸರಿ. ನಮ್ಮ ಅಭ್ಯರ್ಥಿ ಕರ್ಪೂರಿ ಠಾಕೂರ್ ಅಂತ ಸಾರಿದರು.

ಭಾರತ ಅನ್ನುವ ದೇಶ ಜಾತ್ಯತೀತ ಗಣರಾಜ್ಯ ತಾನೆ. ಅಂತಹದ್ದರಲ್ಲಿ 'ಭಾರತ ರತ್ನ'ಕ್ಕೆ ಕೇವಲ ಹಿಂದೂಗಳ ಹೆಸರನ್ನು ಹೇಳುತ್ತಿದ್ದು ಕೆಡುಕು ಅನ್ನಿಸಿರಬೇಕು ದಿಲ್ಲಿ ವಿಧಾನಸಭೆಯ ಉಪಸ್ಪೀಕರ್ ಶೌಯ ಇಕ್ಬಾಲ್ ಅವರಿಗೆ. ಮುಸಲ್ಮಾನರೂ ಈ ದೇಶದಲ್ಲಿ ಇದ್ದೇವೆ ಅನ್ನುವುದನ್ನು ಸಾರುವುದಕ್ಕೆ ಇದೇ ಸುಸಮಯ ಅಂತಾನೂ ಆಗಿರಬೇಕು. ನಾವೂ ಸ್ಪರ್ಧೆಯಲ್ಲಿ ಇದೇವೆ ಅಂತ ತೋರಿಸೋಕೆ ಕೊನೆಯ ಮೊಗಲ್ ಚಕ್ರವರ್ತಿ ಬಹಾದುರ್ ಶಾ ಝಫರ್‌ಗೆ ಭಾರತರತ್ನ ನೀಡಿ ಅಂತ ಸಾರಿದರು. ಅವರು ಕವಿಯೂ ಆಗಿದ್ದರು. ಸಾಮ್ರಾಜ್ಯಶಾಹಿ ಬ್ರಿಟಿಷರ ವಿರುದ್ಧ ಹೋರಾಡಿ ರಂಗೂನ್‌ಗೆ ಗಡಿಪಾರು ಮಾಡಲ್ಪಟ್ಟರು. ಅಲ್ಲಿಯೇ ಮೃತಪಟ್ಟರು. ಉರ್ದುವಿನಲ್ಲಿ ಅವರು ಬರೆದ ಕವಿತೆ ಹೀಗಿದೆ:

ಎಂಥ ದುರದೃಷ್ಟವಂತ ಝಫರ್

ಎರಡು ಗಜ ಜಾಗವೂ ಸಿಗಲಿಲ್ಲ ಅವನಿಗೆ...

ತನ್ನ ಪ್ರೀತಿಯ ನೆಲದಲ್ಲಿ....

ವಾಜಪೇಯಿ ತರಹವೇ ಅವರೂ ಕವಿ. ಇವರು ಬ್ರಿಟಿಷರ ವಿರುದ್ಧ ಹೋರಾಡಿದೆ ಅಂತ ಹೇಳಿಕೊಳ್ತಾರೆ, ಅವರು ಹೋರಾಡಿ ದಾರೆ. ಇವರಿಗೆ ನೀಡುವುದಾದರೆ ಅವರಿಗೆ ಯಾಕೆ ಬೇಡ ಅನ್ನುವುದು ಅವರ ಅಭಿಪ್ರಾಯ ಇರಬಹುದೇನೋ.

ಇತ್ತೀಚೆಗೆ ಒಂದು ಮಜಬೂತಾದ ಸಲಹೆ ಬಂದಿದೆ. 'ಭಾರತ ರತ್ನ' ಪ್ರಶಸ್ತಿ ನೀಡುವುದು ಯಾರಿಗೆ? ದೇಶದ ಉತ್ನತಿಗಾಗಿ ಶ್ರಮಿಸಿದವರಿಗೆ! 'ಭಾರತ ಪ್ರಕಾಶಿಸುತ್ತಿದೆ'ಗೆ ಹಗಲಿರುಳೂ ಶ್ರಮಿಸುತ್ತಿರುವವರು ಯಾರು? ಮುಷರಫ್! ಪಾಕಿಸ್ತಾನ ಬೆಂಕಿಯಲ್ಲಿ ಬೇಯುತ್ತಿರಬಹುದು. ಅದು ಬೇರೆ ವಿಷಯ. ಭಾರತದ ಪ್ರಜಾತಂತ್ರ ಮೌಲ್ಯಗಳಿಗೆ ಪ್ರಪಂಚದಲ್ಲಿ ಬೆಲೆ ಬಂದಿರುವುದು ಅವರಿಂದ. ಆದುದರಿಂದ ಮುಷರಫ್‌ಗೆ 'ಭಾರತ ರತ್ನ' ನೀಡಿ!

'ಭಾರತ ರತ್ನ' ಪ್ರಶಸ್ತಿ ನೀಡಲು ಇದೇ ಅಳತೆ ಗೋಲಾದರೆ....

ಇಂದ್ರನ ಆಸ್ಥಾನ.

ಗಹನವಾದ ವಿಷಯ ಚರ್ಚೆಗೆ ಬಂದಿತ್ತು, ಸದಸ್ಯರೆಲ್ಲರೂ ಆಗಮಿಸಿ ತಮ್ಮ ಪೀಠಗಳಲ್ಲಿ ವಿಜೃಂಭಿಸಿದ್ದರು. ದೇವೇಂದ್ರ ಪೀಠಸ್ಥನಾಗಿ ಸಭೆಯತ್ತ ದೃಷ್ಟಿ ಬೀರಿದ. ರಾವಣೇಶ್ವರನ ಕುರ್ಚಿ ಖಾಲಿ ಬಿದ್ದಿತ್ತು! ಪಂಡಿತೋತ್ತಮನಾದ ಆತನ ಗೈರುಹಾಜರಿಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವುದು ಹೇಗೆ ಎಂಬ ಚಿಂತೆ ಸುಳಿಯಿತು. ಗಹನವಾದ ವಿಷ... ಕುರಿತು ಚರ್ಚಿಸಿ ತೀರ್ಮಾನಿಸಲು ಆ ವಿಷಯ... ಪಾಂಡಿತ್ಯವಿರುವ ಸದಸ್ಯರ ಗೈರುಹಾಜರಿಯನ್ನೇ ಬಯ... ವಿಧಾನಸಭೆಯಲ್ಲವಲ್ಲ ಅದು! ಇಂದ್ರಸಭೆ, ದೇವೇ... ಸಭೆ. ಇಂದ್ರ ಖಾಲಿ ಕುರ್ಚಿಯಿಂದ ತನ್ನ ಕಣ್ಣನ್ನು ... ಇತರ ಸದಸ್ಯರುಗಳೆಡೆ ದೃಷ್ಟಿಬೀರಿದ. ಅಲ್ಲಿ ಅ... ಕಂಡಿದ್ದೇನು! ಮಹಾಪಂಡಿತನಾದ ರಾವಣ ಎ... ಅಡ್ವಾಣಿಯವರ ಕಾಲಬುಡದಲ್ಲಿ! ಏನನ್... ಕೋರುತ್ತಿರುವಂತಿದೆ!

'ರಾವಣೇಶ್ವರ ನೀನು ಮಾಡುತ್ತಿರುವುದೇನು?' ಕೇ... ಇಂದ್ರ.

'ಅಡ್ವಾಣಿಯವರಲ್ಲಿ ಒಂದು ವಿಷಯದಲ್ಲಿ ಸ್ಪ... ಕೇಳುತ್ತಿದ್ದೇನೆ.'

'ಏನು ವಿಷಯ ಅದು?'

## ಅಣಕ...

**■ ಎಚ್.ಎಲ್. ಕೇಶವಮೂ...**

'ಮಹಾಪ್ರಭು, ತ್ರೇತಾಯುಗದಲ್ಲಿ ಈ ಹಾಳು ರಾ... ಹೆಸರನ್ನು ಜನ ಮಾನಸದಿಂದ ಕಿತ್ತೆಸೆಯಲು ನಾ... ಪ್ರಯತ್ನಿಸಿದೆ. ಆದರೂ ಸಾಧ್ಯ ಆಗಲಿಲ್ಲ, ... ಪುಣ್ಯಾತ್ಮನಾದರೋ ಅವನ ಹೆಸರಿನಲ್ಲೇ ರಥಯಾತ್ರೆ ಮ... ಅವನ ಹೆಸರಿನಲ್ಲಿಯೇ ದೇವಸ್ಥಾನ ನಿರ್ಮಿಸುತ್ತೇನೆ ಎ... ಹೇಳಿದರೂ ಜನರ ಮನಸ್ಸಿನಿಂದ ಆ ರಾಮನನ್ನು ದ... ಇಡಲು ಹೇಗೆ ಸಾಧ್ಯವಾಯಿತು? ಅವರು ಬಳ... ತಂತ್ರ ಯಾವುದು ಎಂಬುದನ್ನು ತಿಳಿಯುತ್ತಿದ್ದೇನೆ ಪ್ರ...

ನಾಸ್ತಿಕರಿಗೆ, ದೇವಾಲಯ ಸಂಸ್ಕೃತಿ ವಿರೋಧಿಗ... ಅಪ್ಯಾಯಮಾನ ವಿಷಯ ಇದು! ಅಡ್ವಾಣಿಗೇ ... 'ಭಾರತ ರತ್ನ' ನೀಡಬಾರದು ಅಂದರೆ ಅವರನ್ನು ಮೀರಿ... ಯತಿವರ್ಯರು ಕಾಣಿಸಿಕೊಂಡರು.

ಉಡುಪಿಯ ಪರ್ಯಾಯ

ಶ್ರೀಕೃಷ್ಣನ ಪೂಜೆ ಮಾಡಿ. ಆತಂಕವಿಲ್ಲ, ಆದ...

ವಿಗ್ರಹ ಮುಟ್ಟ ಕೂಡದು!

ಮುಟ್ಟಿದರೆ ಏನಾಗುತ್ತೆ?

ಮೈಲಿಗೆ ಆಗುತ್ತೆ!

ಕಣ್ಣಲ್ಲಿ ನೋಡಬಹುದೊ?

...ತ್ತಿವಿತು ಮುಂದೆ ನೋಡಿದ ದೇವರಾಜ ಅರಸು ಇದ್ರು. ...ಬಗತ್ತೆ, ನಜೀರ್ ಸಾಬರು ಇಲ್ಲೇ ಹುಟ್ಟಿದ್ರು. ಇವತ್ತು ...ನೇನಾರ ಈ ಹೋಟ್ಲು ಮನಿಗೆ ಬಂದು ಧೈರ್ಯವಾಗಿ ...ಯಾಡುಂಗಾಗಿದ್ರೆ ಅದಕ್ಕೆ ಕಾರಣ ನಜೀರ್ ಸಾಬ್ರು."

"ಅದು ನನಿಗೂ ಗೊತ್ತು ಕಂಢ್ನ, ಅದ್ನೆ ಏಟು ಸಿ ...ಳೀ?"

"ಇನ್ನ ಕರ್ನಾಟಕದ ವಿಷಯ ತಗಂಡ್ರೆ ಪೂರ್ವಕ್ಕೆ ...ನ್ನದಗಳ ಇತ್ತು, ಪಶ್ಚಿಮಕ್ಕೆ ಸಮುದ್ರ ಇತ್ತು, ದಕ್ಷಿಣಕ್ಕೆ ...ಮುಂದಿ ಬೆಟ್ಟ, ಉತ್ತರಕ್ಕೆ ಬಸವಣ್ಣ ಬದುಕಿದ್ದ ಬಸವ ...ಲ್ಯಾಣ. ಧರ್ಮಸ್ಥಳ, ಶ್ರವಣಬೆಳಗುಳ, ಬೇಲೂರು ...ಳೇಬೀಡು, ನಂಜನಗೂಡು, ಅಟ್ಟಿಲಕ್ಕಮ್ಮ, ಜಲ್ದಗೆರೆಯಮ್ಮ ...ಂಥೋರ್ನೆಲ್ಲ ಇದ್ದ ಈ ಪುಣ್ಯಭೂಮಿಲಿ ನನ್ನಂಥೋನು ...ಟ್ಟಬಾರದಿತ್ತು ಅಂತ ಕಣಕ್ಕ ದ್ಯಾವೇಗೌಡ್ರು ...ೀಳಿರದು!"

"ನಿಜವೇನ್ನ?"

"ದೇವರಾಣೆ, ನಿಜಕಣಕ್ಕ, ನಮ್ಮ ತಾಯಾಣೆ. ಬೇಕಿದ್ರೆ ...ೇವೇಗೌಡ್ರಿಗೆ ಫೋನು ಮಾಡಿಕೇಳು. ಮ್ಯಾಲಿಂದ ...ರಾಟಿಗರು ಬಂದ್ರು. ಎದುರು ಗಡಿಂದ ತೆಲುಗರು ...ಂದ್ರು. ಕೈಳಗಲಿಂದ ತಮುಳ್ರು ಬಂದ್ರು. ಹಿಂದಿನಿಂದ ...ಲಯಾಳಿಗಳು ಬಂದ್ರು. ಯಾರು ಬಂದ್ರು ಮನೆ ...ಟ್ಟು, ನ್ಯಲ ಕೊಟ್ಟು ಕಾಪಾಡ್ತಯಿರೊ ಈ ಕರುನಾಡಲ್ಲಿ ...ತ್ತಿನಂತ ನಾನು ಹುಟ್ಟಬಾರದಿತ್ತು, ನಾನು ಪಾಪಿ ಅನ್ನೊ ...ನಿ ದ್ಯಾವೇಗೌಡ್ರ ಮಾತಲ್ಲದೆ. ಅದಕ್ಕೆ ನೋವಿನಿಂದ ...ೀಳಿರದು" ಎಂದ ವಾಟಿಸ್ನೆ.

"ಅವುನು ಹೇಳ್ತನೆ ಅಂತ ಕೇಳ್ತ ಕುಂತಿದ್ದಿಯಲ್ಲೆ ನೀನು" ...ಂದು ಉಗ್ರಿ ಹೇಳುವಾಗ, ಕಿಸಕ್ಕೆಂದು ನಕ್ಕ ವಾಟಿಸ್ನೆ.

"ಅಲ್ಲಾ ಕಣಕ್ಕ ದೇವೇಗೌಡ ಮಾತ್ರನೂ ಸೀರಿಯಸ್ಸಾಗಿ ...ಗಂಡು ಮಾತಾಡ್ತ ಕುಂತಿದ್ದಿರಲ್ಲ, ನಿಮಗೇನ್ಹೇಳನ? ...ವುನ್ನೋಡಿದ್ರೇ ಅವುನು ಪ್ರಧಾನಿಯಾಗಿ ಕ್ಯಳಿಕಳವಾಗ ...ಾರು ಈರುಳ್ಳಿ ಪಟಾಕಿ ವಡದ್ರು, ಯಾರು ಕಂಟುಬ್ಯಲ್ಲ ...ಂದ್ರು ಅಂತ ಹಳೆಸೇಡಿಟಗಂಡು ತಿರುಗ್ತ ಅವುನೆ. ...ಂಥೋನಬಾಯ್ಲಿ ಬರೊ ಮಾತಿಗೆ ಏನಾರ ಅರ್ಥ ...ಡಕಕ್ಕೋದ್ರೆ, ನಾವೇ ವಿವರ ಕೊಟಗಬೇಕಾಯ್ತದೆ. ...ಂಗೆ ನೋಡಿದ್ರೆ ಇವತ್ತಿನ ಕರ್ನಾಟಕದ ಸ್ಥಿತಿನೆ ಅವುನುಟ್ಟು! ...ನಿಹೌ, ನಮ್ಮ ದ್ವಡಪ್ಪನಿಗೆ ಬೇಜಾರಾಗಬೌದು. ಸಾರಿ, ...ಡಪ್ಪ ನೀನಂತು ನಮ್ಮೂರಲ್ಲಿ ಹುಟ್ಟಿದ್ದು ನಮ್ಮ ದ್ವಡವ್ವನ ...ಣ್ಯ" ಎಂದು ವಾಟಿಸ್ನೆ ಹೊರಟುಹೋದ. ■

---

ಅದಕ್ಕೆ ಅಭ್ಯಂತರವಿಲ್ಲ.

ಅದರಲ್ಲಿಯೇ ದನದ ದಾಹ ತುಂಬಿಕೊಂಡಿದ್ದರೆ?

ಅದು ಶಾಸ್ತ್ರಸಮ್ಮತ!

ಇದು ಯತಿಗಳ ನಡುವಿನ ಮಾತುಕತೆಯ ಸಾರಾಂಶ.

ಇದನ್ನು ಅರಿತ ಕೃಷ್ಣ ಏನು ಮಾಡಬಹುದು?

ಯತಿವರ್ಯರು ಗರ್ಭಗುಡಿ ಸೇರುತ್ತಿದ್ದಂತೆ ಕೃಷ್ಣ ...ಲ್ಲಿಂದ ಪರಾರಿ!

ಆಯಿತು ಕೃಷ್ಣ ಭಕ್ತರಿಲ್ಲವೆ? ಅವರ ಹೃದಯ ಸೇರಿದನೆ ...ವನು?

ಸರ್ವಸಂಗ ಪರಿತ್ಯಾಗಿಗಳ ಈ ಕದನ.... ಭಕ್ತರ ಪಾಲಿಗೆ ...ಕ್ಕಟೆ ಮನರಂಜನೆ!

ಕೃಷ್ಣ ಏನಾದ?

ಅವರ ಹೃದಯದಿಂದಲೂ ಪರಾರಿ!

ನಾಸ್ತಿಕರು ಕೂಗುತ್ತಿದ್ದಾರೆ- 'ಯತಿಗಳಿಗೆ ನೀಡಿ' 'ಭಾರತ ರತ್ನ!'

ಏನೋ ಶಬ್ದ ಆದ ಹಾಗೆ ಆಯಿತು. ಎಚ್ಚರ ಆಯಿತು.

* * * * * *

ಇಪ್ಪತ್ತೊಂದನೆ ಶತಮಾನ. ಯಾವುದಕ್ಕೆ ಪ್ರಸಿದ್ಧಿ?

ಅಸಹನೆಗೆ!

'ಗೋದ್ರೆಜ್ ಕಂಪನಿಯ ವಸ್ತುಗಳನ್ನು ಬಳಸಬಾರದು' ...ರತೀಯ ಉಲೇಮ ಪರಿಷತ್ತಿನ ಫತ್ವಾ.

ಯಾಕೆ ಖರೀದಿಸಬಾರದು?

ಆ ಕಂಪನಿಯ ಮುಖ್ಯಸ್ಥ ಆದಿ ಗೋದ್ರೆಜ್ ...ಸಲ್ಮಾನರ ವೈರಿ ಸಲ್ಮಾನ್ ರಶ್ದಿಗೆ ಔತಣಕೂಟ ...ರ್ಪಡಿಸಿದ್ದ!

ಎನ್‌ಡಿಟಿವಿಯ ಪ್ರಸಾರ ವಿಭಾಗಗಳ ಮೇಲೆ ದಾಳಿ.

ಯಾರು ದಾಳಿ ಮಾಡಿದ್ದು?

ಮುಸಲ್ಮಾನರಲ್ಲ, ಹಿಂದೂ ಯುವ ಪಡೆ!

ಯಾತಕ್ಕಾಗಿ ಈ ಆಕ್ರೋಶ?

'ಭಾರತ ರತ್ನ' ಪ್ರಶಸ್ತಿ ಯಾರಿಗೆ ನೀಡಬೇಕು? ಅದ್ಭುತ ...ಾಡಿದ ಎಫ್.ಎಂ. ಹುಸೇನ್ ಆಗಬಹುದೊ? ...ಸ್.ಎಂ.ಎಸ್. ಮೂಲಕ ತಿಳಿಯಲು ಅದು ...ಯತ್ನಿಸಿತ್ತು!

ಭಾರತೀಯ ದೇವಾನುದೇವತೆಗಳನ್ನು ಅಶ್ಲೀಲವಾಗಿ ...ತ್ರಿಸಿದ ಇವನಿಗೆ 'ಭಾರತ ರತ್ನ' ಪ್ರಶಸ್ತಿಯೇ! ಇದರ ...ಾಹಿತಿ ಸಂಗ್ರಹಿಸಲು ಪ್ರಯತ್ನಿಸಿದ್ದು ಅಕ್ಷಮ್ಯ ಅಪರಾಧ!

ಅದಕ್ಕಾಗಿ.... ಧ್ವಂಸ!


...ಸಹಿಷ್ಣು ಸುಸಂಸ್ಕೃತರ ನಾಡು ಇದು! ■

---



# ಚೇಳುಗಳು

ಕಾಶಿ, ಜೆರೂಸಲೆಂ, ವ್ಯಾಟಿಕನ್.... ದೈವಭಕ್ತಿಯ ಜನರಿರುವ ಸ್ಥಳಗಳು; ಧರ್ಮದ ಕೇಂದ್ರಗಳು. ಧರ್ಮದಲ್ಲಿ ದಯೆ ಇರಬೇಕು, ಪ್ರೀತಿ ಇರಬೇಕು; ಸಕಲ ಜೀವಗಳನ್ನು ಒಂದೇ ರೀತಿಯಲ್ಲಿ ನೋಡುವ ಔದಾರ್ಯ ಇರಬೇಕು. ಅದು ನಂಬಿಕೆ. ಧರ್ಮಗಳು ಹುಟ್ಟಿದ ಮೊದಲ ದಿನಗಳಲ್ಲಿ ಇದೇ ಬೆಚ್ಚನೆಯ ನಲ್ಮೆ, ದಯೆ ಇರುತ್ತವೆ. ಕ್ರಮೇಣ ಈ ಕರುಣೆಯ ಕಣ್ಣುಗಳಲ್ಲಿ ಹೂ ಕೂಡುತ್ತವೆ; ಕಣ್ಣು ಕುರುಡಾಗುತ್ತವೆ, ಈ ಕುರುಡು ಕಣ್ಣಿಗಷ್ಟೇ ಸೀಮಿತವಾಗುವುದಿಲ್ಲ, ಅದು ಹೃದಯಕ್ಕೂ ಹಬ್ಬುತ್ತದೆ. ವ್ಯಕ್ತಿತ್ವಕ್ಕೆ ಗೆದ್ದಲು ಹಿಡಿಯುತ್ತದೆ.





ಸಾವಿರ ವರ್ಷಗಳ ಹಿಂದೆಯೇ ಪ್ರಯಾಣಿಕನೊಬ್ಬ ಯಹೂದ್ಯರ ಧರ್ಮಕೇಂದ್ರವಾದ ಜೆರೂಸಲೆಂ ನಗರವನ್ನು ಕುರಿತು ಹೇಳಿದ: ದೂರದಿಂದ ನೋಡಲು ಜೆರೂಸಲೆಂ ಅತ್ಯಂತ ಸುಂದರವಾಗಿದೆ, ಆದರೆ ಒಳಹೊಕ್ಕು ನೋಡಿದರೆ ಅದೊಂದು ಕ್ರೂರ ಚೇಳುಗಳ ಬೋಗುಣಿ ಎಂದು ತಿಳಿಯುತ್ತದೆ. ಧಾರ್ಮಿಕರು, ಅದಕ್ಕಿಂತ ಧಾರ್ಮಿಕರು, ಉಗ್ರ ಧಾರ್ಮಿಕರು ಅಲ್ಲಿ ಸಣ್ಣ ಕಾರಣಕ್ಕೆಲ್ಲ ಕಚ್ಚಾಡುತ್ತಾರೆ; ಇತರ ಧರ್ಮದವರನ್ನು ದ್ವೇಷಿಸುತ್ತಾರೆ.

ಈಚೆಗೆ ಸಾಲ್ ಬೆಲ್ಲೋ ಎಂಬ ಯಹೂದ್ಯರ ಸಾಹಿತಿ (ನೊಬೆಲ್ ಬಹುಮಾನ ಪಡೆದ ಕಾದಂಬರಿಕಾರ) ಜೆರೂಸಲೆಂಗೆ ಹೋಗಿದ್ದ. ಆತ ಹೇಳಿದ, "ಜನರು ಧರ್ಮದ ವಿಷ ನುಂಗಿದ್ದಾರೆ."

ಧರ್ಮದಿಂದ ಜಡ್ಡು ಹಿಡಿದ ಮನಸ್ಸನ್ನು ಸರಿಪಡಿಸುವುದು ಕಷ್ಟ. ಯಾಕೆಂದರೆ ಅದರಲ್ಲಿ ಸ್ವಾರ್ಥ ಮತ್ತು ಸ್ವಪ್ರತಿಷ್ಠೆ ಸೇರಿಕೊಂಡಿರುತ್ತವೆ. ಈ ಮನುಷ್ಯನವರು ಕಾಶಿಯಲ್ಲಿದ್ದಾರೆ, ಮೆಕ್ಕಾದಲ್ಲಿದ್ದಾರೆ, ಜೆರೂಸಲೆಂನಲ್ಲಿದ್ದಾರೆ. ಧರ್ಮದ ನೀಚತನವನ್ನು ತೋರಲು ಒಂದು ಉದಾಹರಣೆ ಇದೆ. ಯಹೂದ್ಯರ ಇಸ್ರೇಲ್‌ನಲ್ಲಿ ಜಾತ್ಯತೀತ ಕಮ್ಯುನಿಸ್ಟರು ಅಧಿಕಾರಕ್ಕೆ ಬರಲು ಪ್ರಯತ್ನಿಸಿದರು. ಆಗ ಯಹೂದ್ಯ ಧಾರ್ಮಿಕರು ಪ್ರತಿಭಟಿಸಿದರು: "ನಮ್ಮನ್ನು ಮುಸ್ಲಿಮರು ಆಳಿದರೂ ಚಿಂತೆ ಇಲ್ಲ, ಜಾತ್ಯತೀತರು ಆಳುವುದು ಬೇಕಿಲ್ಲ!"

ನಗು ಮರೆತ, ಅಳು ಮರೆತ, ದಯೆ ಮರೆತ ಧರ್ಮಾಂಧರು ಯಾವುದೇ ಅಣು ಬಾಂಬಿಗಿಂತ ಅಪಾಯದ "ಮನುಷ್ಯರು."

# ವಿಶಿಷ್ಟ ವಿಚಾರ ಲಹರಿ



ಇಂದಿಗೆ ಬರೋಬರಿ ಇಪ್ಪತ್ತೈದು ವರ್ಷದ ಹಿಂದೆ ಪೂರ್ಣಚಂದ್ರ ತೇಜಸ್ವಿಯವರ ಪುಟ್ಟ ಪುಸ್ತಕ "ವ್ಯಕ್ತಿ ವಿಶಿಷ್ಟ ಸಿದ್ಧಾಂತ" ಪ್ರಕಟವಾಯಿತು. ಆಗ ತೇಜಸ್ವಿಯವರಿಗೆ ಇಪ್ಪತ್ತೈದು ವರ್ಷ ಎಂದು ಕಾಣುತ್ತದೆ. ಕೇವಲ ಮೂವತ್ತು ಪುಟಗಳ ಮೂರು ಲೇಖನಗಳ ಈ ಪುಸ್ತಕವನ್ನು ತೇಜಸ್ವಿಯವರೇ ಪ್ರಕಟಿಸಿದರು. "ಲಹರಿ ಬುದ್ಧಿ ಪ್ರಚಾರ ಯೋಜನೆ 1" ಎಂಬ ಸ್ವಲ್ಪ ದೊಡ್ಡದೆನ್ನಿಸುವ ಹೆಸರಿನಡಿ ಈ ಪುಸ್ತಕ ಬಂದಿದೆ. ತೇಜಸ್ವಿಯವರ ಆತುರ, ಆದರ್ಶ ಮತ್ತು ಪ್ರತಿಭೆಯನ್ನು ಸೊಗಸಾಗಿ ತೋರುವ ಈ ಪುಸ್ತಕದ ಆರಂಭದಲ್ಲೇ ಬರುವ ಎರಡು ಪ್ಯಾರಾಗಳನ್ನು ಕೊಡುತ್ತಿದ್ದೇನೆ.

ಈ ದೇಶದಲ್ಲಿ ಪೂಜ್ಯನಾದವನು, ಸಂತನಾದವನು, ಸಂತನೆಂದೆನಿಸಿಕೊಂಡ ದಿನ ಸಾಯುತ್ತಾನೆ. ಆಲೋಚಕನಾದವನು ಬರಹಗಾರನಾದವನು ಸಾಹಿತಿ ಎನ್ನಿಸಿಕೊಂಡ ದಿನ ಸಾಯುತ್ತಾನೆ. ಸಂತನ ಉಪದೇಶವನ್ನೆಲ್ಲ ತಲೆ ತಗ್ಗಿಸಿ ತಾಳಿಕೊಂಡು, ಅಂದದ್ದಕ್ಕೆಲ್ಲ ಜೈ ಎಂದು ಚಿತ್ರ ಕೊಂಡು ಚೌಕಟ್ಟನೊಳಗಿಟ್ಟು ಗೋಡೆಯ ಮೊಳೆಗೆ ನೇತು ಬಿಡಿಯುತ್ತಾರೆ. ಸಂತ ಇಚ್ಛಿಸಿದ ಪದವಿಯನ್ನು ಕೂಡಲೇ ಮಂಜೂರು ಮಾಡಿ ಸಂತನ ಬೋಧನೆಯ ಕಾಟದಿಂದ ಕೂಡಲೇ ಪಾರಾಗುತ್ತಾರೆ. ಇದೇ ತರಹ ಕನ್ನಡ ಲೇಖಕನಿಗೂ, ಅವನು ಬರೆದುದು ಮುದ್ರಿತವಾಗಿ ಪುಸ್ತಕವಾಗಿ ಕೈಗೆ ಬಂದಾಗ ಕತೆಗಾರನೆಂದೋ, ಕಾದಂಬರಿಕಾರನೆಂದೊ, ಕವಿ ಎಂದೋ ಗುರುತಿಸಿ ಕನ್ನಡ ಸಾಹಿತಿ ಎನ್ನುವ ಬಿರುದಾಂಕಿತವನ್ನು ದಯಪಾಲಿಸುತ್ತಾರೆ. ಆ ದಿನ ಅವನು ಸಾಯುತ್ತಾನೆ. ಇಲ್ಲಿ ಕನ್ನಡ ಸಾಹಿತಿ ಸಾಯುತ್ತಾನೆಂದಾಗ, ಹೊಟ್ಟೆಗಿಲ್ಲದೆ ಸತ್ತು ಹೋಗುವನೆಂದಲ್ಲ, ಅಥವಾ ಬಹುಮಾನ ಇತ್ಯಾದಿಗಳು ದೊರೆಯವೆಂದಲ್ಲ, ಆಕಾಶವಾಣಿಯಲ್ಲಿ ಅವಕಾಶ ಸಿಗುವುದಿಲ್ಲವೆಂದಲ್ಲ. ಇವುಗಳಡಿಗೇ ಸಿಕ್ಕು ಅನೇಕರು ಗೊಟಕ್ಕೆಂದಿರುವರು. ಆದುದರಿಂದ ಕನ್ನಡ ಸಾಹಿತಿ ಎಂದಕೂಡಲೇ ಕ್ರಿಸ್ತನಿಗೆ ಬಡಿದ ಶಿಲುಬೆಯ ನೆನಪಾಗಿ ಎದೆಯೊಳಗೆ ದಿಗಿಲು ಸೋರುತ್ತದೆ.

ಹೀಗೆ ಯೋಚಿಸಿದಾಗೆಲ್ಲ ನನಗೆ ನಮ್ಮ ದೇಶದ ಈ ವಿಲಕ್ಷಣ ಆದರದ ಬಗ್ಗೆ ಬಹಳ ಗಾಬರಿಯಾಗುತ್ತದೆ. ಯಾವುದನ್ನೂ ಅಪರಿಚಿತವೆನ್ನದೆ ಏನದರಿಂದಲೂ ಅಪ್ರತಿಭರಾಗದೆ, ಯಾವುದರಿಂದಲೂ ಆಘಾತಗೊಳ್ಳದೆ, ಸುಮ್ಮನೆ ಓ ಎಂದು ಗುರುತಿಸಿ ಮಡಿಸಿ ಎಲೆಅಡಿಕೆ ಮಾಡಿ ಜಗಿದು ನುಂಗಿ ನೀರು ಕುಡಿದುಬಿಡುವ, ನೆನಪಾದ, ಭೂತಕಾಲವಾದ, ಚರಿತ್ರೆಯಾದ, ಜಠರಾಗ್ನಿಯಾಗಿರುವ ಈ ವಿಲಕ್ಷಣ ಶಕ್ತಿ ಯಾವುದು? ಎಂದೆನ್ನಿಸುತ್ತದೆ. ಯಾವುದಕ್ಕೂ ಒಂದು ಮಠ ಮಾಡಿಕೊಟ್ಟು ಕೂರಿಸುತ್ತಾರೆ. ಇತ್ತ ಭಾರತೀಯ ಜೀವನಸ್ರೋತ ಎಂದಿನಂತೆ ಸಾಗತೊಡಗುತ್ತದೆ. ತಾನೂ ಎಲ್ಲಿ ಇದರೊಳಗೆ ಜೀರ್ಣವಾಗಿಬಿಡುವೆನೋ ಎಂಬ ಭಯದಿಂದಲೇ ಇಸ್ಲಾಂ ಧರ್ಮ ಏತಿ ಎಂದರೆ ಪ್ರೇತಿ ಎಂದು ಹಿಂದೂ ಧರ್ಮಕ್ಕೆ ಪ್ರತಿಗಾಮಿಯಾಗೇ ನಿಂತು ಕೊನೆಗೆ ದೇಶವನ್ನು ಇಬ್ಭಾಗ ಮಾಡುವುದರಲ್ಲಿ ತನ್ನತನವನ್ನು ಉಳಿಸಿ ಸಾಧಿಸಿಕೊಂಡಿತು.

ಹೀಗಿರಬೇಕಾದರೆ ನಾನು ಮೇಲೆ ಹೇಳಿದ ಶಕ್ತಿಯನ್ನು ಶಾಂತಿಯುತ ಸಹಬಾಳ್ವೆ ಎಂದು ಕರೆಯಲು ಸಾಧ್ಯವಿಲ್ಲ. ಏಕೆಂದರೆ ಅದು ಒಳಗೊಳಗೆ ಕ್ರೋಧ ಹಿಂಸೆ ಛಲಗಳನ್ನು ಬೆಳೆಸಿರುವುದನ್ನು ನಾವು ಕಂಡು ಬಲ್ಲೆವು. ಇದು ಪರಸ್ಪರರ ಬಗ್ಗೆ ಹಾಗೂ ತಮ್ಮ ವ್ಯಕ್ತಿತ್ವದ ಬಗ್ಗೆ ಇರುವ ಅಸಡ್ಡೆ ಮತ್ತು ನಿರ್ಲಕ್ಷ. ನಮ್ಮ ಜೀವನದ ಸಾಮಾಜಿಕ ಪರಿಸರದಲ್ಲೇ ಎಷ್ಟೋ ಪರಸ್ಪರ ವಿರುದ್ಧವಾದವು ಏಕಕಾಲದಲ್ಲಿ ಚಲಾವಣೆಯಲ್ಲಿರುತ್ತವೆ. ಸಿ.ವಿ. ರಾಮನ್ನರಿಗೊಬ್ಬರು ಬಿ.ವಿ. ರಾಮನ್ನರು, ಪತ್ರಿಕೆಯಲ್ಲಿ ಭೌತಶಾಸ್ತ್ರದ ಪುಟ ತಿರುವಿದರೆ ವಾರಭವಿಷ್ಯ. ಕ್ರಾಪಿನ ಹಿಂದಕ್ಕೆ ಜುಟ್ಟು. ಪರಸ್ಪರ ವಿರುದ್ಧವಾದವು ಒಂದೇ ನೆತ್ತಿಯನ್ನು ಹತ್ತಿ ಕುಳಿತುಕೊಂಡಿರುತ್ತವೆ. ಇರಬಾರದೆಂದಲ್ಲ, ಒಂದಕ್ಕೊಂದಕ್ಕೆ ಸಾಂಸ್ಕೃತಿಕವಾಗಿ ಬೌದ್ಧಿಕವಾಗಿ ಅಪಾರ ಘರ್ಷಣೆ ನಡೆಯುತ್ತಿರಬೇಕು ಆಗ ಮಾತ್ರ. ಎಂಥ ಶಾಂತಿಯುತ ಸಹಬಾಳ್ವೆಯಲ್ಲೂ ಧರ್ಮಾಧರ್ಮ ವಿಚಾರ, ಸತ್ಯಾಸತ್ಯ ವಿವೇಚನೆ ನಡೆಯುತ್ತಿರುತ್ತದೆ.



# ಮಾರ್ಕೋಸ್

ಈತ ತೀರಿಕೊಂಡಿದ್ದಾನೆ. ಮೂರು ವರ್ಷದ ಹಿಂದೆ ತನ್ನ ದೇಶದಿಂದ ಒದ್ದೋಡಿಸಲ್ಪಟ್ಟ ವ್ಯಕ್ತಿ ಈತ. ಸರಿಯಾಗಿ ಮೂವತ್ತು ವರ್ಷ ಫಿಲಿಪೀನ್ಸ್ ದೇಶವನ್ನು ಆಳಿ ಭ್ರಮೆಯಿಂದ ಭ್ರಮೆಗೆ, ಅಧಿಕಾರದ ಹಮ್ಮಿನಿಂದ ಅಧಿಕಾರದ ಅಮಲಿಗೆ ತೆರಳಿದ ವ್ಯಕ್ತಿ ಈ ಮಾರ್ಕೋಸ್.

ಈತ ಅಧಿಕಾರಕ್ಕೆ ಬಂದದ್ದು ಜನತಂತ್ರದ ಚುನಾವಣೆ ಮೂಲಕ. ತನ್ನ ದೇಶಕ್ಕೆ ಒಳ್ಳೆಯದನ್ನು ಮಾಡುವ ಆಶೆ ಈತನಲ್ಲಿ ಇದ್ದಂತಿತ್ತು. ಎರಡು ಚುನಾವಣೆಗಳು ಸರಿಯಾಗಿಯೇ ನಡೆದವು. ಆದರೆ ಕ್ರಮೇಣ ವಂಚನೆ ಶುರುವಾಯಿತು. ಟೀಕೆ ಆರಂಭವಾಯಿತು. ಈ ಟೀಕೆ, ತಕರಾರೆಲ್ಲ ಇಲ್ಲದಿದ್ದರೆ ಕಿರಿಕಿರಿ ಇಲ್ಲದೆ ಅಧಿಕಾರ ನಡೆಸಬಹುದು ಎಂದು ಲೆಕ್ಕ ಹಾಕಿದ. ಪತ್ರಿಕೆ, ವಿರೋಧ ಪಕ್ಷಗಳನ್ನು ಹತ್ತಿಕ್ಕಿದ್ದ; ಸರ್ವಾಧಿಕಾರಿಯಾದ.

ಎಲ್ಲ ಸರಿ ಇದ್ದಂತಿತ್ತು; ಆದ್ದರಿಂದ ಈತನ ಹೆಂಡತಿ ಇಮೆಲ್ಡಾ ಬಡಬಗ್ಗರಿಗೆ ನೆರವಾಗುತ್ತಾ, ಲಕ್ಷಾಂತರ ಮರ ನೆಡಿಸುತ್ತ ಜನಕ್ಕಾಗಿ ಹಣ ಎತ್ತುತ್ತ ಹೋದಳು; ಈ ನಾಟಕ ತನ್ನ ದುರಾಶೆ, ಭ್ರಷ್ಟತೆಯನ್ನು ಮುಚ್ಚಿ ಹಾಕಬಹುದು ಎಂದು ತಿಳಿದಳು. ಪ್ಯಾರಿಸ್, ಲಂಡನ್, ಮ್ಯಾನ್‌ಹಟ್ಟನ್‌ನ ಅಂಗಡಿಗಳು ಈಕೆ ಕಾಲಿಟ್ಟೊಡನೆ ರೋಮಾಂಚನಗೊಳ್ಳುತ್ತಿದ್ದವು. ಜಗತ್ತಿನ ಎಲ್ಲ ನೆಲ, ಎಲ್ಲ ಸಂಪತ್ತಿಗೆ ಕೈಹಾಕಿದಳು. ಮೂರು ಸಾವಿರ ಜೊತೆ ಚಪ್ಪಲಿಗಳು, ಸಾವಿರ ಬಗೆಯ ಉಡುಪುಗಳು, ಕೋಟ್ಯಂತರ ಬೆಲೆಯ ನಗನಾಣ್ಯಗಳು. ಈಕೆಯ ಹುಚ್ಚನ್ನು ನೀವೇ ಊಹಿಸಿ.

ಪ್ರತಿಯೊಬ್ಬ ಮನುಷ್ಯನೂ ನೆನಪಿಡಬೇಕಾದ ಒಂದು ನಾಣ್ಣುಡಿ ಇದೆ. ನಾನು ಇಡೀ ಜಗತ್ತನ್ನು ಗೆದ್ದರೂ ನನಗಿರುವುದು ಒಂದೇ ನಗರ. ಆ ನಗರದಲ್ಲಿ ನನ್ನದಾಗಬಲ್ಲದು ಒಂದೇ ಮನೆ; ಆ ಮನೆಯಲ್ಲಿ ಕೂಡ ನನ್ನದು ಒಂದು ಕೋಣೆ; ಆ ಕೋಣೆಯಲ್ಲಿ ನನ್ನದಾದ ಒಂದು ಹಾಸಿಗೆ. ಆ ಹಾಸಿಗೆಯಲ್ಲಿ ನಿದ್ರಿಸುವ ಹೆಣ್ಣು... ಆಕೆ ನನ್ನ ಇಡೀ ಜಗತ್ತು...

---

# ಪುಟ್ಟಿ



ನನ್ನ ಹಸ್ತದ ಮೇಲೆ
ಅಡ್ಡಾದಿಡ್ಡಿ ಚಿತ್ರಗಳನ್ನು
ಬಿಡಿಸಿದ ಪುಟ್ಟಿ
ಅವನ್ನೆಲ್ಲ ಮನೆ
ಮರ
ಗಿಡ
ಎಂದು ವರ್ಣಿಸಿದಾಗ
ನನಗೂ ಅವೆಲ್ಲ
ಕಂಡದ್ದು
ಸೋಜಿಗ!

ಮೊದಲ ಬಾರಿಗೆ ವಿಮಾನದಲ್ಲಿ
ಹಾರಲಿದ್ದ ಪುಟ್ಟಿ
ನನಗಾಗಿ ಮೋಡಗಳನ್ನು ಹಿಡಿದು
ತರುತ್ತೇನೆಂದಾಗ
ನಾನು
ಸ್ವರ್ಗಕ್ಕೇರಿದೆ

ನನ್ನ ಪಾಲಿನ
ಗೋಡಂಬಿ, ಬಾದಾಮಿ, ದ್ರಾಕ್ಷಿಯನ್ನು
ತಿಂದ ಪುಟ್ಟಿ
ಕೊಟ್ಟ ಮುತ್ತು
ಎಷ್ಟೊಂದು ಸಿಹಿ


■ ಸಾವಂತ್ರಿ

# ಹುಚ್ಚುಮುಂಡಿ ಮದ್ವೇಲಿ ಉಂಡೋನೇ ಜಾಣ!

## ಪಟ್ಟದಕಲ್ಲು ಚಾಲುಕ್ಯ ಉತ್ಸವ

ಈ ಬಾರಿಯ ಚಾಲುಕ್ಯ ಉತ್ಸವಕ್ಕೆ ಈ ಮಾತು ಬಹಳ ಚೆನ್ನಾಗಿ ಒಪ್ಪುತ್ತೆ. ಹತ್ತಾರು ವರ್ಷದಿಂದ ನಡೆಯುತ್ತಾ ಬಂದಿರುವ ಈ ಉತ್ಸವ ಎಂದೂ ವಿವಾದ ರಹಿತವಾಗಿ ಮುಗಿದ ಇತಿಹಾಸವೇ ಇಲ್ಲ. ಆದರೆ ಈ ಬಾರಿಯದ್ದು ಹೊರಗೆ ಕಾಣುವ ವಿವಾದವಲ್ಲ, ಒಳಗೊಳಗೇ ನಡೆದ ಲೂಟಿಯ ಕರ್ಮಕಾಂಡ. ಜಿಲ್ಲಾಡಳಿತ ಈ ಉತ್ಸವದ ಹೆಸರಿನಲ್ಲಿ ತೋಳು ಮಡಚಿಕೊಂಡು, ಮಂದಿಯೂರಿ ಎಷ್ಟು ಸಾಧ್ಯವೋ ಅಷ್ಟನ್ನು ಮೇಯ್ದಿದೆ.

ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಿದ್ದೇ ತಡ, ಜಿಲ್ಲಾಧಿಕಾರಿ ಜೆ.ಎನ್. ನಾಯಕನ ಸಾರಥ್ಯದಲ್ಲಿ ಜಿಲ್ಲಾಡಳಿತ ತರಾತುರಿಯಲ್ಲಿ ಚಾಲುಕ್ಯ ಉತ್ಸವವನ್ನು ನಡೆಸುವ ನಿರ್ಣಯ ಕೈಗೊಂಡುಬಿಟ್ಟಿತು. ಕಾರಣ ಇಷ್ಟೇ: ಪ್ರತೀಬಾರಿಯಂತೆ ಈ ಬಾರಿ ಶಾಸಕ, ಮಂತ್ರಿಗಳ ಕಾರುಬಾರು ರಾಷ್ಟ್ರಪತಿಗಳ ಆಡಳಿತವಿರುವಾಗ ಇರುವುದಿಲ್ಲ. ಅಂತೆಯೆ, ಉತ್ಸವದ ಹೆಸರಿನಲ್ಲಿ ಅವರೆಲ್ಲ ದೋಚುತ್ತಿದ್ದ ಸಾರ್ವಜನಿಕ ಹಣವನ್ನು ಜಿಲ್ಲಾಡಳಿತವೇ ನುಂಗಿ ನೀರು ಕುಡಿಯಬಹುದು ಎಂಬ ಸಂತಸ. ಇದನ್ನೆಲ್ಲಾ ಸರಿಯಾಗಿ ಲೆಕ್ಕಹಾಕಿ ಜಿಲ್ಲಾಧಿಕಾರಿ ನಾಯಕ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಶ್ರೀಶೈಲ ಕರಿಶಂಕರಿ ಇಬ್ಬರೂ ಸೇರಿಕೊಂಡು ಒಂದು ಸ್ಕೆಚ್ ತಯಾರಿಸಿ ಚಾಲುಕ್ಯ ಉತ್ಸವ ಆಚರಿಸುವ ನಿರ್ಧಾರ ಮಾಡಿಯೇ ಬಿಟ್ಟರು.


ಚಾಲುಕ್ಯ ಉತ್ಸವ-2008

ಪ್ರತಿ ವರ್ಷದಂತೆ ಚಾಲುಕ್ಯ ಉತ್ಸವವನ್ನು ಐಹೊಳೆ, ಪಟ್ಟದಕಲ್ಲು ಹಾಗೂ ಬಾದಾಮಿಯಲ್ಲಿ ಪ್ರತ್ಯೇಕವಾಗಿ ಮೂರು ದಿನ ನಡೆಸದೆ ಒಂದೇ ಬಾರಿ ಪಟ್ಟದಕಲ್ಲಿನಲ್ಲಿ ಮಾತ್ರವೇ ನಡೆಸುವುದು ಹಾಗೂ ಬಾದಾಮಿ ಬನಶಂಕರಿ ಜಾತ್ರೆಗೆ ಮುಂಚಿತವಾಗಿಯೇ ನಡೆಸುವುದು ಎಂದು ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಮೇಲ್ನೋಟಕ್ಕೆ ಇದು ಸರಿ ಎಂದು ಕಾಣುತ್ತಿದ್ದರೂ ಈ ರೀತಿ ತೀರ್ಮಾನಿಸುವುದಕ್ಕೆ ಜಿಲ್ಲಾಧಿಕಾರಿ ನಾಯಕನ ತಲೆಯೊಳಗಿದ್ದ ಲೆಕ್ಕಾಚಾರವೇ ಬೇರೆ. ಪಟ್ಟದ ಕಲ್ಲಿನ ಚಾಲುಕ್ಯ ಉತ್ಸವಕ್ಕೆ ಒಮ್ಮೆ ಫಂಡ್ ಕಲೆಕ್ಟ್ ಮಾಡುವುದು, ನಂತರ ತಿಂಗಳುದ್ದಕ್ಕೂ ನಡೆಯುವ ಬಾದಾಮಿ ಬನಶಂಕರಿಯ ಜಾತ್ರೆಯಲ್ಲೂ ಲೂಟಿ ಹೊಡೆಯುವುದು ಅವನ ಯೋಚನೆಯಾಗಿತ್ತು. ಹೀಗೆ, ಪ್ರತ್ಯೇಕ ಡಬಲ್ ಲೂಟಿಗೆ ಅನುಕೂಲವಾಗಲೆಂದೇ ಅವೆರಡನ್ನೂ ಪ್ರತ್ಯೇಕಗೊಳಿಸಿಬಿಟ್ಟ.

ಚಾಲುಕ್ಯ ಉತ್ಸವದ ಹೆಸರಿನಲ್ಲಿ ದುಡ್ಡು ಎತ್ತುವುದಕ್ಕೆ ಜಿಲ್ಲಾಧಿಕಾರಿ ಈ ಬಾರಿ ಬಳಸಿಕೊಂಡಿದ್ದು ಪ್ರತಿ ತಾಲ್ಲೂಕಿನ ತಹಶೀಲ್ದಾರರನ್ನು. ಯಾವ ಯಾವ ತಾಲ್ಲೂಕಿನಿಂದ ಎಷ್ಟೆಷ್ಟು ಹಣ ಬರಬೇಕೆಂದು ನಿಗದಿಗೊಳಿಸಿದ್ದಲ್ಲದೇ ಹೇಗೆ ದುಡ್ಡನ್ನು ವಸೂಲಿ ಮಾಡಬೇಕು ಎಂಬ ತಂತ್ರವನ್ನೂ ತಹಶೀಲ್ದಾರರಿಗೆ ತಿಳಿಸಿದ್ದ. ಅದೂ ಲಿಖಿತವಾಗಿ! ಜಿಲ್ಲಾಧಿಕಾರಿಯ ಆದೇಶದ ಮೇರೆಗೆ ಪ್ರತೀ ತಾಲ್ಲೂಕಿನ ತಹಶೀಲ್ದಾರರು ಒಂದು ವಾರಕ್ಕೆ ಮುಂಚಿತವಾಗಿಯೇ ವಿವಿಧ ಸರ್ಕಾರಿ ಇಲಾಖೆಗಳ ಮುಖ್ಯ ಅಧಿಕಾರಿಗಳನ್ನು, ಬಿಸಿನೆಸ್‌ಮ್ಯಾನ್‌ಗಳನ್ನು, ವರ್ತಕರ ಸಂಘದವರನ್ನು ಸಭೆ ಕರೆದು, ಜಿಲ್ಲಾಧಿಕಾರಿಗಳ ಆದೇಶವನ್ನು ತೋರಿಸಿ ಇಂತಿಷ್ಟು ಕೊಡಬೇಕೆಂದು ಕಟ್ಟಪ್ಪಣೆ ಮಾಡಿದರು. ಜಿಲ್ಲಾಧಿಕಾರಿ ಹೊರಡಿಸಿದ ಈ ಆದೇಶದಲ್ಲಿ ಯಾವ್ಯಾವ ಸರ್ಕಾರಿ ಇಲಾಖೆಗಳು ಎಷ್ಟೆಷ್ಟು ಕೊಡಬೇಕೆಂಬ ಲಿಸ್ಟ್ ಇದೆಯಾದರೂ, ತಹಶೀಲ್ದಾರರ ನೇತೃತ್ವದಲ್ಲಿರುವ ರೆವಿನ್ಯೂ ಇಲಾಖೆಯಿಂದ ಎಷ್ಟು ಎಂಬುದನ್ನು ಮಾತ್ರ ನಮೂದಿಸಿಲ್ಲ!

ಜಿಲ್ಲೆಯಲ್ಲಿರುವ ತಾಲ್ಲೂಕಿನಲ್ಲಿ ಅತೀ ಹೆಚ್ಚು ಸಮೃದ್ಧವಾಗಿರುವ ತಾಲ್ಲೂಕುಗಳೆಂದರೆ, ಹುನಗುಂದ, ಬಿಳಗಿ, ಮುಧೋಳ ಮತ್ತು ಜಮಖಂಡಿ.

ಹುನಗುಂದದಲ್ಲಿ ಗ್ರಾನೈಟ್ ಉದ್ಯಮ ಪೊಗದಸ್ತಾಗಿ ಬೆಳೆದು ನಿಂತಿದ್ದರೆ, ಬಿಳಗಿ, ಮುಧೋಳ ಮತ್ತು ಜಮಖಂಡಿಗಳಲ್ಲಿ ಸಕ್ಕರೆ ಕಾರ್ಖಾನೆಗಳು, ಸಿಮೆಂಟ್ ಕಾರ್ಖಾನೆಗಳು ಕಾಮಧೇನುಗಳಂತೆ ಬೆಳೆದಿವೆ. ಇವುಗಳನ್ನೆಲ್ಲಾ ಲೆಕ್ಕ ಹಾಕಿ ಯಾವ ತಾಲ್ಲೂಕಿನಿಂದ ಎಷ್ಟು ದುಡ್ಡು ಎತ್ತಬೇಕೆಂದು ಲಿಖಿತ ಆದೇಶ ಹೊರಡಿಸಿದ್ದಾನೆ ಜಿಲ್ಲಾಧಿಕಾರಿ ನಾಯಕ್. ಅದರ ಪ್ರಕಾರ, ಜಮಖಂಡಿಯಿಂದ 75 ಲಕ್ಷ, ಬಾದಾಮಿಯಿಂದ ೨೫ ಲಕ್ಷ, ಹುನಗುಂದದಿಂದ 75 ಲಕ್ಷ, ಬಾಗಲಕೋಟೆಯಿಂದ 50 ಲಕ್ಷ, ಬಿಳಗಿ ಮತ್ತು ಮುಧೋಳಗಳಿಂದ ತಲಾ 70 ಲಕ್ಷ – ಹೀಗೆ ಕನಿಷ್ಠ ಮೂರು ಕೋಟಿ ಎಂಭತ್ತೈದು ಲಕ್ಷ ರೂಪಾಯಿ ಜಿಲ್ಲಾಧಿಕಾರಿಯ ಚೇಂಬರಿಗೆ ಬಂದು ಬಿದ್ದಿದೆ. ಇದರ ಜೊತೆಗೆ ಸರ್ಕಾರ ನೀಡುವ ಹಣಕಾಸು ನೆರವು ಬೇರೆ.

ಇಷ್ಟೆಲ್ಲಾ ಹಣ ವಸೂಲಿ ಮಾಡಿ ಅದನ್ನೆಲ್ಲಾ ಉತ್ಸವಕ್ಕೆ ಖರ್ಚು ಮಾಡಿದ್ರೆ ಅಂದರೆ ಅದೂ ಇಲ್ಲ. ವಸೂಲಿಯಾಗಿದ್ದರಲ್ಲಿ ಅರ್ಧಕ್ಕರ್ಧ ದುಡ್ಡನ್ನು ನಾಯಕ ಮತ್ತವನ ವಸೂಲಿ ಗ್ಯಾಂಗೇ ತಿಂದುಹಾಕಿದೆ. ಉತ್ಸವ ನಡೆದ ಪರಿಯನ್ನು ನೋಡಿದರೆ ಸಾಕು ಇದು ಅರ್ಥವಾಗಿಬಿಡುತ್ತದೆ. ಜನರಿಗೆ ಮನರಂಜನೆಗಾಗಿ ಸರಿಯಾದ ಒಂದು ಕಾರ್ಯಕ್ರಮವಿರಲಿಲ್ಲ, ಪ್ರಸಿದ್ಧ ಕಲಾವಿದರ ಸಾಂಸ್ಕೃತಿಕ ತಂಡಗಳಿರಲಿಲ್ಲ, ಉತ್ಸವಕ್ಕಾಗಿ ಬಂದ ಜನರಿಗೆ ಸರಿಯಾದ ಮೂಲಭೂತ ಸೌಕರ್ಯಗಳಿರಲಿಲ್ಲ, ಬಂದ ಜನರೆಲ್ಲಾ ಪರದಾಡುತ್ತಾ ಜೆ.ಎನ್. ನಾಯಕನ ಮುಖಕ್ಕೆ ಉಗಿದುಹೋಗಿದ್ದಂತೂ ಸತ್ಯ.

ಎರಡು ವರ್ಷದ ಹಿಂದೆ ನಡೆದ ಚಾಲುಕ್ಯ ಉತ್ಸವಕ್ಕೆ 25 ಲಕ್ಷ ಕೊಡುತ್ತೇವೆ ಅಂತ ಹೇಳಿ ಹೇಮಾಮಾಲಿನಿಯನ್ನು ಕರೆಸಲಾಗಿತ್ತು, ಕೊನೆಗೆ ಕೇವಲ ಹತ್ತು ಲಕ್ಷ ಕೊಟ್ಟಿದ್ದಕ್ಕೆ ಆಕೆ ಸ್ಟೇಜ್ ಮೇಲಿಂದಲೇ ಆಗಿನ ಜಿಲ್ಲಾಧಿಕಾರಿ ಕೆ.ಎಸ್. ಪ್ರಭಾಕರ್‌ಗೆ ಕ್ಯಾಕರಿಸಿ ಉಗಿದುಹೋಗಿದ್ದಳು. ಇದನ್ನೇ ಒಂದು ನೆಪ ಮಾಡಿಕೊಂಡ ಜಿಲ್ಲಾಧಿಕಾರಿ ನಾಯಕ್ 'ನಾನು ಬೇರೆಯದೇ ರೀತಿಯಲ್ಲಿ ಉತ್ಸವ ಮಾಡುತ್ತೇನೆ' ಎಂದು ಹೂಂಕರಿಸಿದ್ದ. ಈಗ ಮಾಡಿರುವುದನ್ನು ನೋಡಿದರೆ ಈ ಕುಳ್ಳನಿಗಿಂತ ಆ ಕಳ್ಳನೇ ವಾಸಿ ಎಂದೆನಿಸುತ್ತದೆ.

ಈ ಬಾರಿಯ ಉತ್ಸವದಲ್ಲಿ ಯಾವ ಖ್ಯಾತ ಕಲಾವಿದರನ್ನೂ ಕರೆಸಿರಲಿಲ್ಲ. ಅಕ್ಕಪಕ್ಕ ಇದ್ದವರನ್ನೇ ಕರೆಸಿ ತೇಪೆ ಕೆಲಸ ಮಾಡಲಾಯಿತು. ಕಾರಣ ಇಷ್ಟೇ: ಖ್ಯಾತ ಕಲಾವಿದರನ್ನು ಕರೆಸಿದರೆ ಅವರಿಗೆ ಜಾಸ್ತಿ ದುಡ್ಡು ಕೊಡಬೇಕಾಗುತ್ತೆ. ಆಗ ನಾಯಕ್‌ಗೆ ಮೇಯಲು ಕಡಿಮೆಯಾಗುತ್ತೆ. ಮೂರು ದಿನಗಳ ಈ ಉತ್ಸವದಲ್ಲಿ ಜಾಸ್ತಿ ಸಂಭಾವನೆ ಪಡೆದು ಕಳಪೆ ಪ್ರದರ್ಶನ ನೀಡಿದವರೆಂದರೆ ಹಂಸಲೇಖ. 150 ಜನರ ತಂಡವನ್ನು ಕರೆದುಕೊಂಡು ಬಂದಿದ್ದ ಹಂಸಲೇಖ ಆನಾಮತ್ತು ಹತ್ತು ಲಕ್ಷ ಕಿತ್ತುಕೊಂಡು ಕಾಟಾಚಾರಕ್ಕೆಂದು ಪ್ರೋಗ್ರಾಮ್ ಮಾಡಿ ಕೈತೊಳೆದುಕೊಂಡರು. ಇದನ್ನು ಬಿಟ್ಟರೆ ಉತ್ಸವದಲ್ಲಿ ಯಾವ ಗಂಧವೂ ಇರಲಿಲ್ಲ.

■ ಮೇಘರಾಜ್

## ಸಂತೆ ಸೇರುವ ಮೊದಲು ಗಂಟುಗಳ್ಳರು ಸೇರಿದರು!

ಈ ಮಾತು ಬಾದಾಮಿ ಜಾತ್ರೆಗೆ ಹೇಳಿಮಾಡಿಸಿದಂತಿದೆ. ಬಾದಾಮಿ ಬನಶಂಕರಿಯ ಜಾತ್ರೆ ಪ್ರತೀವರ್ಷ ಬನದ ಹುಣ್ಣಿಮೆಯಲ್ಲಿ ಪ್ರಾರಂಭವಾಗಿ ತಿಂಗಳುಗಟ್ಟಲೇ ನಡೆಯುತ್ತದೆ. ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಮೂಲೆಮೂಲೆಗಳಿಂದ ಜನ ಸಾಗರೋಪಾದಿಯಲ್ಲಿ ಈ ಜಾತ್ರೆಗೆ ಬಂದು ಸೇರುತ್ತಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನ ಜಂಗುಳಿ ಸೇರುತ್ತದೆಂದರೆ ಗಂಟುಕಳ್ಳರು ಬರದಿರುತ್ತಾರೆಯೇ? ಜಾತ್ರೆಯ ಸಮಯದಲ್ಲಿ ಇಲ್ಲಿ ತಲೆ ಎತ್ತಲಿರುವ ಚಿತ್ರಮಂದಿರಗಳು ಮತ್ತು ಜಿಲ್ಲಾಡಳಿತವೇ ಜನರ ಪಾಲಿಗೆ ಗಂಟುಗಳ್ಳರು. ಜಾತ್ರೆ ಶುರುವಾಗುತ್ತಿದ್ದಂತೆಯೇ ಹತ್ತಾರು ಚಿತ್ರಮಂದಿರಗಳು ತಲೆ ಎತ್ತುತ್ತವೆ. ಜೊತೆಗೆ ಇತ್ತೀಚೆಗಂತೂ ನಂಗಾ ನಾಚ್‌ನಂತಹ ಅಶ್ಲೀಲ ಕುಣಿತ-ಕುಣಿತಗಳೂ ಹೇವರಿಕೆ ಹುಟ್ಟಿಸುವಷ್ಟು ಮಟ್ಟಿಗೆ ಜೋರಾಗಿ ನಡೆಯುತ್ತಿವೆ. ಆದರೆ, ಇವ್ಯಾವುದಕ್ಕೂ ಸರ್ಕಾರದ ಯಾವುದೇ ಇಲಾಖೆಯಿಂದ ಪರವಾನಗಿ ಇರುವುದಿಲ್ಲ. ಹಾಗಂತ ಜಿಲ್ಲಾಡಳಿತ ಬಂದು ಚೆಕ್ ಮಾಡಿ ಇವುಗಳನ್ನು ನಿಲ್ಲಿಸುವ ಗೋಜಿಗೂ ಹೋಗುವುದಿಲ್ಲ. ಏಕೆಂದರೆ, ನಾಟಕ ಕಂಪೆನಿಯ ಮತ್ತು ಚಿತ್ರಮಂದಿರಗಳ ಮಾಲೀಕರು ಆಗಲೇ ಜಿಲ್ಲಾಧಿಕಾರಿಗಳ ಬಳಿ, ಪೊಲೀಸರ ಬಳಿ ಬಂದು ಕಪ್ಪಕಾಣಿಕೆಗಳನ್ನು ಸಮರ್ಪಿಸಿ ಅನಧಿಕೃತ ಮೌಖಿಕ ಪರವಾನಗಿಯನ್ನು ಪಡೆದುಕೊಂಡಿರುತ್ತಾರೆ. ಅಂದ ಮೇಲೆ ಅವರನ್ನು ಹಿಡಿಯೋರು ಯಾರು? ಬೇಕಾಬಿಟ್ಟಿ ಟಿಕೆಟ್ ರೇಟು ಇಟ್ಟು ವ್ಯವಸ್ಥಿತವಾಗಿ ಜನರನ್ನು ಸುಲಿಯುತ್ತಾರೆ. ಈ ಸುಲಿಗೆಕೋರರಿಗೆ ಜಿಲ್ಲಾಧಿಕಾರಿಗಳು, ಪೊಲೀಸರು ನೇರವಾಗಿ ರಕ್ಷಣೆ ಒದಗಿಸುತ್ತಾರೆ.

ಇದರ ಜೊತೆಗೆ ಬಾರ್‌ಗಳು, ಮೈಮಾರುವ ಕಸುಬು ಎಲ್ಲವೂ ವ್ಯವಸ್ಥಿತವಾಗಿ ನಡೆಯುವಂತೆ ಜಿಲ್ಲಾಡಳಿತ ನೋಡಿಕೊಳ್ಳುತ್ತದೆ. ಏಕೆಂದರೆ, ಅವೆಲ್ಲವೂ ಜಿಲ್ಲಾಡಳಿತಕ್ಕೆ ಕಮಾಯಿಯ ಮೂಲಗಳು. ಈ ಉತ್ಸವ ಒಂದರಿಂದಲೇ ಕನಿಷ್ಠವೆಂದರೂ ಹತ್ತು ಲಕ್ಷ ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರ ಜೇಬು ಸೇರುತ್ತದೆ. ಇಲ್ಲಿಯ ಸಂಸದ ಪಿ.ಸಿ. ಗದ್ದಿಗೌಡನಿಗೂ ಒಂದಿಷ್ಟು ಪರ್ಸಂಟೇಜ್ ಸಿಗುತ್ತೆ.

ಒಟ್ಟಿನಲ್ಲಿ ಚಾಲುಕ್ಯ ಉತ್ಸವದ ಹೆಸರಿನಲ್ಲಿ, ಬಾದಾಮಿ ಬನಶಂಕರಿಯ ಜಾತ್ರೆಯ ಹೆಸರಿನಲ್ಲಿ ವ್ಯವಸ್ಥಿತವಾಗಿ ಜನರ ಸುಲಿಗೆಗಿಳಿದಿರುವ ಜಿಲ್ಲಾಧಿಕಾರಿ ಜೆ.ಎನ್. ನಾಯಕ್‌ನನ್ನು, ಪಿ.ಸಿ. ಗದ್ದಿಗೌಡನನ್ನು ಮತ್ತು ಪೊಲೀಸರನ್ನು ಬನಶಂಕರಿಯಮ್ಮನ ಭಕ್ತರೇ ಶಿಕ್ಷಿಸಬೇಕಷ್ಟೆ. ■

(2ನೇ ಪುಟದಿಂದ)

ಅಮೆರಿಕದ ಆರ್ಥಿಕತೆಯ ಹಿಂದ್ಸರಿತದ ಪರಿಣಾಮದಿಂದಾಗಿ ಶೇರು ಮಾರುಕಟ್ಟೆಗಳಲ್ಲಿ ತಲ್ಲಣ ಸಂಭವಿಸಿದೆ. ಹೀಗಾಗಿ ಭಾರತದ ಶೇರು ಮಾರುಕಟ್ಟೆಯ ತಲ್ಲಣ ಒಂದು ಜಾಗತಿಕ ವಿದ್ಯಮಾನವೇ ಆಗಿದೆ. ಆದರೆ ಅದರಲ್ಲೂ ಭಾರತಕ್ಕಂತೂ ಒಂದು ವಿಶೇಷವಿದೆ. ಹಾಂಕಾಂಗ್, ಸಿಂಗಪೂರ್, ಜಪಾನ್ ಇನ್ನಿತ್ಯಾದಿ ದೇಶಗಳಲ್ಲಿ ಈ ವಿದ್ಯಮಾನದಿಂದ ವಹಿವಾಟಿನಲ್ಲಿ ಶೇ. 3-6ರಷ್ಟು ಇಳಿಕೆ ಕಂಡುಬಂದರೆ ಭಾರತದ ಶೇರು ಮಾರುಕಟ್ಟೆಯಲ್ಲಿ ಶೇ.7ರಷ್ಟು ಇಳಿಕೆಯಾಯಿತು. ಇದರರ್ಥವೇನು?

ಈಗಾಗಲೇ ವಿವರಿಸಿದಂತೆ ಯಾವ ದೇಶಗಳ ಆರ್ಥಿಕತೆ ಅಮೆರಿಕದ ಆರ್ಥಿಕತೆಯ ಮೇಲೆ ಆಧಾರಪಟ್ಟಿರುತ್ತವೋ ಆ ದೇಶಗಳ ಮೇಲೆ ಇದರ ಪರಿಣಾಮ ಹೆಚ್ಚು. ಹೀಗಾಗಿ ಬೇರೆಲ್ಲಾ ದೇಶಗಳಿಗಿಂತ ಭಾರತದಲ್ಲಿ ವಹಿವಾಟು ಇಳಿಕೆಯಾಯಿತೆಂದರೆ ಬೇರೆಲ್ಲಾ ದೇಶಗಳಿಗಿಂತ ಭಾರತದ ದೇಶವು ಅಮೆರಿಕದ ಮೇಲೆ ಹೆಚ್ಚು ಆಧಾರ ಪಟ್ಟಿದೆ ಎಂದರ್ಥ. ಇದರಿಂದ ಅಮೆರಿಕದ ಆರ್ಥಿಕತೆ ಚೇತರಿಸಿಕೊಳ್ಳದೆ ಭಾರತದ ಶೇರು ಉದ್ಯಮವೂ ಚೇತರಿಸಿಕೊಳ್ಳುವುದು ಕಷ್ಟ.

ಈಗ ಈ ಸಮಸ್ಯೆಯನ್ನು ಬಗೆಹರಿಸಲು ಅಮೆರಿಕದ ಫೆಡರಲ್ ಬ್ಯಾಂಕು ಜನತೆಗೆ ಕೊಡುತ್ತಿದ್ದ ಸಾಲದ ದರವನ್ನು 0.75ರಷ್ಟು ಕಡಿಮೆ ಮಾಡಿದೆ. ಅಷ್ಟು ಮಾತ್ರವಲ್ಲದೆ ಆರ್ಥಿಕತೆಯಲ್ಲಿ ಮತ್ತೆ ಚಲನೆ ತರಲು 70-100 ಬಿಲಿಯನ್ ಡಾಲರ್‌ಗಳಷ್ಟು ಚೇತರಿಕಾ ಹೂಡಿಕೆಯನ್ನು ಮಾಡುವುದಾಗಿ ಅಮೆರಿಕ ಸರ್ಕಾರ ಘೋಷಿಸಿದೆ. ಅಂದರೆ ಉದ್ಯಮಿಗಳ ಹೂಡಿಕೆಯ ಮೇಲೆ ತೆರಿಗೆ ಕಡಿತ. ಜನತೆಯ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಲು ನಿರುದ್ಯೋಗ ಭತ್ಯೆ ಹೆಚ್ಚಿಸುವುದು, ಮತ್ತು ತೆರಿಗೆ ಹೊರೆಯನ್ನು ಕಡಿಮೆ ಮಾಡುವುದು ಇತ್ಯಾದಿ. ಆದರೆ ಇವೆಲ್ಲವೂ ರಾವಣಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ.

ಉದಾಹರಣೆಗೆ ಕಳೆದ ಐದು ವರ್ಷಗಳಲ್ಲಿ ಅಮೆರಿಕದಲ್ಲಿ ಪೆಟ್ರೋಲ್ ದರ ಬ್ಯಾರೆಲ್‌ಗೆ ಮೂವತ್ತು ಡಾಲರ್‌ನಷ್ಟಾಗಿದೆ. ಇದು ಬಡ ಮಧ್ಯಮ ವರ್ಗದಿಂದ ಕನಿಷ್ಠ 150 ಬಿಲಿಯನ್ ಡಾಲರ್, ಅಂದರೆ ಬುಷ್ ಸರ್ಕಾರ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕೆಂದು ನೀಡುತ್ತಿರುವ ಹಣಕ್ಕಿಂತ ಎರಡು ಪಟ್ಟು ಹೆಚ್ಚು ಹಣವನ್ನು ಸುಲಿಯಲಿದೆ. ಹೀಗಾಗಿ ಇಂಥ ಕ್ರಮಗಳಿಂದ ಅಮೆರಿಕದ ಆರ್ಥಿಕತೆ ಚೇತರಿಸಿಕೊಳ್ಳುವುದಿಲ್ಲ. ಬದಲಿಗೆ ಜನರಿಗೆ ಕೊಡುವ ಬಡ್ಡಿ ದರದ ಇಳಿಕೆಯಿಂದ ಬ್ಯಾಂಕುಗಳಲ್ಲಿ ಹೂಡಲು ಹೂಡಿಕೆದಾರರು ಹಿಂಜರಿಯುವುದರಿಂದ ಬ್ಯಾಂಕುಗಳ ಬಿಕ್ಕಟ್ಟು ಮತ್ತು ಅದರಿಂದಾಗಿ ಶೇರು ಮಾರುಕಟ್ಟೆಯ ಬಿಕ್ಕಟ್ಟೂ ಕಡಿಮೆಯಾಗುವುದಕ್ಕಿಂತ ಹೆಚ್ಚಾಗಬಹುದಷ್ಟೆ ಎಂದು ಪಂಡಿತರು ಲೆಕ್ಕಾಚಾರ ಹಾಕುತ್ತಿದ್ದಾರೆ. ಮತ್ತದರಲ್ಲಿ ಸತ್ಯವಿದೆ.

ಹೀಗಾಗಿ ಜಾಗತಿಕ ಗೂಳಿಗಳ ದಾಳಿ ಮತ್ತು ಕರಡಿಯಪ್ಪುಗೆ ಭಾರತದ ಹೂಡಿಕೆದಾರರನ್ನು ಮತ್ತು ಭಾರತದ ಆರ್ಥಿಕತೆಯನ್ನು ಇನ್ನಷ್ಟು ಬಲಿತೆಗೆದುಕೊಳ್ಳುತ್ತದೆ; ಶೇರು ಮಾರುಕಟ್ಟೆಯಲ್ಲಿ ಇನ್ನೂ ದೊಡ್ಡ ರಕ್ತಪಾತಗಳು ಸಂಭವಿಸಲು ಕಾರಣವಾಗುತ್ತದೆ. ಹೀಗಾಗಿ ಹಣಕಾಸು ಕ್ಷೇತ್ರದ ಜಾಗತೀಕರಣವನ್ನೂ ಒಳಗೊಂಡಂತೆ ಜಾಗತೀಕರಣವೆಂಬ ಶ್ರೀಮಂತ ದೇಶಗಳ ಆಧುನಿಕ ಲೂಟಿಯನ್ನು ಹಿಮ್ಮೆಟ್ಟಿಸದೆ ಭಾರತದ ಎರಡು ಕೋಟಿ ಹೂಡಿಕೆದಾರರ ಬದುಕು ನಿಶ್ಚಿಂತವಾಗುವುದಿಲ್ಲ. ಅದೇರೀತಿ ರಫ್ತು ಮಾರುಕಟ್ಟೆಯನ್ನೇ ಆಧರಿಸಿ ದೇಶ ಕಟ್ಟಿದರೆ ಈ ದೇಶದ ಬಡಜನತೆಯ ಬದುಕು ಬೀದಿ ಪಾಲಾಗುವುದರಲ್ಲಿ ಸಂಶಯವಿಲ್ಲ.

## ಶ್ರೀರಾಮ, ಕೃಷ್ಣ ಎಲ್ಲರೂ ಮಾಂಸಾಹಾರಿಗಳಾಗಿದ್ದರಲ್ಲಾ

ಅಜ್ಜಿಗೆ ಅರಿವೆ ಚಿಂತೆಯಾದರೆ ಮೊಮ್ಮಗಳಿ... ಅದ್ಯಾವನದ್ದೋ ಚಿಂತೆಯಂತೆ ಹಾಗಿದೆ ಈ ಮಧ್ವಯ... ಗಳ ಹ್ಯೊ-ಕೈ ಜಗಳ. ಸಮಾಜದಲ್ಲಾಗಲೀ ಅಥವಾ ತಮ್ಮ ಜಾತಿಗಳಲ್ಲೇ ಆಗಲಿ ಸಮಸ್ಯೆಗಳಿಲ್ಲದ ಸ್ಥಳಗಳ... ಎಲ್ಲೂ ಇಲ್ಲ, ಇದ್ದ ಇಂತಹ ಸಮಸ್ಯೆಗಳೇ ಬೇಕಷ್ಟಿರ... ವಾಗ ಈಗಿನ ಕಾಲಕ್ಕೆ ಹೊಂದಿಕೆಯಾಗದ ತತ್ವ... ಜೋತುಬಿದ್ದು ಬೀದಿಜಗಳ ಮಾಡುತ್ತಿರುವ ಇವರಿ... ಏನೆನ್ನಬೇಕು? 12 ರಂದು ಪೇಜಾವರರ ಬೆಂಬಲಿ... ವಿದ್ವಾಂಸ (ವಿಧ್ವಂಸಕ)ರು ನಡೆಸಿದ ಚರ್ಚೆಯಲ್ಲಿ ವಿದೇ... ಗಮನದಿಂದ ವ್ಯಕ್ತಿ ಎಷ್ಟೊಂದು ಪತಿತನಾಗುತ್ತಾನೆಂದು... ನೂರುಯಾಗ ಮಾಡಿದರೂ ಆತನ ಅಪವಿತ್ರತೆ ತೊ... ಗದು ಎಂಬ ವಾದವೂ ಮಂಡಿಸಲ್ಪಟ್ಟಿತು. ಗೋಸಹಿ... ಇನ್ನಿತರ ಮಾಂಸಭಕ್ಷಣೆ ಮಾಡುವ ವಿದೇಶಿಯರ ಸಂ... ಹಾಗೂ ಆ ಪರಿಸರದ ವಾಸ ಅಪವಿತ್ರವಂತ... ಮಾಂಸಾಹಾರಿಗಳು ಅಪವಿತ್ರರಾದರೆ ತೆರೇಸಾ-ಬು... (ಬುದ್ಧ ತನ್ನ ಕೊನೆಯ ದಿನದಲ್ಲಿ ಕುಂಬಾರ...


## ಓದುಗರ ಪತ್ರ

ಮನೆಯೊಂದರಲ್ಲಿ ಹಂದಿ-ಮಾಂಸ-ಸೂಕರಮದ್ದ-ಭಕ್ಷಿ... ಅಸೌಖ್ಯಕ್ಕೊಳಗಾದ ಎಂಬ ಕತೆಯಿದೆ)ರಂತವರನ್ನು ಏನೆನ್ನಬೇಕು? ಸಸ್ಯಾಹಾರಿಗಳೇ ಶ್ರೇಷ್ಠರು, ಪವಿತ್ರತಮರು ಎಂಬುದಾದರೆ ಉಡುಪಿ ಕೃಷ್ಣನ ಪಕ್ಕಕ್ಕೆ ಕಟ್ಟಾ ಸಸ್ಯಾಹಾರಿಯಾಗಿದ್ದ ಹಿಟ್ಲರನ ಪ್ರತಿಮೆ ಪ್ರತಿಷ್ಠಾಪಿಸಿ ವಜ್ರಕವಚ, ಕಿರೀಟ ಧಾರಣೆ ಮಾಡಿ ಪೂಜೆ ಮಾಡಬೇಕಾ ಗುತ್ತದೆ. ಈ ರೀತಿಯಾಗಿ ಕೇವಲ ಆಹಾರ ಕ್ರಮ ಇತ್ಯಾದಿಗಳ ಆಧಾರದಲ್ಲಿ ಪವಿತ್ರ-ಅಪವಿತ್ರ ಎಂದು ತೀರ್ಮಾನಿಸುವ ಪೇಜಾವರರ ಬೆಂಬಲಿಗರಿಗೆ ಅವರ (ಪೇಜಾವರ ಮೂಲ ಮಠದ) ದೇವರು ಶ್ರೀರಾಮನಾಗಲೀ, ಉಡುಪಿಯ ಕೃಷ್ಣನೇ ಆಗಲೀ ಅಥವಾ ಮಧ್ವಾಚಾರ್ಯರ ಪೂರ್ವಜನ್ಮವೆಂದು ಹೇಳಲ್ಪಡುವ ವಾಯುಸುತ ಭೀಮಸೇನನಂತಹವರೇ ಮಾಂಸಾಹಾರಿಗಳು ಎನ್ನುವುದು ಅವರಿಗೆ ಸಂಬಂಧಿಸಿದ ಪುರಾಣಗಳಲ್ಲೇ ಉಲ್ಲೇಖವಿರುವುದು ತಿಳಿದಿಲ್ಲವೇ?

ಮಾಧ್ವರ ಮುಖ್ಯಪ್ರಾಣನ ಅಂಶವಾದ ಭೀಮ ಎಂತಹ ಮಾಂಸಾಹಾರಿ ಎಂಬುದನ್ನು ಹೇಳುವ ಮಹಾಭಾರತದ ಸನ್ನಿವೇಶ ಹೀಗಿದೆ. ವನಪರ್ವದ 258 ನೇ ಅಧ್ಯಾಯದಲ್ಲಿ ಬರುವ ಈ ಕತೆಯಂತೆ ದ್ವೈತವನದಲ್ಲಿ ಪಾಂಡವರೊಂದಿಗೆ ವಾಸವಿದ್ದ ಯುಧಿಷ್ಠಿರನಿಗೆ ಕನಸಿನಲ್ಲಿ ನಡುಗುತ್ತಾ ಪ್ರಾರ್ಥನೆ ಮಾಡುತ್ತಿರುವ ಕೆಲ ಜಿಂಕೆಗಳು ಕಾಣಿಸಿಕೊಂಡು "ಕೊನೇ ಕುಡಿಗಳಾಗಿ ಉಳಿದಿರುವ ನಮ್ಮನ್ನು ನಿನ್ನ ತಮ್ಮಂದಿರಿಂದ ಉಳಿಸು" (ತಂತಃ ಭೂತಾಃ ಸ್ಮಭದ್ರಂ ತೇ ದಯಾ ನಃ ಕ್ರಿಯತಾಂ) ಎಂದು ಬೇಡಿಕೊಂಡವಂತೆ. ಇದಕ್ಕೆ ಮರುಗಿದ ಧರ್ಮರಾಯ ಮರುದಿವಸವೇ ದ್ವೈತವನ ಬಿಟ್ಟು ಕಾಮ್ಯಕ ವನದತ್ತ ಪ್ರಯಾಣ ಬೆಳೆಸುತ್ತಾನೆ ಎಂದು ಕತೆ ಮುಂದುವರೆಯುತ್ತದೆ.

ಪ್ರತಿ ಬಾರಿ ಒಂದಲ್ಲ ಒಂದು ವಿವಾದ ಹುಟ್ಟಿ... (ನಾಡಗೀತೆ, ಕನಕಗೋಪುರ ಇದೀಗ ಪೀಠಾಧಿಕಾರ...) Public Nuisance ಗೆ ಕಾರಣರಾಗುತ್ತಿರುವ ಇವರು... ಗಳ ಮೇಲೆ ಕಾನೂನು ಕ್ರಮಕೈಗೊಳ್ಳುವವರ್ಯಾರೂ ಇಲ್ಲವೇ? ಜನರೂ ಕೂಡ "ದಿನಾ ಸಾಯೋರಿಗೆ ಅಳೋರ್‍ಯಾರು" ಎಂಬಂತೆ ಈ ಜಗಳಗಂಟ ಸ್ವಾಮಿಗಳ ಬಗ್ಗೆ ತಾತ್ಸಾರ ಭಾವನೆಯನ್ನು ಹೊಂದಿದ್ದರೂ ಇವನ್ನೀಗ ಗಂಭೀರವಾಗಿ ಪರಿಗಣಿಸಬೇಕಾಗುವಂತ ಪರಿಸ್ಥಿತಿ ಎದುರಾಗಿದೆ. ಶ್ರೀರಾಮಚಂದ್ರನ ಕತೆಯಲ್ಲೇ ಈ ಮಠಾಧಿಪತಿಗಳು ಶಾಪಗ್ರಸ್ತರು ಎಂದು ತಿಳಿಸುವ ಪ್ರಸಿದ್ಧ ಕತೆ ಇದ್ದಿರುವುದನ್ನು ಪೇಜಾವರರು ಸತ್ಯ ಎದು ಸಾಧಿಸಿ ತೋರಲು ಹೊರಟಿರುವಂತಿದೆ. ಶ್ರೀರಾಮನಲ್ಲಿ ನ್ಯಾಯ ಕೇಳಲು ಬಂದ ಬ್ರಾಹ್ಮಣನಿಂದ ಪೆಟ್ಟು ತಿಂದ ನಾಯಿ ರಾಮನಲ್ಲಿ "ಇವನನ್ನು ಮಠಾಧೀಶರನ್ನಾಗಿ ಮಾಡು. ಯಾಕೆಂದರೆ ಹಿಂದೆ ನಾನೂ ಮಠಾಧೀಶನಾಗಿ ಮಾಡ... ಬಾರದ್ದನ್ನೆಲ್ಲ ಮಾಡಿ ಈ ಪ್ರತಿಫಲವನ್ನು ಪಡೆದಿದ್ದೇನೆ" ಎಂದಿತಂತೆ. ರಾಮನನ್ನು ನಂಬುವ, ಕರ್ಮಫಲವನ್ನು ನಂಬುವ ಪೇಜಾವರರು ಈ ಕತೆಯನ್ನು ಪ್ರತಿದಿನ ಪಾರಾಯಣ ಮಾಡುವುದು ಒಳ್ಳೆಯದು.

-ರವಿ ಪುತ್ತೂರ, ದಕ್ಷಿಣ ಕನ್ನಡ



# ಶರತ್‌ಬಾಬುನ '72 Hours'

ಶರತ್‌ಬಾಬು. ಈ ಹೆಸರು ಕನ್ನಡದ ಪ್ರೇಕ್ಷಕರಿಗೆ ಬಹಳ ಪರಿಚಿತ. ಇದಕ್ಕೆ ಕಾರಣ ದಿನೇಶ್ ಬಾಬು ನಿರ್ದೇಶನದ 'ಅಮೃತವರ್ಷಿಣಿ' ಚಿತ್ರದಲ್ಲಿ ಆತ ನೀಡಿದ ಮನೋಜ್ಞ ಅಭಿನಯ. ಅಲ್ಲಿತನಕ ಸುಮಾರು ಇಪ್ಪತ್ತು ಚಿತ್ರಗಳಲ್ಲಿ ಈತ ನಟಿಸಿದ್ದರೂ ಜನ ಮೆಚ್ಚಿದ್ದು ಅಮೃತವರ್ಷಿಣಿಯಲ್ಲಿನ ಸಜ್ಜನ ಪತಿಯ ಪಾತ್ರವನ್ನು ಮಾತ್ರ .

ಹಾಗೆ ನೋಡಿದರೆ ಕನ್ನಡ ಚಿತ್ರರಂಗದಲ್ಲಿ ಪರಭಾಷೆಯ ನಾಯಕನಟನನ್ನು ಪ್ರೇಕ್ಷಕ ಸ್ವೀಕರಿಸಿದ್ದು ಅದೇ ಮೊದಲ ಬಾರಿಗೆ. ಯಾವಾಗಲೂ ಪರಭಾಷೆಯ ನಾಯಕಿಯನ್ನು ಸ್ವೀಕರಿಸುವ ಕನ್ನಡಿಗರು ಅದೇ ಉದಾರತೆಯನ್ನು ನಾಯಕನಿಗೆ ತೋರಿಸುತ್ತಿರಲಿಲ್ಲ.

ರಜನೀಕಾಂತ್ ಅವರ ಸುಮಾರು ಐದು ಚಿತ್ರಗಳಲ್ಲಿ ಕಾಣಿಸಿಕೊಂಡಿರುವ ಶರತ್ ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳಂ ಪ್ರೇಕ್ಷಕರಿಗೂ ಚಿರಪರಿಚಿತ ನಟ.

ಅದೇನೇ ಇರಲಿ, ಶರತ್‌ಬಾಬು ಈಗ ಚಿತ್ರರಂಗಕ್ಕೆ ಬಂದು ಇಪ್ಪತ್ತೈದು ವರ್ಷಗಳು ಸಂದವಂತೆ. ಈ ಸಂದರ್ಭದಲ್ಲಿ ತಾವೇ ಚಿತ್ರವೊಂದನ್ನು ನಿರ್ಮಿಸಿ ಅದನ್ನು ನಿರ್ದೇಶಿಸುವ ಹೆಬ್ಬಯಕೆ ಅವರದ್ದು. ಆ ಚಿತ್ರಕ್ಕೆ '72 ಹವರ್ಸ್' ಎಂಬ ಹೆಸರನ್ನೂ ಇಟ್ಟಿದ್ದಾರೆ. ಚಿತ್ರವನ್ನು ತೆಲುಗು ಮತ್ತು ತಮಿಳು ಭಾಷೆಯಲ್ಲಿ ಏಕಕಾಲದಲ್ಲಿ ನಿರ್ಮಿಸುವ ಆಸೆ ಅವರದ್ದು.

ಒಳ್ಳೆಯ ನಟನೆ ಮತ್ತು ತನ್ನ ಸಜ್ಜನಿಕೆಯಿಂದ ಹೃದಯಗೆದ್ದ ಶರತ್‌ಬಾಬು ನಿರ್ದೇಶನದಲ್ಲೂ ಕನ್ನಡಿಗರ ಹೃದಯ ಗೆಲ್ಲುತ್ತಾರೆಯೇ? ನೋಡಬೇಕು.


# ಪೂಜಾಳ ಗಾಂಧಿಗಿರಿ ಸಿಂಧೂಳ ಮೆನನ್‌ಗಿರಿ

ಅತ್ತ ಪೂಜಾ ಗಾಂಧಿ ತನ್ನ ತಂಗಿ ರಾಧಿಕಾ ಗಾಂಧಿಯನ್ನು ಕನ್ನಡಕ್ಕೆ ಎಳೆತಂದಿರುವ ಪ್ರಭಾವ ಸಿಂಧೂ ಮೆನನ್ ಎಂಬ ಮಲಯಾಳಿ ಬೆಡಗಿಗೂ ತಟ್ಟಿದಂತಿದೆ.

ಕನ್ನಡದಲ್ಲಿ ಈಕೆ ಹಲವಾರು ಚಿತ್ರಗಳನ್ನು ಮಾಡಿದರೂ ಆರಕ್ಕೇರದ ಮೂರಕ್ಕಿಳಿಯದಂತ ನಟಿಯಾಗಿದ್ದಳು. ನಂತರ ಇಲ್ಲಿ ಅವಕಾಶ ದೊರಕದೆ ಕೇರಳಕ್ಕೆ ಹೋಗಿ ಮಲಯಾಳಂನ ಕೆಲವು ಮೆಗಾ ಸೀರಿಯಲ್ಲುಗಳನ್ನು ಪ್ರೊಡ್ಯೂಸ್ ಮಾಡುತ್ತಿದ್ದಳು.

ಈಗ ಸಿಂಧು ಮತ್ತೆ ಕನ್ನಡಕ್ಕೆ ಬಂದಿದ್ದಾಳಲ್ಲದೆ, ತನ್ನ ತಮ್ಮನನ್ನೂ ಕರೆತಂದಿದ್ದಾಳೆ. ಸುಕುಮಾರ ಎಂಬ ಚಿತ್ರದಲ್ಲಿ ಸಿಂಧೂ ಮೆನನ್‌ಳ ತಮ್ಮ ಕಾರ್ತಿಕ್ ನಾಯಕನಾಗಿ ಅಭಿನಯಿಸುತ್ತಿದ್ದಾನೆ. ಆದರೆ ಈ ಮಲಯಾಳಿ 'ಸುಕುಮಾರ'ನನ್ನು ಕನ್ನಡಿಗರು ಒಪ್ಪುತ್ತಾರೋ ಇಲ್ಲವೋ ನೋಡಬೇಕು.





# ರಜನಿ ಮೀರಿಸಿದ ಗೋವಿಂದು

ಸಾರಾ ಗೋವಿಂದು ಈಗ ಹೊಸ ಮಾದರಿಯಲ್ಲಿ ಕನ್ನಡ ಪ್ರೇಕ್ಷಕರಿಗೆ ಪರಿಚಿತರಾಗುತ್ತಿದ್ದಾರೆ.

ಅದರರ್ಥ ಅವರು ಮುಖಕ್ಕೆ ಬಣ್ಣ ಹಚ್ಚಿ ನಟಿಸುತ್ತಿದ್ದಾರೆ ಎಂದಲ್ಲ, ಇವರ ನಿರ್ಮಾಣದ 'ಮಿಂಚಿನ ಓಟ' ಎಂಬ ಚಿತ್ರ ಈಗ ಮುಕ್ತಾಯದ ಹಂತಕ್ಕೆ ತಲುಪಿದೆ.

ಈ ಚಿತ್ರದ ವಿಶೇಷತೆಯೇನೆಂದರೆ ನಿರ್ದೇಶಕ ರಮೇಶ್ ಹೇಳುವ ಪ್ರಕಾರ ಇದು ತಾಂತ್ರಿಕವಾಗಿ ಅತ್ಯಂತ ಅದ್ದೂರಿಯಾಗಿ ಮೂಡಿಬರಲಿದೆಯಂತೆ. 35 ಎಂ.ಎಂ. ಸೂಪರ್ ಎಂಬ ನಾಲ್ಕು ಕ್ಯಾಮೆರಾಗಳನ್ನು ಇದಕ್ಕೆ ಬಳಸಿದ್ದಾರೆ. ಜೊತೆಗೆ ಚಿತ್ರದ ಕ್ಲೈಮ್ಯಾಕ್ಸ್ ಸುಮಾರು 40 ನಿಮಿಷಗಳಷ್ಟು ಸುದೀರ್ಘವಾಗಿದೆಯಂತೆ. ಹಾಗೆಯೇ ಈ ಚಿತ್ರವನ್ನು 4ಕೆ ಅನಿಮೇಟೆಡ್ ಡಿಜಿಟಲ್‌ನಲ್ಲಿ ಪ್ರೊಸೆಸಿಂಗ್ ಮಾಡುತ್ತಿದ್ದಾರಂತೆ. ರಜನೀಕಾಂತ್ ನಟಿಸಿದ 'ಶಿವಾಜಿ' ಚಿತ್ರವನ್ನು 2 ಕೆ ಅನಿಮೇಟೆಡ್ ಡಿಜಿಟಲ್‌ನಲ್ಲಿ ಪ್ರೊಸೆಸಿಂಗ್ ಮಾಡಿದ್ದರು. ಅಂದರೆ ಅದಕ್ಕಿಂತಲೂ ಅತ್ಯಾಧುನಿಕವಾದ ರೀತಿಯಲ್ಲಿ 'ಮಿಂಚಿನ ಓಟ'ಕ್ಕೆ ತಾಂತ್ರಿಕ ಸ್ಪರ್ಶ ನೀಡುತ್ತಿದ್ದಾರೆ ಎಂದಾಯಿತು. ರಮೇಶ್ ಈಗಾಗಲೇ 'ಸೈನೆಡ್' ಚಿತ್ರದಿಂದ ತನ್ನ ತಾಂತ್ರಿಕ ಪರಿಣಿತಿಯನ್ನು ತೋರಿಸಿದ್ದರಿಂದ ಇದೆಲ್ಲವನ್ನೂ ಇಲ್ಲೂ ನಿರೀಕ್ಷಿಸಬಹುದಾಗಿದೆ.

'ಮಿಂಚಿನ ಓಟ'ದಲ್ಲಿ ಮುರಳಿ ಮತ್ತು ವಿಜಯ ರಾಘವೇಂದ್ರ ನಾಯಕನಟರು. ಅಷ್ಟೊಂದು ಚಾಲ್ತಿಯಲ್ಲಿಲ್ಲದ ಈ ಇಬ್ಬರು ಹೀರೋಗಳನ್ನು ಹಾಕಿಕೊಂಡು ಇಷ್ಟೊಂದು ಅದ್ದೂರಿ ತಂತ್ರಜ್ಞಾನಕ್ಕಾಗಿ ಗೋವಿಂದು ಹಣ ಸುರಿಯುತ್ತಿರುವುದು ಆಶ್ಚರ್ಯವೇ ಸರಿ.

ಈ ಕಾರಣಕ್ಕೆ ದೊಡ್ಡ ದೊಡ್ಡ ನಾಯಕನಟರಿಗೆ ಕೋಟ್ಯಂತರ ರೂಪಾಯಿ ಸಂಭಾವನೆ ನೀಡುವ, ಪರಭಾಷೆಯ ಚಿತ್ರಗಳನ್ನು ಕನ್ನಡಕ್ಕೆ ಭಟ್ಟಿ ಇಳಿಸುವ ನಿರ್ಮಾಪಕರ ನಡುವೆ ಗೋವಿಂದು ಅಭಿರುಚಿ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಅವರ ಈ ಉತ್ಸಾಹಕ್ಕೆ ಪ್ರೇಕ್ಷಕ ಸ್ಪಂದಿಸುತ್ತಾನಾ ನೋಡೋಣ.

# ಮುರಳಿಯ ಹಚ್ಚೆ ಪ್ರೀತಿ

ನಾಯಕನಟ ಮುರಳಿ ಈ ವರ್ಷದಲ್ಲಿ ಮದುವೆಯಾಗಿ ತನ್ನ ಅಣ್ಣ ವಿಜಯ್‌ರಾಘವೇಂದ್ರನ ತರಹ ಗೃಹಸ್ಥಾಶ್ರಮ ಸ್ವೀಕರಿಸಲಿದ್ದಾರೆ. ಹೀಗೆಂದು ಸ್ವತಃ ಅವರ ಅಪ್ಪ ಚಿನ್ನೇಗೌಡ ಯಾನೆ ಪಾಂಡುರಂಗ ಮೊನ್ನೆ ಪತ್ರಕರ್ತರ ಬಳಿ ಹೇಳಿಕೊಂಡರು.

ವಿಶೇಷವೆಂದರೆ, ಮುರಳಿ ಕೈ ಹಿಡಿಯುತ್ತಿರುವುದು ತನ್ನ ಬಾಲ್ಯದ ಗೆಳತಿ ವಿದ್ಯಾಳನ್ನು, ತನ್ನ ಎದೆಯ ಮೇಲೆ ಮುರಳಿ ಆಕೆಯ ಹೆಸರನ್ನು ಹಚ್ಚೆ ಹಾಕಿಸಿಕೊಂಡರೆ, ವಿದ್ಯಾ ಆತನ ಹೆಸರನ್ನು ಕೈ ಮೇಲೆ ಹಚ್ಚೆ ಹಾಕಿಸಿಕೊಂಡಿದ್ದಾಳೆ. ತಾರೆಯರು ಕೂಡಾ ಜನಸಾಮಾನ್ಯರಂತೆ ಪ್ರೇಮ ಪಾಶದಲ್ಲಿ ಸಿಲುಕಿಕೊಂಡು ಹಚ್ಚೆ ಹಾಕಿಸಿಕೊಂಡು ಓಡಾಡುತ್ತಿದ್ದಾರೆ ಎನ್ನುವುದು ಎಷ್ಟು ಚೆಂದ ಅಲ್ಲವೆ!



# ಬರಲಿದ್ದಾರೆ ದಂಡುಪಾಳ್ಯದ ನಟರು

ಕನ್ನಡ ಚಿತ್ರರಂಗದಲ್ಲಿ ಈಗ ಪ್ರಯೋಗಗಳ ಪರ್ವಕಾಲ. ಅದೂ ಬಹುತೇಕ ಹೊಸಬರೇ ಅನೇಕ ಸಾಹಸಗಳಿಗೆ ಕೈಹಾಕುತ್ತಿದ್ದಾರೆ. ಅಂತಹ ಸಾಲಿಗೆ ಸೇರುವ ಚಿತ್ರ 'ಸೈಲೆನ್ಸ್'.

ಈ ಚಿತ್ರದ ನಿರ್ದೇಶಕ ವೇಣುಗೋಪಾಲ್. ಇದರ ಕತೆ ದಂಡುಪಾಳ್ಯದ ಗ್ಯಾಂಗ್‌ನ ಸುತ್ತ ಹೆಣೆದಿದೆ. ಆದರೂ 'ಸೈಲೆನ್ಸ್'ನಲ್ಲಿ ಯಾವುದೇ ವಾಯ್‌ಲೆನ್ಸ್ ಇಲ್ಲ ಎನ್ನುತ್ತಾರೆ ವೇಣುಗೋಪಾಲ್.

ಅದಕ್ಕಿಂತಲೂ ಮುಖ್ಯವಾದ ವಿಷಯವೆಂದರೆ ದಂಡುಪಾಳ್ಯದ ಗ್ಯಾಂಗ್‌ನ ಸದಸ್ಯರನ್ನು ಹೋಲುವ ಮುಖಚರ್ಯೆಯುಳ್ಳ ಕಲಾವಿದರನ್ನೇ ಈ ಚಿತ್ರಕ್ಕಾಗಿ ಇವರು ಆರಿಸಿಕೊಂಡಿದ್ದಾರೆ. ಉದಾಹರಣೆಗೆ ಆಟೋ ಚಂದ್ರು, ಡೀಸೆಲ್ ಮಂಜ, ಮೆಂಟಲ್ ಮಹೇಶ, ಸುರೇಖ, ಪಲ್ಲವಿ ಮೊದಲಾದ ದಂಡುಪಾಳ್ಯದ ಗ್ಯಾಂಗ್‌ನ ಪಾತಕಿಗಳನ್ನು ಹೋಲುವ ಕಲಾವಿದರೇ ಅವರ ಪಾತ್ರವನ್ನು ಮಾಡುತ್ತಿದ್ದಾರಂತೆ. ಎಂತಹ ಸಾಹಸ ಪ್ರಯೋಗ ನಡೆಯುತ್ತಿದೆ ನಮ್ಮಲ್ಲಿ, ನೋಡಿ?

# ಇಲ್ಲಿ ಆರಂಭ ಶೂರರು-ಅಲ್ಲಿ ಸಾಧಕರು

ಕನ್ನಡದಲ್ಲಿ ರವಿಚಂದ್ರನ್ ಮಾಡಲು ಹೊರಟಿದ್ದನ್ನು ಈಗ ಮಲಯಾಳಿಗಳು ಸದ್ದುಗದ್ದಲವಿಲ್ಲದೇ ಮಾಡುತ್ತಿದ್ದಾರೆ.

ಕಳೆದ ವರ್ಷ ರವಿಚಂದ್ರನ್ ಮನೆಯಲ್ಲಿ ನಾಲ್ಕೈದು ಸಭೆಗಳು ನಡೆದು ಕನ್ನಡ ಚಿತ್ರರಂಗದ ಎಲ್ಲಾ ನಾಯಕನಾಯಕಿಯರು ನಟಿಸುವಂತಹ ಚಿತ್ರ ನಿರ್ಮಿಸುವ ಬಗ್ಗೆ ಮಾತುಕತೆ ನಡೆದಿತ್ತು. ಈ ಚಿತ್ರಕ್ಕೆ 'ಮದುವೆ ಮನೆ' ಎಂದು ನಾಮಕರಣವನ್ನೂ ಮಾಡಲಾಗಿತ್ತು. ಆದರೆ ಅದ್ಯಾಕೋ ಈ ಪ್ರಾಜೆಕ್ಟ್ ಟೇಕ್‌ಆಫ್ ಆಗಲೇ ಇಲ್ಲ.

ಈಗ ಇಂತಹ ಒಂದು ಪ್ರಯೋಗ ಮಲಯಾಳಂನಲ್ಲಿ ಆರಂಭವಾಗಿದೆ. ಆ ಚಿತ್ರಕ್ಕೆ 'ಟ್ವೆಂಟಿ ಟ್ವೆಂಟಿ' ಎಂದು ಹೆಸರಿಟ್ಟಿದ್ದಾರೆ. ಮಲಯಾಳಂ ಚಿತ್ರರಂಗದ ಸೂಪರ್ ಸ್ಟಾರ್ ಮೋಹನ್ ಲಾಲ್, ಮಮ್ಮೂಟಿ ಸಮೇತ 136 ಕಲಾವಿದರು ನಟಿಸುತ್ತಿರುವ ಈ ಚಿತ್ರವನ್ನು ಜೋಷಿ ನಿರ್ದೇಶಿಸುತ್ತಿದ್ದಾರೆ. ಇನ್ನೂ ಒಂದು ವಿಶೇಷವೆಂದರೆ, ಯಾವೊಬ್ಬ ಕಲಾವಿದನೂ ಕೂಡ ಈ ಚಿತ್ರದಲ್ಲಿ ನಟಿಸಿದ್ದಕ್ಕಾಗಿ ಸಂಭಾವನೆಯನ್ನು ಪಡೆಯುತ್ತಿಲ್ಲ, ಆದರೆ ಚಿತ್ರದಿಂದ ಬರುವ ಲಾಭವನ್ನು ಕಲಾವಿದರ ಸಂಘದ ಉದ್ಧಾರಕ್ಕಾಗಿ ಮೀಸಲಿಟ್ಟಿದ್ದಾರಂತೆ.

ಐದು ವರ್ಷಗಳ ಹಿಂದೆ ತಮಿಳಿನಲ್ಲೂ 'ಸ್ವಯಂವರಂ' ಎಂಬ ಚಿತ್ರ ನಿರ್ಮಾಣವಾಗಿತ್ತು. ಈ ಚಿತ್ರದಲ್ಲಿ ಕಮಲಹಾಸನ್ ಮತ್ತು ರಜನೀಕಾಂತ್ ಹೊರತುಪಡಿಸಿ ಬಹುತೇಕ ಎಲ್ಲ ಕಲಾವಿದರೂ ಒಟ್ಟಾಗಿ ನಟಿಸಿದ್ದರು. ಕನ್ನಡದವರು ಪ್ರಚಾರ ಪ್ರಿಯರು, ಆರಂಭಶೂರರು. ಆದರೆ ತಮಿಳರು, ಮಲಯಾಳಿಗಳು ಸದ್ದಿಲ್ಲದೇ ಸುದ್ದಿ ಮಾಡುವವರು ಎಂಬುದನ್ನು ಈ 'ಸ್ವಯಂವರಂ', 'ಟ್ವೆಂಟಿ ಟ್ವೆಂಟಿ' ಚಿತ್ರಗಳು ತೋರಿಸಿವೆ ಅಲ್ಲವೇ?

# ಗಾಂಧಿನಗರಕ್ಕೆ ಕಾರ್ಪೊರೇಟ್ ಖದರ್

ಗಾಂಧಿನಗರ ಇನ್ನು ಮುಂದೆ ಗಾಂಧಿನಗರವಾಗಿಯೇ ಉಳಿಯುವ ಸಾಧ್ಯತೆ ಬಹಳ ಕಡಿಮೆ.

ಕಾರ್ಪೊರೇಟ್ ಸಂಸ್ಥೆಗಳು ದಿನಕ್ಕೊಂದರಂತೆ ಗಾಂಧಿನಗರಕ್ಕೆ ಎಂಟ್ರಿ ಪಡೆಯುತ್ತಿರುವುದರಿಂದ ಗಾಂಧಿನಗರದ ನಿಜವಾದ ಖದರ್ ಮತ್ತು ಕಲರ್ ಬದಲಾಗುತ್ತಿದೆ. ಈ ಮಾಯಾಲೋಕದ ವ್ಯವಹಾರಗಳನ್ನು ಗಾಂಧಿನಗರದ ಚಿತ್ರಬ್ರಹ್ಮರ ಬದಲಿಗೆ ಕಾರ್ಪೊರೇಟ್ ಸಂಸ್ಥೆಗಳು ರಿಮೋಟ್ ಕಂಟ್ರೋಲ್‌ನಿಂದ ನಿಯಂತ್ರಿಸುವಂತಾಗಿದೆ.


ಪಿರಮಿಡ್ ಸಾಯಿಮಿರಾ ಇಲ್ಲಿಗೆ ಕಾಲಿಟ್ಟ ಮೊದಲ ಕಾರ್ಪೊರೇಟ್ ಸಂಸ್ಥೆ. ಕವಿತಾ ಲಂಕೇಶ್ ನಿರ್ದೇಶನದ 'ಅವ್ವ' ಇವರ ನಿರ್ಮಾಣದ ಮೊದಲ ಚಿತ್ರ. ಇದರ ಮಾಲೀಕರು ತಮಿಳರು. ಅವರ ಬೆನ್ನಿಗೆ ಎಸ್.ಪಿ.ಆರ್ ಎಂಬ ಬಹಳ ದೊಡ್ಡ ನಿರ್ಮಾಣ ಸಂಸ್ಥೆ 'ಗಾಳಿಪಟ' ಚಿತ್ರದೊಂದಿಗೆ ಇಲ್ಲಿಗೆ ಬಂದಿದೆ. ಇದರ ಮಾಲೀಕರು ತೆಲುಗಿನವರು. ಈಗ ಮಲಯಾಳಂ ಮಾಲೀಕತ್ವದ ಕಾನ್ಫಿಡೆಂಟ್ ಕಾರ್ಪೊರೇಟ್ ಸಂಸ್ಥೆ ಕೂಡಾ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಿದೆ. ಇವರ ನಿರ್ಮಾಣದ 'ಸುಕುಮಾರ' ಎಂಬ ಚಿತ್ರ ಮೊನ್ನೆ ಆರಂಭವಾಗಿದೆ. ಈ ಚಿತ್ರದಲ್ಲಿ ಈಗಾಗಲೇ ಕನ್ನಡದಲ್ಲಿರುವ ಮಲಯಾಳಿ ಹುಡುಗಿ ಸಿಂಧೂ ಮೆನನ್‌ನ ಸಹೋದರ ಕಾರ್ತಿಕ್ ನಾಯಕನಟನಾಗಿ ನಟಿಸುತ್ತಿದ್ದಾನೆ.

ಈ ಮಧ್ಯೆ ಕನ್ನಡದವರು ನಾವೇನು ಕಡಿಮೆ ಎಂಬಂತೆ ಕೆಲವು ಸಾಫ್ಟ್‌ವೇರ್ ಗೆಳೆಯರು ಸೇರಿಕೊಂಡು ವಿಶಿಷ್ಟ ಎಂಬ ಸಂಸ್ಥೆಯನ್ನು ಆರಂಭಿಸಿದ್ದಾರೆ. ಇವರ ನಿರ್ಮಾಣದ ಮೊದಲ ಚಿತ್ರವಾಗಿ ರಮೇಶ್ ನಿರ್ದೇಶನದಲ್ಲಿ 'ಆಕ್ಸಿಡೆಂಟ್' ರೆಡಿಯಾಗಿದೆ.

ಈ ವರ್ಷದ ಕೊನೆಯ ಒಳಗೆ ರಿಲಯನ್ಸ್ ಗ್ರೂಪ್‌ನವರು ಕನ್ನಡ ಚಿತ್ರವೊಂದನ್ನು ನಿರ್ಮಿಸುವುದೂ ಬಹುತೇಕ ಖಚಿತವಾಗಿದೆ. ಹಾಗೆಯೇ ಬಿಲ್ ಗೇಟ್ಸ್ ಫೌಂಡೇಶನ್ ಕೂಡಾ ಒಂದು ಕನ್ನಡ ಚಿತ್ರ ನಿರ್ಮಿಸುವ ಬಗ್ಗೆ ಭರದ ಸಿದ್ಧತೆಯಲ್ಲಿದೆ.

ಅಲ್ಲಿಗೆ ರಾಜ್ಯದ ಮಾಯಾಲೋಕದ ರಾಜಧಾನಿಯಾದ ಗಾಂಧಿನಗರ ಕೂಡಾ ಕಾಸ್ಮೊಪಾಲಿಟನ್ ಆಗುತ್ತಿದೆ. ಒಂದೊಂದು ಭಾಷೆಯ ಮಾಲೀಕತ್ವದ ಈ ಕಾರ್ಪೊರೇಟ್ ಸಂಸ್ಥೆಗಳು ಗಾಂಧಿನಗರದ ಚಿತ್ರ ಮತ್ತು ವ್ಯವಹಾರವನ್ನೇ ಸಂಪೂರ್ಣ ಬದಲಾಯಿಸಲಿವೆ. ಅಲ್ಲಿಗೆ ಗಾಂಧಿನಗರ ಎಂಬುದು ಇನ್ನುಮುಂದೆ ಒಂದು ನೆನಪು ಮಾತ್ರ ಆಗಬಹುದೇ?

# ಗುಣಮಟ್ಟಕ್ಕೆ ಗುಣವಂತನ ಬ್ರೇಕ್



ಇನ್ನೊಂದೆರಡು ದಿನಗಳಲ್ಲಿ ಗಾಂಧಿನಗರದಲ್ಲಿ ದೊಡ್ಡ ಗಲಾಟೆ ಆರಂಭವಾಗಲಿದೆ.

ನಮಗೆ ಬಂದ ಅಧಿಕೃತ ಸುದ್ದಿಯ ಪ್ರಕಾರ ಗಿರೀಶ್ ಕಾಸರವಳ್ಳಿ ನೇತೃತ್ವದ ಗುಣಮಟ್ಟದ ಸಮಿತಿ ಸರಕಾರಕ್ಕೆ ತನ್ನ ಅಂತಿಮ ವರದಿಯನ್ನು ಸಲ್ಲಿಸಿದೆ.

ಸುಮಾರು 58 ಚಿತ್ರಗಳನ್ನು ವೀಕ್ಷಿಸಿದ ಈ ಸಮಿತಿ ಮೂವತ್ತು ಚಿತ್ರಗಳಲ್ಲಿ 30 ಚಿತ್ರಗಳನ್ನು ಆಯ್ಕೆ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಿತ್ತು, ಈ ಸಮಿತಿ ಆಯ್ಕೆ ಮಾಡಿದ ಚಿತ್ರಗಳಿಗೆ ಸರ್ಕಾರ ಹತ್ತು ಲಕ್ಷ ರೂಪಾಯಿ ಸಬ್ಸಿಡಿಯನ್ನು ನೀಡಲಿದೆ.

ಆದರೆ ಈ ಸಮಿತಿ ಸಬ್ಸಿಡಿಗೆ ಯೋಗ್ಯವಾಗುವಂತಹ ಗುಣಮಟ್ಟವಿರುವ ಮೂವತ್ತು ಚಿತ್ರಗಳು ನಮಗೆ ದೊರಕಿಲ್ಲ ಎಂದು ವರದಿಯನ್ನು ನೀಡಿ ಕೇವಲ ಇಪ್ಪತ್ತೆರಡು ಚಿತ್ರಗಳ ಹೆಸರನ್ನು ಮಾತ್ರ ಸೂಚಿಸಿದೆಯಂತೆ. ಇದರಿಂದ ಕುಪಿತಗೊಂಡಿರುವ ಚಲನಚಿತ್ರ ವಾಣಿಜ್ಯ ಮಂಡಳಿ, ನಿರ್ಮಾಪಕರ ಸಂಘ, ನಿರ್ದೇಶಕರ ಸಂಘ, ಈ ಸಮಿತಿಯ ನಿರ್ಧಾರವನ್ನು ಪ್ರಶ್ನಿಸಿ ರಾಜ್ಯಪಾಲರಿಗೆ ದೂರು ನೀಡಲು ಹೊರಟಿದ್ದಾರೆ. ಕಾಸರವಳ್ಳಿ ಮಾಡುವ ಸಿನಿಮಾಗಳು ಮಾತ್ರ ಗುಣಮಟ್ಟದ ಸಿನಿಮಾವೇ? ನಾವೆಲ್ಲಾ ಅವರ ಶೈಲಿಯಲ್ಲೇ ಸಿನಿಮಾ ಮಾಡಬೇಕು ಎಂದು ಅವರು ಅಪೇಕ್ಷಿಸುತ್ತಾರೆಯೇ? ಎಂದು ಈಗ ಉದ್ಯಮದ ಜನ ಬಂಡಾಯವೇಳುತ್ತಿದ್ದಾರೆ. ಆದರೆ ಈ ಕಮಿಟಿಯ ಬಹುತೇಕ ಸದಸ್ಯರ ಅಭಿಪ್ರಾಯವೇನೆಂದರೆ ಲಾಂಗು ಮಚ್ಚುಗಳ ವೈಭವದ ಚಿತ್ರಗಳನ್ನು ಗುಣಮಟ್ಟ ಇರುವ ಚಿತ್ರವೆಂದು ನಿರ್ಣಯಿಸಲು ಯಾರೂ ತಯಾರಿಲ್ಲವಂತೆ.

ಅಂತೂ ಇಂತೂ ಕಾಸರವಳ್ಳಿ V/s ಉದ್ಯಮದ ನಡುವಿನ ಜಗಳದ ಇನ್ನೊಂದು ಹೊಸ ಅಧ್ಯಾಯ ಆರಂಭವಾಗಲಿದೆ. ಆದರೆ ಇವರ ನಿರ್ಣಯವೇ ಅಂತಿಮವೇ? ಅಥವಾ ಸರ್ಕಾರ ಉದ್ಯಮದ ಒತ್ತಡಕ್ಕೆ ಮಣಿದು ಇನ್ನೂ ಎಂಟು ಚಿತ್ರಗಳಿಗೆ ಸಬ್ಸಿಡಿ ನೀಡುವುದೇ? ಹಾಗೇನಾದರೂ ಸಮಿತಿಯ ಶಿಫಾರಸ್ಸನ್ನು ಮೀರಿ ರಾಜ್ಯಪಾಲರು ಸಬ್ಸಿಡಿ ನೀಡಿದರೆ ಗಿರೀಶ್ ಕಾಸರವಳ್ಳಿ ಮುಂದೇನು ಮಾಡುತ್ತಾರೆ? ಎಂಬಿತ್ಯಾದಿ ಕುತೂಹಲ ಮತ್ತು ಟೆನ್ಷನ್ ಮುಂಬರುವ ದಿನಗಳಲ್ಲಿ ಇದ್ದೇ ಇರುತ್ತದೆ.

R B P LANKESH, Kannada Weekly Price Rs. 12/- 6-2-2008 RNI No. KARKAN2005/14648 Regd.No.KA/RNP/BGS/2036/2008-10



## ಮಲ್ಯನ ಬಿಕಿನಿ ಕ್ಯಾಲೆಂಡರ್

ವಿಜಯ್ ಮಲ್ಯನ ಖಯಾಲಿಗೆ ತಕ್ಕಂತೆ ಬಂದಿದೆ ಕಿಂಗ್‌ಫಿಷರ್-2008 ಕ್ಯಾಲೆಂಡರ್....! ಎಂದಿನಂತೆ ಬಿಕಿನಿ ಬೆಡಗಿಯರ ಬೆಲ್ಲಾಟದ ಮಾದಕ ಫೋಟೋಗಳಿಂದ ಕೂಡಿದ ಈ ಕ್ಯಾಲೆಂಡರ್ ಯುವಕರಲ್ಲಿ ಬಿಸಿಯುಸಿರು ಹುಟ್ಟಿಸುವ ಕಾವು ಪಡೆದಿದೆ. ಶೃಂಗಾರವಾಲ್, ಪ್ರೀತಿ ದೇಸಾಯಿ, ಶಾಂತಲ್ ಮೆನನ್ ಮುಂತಾದ ಮಾಡೆಲ್ ಲಲನೆಯರು ಬಿಕಿನಿಯಲ್ಲಿ ಬಿಂದಾಸ್ ಆಗಿ ಪೋಸು ಕೊಟ್ಟಿದ್ದಾರೆ. ಕಿಂಗ್ ಫಿಷರ್‌ನಷ್ಟೇ ನಿಶೆ ಏರಿಸುವಂತಿರುವ ಈ ಕ್ಯಾಲೆಂಡರ್ ಮಲ್ಯನ ಟೇಸ್ಟ್‌ಗೆ ಸಾಕ್ಷಿಯಾಗಿದೆ.

## ಮತ್ತೆ ಬಂದ ಸಾಯ್ಸು ಕುಮಾರ್

ಹೋದೆಯಾ ಪಿಶಾಚಿ ಎಂದರೆ ಬಂದೇ ಗವಾಕ್ಷೀಲಿ..... ಎಂಬ ಗಾದೆ ಮಾತಿನಂತೆ ನಟ ಸಾಯಿ ಕುಮಾರ್ ಮತ್ತೆ ಕನ್ನಡಕ್ಕೆ ಬಂದಿದ್ದಾರೆ.

ಹೊಸಬರ ಅಲೆಯಲ್ಲಿ ಇಲ್ಲಿನ ಹಿರಿಯ ತಲೆಗಳೇ ಅಲ್ಲಾಡುತ್ತಿರುವಾಗ ಆರ್ಭಟಿಸುವ ನಟ ಸಾಯಿ ಕುಮಾರ್ ಮತ್ತೆ ಇತ್ತ ಓಡಿಬಂದಿರುವುದು ಅಚ್ಚರಿ ಮೂಡಿಸುತ್ತದೆ. ಬರೀ ಎರಡು ವರ್ಷಗಳಲ್ಲಿ ಸರಿಸುಮಾರು ಹನ್ನೆರಡು ಚಿತ್ರಗಳನ್ನು ಕೊಂದಿರುವ ನಿರ್ದೇಶಕ ಸಾಯ್ಸು ಪ್ರಕಾಶ್ ತನ್ನ ನೂರನೇ ಚಿತ್ರಕ್ಕಾಗಿ ಕಾದುಕುಳಿತಿದ್ದರೆ, ತನ್ನ ನಟನೆಯಿಂದಲೇ ಪ್ರೇಕ್ಷಕರನ್ನು ಸಾಯಿಸುವ ನಟ ಸಾಯ್ಸು ಕುಮಾರ್ ಕೂಡಾ ತನ್ನ ಐವತ್ತನೇ ಚಿತ್ರ ಎಂಬ ಹೆಗ್ಗಳಿಕೆಯೊಂದಿಗೆ ಮತ್ತೆ ಬಂದಿದ್ದಾರೆ. ಈ ಇಬ್ಬರು ತೆಲುಗು ಬದ್ದರನ್ನು ಸಹಿಸಬೇಕಿರುವುದು ಕನ್ನಡಿಗರ ಕೆಟ್ಟ ಹಣೆಬರ.

ಐವತ್ತು ಸಿನಿಮಾ ಅಂದರೆ ಕಲಾವಿದನೊಬ್ಬನ ಪಾಲಿಗೆ ಒಂದು ಮ್ಯಾಜಿಕ್ ಫಿಗರ್. ಈ ಘಟ್ಟ ತಲುಪಿದ್ದಕ್ಕೆ ಸಾಯಿಯನ್ನು ಅಭಿನಂದಿಸಬಹುದು. ಆದರೆ ಪೊಲೀಸ್ ಸ್ಟೋರಿ ಯಶಸ್ಸೊಂದನ್ನು ಬಿಟ್ಟರೆ, ಸಾಯಿಯ ಬಹುತೇಕ ಎಲ್ಲ ಸಿನಿಮಾಗಳೂ ಸೋತಿರುವುದೇ ಹೆಚ್ಚು.

ವರ್ಷಕ್ಕೊಮ್ಮೆ ರೀ ಎಂಟ್ರಿ ಪಡೆಯುವ ಸಾಯಿ ಮತ್ತದೇ ಅಬ್ಬರದ ಪಾತ್ರದಲ್ಲಿ ಆರ್ಭಟಿಸುತ್ತಾ ಬರುತ್ತಿರುವುದು ಮಾತ್ರ ಬೇಸರದ ವಿಷಯ. ನಮ್ಮ ಊಹೆಯನ್ನೂ ಮೀರಿ ಸಾಯಿ ಕುಮಾರ್ ಈ 'ಸಿಟಿಜನ್' ಚಿತ್ರದಲ್ಲಾದರೂ ಹೊಸತನವನ್ನು ನೀಡುವಂತಾಗಲಿ.







## ಜೇನು ದಾಳಿ ಮತ್ತು ಕಣಜಗಳ ಕುಹಕ

ಹಲವಾರು ಅಡ್ಡಿ, ಆತಂಕಗಳ ಮಧ್ಯೆಯೂ ಮೊನ್ನೆ 'ಮಂದಾಕಿನಿ'ಗೆ ಕುಂಬಳಕಾಯಿ ಹೊಡೆದು ಮುಕ್ತಾಯ ಮಾಡಿದ್ದಾರೆ. ಕಡೇ ದಿನದ ಚಿತ್ರೀಕರಣ ಮಾಡುತ್ತಿದ್ದ ಚಿತ್ರತಂಡದ ಮೇಲೆ ಜೇನು ಹುಳುಗಳು ದಾಳಿ ಮಾಡಿ ನಿರ್ದೇಶಕರನ್ನೊಳಗೊಂಡಂತೆ ಕೆಲ ತಂತ್ರಜ್ಞರಿಗೂ ಕಚ್ಚಿ ಗಾಯ ಮಾಡಿವೆ.

ಬಹುಶಃ ಇಷ್ಟೇ ಆಗಿದ್ದರೆ ಇದು ಅಂಥಾ ಸುದ್ದಿಯೇನೂ ಆಗುತ್ತಿರಲಿಲ್ಲ. ಹೀಗೆ ಇವರೆಲ್ಲರೂ ಜೇನುಹುಳುಗಳಿಂದ ಕಚ್ಚಿಸಿಕೊಂಡು ಒದ್ದಾಡುತ್ತಿದ್ದರೆ, ಅತ್ತ ಮೂಲೆಯಲ್ಲಿ ನಿಂತಿದ್ದ ನಾಯಕಿ ರಶ್ಮಿ ಮತ್ತು ನಾಯಕ ಚೇತನ್ ಮಾತ್ರ ಕಿಲಕಿಲನೆ ನಗುತ್ತಾ ಕೆಟ್ಟ ರೀತಿಯಲ್ಲಿ ಮಾತನಾಡಿದ್ದಾರೆ. ಆದರೆ ಅವರಿಗೆ ತಿಳಿಯದೇ ಅಲ್ಲೇ ಇದ್ದ ಮೈಕ್‌ನಿಂದ ಇವರ ಮಾತು ಎಲ್ಲರಿಗೂ ಜೋರಾಗಿಯೇ ಕೇಳಿಸಿಬಿಟ್ಟಿದೆ.

ಅವಕಾಶಗಳಿಲ್ಲದೆ ಸಣ್ಣಪುಟ್ಟ ರೋಲ್‌ಗಳಲ್ಲಿ ಕಾಣಿಸಿಕೊಳ್ಳುವ ಚೇತನ್‌ನನ್ನು ನಿರ್ದೇಶಕ ಸುರ್ವೆ ಪೂರ್ಣ ಪ್ರಮಾಣದ ಹೀರೋನನ್ನಾಗಿಸಿದ್ದಾರೆ. ಇದಕ್ಕಾದರೂ ಈತ ನಿರ್ದೇಶಕರಿಗೆ ಕೊಂಚ ಕೃತಜ್ಞತೆ ತೋರಬಹುದಿತ್ತು. ಕಡೇ ಪಕ್ಷ ಸುಮ್ಮನಾದರೂ ಇರಬಹುದಿತ್ತು. ಅದು ಬಿಟ್ಟು ಹೀಗೆ ನೋವುಂಡವರ ಮುಂದೆ ನಗುತ್ತಾ ಅಣಕಿಸುವುದು ಎಷ್ಟು ಸರಿ?

ನಾವಾದರೂ 'ನೋವಿಗೀಡಾದ ನಿರ್ದೇಶಕ' ಸುರ್ವೆಯನ್ನು ಸಂತೈಸೋಣ.

## ಮೇಘಗಳ ಮರ್ಮ!

ಎರಡು ವಾರಗಳ ಹಿಂದಷ್ಟೇ 'ಮೇಘವೇ ಮೇಘವೇ' ನಿರ್ದೇಶಕ ವಿ. ನಾಗೇಂದ್ರ ಪ್ರಸಾದ್ ನೇಪಾಳದಿಂದ ಬಂದು ತಮ್ಮ ತಂಡದೊಂದಿಗೆ ಪ್ರೆಸ್‌ಮೀಟ್ ಮಾಡಿ



ತಮ್ಮ ಪ್ರವಾಸ ಕಥನವನ್ನು ಬಿಚ್ಚಿಟ್ಟಿದ್ದರು. ಆದರೆ ಆ ಪತ್ರಿಕಾಗೋಷ್ಠಿಯಲ್ಲಿ ನಾಯಕ ಸಂದೀಪ್ ಮಾತ್ರ ಪತ್ತೆಯಿರಲಿಲ್ಲ. ಆಗ ನಾಗೇಂದ್ರಪ್ರಸಾದ್ 'ಸಂದೀಪ್ ಕೈಗೇ ಸಿಗುತ್ತಿಲ್ಲ. ಯಾವಾಗಲೂ ತನ್ನ ಮೊಬೈಲ್‌ಅನ್ನು ಸ್ವಿಚ್ ಆಫ್ ಮಾಡಿಕೊಂಡಿರುತ್ತಾನೆ' ಎಂದು ಪತ್ರಕರ್ತರ ಮುಂದೆ ಸಂದೀಪ್‌ನನ್ನು ದೂರಿದ್ದರು.

ಈಗ ನೋಡಿದರೆ ನಾಯಕ ಸಂದೀಪ್ ಪ್ರತ್ಯೇಕವಾಗಿ ಪತ್ರಿಕಾಗೋಷ್ಠಿಯನ್ನು ಕರೆದು ಚಿತ್ರದ ಬಗೆಗಿನ ತನ್ನ ಅನುಭವವನ್ನು ಹೇಳಿಕೊಂಡಿದ್ದಾನೆ. ಹೀಗೇಕೆ ಎಂದು ಕೇಳಿದರೆ 'ಅಂದು ನಾನು ಊರಿನಲ್ಲೇ ಇದ್ದರೂ ನಿರ್ದೇಶಕ ನಾಗೇಂದ್ರ ಪ್ರಸಾದ್ ನನ್ನನ್ನು ಕರೆದಿರಲಿಲ್ಲ' ಎಂಬ ಸಬೂಬು ನೀಡುತ್ತಿದ್ದಾನೆ.

ಅತ್ತ ಚಿತ್ರದ ಜಾಹಿರಾತುಗಳಲ್ಲಿ ನಾಯಕನ ಮುಖವೇ ಕಾಣಿಸುತ್ತಿಲ್ಲ. ಬದಲಿಗೆ ಅತಿಥಿ ನಟ ಸುದೀಪ್ ಮಿಂಚುತ್ತಿದ್ದಾರೆ. ಇದೆಲ್ಲಾ ನೋಡಿದಾಗ ನಾಯಕ ಮತ್ತು ನಿರ್ದೇಶಕರ ಮಧ್ಯೆ ನಡೆದಿರುವ ಚಕಮಕಿಯ ಕುರುಹು ಎದ್ದುಕಾಣುತ್ತಿದೆ.

## ಅಭಿಮಾನಿಗಳಿಗೆ ಅವಮಾನ ಮಾಡುವುದು ಸರಿಯಲ್ಲ



ಬಾಲಿವುಡ್ ಬಾದ್‌ಶಾ ಶಾರುಖ್ ಖಾನ್ ಮದುವೆ ಮುಂಜಿಯಂಥ ಕಾರ್ಯಕ್ರಮಗಳಿಗೆ ಬಂದು, ಕುಣಿದು, ಉಂಡು, ಒಂದು ಕೋಟಿ ರುಪಾಯಿಗಳ ದೊಡ್ಡ ಸಂಭಾವನೆ ಕೊಂಡೂ ಹೋಗುತ್ತಾನೆ ಎಂಬುದು ಬಹುಶಃ ನಿಮಗೆ ಗೊತ್ತಿರಬೇಕು. ಇನ್ನು ಚಿನ್ನಾಭರಣಗಳ ಮಳಿಗೆ ಉದ್ಘಾಟನೆ ಸಂದರ್ಭದಲ್ಲಿ ಕೆಲ ಗ್ಲಾಮರ್ ನಟಿಯರು ಹೋಗಿ ಸಣ್ಣ ಮೊತ್ತವನ್ನೋ ಅಥವಾ ಚಿಕ್ಕಪುಟ್ಟ ಗಿಫ್ಟುಗಳನ್ನೋ ಪಡೆದು ಹೊಸ ಅಂಗಡಿಗಳಿಗೆ ಚಾಲನೆ ನೀಡುವುದು ವಾಡಿಕೆ.

ಆದರೆ ಈಗ ಗೋಲ್ಡನ್ ಸ್ಟಾರ್ ಗಣೇಶು ತೀರಾ ಸಣ್ಣದಾದ ಸಮಾರಂಭವೊಂದಕ್ಕೆ ಅತಿಥಿಯಾಗಿ ಬರಲೂ ಕಾಸು ಕೇಳಿದ ಸುದ್ದಿ ಹೊರಬಿದ್ದಿದೆ. ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯ ಯುವಕ ಸಂಘದ ಹುಡುಗರು 'ನಮ್ಮ ಹುಡುಗ' ಎಂಬ ಅಭಿಮಾನದಿಂದ ಸಮಾರಂಭಕ್ಕೆ ಗಣೇಶನನ್ನು ಆಹ್ವಾನಿಸಲು ಹೋದಾಗ ಈ ಗಣೇಶ್ ಮಹಾರಾಜ ಐದು ಲಕ್ಷದ ಸಂಭಾವನೆಯನ್ನು ಅಪೇಕ್ಷಿಸಿದನಂತೆ. ಸದ್ಯ ಕನ್ನಡದ ಮಟ್ಟಿಗೆ ಓಡುವ ಕುದುರೆಯಾಗಿರು[illegible] ಗಣೇಶ ಈ ಪರಿ ಅಭಿಮಾನಿಗಳಿಗೆ ಅವಮಾನ ಮಾಡುವುದು ಸರಿಯಲ್ಲ.

ಒಂದು ವೇಳೆ ಕಾಸು ಕೊಟ್ಟರೆ ಅಣ್ಣಮ್ಮ, ಗಣೇಶೋತ್ಸವದಲ್ಲೂ ಬಂದು ಟಪಾಂಕುಚಿ ಮ್ಯೂಜಿಕ್[illegible] ಕುಣಿದು ಹೋಗುತ್ತಾನಾ ಈ ಗಣೇಶ?

## ಪ್ರೇಮ್‌ನ ಪ್ರಣಯ ಪ್ರಸಂಗ





ಅಪಾರ ನಿರೀಕ್ಷೆ ಹುಟ್ಟಿಸಿದ್ದ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದ ಬಿಡುಗಡೆಗೆ ಮುಂಚೆಯೇ 'ಲಂಕೇಶ್' ಅಭಿಪ್ರಾಯ ಪಟ್ಟಂತೆ ಚಿತ್ರ ಒಂದೇ ವಾರಕ್ಕೆ ಮಕಾಡೆ ಮಲಗಿತ್ತು.

'ಈ ಚಿತ್ರ ಇನ್ನೂ ಯಾಕೆ ಥೇಟರ್‌ನಲ್ಲಿದೆ?' ಎನ್ನುವಂತೆ ಇನ್ನೇನು ಕಪಾಲಿಯಿಂದಲೂ ಎತ್ತಂಗಡಿಯಾಗುವ ಸೂಚನೆ ಬರುತ್ತಿದೆ. 90 ಕೇಂದ್ರಗಳಲ್ಲಿ ಬಿಡುಗಡೆಗೊಂಡಿದ್ದ ಈ ಚಿತ್ರ ನಾಲ್ಕೇ ವಾರಕ್ಕೆ ಇಪ್ಪತ್ತೈದು ಚಿತ್ರಮಂದಿರಕ್ಕೆ ಇಳಿದಿದೆ.

ಚಿತ್ರದ ಸೋಲಿನಿಂದ ರಾಮ್ ಪ್ರಸಾದ್ ಸಾಕಷ್ಟು ಡಿಸ್ಟರ್ಬ್ ಆಗಿದ್ದಾರೆ. ಈ ಚಿತ್ರಕ್ಕೆ ರಾಮ್ ಪ್ರಸಾದ್ ಬರೀ ನಾಮಮಾತ್ರದ ನಿರ್ಮಾಪಕರಾದರೂ, ಇವರ ಹಿಂದೆ ನಿಂತು ದುಡ್ಡು ಸುರಿದಿದ್ದವರು ಅವರ ಸಹೋದರ ಕೃಷ್ಣಪ್ರಸಾದ್. ಚಿತ್ರ ಹೇಳಹೆಸರಿಲ್ಲದಂತೆ ಮುಗ್ಗರಿಸಿರುವುದರಿಂದ ಕೃಷ್ಣಪ್ರಸಾದ್ ಮತ್ತು ರಾಮ್ ಪ್ರಸಾದ್ ನಡುವೆಯೇ ಪರಸ್ಪರ ವೈಮನಸ್ಯ ಉಂಟಾಗಿದೆಯಂತೆ. ಪ್ರೇಮ್‌ನನ್ನು ನಂಬಿ ಅನ್ಯಾಯವಾಗಿ ದುಡ್ಡು ಕಳೆದೆಯಲ್ಲಾ ಎಂದು ಕೃಷ್ಣಪ್ರಸಾದ್ ತಮ್ಮನನ್ನು ದೂಷಿಸುತ್ತಿದ್ದಾರಂತೆ.

ಆದರೆ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಮಂಡ್ಯದ ಗಂಡು ಪ್ರೇಮ್ ಮಾತ್ರ ತನ್ನ ಹೆಂ[illegible] ರಕ್ಷಿತಾಳೊಂದಿಗೆ ಹನಿಮೂನ್‌ಗೆ ಹಾರಿದ್ದಾರಂತೆ. ಸದ್ಯ ಫಾರಿನ್‌ನಲ್ಲಿ ಪ್ರಣಯ ಪ್ರಸಂಗದಲ್ಲಿ ತೊಡಗಿರು[illegible] ಪ್ರೇಮ್ 'ಯಾರೇ ಕೂಗಾಡಲಿ ಊರೇ ಹೋರಾಡಲಿ ರಕ್ಷೀ ನಿನಗೆ ಸಾಟಿಯಿಲ್ಲ' ಎಂದು ಹಾಡುತ್ತಿ[illegible] ಆಶ್ಚರ್ಯವಿಲ್ಲ!



ಅವ್ವ ಚಿತ್ರದಲ್ಲಿ

ಸ್ಮಿತಾ, ಶೃತಿ, ವಿಜಯ್



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44